ಮಂಗಳವಾರ, ಏಪ್ರಿಲ್ 5, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 94 | ಪುಟ 14

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್ 60,611 ▲ | ನಿಫ್ಟಿ 18,053 ▲ | ಚಿನ್ನ (Std. 10g) ₹53,260 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹68,700 (ಬೆಂಗಳೂರು) | ₹/$ 75.53 ▲

ಕರುಣ್ ನಾಯರ್, ದಾನಮ್ಮಗೆ ಏಕಲವ್ಯ 12

ವಿದ್ಯುತ್ ಪ್ರತಿ ಯೂನಿಟ್‌ಗೆ ಸರಾಸರಿ 35 ಪೈಸೆ ಹೆಚ್ಚಳ ● ಏ.1ರಿಂದಲೇ ಅನ್ವಯ

ದರ ಏರಿಕೆಯ ಬರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೇ ಸಮನೆ ಏರುತ್ತಿರುವ ಪೆಟ್ರೋಲ್, ಡೀಸೆಲ್, ವಾಣಿಜ್ಯ ಬಳಕೆಯ ಸಿಲಿಂಡರ್ ದರದ ಆಘಾತಗಳ ಮಧ್ಯೆಯೇ ರಾಜ್ಯದಲ್ಲಿ ವಿದ್ಯುತ್ ದರ ಹಾಗೂ ಹೋಟೆಲ್ ಆಹಾರಗಳ ದರ ಏರಿಕೆಯ ಮರ್ಮಾಘಾತವನ್ನೂ ಗ್ರಾಹಕರು ಅನುಭವಿಸಬೇಕಾಗಿದೆ.

ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂಗಳು) ಯೂನಿಟ್‌ಗೆ ಸರಾಸರಿ ₹1.85 (ಶೇ 23.83ರಷ್ಟು) ಹೆಚ್ಚಿಸುವಂತೆ ಕೋರಿ ಪ್ರಸ್ತಾವ ಸಲ್ಲಿಸಿದ್ದವು. ಈ ಬೇಡಿಕೆ ಪರಿಗಣಿಸಿರುವ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಸೋಮವಾರ, ಶೇ 4.33ರಷ್ಟು ದರ ಏರಿಸಲು ಒಪ್ಪಿಗೆ ಸೂಚಿಸಿದೆ. ಏಪ್ರಿಲ್ 1ರಿಂದಲೇ ಈ ದರ ಅನ್ವಯವಾಗಲಿದೆ.

ಪ್ರತಿ ಯೂನಿಟ್‌ಗೆ ಸರಾಸರಿ 35 ಪೈಸೆ ಹೆಚ್ಚಿಸಲಾಗಿದ್ದು, ಇದು ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳಿಗೂ (ಎಸ್ಕಾಂ) ಅನ್ವಯವಾಗಲಿದೆ. ಕಳೆದ ವರ್ಷ ಸರಾಸರಿ 30 ಪೈಸೆ ಹೆಚ್ಚಿಸಲಾಗಿತ್ತು.

ಕೇವಲ ವಿದ್ಯುತ್ ದರ ಏರಿಕೆ ಮಾತ್ರವಲ್ಲ, ವಿದ್ಯುತ್ ನಿಗದಿತ ಶುಲ್ಕವೂ ಹೆಚ್ಚಳವಾಗಿದೆ. ನಿಗದಿತ ಶುಲ್ಕ ದರವನ್ನು ಪ್ರತಿ ಎಚ್‌ಪಿ ಅಥವಾ ಕಿಲೋ ವಾಟ್‌ಗೆ ₹10 ರಿಂದ 30 (ಪ್ರತಿ ಯೂನಿಟ್‌ಗೆ 10ರಿಂದ 30 ಪೈಸೆ) ಹೆಚ್ಚಿಸಲು ಅನುಮೋದನೆ ನೀಡಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 50 ಯೂನಿಟ್ ಬಳಸುತ್ತಿದ್ದವರು ಇದುವರೆಗೆ ₹523 ಪಾವತಿಸುತ್ತಿದ್ದರು. ಇನ್ನು ಮುಂದೆ ₹545 ಪಾವತಿಸಬೇಕಾಗುತ್ತದೆ. 100 ಯೂನಿಟ್ ಬಳಸುವವರು ₹990ರಿಂದ ₹1015 ವೆಚ್ಚ ಮಾಡಬೇಕಾಗುತ್ತದೆ.

ಗ್ರಾಮೀಣ ಪ್ರದೇಶವು ಸೇರಿದಂತೆ ಮೆಸ್ಕಾಂ, ಸೆಸ್ಕ್, ಹೆಸ್ಕಾಂ, ಜೆಸ್ಕಾಂ ವ್ಯಾಪ್ತಿಗಳಲ್ಲಿ 50 ಯೂನಿಟ್‌ಗಳಿಗೆ ₹18 ಮತ್ತು 100 ಯೂನಿಟ್‌ಗಳಿಗೆ ₹20 ಹೆಚ್ಚಳವಾಗಲಿದೆ. 100ಕ್ಕಿಂತ ಹೆಚ್ಚು ಯೂನಿಟ್ ಬಳಸುವವರು ₹65ಕ್ಕಿಂತ ಹೆಚ್ಚು ಪಾವತಿಸಬೇಕಾಗುತ್ತದೆ.

ದರ ಏರಿಕೆಗೆ ಸಮರ್ಥನೆ: 'ರಾಜ್ಯದಲ್ಲಿ ವಿದ್ಯುತ್ ಪರಿಸ್ಥಿತಿ ಉತ್ತಮವಾಗಿದ್ದರೂ ಎಲ್ಲ ಎಸ್ಕಾಂಗಳು ನಷ್ಟದಲ್ಲಿವೆ. ಆದಾಯ ಕೊರತೆ ಸರಿದೂಗಿಸಲು ವಿದ್ಯುತ್ ದರ ಏರಿಕೆ ಮಾಡಲಾಗಿದೆ. ಇಂಧನ ಶುಲ್ಕ ಕೇವಲ 5 ಪೈಸೆ ಹೆಚ್ಚಿಸಲಾಗಿದೆ. ಈ ಬಾರಿ ಶೇ 4.33ರಷ್ಟು ದರ ಹೆಚ್ಚಿಸಲಾಗಿದೆ. ಇಂಧನ ವೆಚ್ಚ ಸೇರಿ ಒಟ್ಟು 35 ಪೈಸೆ ಏರಿಕೆ ಮಾಡಲಾಗಿದೆ. ಎಲ್ಲ ಗ್ರಾಹಕರಿಗೂ ಸಮಾನವಾಗಿ ಹೆಚ್ಚಿಸಿಲ್ಲ' ಎಂದು ಕೆಇಆರ್‌ಸಿ ಹಂಗಾಮಿ ಅಧ್ಯಕ್ಷ ಎಚ್. ಎನ್. ಮಂಜುನಾಥ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಪ್ರಸಕ್ತ ಆರ್ಥಿಕ ವರ್ಷದಲ್ಲಿ ಉಂಟಾಗುವ ₹2159.48 ಕೋಟಿ ಇಲಾಖಾ ರಾಜಸ್ವ ಕೊರತೆ ಪರಿಗಣಿಸಿ ರಾಜ್ಯದಾದ್ಯಂತ ಎಲ್ಲ ವಿದ್ಯುತ್ ಕಂಪನಿಗಳ ಏಕರೂಪ ದರ



ಗೃಹಗಳಿಗೆ (ಬೆಸ್ಕಾಂ ಹೊರತುಪಡಿಸಿ) ವ್ಯಾಪ್ತಿ ದರ ಏರಿಕೆ ಎಷ್ಟು

ಯೂನಿಟ್	ಮೊದಲಿನ ದರ	ದರ ಹೆಚ್ಚಳ
0-50	₹4.05	₹4.10
50-100	₹5.55	₹5.60
100-200	₹7.10	₹7.15
200ಕ್ಕಿಂತ ಹೆಚ್ಚು	₹8.15	₹8.20

ಬೆಸ್ಕಾಂ ವ್ಯಾಪ್ತಿಯ ವಾಣಿಜ್ಯ ಬಳಕೆಯ ದರ

ಯೂನಿಟ್	ಮೊದಲಿನ ದರ	ದರ ಹೆಚ್ಚಳ
0-50	₹8.35	₹8.40
50ರ ನಂತರ	₹9.35	₹9.40

ಇತರ ಎಸ್ಕಾಂ ವ್ಯಾಪ್ತಿಯ ವಾಣಿಜ್ಯ ಬಳಕೆಯ ದರ

ಯೂನಿಟ್	ಮೊದಲಿನ ದರ	ದರ ಹೆಚ್ಚಳ
0-50	₹8.35	₹8.40
50ರ ನಂತರ	₹9.35	₹9.40

ಬೆಸ್ಕಾಂ ವ್ಯಾಪ್ತಿಯ ಗೃಹಗಳಿಗೆ ದರ ಏರಿಕೆ ಎಷ್ಟು

ಯೂನಿಟ್	ಮೊದಲಿನ ದರ	ದರ ಹೆಚ್ಚಳ
0-50	₹4.10	₹4.15
50-100	₹5.55	₹5.60
101-200	₹7.10	₹715
200ಕ್ಕಿಂತ ಹೆಚ್ಚು	₹8.15	₹8.20

ಹೋಟೆಲ್ ಆಹಾರ ದರ ಶೇ 10ರಷ್ಟು ಹೆಚ್ಚಳ

ರಾಜ್ಯದಾದ್ಯಂತ ಹೋಟೆಲ್‌ಗಳಲ್ಲಿ ಎಲ್ಲ ಆಹಾರಗಳ ದರವನ್ನು ಶೇ 10ರವರೆಗೆ ಹೆಚ್ಚಿಸಲು ಹೋಟೆಲ್ ಮಾಲೀಕರು ನಿರ್ಧರಿಸಿದ್ದಾರೆ. ಪರಿಷ್ಕೃತ ದರ ಈ ವಾರದಿಂದಲೇ ಜಾರಿಯಾಗಲಿದೆ.

ಕಾಫಿ, ಟೀ, ಹಾಲು, ಉಪಾಹಾರ, ಊಟ, ಚಾಟ್ಸ್ ಸೇರಿದಂತೆ ಎಲ್ಲ ಆಹಾರ ದರ ಶೇ 10ರಷ್ಟು ಹೆಚ್ಚಾಗಲಿದೆ. ಪರಿಷ್ಕೃತ ದರ ಜಾರಿಯಾದ ನಂತರ ಹೋಟೆಲ್‌ಗಳಲ್ಲಿ ಅಂದಾಜು ₹500 ಮೊತ್ತದ ಆಹಾರ ಖರೀದಿಸಿದರೆ, ₹550 ಪಾವತಿಸಬೇಕು. ₹10ರ ಕಾಫಿಗೆ ₹12 ನೀಡಬೇಕಾಗುತ್ತದೆ.

'ಹೋಟೆಲ್‌ಗಳಲ್ಲಿ ಶೇ 10ಕ್ಕಿಂತ ದರ ಹೆಚ್ಚಿಸಬಾರದು. ಗುಣಮಟ್ಟದಲ್ಲಿ ಸ್ಥಿರತೆ ಕಾಪಾಡಿಕೊಳ್ಳಬೇಕು. ದರ ಏರಿಕೆ ಮಿತಿಯ ಬಗ್ಗೆ ಸಂಘ ಸಲಹೆಯಷ್ಟೇ ನೀಡಿದೆ' ಎಂದು ರಾಜ್ಯ ಹೋಟೆಲ್‌ಗಳ ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾರ್ ತಿಳಿಸಿದರು.

'ಹೋಟೆಲ್ ಉದ್ಯಮದ ಉಳಿವಿಗಾಗಿ ಕನಿಷ್ಠ ಶೇ 10ರವರೆಗೆ ದರ ಏರಿಸಲು ಸೋಮವಾರ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು' ಎಂದು 'ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ'ದ ಅಧ್ಯಕ್ಷ ಪಿ.ಸಿ.ರಾವ್ ಹೇಳಿದರು.

ಇನ್ನಷ್ಟು ಸುದ್ದಿಗಳು 4B

ಶಿರಸಿ: ₹ 111ಕ್ಕೆ ತಲುಪಿದ ಪೆಟ್ರೋಲ್ ದರ

ಶಿರಸಿ: ನಗರದಲ್ಲಿ ಪೆಟ್ರೋಲ್ ಬೆಲೆ ಸೋಮವಾರ ₹111.61ಕ್ಕೆ ಏರಿಕೆಯಾಗಿದೆ. ಡೀಸೆಲ್ ದರ ₹ 95.12ಕ್ಕೆ ತಲುಪಿದೆ.

ಕಳೆದ ವರ್ಷ ಜುಲೈನಲ್ಲಿ ಪೆಟ್ರೋಲ್ ದರ ರಾಜ್ಯದಲ್ಲಿ ಮೊದಲ ಬಾರಿಗೆ ಶಿರಸಿಯಲ್ಲಿ ಶತಕ ದಾಟಿತ್ತು.

ಶಿರಸಿಗೆ ಮಂಗಳೂರಿನಿಂದ ಪೆಟ್ರೋಲ್, ಡೀಸೆಲ್ ಸರಬರಾಜಾಗುತ್ತಿದೆ. ಸಾಗಣೆ ವೆಚ್ಚ ಆಧರಿಸಿ ತೈಲ ಕಂಪನಿಗಳು ದರ ನಿಗದಿಪಡಿಸುತ್ತಿರುವ ಕಾರಣ ತೈಲ ಬೆಲೆ ಇಲ್ಲಿ ಉಳಿದೆಡೆಗಳಿಗಿಂತ ಹೆಚ್ಚಿದೆ.

ಎಚ್‌ಪಿಸಿಎಲ್ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ 42 ಪೈಸೆಯಷ್ಟು ಹೆಚ್ಚಾಗಿದ್ದು ₹ 109.68ಕ್ಕೆ ಏರಿಕೆ ಆಗಿದೆ. ಡೀಸೆಲ್ ದರ ಲೀಟರಿಗೆ 39 ಪೈಸೆ ಹೆಚ್ಚಾಗಿದ್ದು ₹ 93.21ಕ್ಕೆ ತಲುಪಿದೆ. ಮಾರ್ಚ್ 22ರಿಂದ ಏಪ್ರಿಲ್ 4ರವರೆಗೆ ಬೆಂಗಳೂರಿನಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 8.75ರಷ್ಟು ಮತ್ತು ಡೀಸೆಲ್ ದರ ₹ 8.2ರಷ್ಟು ಹೆಚ್ಚಳ ಆಗಿದೆ.

ಆಳ–ಅಗಲ

ವಿದ್ಯುದಾಘಾತ...

ಪರಿಷ್ಕರಣೆಗೆ ಒಪ್ಪಿಗೆ ಸೂಚಿಸಲಾಗಿದೆ. ಈ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ದರ ಹೆಚ್ಚಳ ಅನಿವಾರ್ಯವಾಗಿದೆ. ಈ ಮೊತ್ತವು ಆರ್ಥಿಕ ವರ್ಷ 2020-21ರ ಕೊರತೆ ಮೊತ್ತ ನಿವ್ವಳ ಆದಾಯ ಕೊರತೆ ₹1700.49 ಕೋಟಿ ಒಳಗೊಂಡಿದೆ' ಎಂದು ವಿವರಿಸಿದರು.

11ನೇ ಪುಟ ನೋಡಿ

ಸುದರ್ಶನ್ ಜ್ಯುವೆಲರ್ಸ್
ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
916 Hallmark Gold Rate
₹4735 /-gm
ಬೆಳ್ಳಿ ₹63,000/- *CA
ಚಿಕ್ಕಪೇಟೆ: 41300355
Gangothri

ಶ್ರೀಲಂಕಾ: ಜಂಟಿ ಸರ್ಕಾರ ಪ್ರಸ್ತಾವಕ್ಕೆ ವಿಪಕ್ಷ ತಿರಸ್ಕಾರ

ಕೊಲಂಬೊ (ಎಎಫ್‌ಪಿ): ವಿರೋಧ ಪಕ್ಷಗಳನ್ನೂ ಸೇರಿಸಿಕೊಂಡು ಹೊಸ ಸರ್ಕಾರ ರಚಿಸುವ ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರ ಪ್ರಸ್ತಾವವನ್ನು ವಿರೋಧ ಪಕ್ಷಗಳು ತಿರಸ್ಕರಿಸಿವೆ. ಎಲ್ಲ ಪಕ್ಷಗಳನ್ನು ಒಳಗೊಂಡ ಒಗ್ಗಟ್ಟಿನ ಸರ್ಕಾರ ರಚನೆಯ ಪ್ರಸ್ತಾವವೇ ಅಸಂಬದ್ಧ. ಅಂತಹ ಸರ್ಕಾರ ರಚನೆಯ ಪ್ರಯತ್ನದ ಬದಲು ರಾಜಪಕ್ಸ ಅವರು ರಾಜೀನಾಮೆ ಕೊಡಬೇಕು ಎಂದು ವಿರೋಧ ಪಕ್ಷಗಳು ಆಗ್ರಹಿಸಿವೆ.

ಶ್ರೀಲಂಕಾದ ಆರ್ಥಿಕ ಬಿಕ್ಕಟ್ಟು ದಿನಕಳೆದಂತೆ ತೀವ್ರಗೊಳ್ಳುತ್ತಿದೆ. ಆಹಾರ, ಇಂಧನ, ಔಷಧ ಕೊರತೆ ತೀವ್ರವಾಗಿದೆ. ರಾಜಪಕ್ಸ ಅವರು ರಾಜೀನಾಮೆ ನೀಡಬೇಕು ಎಂದು ವಿರೋಧ ಪಕ್ಷಗಳು ಹಾಗೂ ಜನರು ಪ್ರತಿಭಟನೆ ನಡೆಸುತ್ತಿದ್ದಾರೆ.

'ರಾಷ್ಟ್ರೀಯ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳಲು ಎಲ್ಲರೂ ಕೈಜೋಡಿಸಬೇಕು' ಎಂದು ರಾಜಪಕ್ಸ ಅವರು ಹೇಳಿದ್ದಾರೆ. ಶ್ರೀಲಂಕಾ ಸಚಿವ ಸಂಪುಟದ ಎಲ್ಲ ಸಚಿವರು ಭಾನುವಾರ ತಡರಾತ್ರಿ ರಾಜೀನಾಮೆ ನೀಡಿದ್ದರು. ಎಲ್ಲರನ್ನೂ ಒಳಗೊಂಡ ರಾಷ್ಟ್ರೀಯ ಸರ್ಕಾರ ರಚನೆಗೆ ಅವಕಾಶ ಒದಗಿಸಲು ಹೀಗೆ ಮಾಡಲಾಗಿತ್ತು.

- ರಾಜೀನಾಮೆ ಕೊಟ್ಟ ಸಚಿವರ ಪೈಕಿ ನಾಲ್ವರನ್ನು ರಾಜಪಕ್ಸ ಅವರು ಮರುನೇಮಕ ಮಾಡಿಕೊಂಡಿದ್ದಾರೆ. ಹಣಕಾಸು ಸಚಿವರಾಗಿದ್ದ ಸಹೋದರ ಬೇಸಿಲ್ ರಾಜಪಕ್ಸ ಅವರ ಸ್ಥಾನಕ್ಕೆ ನ್ಯಾಯಾಂಗದ ಮಾಜಿ ಮುಖ್ಯಸ್ಥರನ್ನು ನೇಮಿಸಲಾಗಿದೆ
- ಶ್ರೀಲಂಕಾದ ಷೇರು ಮಾರುಕಟ್ಟೆಯು ಸೋಮವಾರ ಶೇ 5ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಕುಸಿದಿದೆ. ಹಾಗಾಗಿ, ದಿನದ ಮಟ್ಟಿಗೆ ವಹಿವಾಟು ಸ್ಥಗಿತಗೊಂಡಿದೆ
- ರಾಜಪಕ್ಸ ನೇತೃತ್ವದ ಮೈತ್ರಿಕೂಟದ ಕಿರಿಯ ಪಾಲುದಾರ ಪಕ್ಷವೊಂದು ಮೈತ್ರಿಕೂಟ ತೊರೆಯುವುದಾಗಿ ಸೋಮವಾರ ಹೇಳಿದೆ. ಇದರಿಂದ ರಾಜಪಕ್ಸ ಅವರು ಸಂಸತ್ತಿನಲ್ಲಿ ಇನ್ನಷ್ಟು ದುರ್ಬಲರಾಗುತ್ತಾರೆ

ಇನ್ನಷ್ಟು ಸುದ್ದಿಗಳು 9

ಮುನಿರತ್ನ ವಿರುದ್ಧದ ಅರ್ಜಿ ವಿಚಾರಣೆ ಶುರು

ಬೆಂಗಳೂರು: 'ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರಕ್ಕೆ 2018ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಯ್ಕೆಯಾಗಿದ್ದ ಮುನಿರತ್ನ ಅವರ ಗೆಲುವನ್ನು ಅನೂರ್ಜಿತ ಎಂದು ಘೋಷಿಸಬೇಕು' ಎಂಬ ಚುನಾವಣಾ ತಕರಾರು ಅರ್ಜಿಗೆ ಸಂಬಂಧಿಸಿದ ವಿಚಾರಣೆಯನ್ನು ಹೈಕೋರ್ಟ್ ಸೋಮವಾರ ಆರಂಭಿಸಿತು.

ಮುನಿರತ್ನ ವಿರುದ್ಧ ಪರಾಜಯಗೊಂಡಿದ್ದ ಅಂದಿನ ಬಿಜೆಪಿ ಅಭ್ಯರ್ಥಿ ಪಿ.ಎಂ. ಮುನಿರಾಜು ಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆಗೆ ಕೈಗೆತ್ತಿಕೊಂಡಿದೆ.

'ಜನತಾ ಪ್ರತಿನಿಧಿ ಕಾಯ್ದೆ–1951ರ ಕಲಂ 123ರ ಅನುಸಾರ ಪ್ರತಿವಾದಿಯ ಆಯ್ಕೆಯನ್ನು ಅನೂರ್ಜಿತ ಎಂದು ಸಾರಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ರಿಕಿ, ಫಲ್ಗುಣಿಗೆ ಒಲಿದ ಗ್ರ್ಯಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಗೀತ ಕ್ಷೇತ್ರದ ಅಸಾಧಾರಣ ಸಾಧನೆಗಾಗಿ ನೀಡಲಾಗುವ ಗ್ರ್ಯಾಮಿ ಪ್ರಶಸ್ತಿಗೆ ರಿಕಿ ಕೇಜ್ ಸಂಯೋಜನೆಯ 'ಡಿವೈನ್ ಟೈಡ್ಸ್' ಆಲ್ಬಂ ಆಯ್ಕೆಯಾಗಿದೆ. ಅಂತೆಯೇ ಮುಂಬೈ ಮೂಲದ ಗಾಯಕಿ ಫಲ್ಗುಣಿ ಷಾ ಅವರ ಸಂಯೋಜನೆಯ 'ಎ ಕಲರ್‌ಫುಲ್ ವರ್ಲ್ಡ್' ಮಕ್ಕಳ ಸಂಗೀತ ಆಲ್ಬಂಗೂ ಇದೇ ಪ್ರಶಸ್ತಿ ಲಭಿಸಿದೆ.

ಅಮೆರಿಕ ಮೂಲದ ಸದ್ಯ ಬೆಂಗಳೂರಿನಲ್ಲಿರುವ ರಿಕಿ ಕೇಜ್ ಅವರಿಗೆ ಎರಡನೇ ಬಾರಿಗೆ ಗ್ರ್ಯಾಮಿ ಪ್ರಶಸ್ತಿ ಒಲಿದಿದೆ. ಫಲ್ಗುಣಿ ಅವರು 2000ನೇ ಇಸವಿಯಿಂದ ನ್ಯೂಯಾರ್ಕ್‌ನಲ್ಲಿ ನೆಲೆಸಿದ್ದಾರೆ. ಅವರಿಗೆ ಇದು ಮೊದಲ ಗ್ರ್ಯಾಮಿ ಪ್ರಶಸ್ತಿ.

2015ರಲ್ಲಿ ರಿಕಿ ಸಂಯೋಜನೆಯ 'ವಿಂಡ್ಸ್ ಆಫ್ ಸಂಸಾರ'ಕ್ಕೆ ಇದೇ ಪ್ರಶಸ್ತಿ ಒಲಿದಿತ್ತು. ಖ್ಯಾತ ರಾಕ್ ಸಂಗೀತಗಾರ ಸ್ಟುವರ್ಟ್ ಕೋಪ್‌ಲ್ಯಾಂಡ್ ಅವರೊಂದಿಗೆ ರಿಕಿ ಕೇಜ್ ರೂಪಿಸಿರುವ ಸಂಗೀತ ಆಲ್ಬಂ 'ಡಿವೈನ್ ಟೈಡ್ಸ್'ನಲ್ಲಿ ಒಂಬತ್ತು ಹಾಡುಗಳಿವೆ. ಈ ಹಾಡುಗಳ ಪೈಕಿ ಸುಮಾರು ನಾಲ್ಕು ಹಾಡುಗಳಲ್ಲಿ ಕರ್ನಾಟಕದ ಪ್ರತಿಭೆಗಳು ಕೆಲಸ ಮಾಡಿವೆ. ಬೆಂಗಳೂರಿನ ವಾರಿಜಾಶ್ರೀ ಅವರ ಕೊಳಲು ಮತ್ತು ಗಾಯನ ಈ ಆಲ್ಬಂನಲ್ಲಿ ಇದೆ.



ರಿಕಿ ಕೇಜ್



ಫಲ್ಗುಣಿ ಷಾ

ಲಹರಿ ಮ್ಯೂಸಿಕ್ ಕಂಪನಿಯು 'ಡಿವೈನ್ ಟೈಡ್ಸ್' ಆಲ್ಬಂ ಹೊರ ತಂದಿದೆ. ಅದರಲ್ಲಿ ಒಂಬತ್ತು ಹಾಡುಗಳು ಮತ್ತು ಎಂಟು ಸಂಗೀತ ವಿಡಿಯೊಗಳಿವೆ. ಹಿಮಾಲಯ ಪ್ರದೇಶದಿಂದ ಹಿಡಿದು ಸ್ಪೇನ್‌ನ ಅರಣ್ಯಗಳವರೆಗೂ ಈ ವಿಡಿಯೊಗಾಗಿ ಚಿತ್ರೀಕರಣ ನಡೆಸಲಾಗಿದೆ. 'ಬೆಸ್ಟ್ ನ್ಯೂಏಜ್ ಆಲ್ಬಂ' ವಿಭಾಗದಲ್ಲಿ ರಿಕಿ ಮತ್ತು ಸ್ಟುವರ್ಟ್ ಗ್ರ್ಯಾಮಿ ಪ್ರಶಸ್ತಿ ಪಡೆದಿದ್ದಾರೆ.

'ನಮ್ಮ 'ಡಿವೈನ್ ಟೈಡ್ಸ್ ಆಲ್ಬಂ'ಗೆ ಇಂದು ಗ್ರ್ಯಾಮಿ ಪ್ರಶಸ್ತಿ ಸಂದಿದೆ. ಕೃತಜ್ಞತೆಯಿಂದ ಮನ ತುಂಬಿದೆ ಮತ್ತು ನನ್ನ ಪಕ್ಕದಲ್ಲೇ ನಿಂತಿರುವ ಜೀವಂತ ದಂತಕಥೆ ಸ್ಟುವರ್ಟ್ ಕೋಪ್‌ಲ್ಯಾಂಡ್ ಮೇಲೆ ಅಪಾರ ಪ್ರೀತಿ ಇದೆ. ಇದು ನನಗೆ ಎರಡನೇ ಗ್ರ್ಯಾಮಿ ಪ್ರಶಸ್ತಿಯಾದರೆ, ಸ್ಟುವರ್ಟ್‌ಗೆ ಆರನೇ ಪ್ರಶಸ್ತಿ. ನನ್ನೊಂದಿಗೆ ಸಹಭಾಗಿತ್ವ ವಹಿಸಿದವರು, ನನ್ನನ್ನು ಸಂಗೀತದ ಕೆಲಸಗಳಲ್ಲಿ ತೊಡಗಿಸಿಕೊಂಡವರು ಹಾಗೂ ನನ್ನ ಸಂಗೀತದ ಕೇಳುಗರಿಗೆ ಧನ್ಯವಾದಗಳು' ಎಂದು ರಿಕಿ ಕೇಜ್ ಫೇಸ್‌ಬುಕ್‌ನಲ್ಲಿ ಬರೆದಿದ್ದಾರೆ.

ಪಾಕ್: ಉಸ್ತುವಾರಿ ಪ್ರಧಾನಿ ನೇಮಕಕ್ಕೆ ಚಾಲನೆ

ಇಸ್ಲಾಮಾಬಾದ್ (ಪಿಟಿಐ): ರಾಜಕೀಯ ಬಿಕ್ಕಟ್ಟು ಎದುರಿಸುತ್ತಿರುವ ಪಾಕಿಸ್ತಾನದಲ್ಲಿ ಉಸ್ತುವಾರಿ ಪ್ರಧಾನಿ ನೇಮಕ ಪ್ರಕ್ರಿಯೆಗೆ ಸೋಮವಾರ ಚಾಲನೆ ಸಿಕ್ಕಿದೆ. ಪ್ರಧಾನಿ ಇಮ್ರಾನ್ ಖಾನ್ ಅವರು, ಉಸ್ತುವಾರಿ ಪ್ರಧಾನಿ ಹುದ್ದೆಗೆ ಮಾಜಿ ಮುಖ್ಯ ನ್ಯಾಯಮೂರ್ತಿ ಗುಲ್ಜಾರ್ ಅಹಮದ್ ಅವರನ್ನು ಸೋಮವಾರ ನಾಮನಿರ್ದೇಶನ ಮಾಡಿದ್ದಾರೆ.

ಉಸ್ತುವಾರಿ ಪ್ರಧಾನಿ ಹುದ್ದೆಗೆ ಹೆಸರು ಸೂಚಿಸುವಂತೆ ಪಾಕಿಸ್ತಾನದ ಅಧ್ಯಕ್ಷ ಆರಿಫ್ ಅಲ್ವಿ ಅವರು ಪ್ರಧಾನಿ ಇಮ್ರಾನ್ ಖಾನ್ ಹಾಗೂ ಪ್ರತಿಪಕ್ಷದ ಮುಖ್ಯಸ್ಥ ಶಹಬಾಝ್ ಶರೀಫ್ ಅವರಿಗೆ ಸೂಚಿಸಿದ್ದರು. ಆದರೆ ಈ ಪ್ರಕ್ರಿಯೆಯಲ್ಲಿ ಭಾಗಿಯಾಗಲು ಶಹಬಾಝ್ ಅವರು ನಿರಾಕರಿಸಿದ್ದು, ಇದು ಅಕ್ರಮ ಎಂದು ಪ್ರತಿಪಾದಿಸಿದ್ದಾರೆ.

9ನೇ ಪುಟ ನೋಡಿ

16 x 47 cm - Kannada

‘ಮೊಬೈಲ್ ಕಸಿದುಕೊಳ್ಳುವುದು ಸರಿಯಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾರ್ವಜನಿಕರ ಮೊಬೈಲ್‌ಗಳನ್ನು ಪೊಲೀಸರು ಅನಗತ್ಯವಾಗಿ ಕಸಿದುಕೊಳ್ಳುವುದು ಸರಿಯಲ್ಲ. ಯಾರಾದರೂ ಪೊಲೀಸರು ಮೊಬೈಲ್ ಕಸಿದುಕೊಂಡಿರುವ ಬಗ್ಗೆ ದೂರು ನೀಡಿದರೆ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದ್ದಾರೆ.

‘ತಪಾಸಣೆ ನೆಪದಲ್ಲಿ ಪೊಲೀಸರು ಅನಗತ್ಯವಾಗಿ ಮೊಬೈಲ್ ಕಸಿದುಕೊಳ್ಳುತ್ತಿದ್ದಾರೆ. ವಿನಾಕಾರಣ ಪ್ರಶ್ನೆಗಳನ್ನು ಕೇಳಿ ಜನರಿಗೆ ತೊಂದರೆ ನೀಡುತ್ತಿದ್ದಾರೆ’ ಎಂಬುದಾಗಿ ನಿಖಿಲ್ ಎಂಬುವರು ಟ್ವೀಟ್ ಮಾಡಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಕಮಲ್ ಪಂತ್, ‘ನಿರ್ದಿಷ್ಟ ಘಟನೆ ಬಗ್ಗೆ ಮಾಹಿತಿ ನೀಡಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುತ್ತೇನೆ’ ಎಂದಿದ್ದಾರೆ.

IN THE COURT OF THE XCI ADDL CITY CIVIL AND SESSIONS JUDGE AND SPECIAL JUDGE FOR KPIDFE ACT AT BENGALURU (CCH 92)

Misc No. 04/2020

BETWEEN

The Competent Authority/
Joint Registrar of Co-operative Societies,
Co-operative Election Authority
TTMC Building, ‘A’ Block, KH Road,
Shantinagar, Bengaluru. ....**Petitioner**

AND

M/s. Tiforp Trading Services Pvt. Ltd.,
And others ....**Respondents**

Notice to Respondent No. 1 and 2

1. M/s. Tiforp Trading Services Pvt. Ltd., Having its office at RSP Arcade, No. 1253, 2nd Floor, 25th ‘A’ Main Cross Road, 9th Block, Jayanagar, Bengaluru-560011 Represented by its Director, Manjunath Balaraj.
2. Manjunath Balaraj Aged about 31 years, S/o Balaraj, R/at No 1328, 2nd Floor, 18th ‘B’ Main Road, 2nd Phase, JP Nagar, Bannerughatta Road, Bengaluru-560076.

Whereas, the Petitioner has filed the Misc. Petition No. 4/2020 under section 5(2) of the KPIDFE Act 2004 against Respondents.

The Respondents No. 1 and 2 are hereby issued show cause notice u/s 12(1) of KPIDFE Act, 2004 to appear in the court of the Addl. City Civil & Sessions Judge (CCH-92) at Bengaluru, in person or through a pleader duly instructed and able to answer all material questions relating to the above Petition on **16.04.2022 at 11 A.M.**

Take notice that in default of your appearance on the date above mentioned, the Misc. Petition will be heard and determined in your absence.

Given under my hand and seal of the court on this day 31st of March, 2022.

Advocate for Petitioner
Venkatesh P. Dalwai
Special Public Prosecutor
City Civil Court,
Bengaluru.

By order of the Court
Assistant Registrar
City Civil Court
Bengaluru

DIPR/CP/03/AKAR/22-23

‘ಸಾವಿಗೆ ಮಿದುಳು ರಕ್ತಸ್ರಾವ ಕಾರಣ’

ಬೆಂಗಳೂರು: ಜಿಮ್‌ನಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದ ವಿನಯಾ ಕುಮಾರಿ (44) ಅವರ ಮರಣೋತ್ತರ ಪರೀಕ್ಷೆ ವರದಿ ಬಂದಿದ್ದು, ‘ಮಿದುಳು ರಕ್ತಸ್ರಾವವೇ ಸಾವಿಗೆ ಕಾರಣ’ ಎಂಬುದಾಗಿ ವೈದ್ಯರು ತಿಳಿಸಿದ್ದಾರೆ.

‘ನಗರದ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ವಿನಯಾಕುಮಾರಿ, ಅವಿವಾಹಿತೆ. ಮಲ್ಲೇಶಪಾಳ್ಯದಲ್ಲಿ ವಾಸವಿದ್ದರು. ಮನೆ ಸಮೀಪದ ಜಿಮ್‌ನಲ್ಲಿ ಮಾರ್ಚ್ 26ರಂದು ಕಸರತ್ತು ನಡೆಸುವ ವೇಳೆ ಕುಸಿದು ಬಿದ್ದು ಮೃತಪಟ್ಟಿದ್ದರು’ ಎಂದು ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಹೇಳಿದರು.

‘ಸಾವಿನ ಬಗ್ಗೆ ಹಲವು ಅನುಮಾನಗಳು ಇದ್ದವು. ಮರಣೋತ್ತರ ಪರೀಕ್ಷೆ ನಡೆಸಿದ್ದ ಸಿ.ವಿ. ರಾಮನ್ ಆಸ್ಪತ್ರೆ ವೈದ್ಯರು ವರದಿ ನೀಡಿದ್ದಾರೆ. ಕಸರತ್ತು ಮಾಡುವ ವೇಳೆ ರಕ್ತದೊತ್ತಡ ಹೆಚ್ಚಾಗಿ, ಮಿದುಳಿನ ರಕ್ತನಾಳಗಳು ಒಡೆದಿದ್ದವು. ಅಲ್ಲಿಯೇ ರಕ್ತಸ್ರಾವವಾಗಿದ್ದರಿಂದ ವಿನಯ್‌ಕುಮಾರ್ ಕುಸಿದು ಬಿದ್ದು ಮೃತಪಟ್ಟಿರುವುದಾಗಿ ವರದಿಯಲ್ಲಿ ಹೇಳಲಾಗಿದೆ’ ಎಂದೂ ತಿಳಿಸಿದರು.

BEFORE THE VIII ADDITIONAL DISTRICT & SESSIONS JUDGE, BENGALURU RURAL DISTRICT
R.A No. 105/2021

Between: M/s Ozone Urbana Infra Developers Pvt. Ltd., at No. 38, Ulsoor Road, Bengaluru 560 042. Represented by its authorized signatory Balaji V ... **Plaintiff**

And: To, 1. Late Sri Munikenchappa, S/o Pillappa, Since deceased, Represented by his LRs. ... **Respondent No.6, 2. Muniyappa** S/o Munikenchappa, aged about 69 years old, R/a Kannamangala Village, Kasaba Hobli, Devanahalli Taluk, Bengaluru Rural District. ... **Respondent No.7, 3. Kooramma** D/o Munikenchappa, aged about 74 years old, R/a Thimmappanahalli Village, Sulibele Hobli, Hoskote Taluk, Bengaluru Rural District. ... **Respondent No.8, 4. N Ravindra Kumar** S/o N Narasimhamurthy, aged about 45 years old, R/a Thyagarajnagar, Devanahalli Town, Bengaluru Rural District. ... **Respondent No.9**

Service of Court summons to the Respondent No.6 to Respondent No.9 through paper publication

Whereas, the Appellant has filed the above suit seeking quashing of the Order dated 20.4.2021 passed on IA No. IX passed in FDP No.3/2011 and also seeking quashing of the additional Preliminary Decree passed on IA No. IX in FDP No. 3/2011 of OS No. 2496/2005.

Take notice that the above case is posted for your appearance on **11-07-2022**. If you have any defense, you are requested to appear before the Court either in person or through advocate, duly authorized on the aforesaid date of hearing, failing which the matter will be heard on merits, placing you ex-parte.

Given under my hand and seal of the Court on 29-03-2022 at Bengaluru.

By order of the Court, Chief Administrative Officer, District & Sessions Court, Bangalore Rural District, Bangalore.

Advocate for Appellant:
Deepak Bhaskar & Associates, Advocates
410-411, 4th Floor, Prestige Center Point,
Cunningham Road, Bengaluru-560052.
Ph: 9743800139

ಪಾಲಿಕೆ ಇತಿಹಾಸದಲ್ಲಿ ಇದೊಂದು ಕಪ್ಪು ಚುಕ್ಕೆ – ರಾಮಲಿಂಗಾ ರೆಡ್ಡಿ

‘ಬಿಬಿಎಂಪಿ ಬಜೆಟ್ ಕಾನೂನುಬಾಹಿರ ಮಂಡನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈ ಬಾರಿ ರಾತ್ರೋರಾತ್ರಿ ಬಿಬಿಎಂಪಿ ಬಜೆಟ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಇದು ಕಾನೂನುಬಾಹಿರ ಪ್ರಕ್ರಿಯೆ. ಆಡಳಿತಾಧಿಕಾರಿಗಳು ಈ ಬಜೆಟ್ ತಕ್ಷಣ ಹಿಂಪಡೆಯಬೇಕು’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಆಡಳಿತಾಧಿಕಾರಿಗಳಿಂದ ಬಜೆಟ್ ವಾಪಸು ಪಡೆಯಲು ಸಾಧ್ಯ ಆಗದಿದ್ದರೆ ಸರ್ಕಾರ ಪರಿಶೀಲಿಸಿ, ಹೊಸ ಬಜೆಟ್ ಮಂಡಿಸಬೇಕು’ ಎಂದು ಒತ್ತಾಯಿಸಿದರು.

‘ಬೆಂಗಳೂರು ಜವಾಬ್ದಾರಿಯನ್ನು ಮುಖ್ಯಮಂತ್ರಿ ಇಟ್ಟುಕೊಂಡಿದ್ದು, ಬಜೆಟ್‌ನಲ್ಲಿರುವ ಗೊಂದಲಗಳಿಗೆ ಅವರೇ ಕಾರಣರಾಗುತ್ತಾರೆ. ಜಾಲತಾಣದಲ್ಲಿ ಬಜೆಟ್ ಹಾಕಿದರೆ ಜನರಿಗೆ ಹೇಗೆ ತಿಳಿಯುತ್ತದೆ? ಹೀಗಾಗಿ, ಸರ್ಕಾರ ಹೊಸ ಬಜೆಟ್ ಮಂಡಿಸಬೇಕು’ ಎಂದರು.

‘ಕಳೆದ ಒಂದೂಮುಕ್ಕಾಲು ವರ್ಷದಿಂದ ಬಿಬಿಎಂಪಿಯಲ್ಲಿ ಚುನಾಯಿತ ಪ್ರತಿನಿಧಿಗಳಿಲ್ಲ. ಈ ಅವಧಿಯಲ್ಲಿ ಸಾಲವೂ ತೀರಿಲ್ಲ. ಗುತ್ತಿಗೆದಾರರ ಬಿಲ್ ₹ 6,000 ಕೋಟಿ ಬಾಕಿ ಇದೆ. ₹ 14 ಸಾವಿರ ಕೋಟಿಯ ಕಾಮಗಾರಿ ಪ್ರಗತಿಯಲ್ಲಿದೆ. ಸಾಲ ₹ 120 ಕೋಟಿ ಇದೆ’ ಎಂದರು.

‘ಬಜೆಟ್ ಮಾಡುವಾಗ ಚುನಾಯಿತ ಪ್ರತಿನಿಧಿಗಳಿದ್ದರೆ, ಆರ್ಥಿಕ ಸಮಿತಿಯವರು 2-3 ತಿಂಗಳ ತಾಲೀಮು ಮಾಡಿ ಶಾಸಕರು, ಸಂಸದರು, ಜನರ ಅಭಿಪ್ರಾಯ ಸಂಗ್ರಹಿಸುತ್ತಾರೆ. 4–5 ದಿನ ಚರ್ಚೆಯೂ ನಡೆಯುತ್ತದೆ. ಈ ಯಾವುದೇ ಪ್ರಕ್ರಿಯೆ ಈ ಬಾರಿ ನಡೆದಿಲ್ಲ’ ಎಂದರು.

‘ಕಳೆದ ವರ್ಷ ಕೋವಿಡ್ ಇದ್ದರೂ ಆನ್‌ಲೈನ್ ಮೂಲಕ ಬಜೆಟ್ ಮಂಡಿಸಲಾಗಿತ್ತು. ಪಾಲಿಕೆ ಸದಸ್ಯರು, ಶಾಸಕರು ಚರ್ಚೆ ಮಾಡಿದ್ದರು. ಆದರೆ, ಈ ಬಾರಿ ಅದೂ ಆಗಿಲ್ಲ. ಪಾಲಿಕೆ ಇತಿಹಾಸದಲ್ಲಿ ಇದೊಂದು ಕಪ್ಪುಚುಕ್ಕೆ. ಯಾವ ತರಾತುರಿಯಲ್ಲಿ ಈ ರೀತಿ ಬಜೆಟ್ ಮಂಡನೆ ಮಾಡಿದ್ದಾರೋ ಗೊತ್ತಿಲ್ಲ’ ಎಂದರು.

‘ಇನ್ನು ಈ ಬಜೆಟ್ ವಿತ್ತೀಯ ಶಿಸ್ತು ಪಾಲನೆ ಕಾಯ್ದೆಗೆ ವಿರುದ್ಧವಾಗಿದೆ. ಈ ವಿಚಾರವಾಗಿ ಸಾಕಷ್ಟು ವರದಿಗಳು ಬಂದಿವೆ. ನೂತನ ಕಾಯ್ದೆ ಪ್ರಕಾರ ಮೂರು ವಾರ ಮೊದಲೇ ಬಜೆಟ್ ಮಂಡನೆ ಆಗಬೇಕಿತ್ತು. ಮಾರ್ಚ್ 10ರ ಒಳಗಾಗಿ ಎಲ್ಲ ಪ್ರಕ್ರಿಯೆ ಆಗಬೇಕಿತ್ತು. ಇನ್ನು ಈ ಕಾಯ್ದೆ ಪ್ರಕಾರ ₹ 8.5 ಸಾವಿರ ಕೋಟಿಯಿಂದ ₹ 9 ಸಾವಿರ ಕೋಟಿಗಿಂತ ಹೆಚ್ಚು ಮೊತ್ತದ ಬಜೆಟ್ ಮಂಡನೆ ಮಾಡಲು ಸಾಧ್ಯವಿಲ್ಲ. ಆದರೆ, ₹10,480 ಕೋಟಿಯ ಬಜೆಟ್ ಮಂಡಿಸಲಾಗಿದೆ. ವಿತ್ತೀಯ ಶಿಸ್ತು ನಿಯಮ ಉಲ್ಲಂಘಿಸಲಾಗಿದೆ’ ಎಂದು ವಿವರಿಸಿದರು.

‘ನಾನು 1983ರಿಂದ 1989ರವರೆಗೆ ಪಾಲಿಕೆ ಸದಸ್ಯನಾಗಿದ್ದೆ. 34 ವರ್ಷಗಳಿಂದ ಬೆಂಗಳೂರಿನ ಶಾಸಕನಾಗಿ ಇದ್ದೇನೆ. ಒಟ್ಟು ಕಳೆದ 40 ವರ್ಷಗಳಿಂದ ಪಾಲಿಕೆ ಬಜೆಟ್ ನೋಡಿದ್ದೇನೆ’ ಎಂದೂ ಹೇಳಿದರು.

ಕಾಂಗ್ರೆಸ್ ಮುಖಂಡರಾದ ಎಂ.ರಾಮಚಂದ್ರಪ್ಪ, ಪದ್ಮಾವತಿ, ಗಂಗಾಂಬಿಕೆ, ಹುಚ್ಚಪ್ಪ, ಎಂ.ಶಿವರಾಜ್ ಇದ್ದರು.

ಅಗತ್ಯ ಮೂಲ ಸೌಕರ್ಯ ಕಲ್ಪಿಸಲು ಒತ್ತು

ಬೆಂಗಳೂರು: ‘ನಗರದಲ್ಲಿ ಅಗತ್ಯ ಮೂಲ ಸೌಕರ್ಯ ಕಲ್ಪಿಸಲು ಬಿಬಿಎಂಪಿ ಬಜೆಟ್‌ನಲ್ಲಿ ಹೆಚ್ಚಿನ ಒತ್ತು ನೀಡಬೇಕಿತ್ತು. ಎಲ್ಲ ವಲಯಗಳನ್ನೂ ಕೇಂದ್ರೀಕರಿಸಿ ಬಜೆಟ್ ರೂಪಿಸಬೇಕಿತ್ತು’ ಎಂದು ನಮ್ಮ ಬೆಂಗಳೂರು ಫೌಂಡೇಷನ್‌ನ (ಎನ್‌ಬಿಎಫ್) ಪ್ರಧಾನ ವ್ಯವಸ್ಥಾಪಕ ವಿನೋದ್ ಜೇಕಬ್ ತಿಳಿಸಿದ್ದಾರೆ.

‘ಬಜೆಟ್‌ನಲ್ಲಿ ಸುಮಾರು ₹10,480 ಕೋಟಿ ವೆಚ್ಚ ತೋರಿಸಲಾಗಿದೆ. ಇಷ್ಟೆಲ್ಲಾ ಹಣ ಖರ್ಚು ಮಾಡಿದರೂ ರಸ್ತೆ, ಉದ್ಯಾನ, ತ್ಯಾಜ್ಯ ನಿರ್ವಹಣೆ, ಒಳಚರಂಡಿ, ಪ್ರವಾಹ, ಶೌಚಾಲಯ ಸೇರಿದಂತೆ ಇನ್ನಿತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ಆಗಿಲ್ಲ’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ. ‘ಬಿಬಿಎಂಪಿ ಕಾಯ್ದೆಯ ಸೆಕ್ಷನ್ 196ರ ಅನ್ವಯ ಮುಂದಿನ ಆರ್ಥಿಕ ವರ್ಷಾರಂಭಕ್ಕಿಂತ ಕನಿಷ್ಠ ಮೂರು ವಾರ ಮುಂಚೆ ಬಿಬಿಎಂಪಿ ಬಜೆಟ್ ಮಂಡಿಸಬೇಕು. ಆದರೆ, ಈ ಬಾರಿ ಪಾಲಿಕೆಯು ನೂತನ ಹಣಕಾಸು ವರ್ಷಕ್ಕೆ ಕೆಲವು ಗಂಟೆ ಮುಂಚಿತವಾಗಿ ಬಜೆಟ್ ಮಂಡಿಸಿದೆ. ಅದನ್ನು ವೆಬ್‌ಸೈಟ್‌ನಲ್ಲಷ್ಟೇ ಪ್ರಕಟಿಸಿದ್ದು ಸರಿಯಲ್ಲ’ ಎಂದು ತಿಳಿಸಿದ್ದಾರೆ.

ಕೆಎಸ್‌ಆರ್‌ಪಿ: ಅಸಲಿ ಅಭ್ಯರ್ಥಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಕೆಎಸ್‌ಆರ್‌ಪಿ (ರಾಜ್ಯ ಪೊಲೀಸ್ ಮೀಸಲು ಪಡೆ) ಕಾನ್‌ಸ್ಟೆಬಲ್ ಹುದ್ದೆ ನೇಮಕಾತಿ ಪರೀಕ್ಷೆಗೆ ನಕಲಿ ಅಭ್ಯರ್ಥಿ ಹಾಜರಾಗಿದ್ದ ಸಂಗತಿ ಪತ್ತೆಯಾಗಿದ್ದು, ಆತನಿಂದ ಪರೀಕ್ಷೆ ಬರೆಸಿದ್ದ ಅಸಲಿ ಅಭ್ಯರ್ಥಿ ವಿರುದ್ಧ ಹಲಸೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಕೆಎಸ್‌ಆರ್‌ಪಿ ಒಂದನೇ ಬೆಟಾಲಿಯನ್ ಸಹಾಯಕ ಕಮಾಂಡೆಂಟ್ ಎಂ.ಜಿ. ಸುರೇಶ್ ಅವರು ದೂರು ನೀಡಿದ್ದಾರೆ. ಪರೀಕ್ಷೆಯಲ್ಲಿ ಅಕ್ರಮ ಎಸಗಿದ್ದ ಆರೋಪದಡಿ ಅಸಲಿ ಅಭ್ಯರ್ಥಿ ಬೆಳಗಾವಿ ಜಿಲ್ಲೆ ಗೋಕಾಕ್ ತಾಲ್ಲೂಕಿನ ದಡೇರಹಟ್ಟಿಯ ಸಿದ್ದು ಕುರಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕಾನ್‌ಸ್ಟೆಬಲ್ ಹುದ್ದೆಗೆ ಆರೋಪಿ ಸಿದ್ದು ಅರ್ಜಿ ಸಲ್ಲಿಸಿದ್ದರು. ಆದರೆ, ಅವರ ಬದಲು ಬೇರೊಬ್ಬರು ದೈಹಿಕ ಹಾಗೂ ಲಿಖಿತ ಪರೀಕ್ಷೆಗೆ ಹಾಜರಾಗಿದ್ದರು. ಉತ್ತಮ ಅಂಕ ಪಡೆದಿದ್ದರಿಂದ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಸಿದ್ದು ಕುರಿ ಹೆಸರಿತ್ತು. ಇತ್ತೀಚೆಗೆ ಅಭ್ಯರ್ಥಿ ಬಗ್ಗೆ ಅಧಿಕಾರಿಗಳಿಗೆ ಅನುಮಾನ ಬಂದಿತ್ತು. ಪರಿಶೀಲನೆ ನಡೆಸಿದಾಗ ಆರೋಪಿ ಅಕ್ರಮ ಪತ್ತೆಯಾಗಿದೆ. ಅಭ್ಯರ್ಥಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರೆ, ಮತ್ತಷ್ಟು ಮಾಹಿತಿ ಸಿಗಲಿದೆ’ ಎಂದೂ ತಿಳಿಸಿವೆ.

ಸಂಸ್ಥಾಪನಾ ದಿನ

ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯ (ಪಿಆರ್‌ಸಿಐ) 18ನೇ ಸಂಸ್ಥಾಪನಾ ದಿನವನ್ನು ನಗರದಲ್ಲಿ ಸೋಮವಾರ ಆಚರಿಸಲಾಯಿತು. ಮಂಡಳಿಯ ಆಂತರಿಕ ನಿಯತಕಾಲಿಕ ‘ಚಾಣಕ್ಯ’ ಮತ್ತು ‘ಕೌಟಿಲ್ಯ’ ಪುಸ್ತಕಗಳನ್ನು ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷ ಸಿ. ಸೋಮಶೇಖರ್ (ಎಡದಿಂದ ಐದನೇಯವರು) ಬಿಡುಗಡೆ ಮಾಡಿದರು. ಪರಿಸರ ಕಾರ್ಯಕರ್ತೆ ವನಿತಾ ಅಶೋಕ್, ಪಿಆರ್‌ಸಿಐ ಸಂಸ್ಥಾಪನಾ ಅಧ್ಯಕ್ಷ ಎಂ.ಬಿ.ಜಯರಾಂ, ರಾಷ್ಟ್ರೀಯ ಅಧ್ಯಕ್ಷ ಟಿ.ವಿನಯಕುಮಾರ್, ದಕ್ಷಿಣ ಭಾರತ ವಲಯ ಅಧ್ಯಕ್ಷೆ ಲತಾ ಟಿ.ಎಸ್. ಇದ್ದರು
-ಪ್ರಜಾವಾಣಿ ಚಿತ್ರ

ರಿಲಯನ್ಸ್ ಜಿಯೊ ಸಹಾಯಕ ವ್ಯವಸ್ಥಾಪಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೀಣ್ಯ ಠಾಣೆ ವ್ಯಾಪ್ತಿಯ ವಸತಿಗೃಹವೊಂದರ ಕೊಠಡಿಯಲ್ಲಿ ಮೋಹನ್ ಕುಮಾರ್ (48) ಎಂಬುವರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

‘ರಿಲಯನ್ಸ್ ಜಿಯೊ ಕಂಪನಿಯ ರಾಜ್ಯ ಕಚೇರಿಯ ಸಹಾಯಕ ವ್ಯವಸ್ಥಾಪಕರಾಗಿದ್ದ ಮೋಹನ್‌ಕುಮಾರ್, ಗೊರಗುಂಟೆಪಾಳ್ಯದ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಪತ್ನಿ ಜೊತೆ ವಾಸವಿದ್ದರು. ಪತ್ನಿ ಸಹ ಖಾಸಗಿ ಕಂಪನಿಯೊಂದರ ಉದ್ಯೋಗಿ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಮಾರ್ಚ್ 25ರಂದು ಮನೆ ಬಿಟ್ಟು ಹೋಗಿ ನಾಪತ್ತೆಯಾಗಿದ್ದ ಮೋಹನ್‌ಕುಮಾರ್, ‘ನನ್ನನ್ನು ಹುಡುಕಬೇಡಿ’ ಎಂಬ ಸಂದೇಶವನ್ನು ಪತ್ನಿ ಹಾಗೂ ಇತರಿಗೆ ಕಳುಹಿಸಿದ್ದರು. ಗಾಬರಿಗೊಂಡ ಪತ್ನಿ, ಮೋಹನ್‌ಕುಮಾರ್ ನಾಪತ್ತೆ ಬಗ್ಗೆ ಆರ್‌ಎಂಸಿ ಯಾರ್ಡ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಪೊಲೀಸರು ಹುಡುಕಾಟ ಆರಂಭಿಸಿದ್ದರು’ ಎಂದೂ ತಿಳಿಸಿದರು.



ಮೋಹನ್ ಕುಮಾರ್

ವಸತಿಗೃಹದಲ್ಲಿ ವಾಸ: ‘ಪೀಣ್ಯ ಠಾಣೆ ವ್ಯಾಪ್ತಿಯ ವಸತಿಗೃಹವೊಂದರ ಕೊಠಡಿಯಲ್ಲಿ ಮೋಹನ್‌ಕುಮಾರ್ ಉಳಿದುಕೊಂಡಿದ್ದರು. ಮಾರ್ಚ್ 26ರಂದು ಕೊಠಡಿಯಿಂದ ಹೊರಗೆ ಬಂದಿರಲಿಲ್ಲ. ಅನುಮಾನಗೊಂಡ ಸಿಬ್ಬಂದಿ, ಕಿಟಕಿಯಲ್ಲಿ ನೋಡಿದಾಗ ನೇಣು ಬಿಗಿದ ಸ್ಥಿತಿಯಲ್ಲಿ ಮೃತದೇಹ ಕಂಡಿತ್ತು’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಮರಣೋತ್ತರ ಪರೀಕ್ಷೆ ಮಾಡಿಸಿ ಸಂಬಂಧಿಕರಿಗೆ ಮೃತದೇಹ ಹಸ್ತಾಂತರಿಸಲಾಯಿತು. ಮೃತದೇಹ ಸಿಕ್ಕ ಕೊಠಡಿಯಲ್ಲಿ ಮದ್ಯದ ಬಾಟಲಿ ಪತ್ತೆಯಾಗಿತ್ತು’ ಎಂದೂ ತಿಳಿಸಿದರು.

ವಿಪರೀತ ಸಾಲದಿಂದ ಜಿಗುಪ್ಸೆ: ‘ಮೋಹನ್‌ಕುಮಾರ್ ಹಲವರ ಬಳಿ ಸಾಲ ಮಾಡಿದ್ದರು ಎನ್ನಲಾಗುತ್ತಿದೆ. ಸಾಲ ವಾಪಸು ತೀರಿಸಲು ಸಾಧ್ಯವಾಗದೇ ತೊಂದರೆ ಅನುಭವಿಸುತ್ತಿದ್ದರು. ಇದರಿಂದ ಜೀವನದಲ್ಲಿ ಜಿಗುಪ್ಸೆಗೊಂಡು ಅವರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪತ್ನಿ ಹೇಳಿಕೆ ನೀಡಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಮೋಹನ್‌ಕುಮಾರ್ ಸಾವಿನ ಸಂಬಂಧ, ರಿಲಯನ್ಸ್ ಜಿಯೊ ಕಂಪನಿ ಸಹೋದ್ಯೋಗಿಗಳನ್ನು ವಿಚಾರಣೆ ಮಾಡಲಾಗಿದೆ. ಆತ್ಮಹತ್ಯೆಗೆ ನಿಖರ ಕಾರಣವೇನು ಎಂಬುದನ್ನು ತಿಳಿಯಲು ತನಿಖೆ ಮುಂದುವರಿದಿದೆ’ ಎಂದೂ ಪೊಲೀಸರು ತಿಳಿಸಿದರು.

ಮಾರಕಾಸ್ತ್ರದಿಂದ ಹೊಡೆದು ಸುಲಿಗೆ

ಬೆಂಗಳೂರು: ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿ ಶ್ರೀನಿವಾಸ್ ಎಂಬುವರ ಮೇಲೆ ಮಾರ್ಚ್ 25ರಂದು ಮಾರಕಾಸ್ತ್ರದಿಂದ ಹಲ್ಲೆ ಮಾಡಿ ಸುಲಿಗೆ ಮಾಡಲಾಗಿದ್ದು, ಇದರ ವಿಡಿಯೊ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

‘ವಿಡಿಯೊ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರಾತ್ರಿ ದ್ವಿಚಕ್ರ ವಾಹನದಲ್ಲಿ ಮನೆಗೆ ಹೊರಟಿದ್ದ ಶ್ರೀನಿವಾಸ್ ಅವರನ್ನು ಅಡ್ಡಗಟ್ಟಿದ ಆರೋಪಿಗಳು ಮಾರಕಾಸ್ತ್ರದಿಂದ ಅವರನ್ನು ಹೊಡೆದು, ನಂತರ ಮೊಬೈಲ್ ಹಾಗೂ ಪರ್ಸ್ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಗಾಯಗೊಂಡಿದ್ದ ಶ್ರೀನಿವಾಸ್, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ’ ಎಂದೂ ತಿಳಿಸಿವೆ.

ನಗರದಲ್ಲಿ ಇಂದು

ಮುತ್ಯಾಲಮ್ಮ ದೇವಿ ರಥೋತ್ಸವ: ಆಯೋಜನೆ–ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಸ್ಥಳ–ಮುತ್ಯಾಲಮ್ಮ ಕೆ.ಬೀದಿ, ಸೆಪ್ಪಿಂಗ್ಸ್ ರಸ್ತೆ, ಬೆಳಿಗ್ಗೆ 9ರಿಂದ ವಿವಿಧ ಕಾರ್ಯಕ್ರಮಗಳು

ಶ್ರೀರಾಮ ವೇಣುಗೋಪಾಲ ಕೃಷ್ಣಸ್ವಾಮಿ ಬ್ರಹ್ಮರಥೋತ್ಸವ: ಆಯೋಜನೆ–ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಟ್ರಸ್ಟ್, ಸ್ಥಳ–ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಳಿಗ್ಗೆ 9ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು

‘ಉಳುವ ಯೋಗಿಯ ನೋಡಲ್ಲಿ’ ಸಂವಾದ: ಅತಿಥಿಗಳು–ಪಚ್ಚೆ ನಂಜುಂಡಸ್ವಾಮಿ, ಜಿ.ಕೃಷ್ಣಪ್ರಸಾದ್, ಪ್ರಕಾಶ್ ಕಮ್ಮರಡಿ, ಎಚ್. ವಿ.ವಾಸು, ಅಧ್ಯಕ್ಷತೆ–ಎಚ್.ಡಿ.ಕುಮಾರಸ್ವಾಮಿ, ಆಯೋಜನೆ–ಹಸಿರು ಸೇನೆ, ಸ್ಥಳ–ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10.30

ಬಾಬು ಜಗಜೀವನರಾಂ ಅವರ ಜನ್ಮದಿನ ಹಾಗೂ ಪ್ರಶಸ್ತಿ ಪ್ರದಾನ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಭಾವಚಿತ್ರಕ್ಕೆ ಪುಷ್ಪ ಸಮರ್ಪಣೆ–ಸಚಿವ ಕೋಟ ಶ್ರೀನಿವಾಸ ಪೂಜಾರಿ, ಬಿ.ಶ್ರೀರಾಮುಲು, ಅಧ್ಯಕ್ಷತೆ–ಶಾಸಕ ರಿಜ್ವಾನ್ ಅರ್ಷದ್, ಸ್ಥಳ–ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10.30

ಅಗ್ರಹಾರ ಕೃಷ್ಣಮೂರ್ತಿ ಸಂಪಾದಕತ್ವದ ‘ಸಾಂಗತ್ಯ’–ಕರೀಗೌಡ ಬೀಚನಹಳ್ಳಿ ಅವರ ಬದುಕು–ಕೃತಿಗಳ ವಿಮರ್ಶೆ’ ಪುಸ್ತಕ ಬಿಡುಗಡೆ: ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಅತಿಥಿಗಳು–ಎಚ್.ಎಸ್.ಶಿವಪ್ರಕಾಶ್, ಎಚ್. ದಂಡಪ್ಪ, ಮಲ್ಲೇಪುರಂ ಜಿ.ವೆಂಕಟೇಶ, ಹಿ.ಚಿ. ಬೋರಲಿಂಗಯ್ಯ, ಸ.ಚಿ.ರಮೇಶ್, ಎಂ.ಕೊಟ್ರೇಶ್, ಅಧ್ಯಕ್ಷತೆ–ಕೆ.ಮರುಳಸಿದ್ಧಪ್ಪ, ಆಯೋಜನೆ–ಸಂಚಲನ ಸಂಸ್ಕೃತಿ ವೇದಿಕೆ, ಕಿರಂ ಪ್ರಕಾಶನ, ಸ್ಥಳ–ವೆಂಕಟಗಿರಿಗೌಡ ಸ್ಮಾರಕ ಭವನ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಳಿಗ್ಗೆ 11

‘ಕನ್ನಡ ಶಾಲೆ ಉಳಿಸಿ–ಕನ್ನಡ ಬೆಳೆಸಿ’ ಕುರಿತು ದುಂಡು ಮೇಜಿನ ಸಭೆ: ಸಾನ್ನಿಧ್ಯ–ವೀರಭದ್ರ ಚೆನ್ನಮಲ್ಲ ಸ್ವಾಮೀಜಿ, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ–ಸಚಿವ ಬಿ.ಸಿ.ನಾಗೇಶ್, ಅಧ್ಯಕ್ಷತೆ–ಎಸ್.ಎಲ್.ಭೈರಪ್ಪ, ಅತಿಥಿಗಳು–ಎನ್.ಕುಮಾರ್, ಎಚ್.ಎನ್.ನಾಗಮೋಹನ್ ದಾಸ್, ಪ್ರಧಾನ ಗುರುದತ್, ಮಹೇಶ ಜೋಶಿ, ಆಯೋಜನೆ–ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ–ಕುವೆಂಪು ಸಭಾಂಗಣ, ಪರಿಷತ್ತಿನ ಆವರಣ, ಚಾಮರಾಜಪೇಟೆ, ಬೆಳಿಗ್ಗೆ 11

ಶ್ರೀರಾಮ ಜಯಂತಿ ಮತ್ತು ರಾಮ ಪಟ್ಟಾಭಿಷೇಕ: ಮೃತ್ಯುಂಜಯ ಹೋಮ, ಆಯೋಜನೆ–ಇಂಡಿಕ್ ಸೈನ್ಸ್ ರಿಸರ್ಚ್ ಟ್ರಸ್ಟ್, ಸ್ಥಳ–ಧವಳಕೀರ್ತಿ ಯಾಗಶಾಲೆ, ರಾಜಾಜಿನಗರ, ಮಧ್ಯಾಹ್ನ 3ರಿಂದ

ಎಸ್.ರಾಮಲಿಂಗೇಶ್ವರ ಅವರ ‘ಭೂಮಿ ತಬ್ಬಿದ ಆಕಾಶ’ ಪುಸ್ತಕ ಬಿಡುಗಡೆ: ಅರಳುಮಲ್ಲಿಗೆ ಪಾರ್ಥಸಾರಥಿ, ದತ್ತಿ ಪುರಸ್ಕಾರ ಪ್ರದಾನ–ವೂಡೇ ಪಿ.ಕೃಷ್ಣ, ಅತಿಥಿಗಳು–ಎಸ್.ಗುಣಸಾಗರಿ ಸಿ.ನಾಗರಾಜ್, ಎಸ್.ರಾಮಲಿಂಗೇಶ್ವರ, ಆಯೋಜನೆ–ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ–ಸನ್ಮಾನ್ ಹೋಟೆಲ್ ಸಭಾಂಗಣ, ಶೇಷಾದ್ರಿಪುರ, ಸಂಜೆ 4.45

ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಗೃಹ ರಕ್ಷಕ ದಳಕ್ಕೆ ಹೊಸದಾಗಿ ಖರೀದಿಸಲಾದ ವಾಹನಗಳ ಲೋಕಾರ್ಪಣೆ: ಗೃಹ ಸಚಿವ ಆರಗ ಜ್ಞಾನೇಂದ್ರ, ಸ್ಥಳ–ವಿಧಾನಸೌಧದ ಮುಂಭಾಗ ಭವ್ಯ ಮೆಟ್ಟಿಲು, ಸಂಜೆ 5

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಕರ್ನಾಟಕ ಸಂಗೀತ ಕಾರ್ಯಕ್ರಮ–ಬೆಂಗಳೂರು ಎಸ್. ಶಂಕರ್, ಮೈಸೂರು ಕಾರ್ತಿಕ್, ಎಚ್.ಎಸ್. ಸುಧೀಂದ್ರ, ರಂಗನಾಥ್ ಚಕ್ರವರ್ತಿ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ

ಎಸ್.ಶಂಕರ್

ಶಿವಕುಮಾರ ಸ್ವಾಮೀಜಿ ಅವರ ಜನ್ಮದಿನ ಮತ್ತು ಗುರುವಂದನೆ: ಸಾನ್ನಿಧ್ಯ–ಸಿದ್ಧಲಿಂಗ ಸ್ವಾಮೀಜಿ, ಅತಿಥಿ–ಬಿ.ವೀರಪ್ಪ, ಕಿರುಚಿತ್ರ ಬಿಡುಗಡೆ–ಕೃಷ್ಣ ದೀಕ್ಷಿತ್, ಉದ್ಘಾಟನೆ–ಪ್ರಭುಲಿಂಗ ಕೆ.ನಾವಡಗಿ, ಅಧ್ಯಕ್ಷತೆ–ದೇವದಾಸ್, ಆಯೋಜನೆ–ಸಿದ್ಧಗಂಗಾ ಶಿವಕುಮಾರ ಸ್ವಾಮೀಜಿಗಳವರ ವಕೀಲರ ಭಕ್ತವೃಂದ, ಸ್ಥಳ–ಎನ್‌ಜಿಒ ಹಾಲ್, ಕಬ್ಬನ್ ಉದ್ಯಾನ, ಸಂಜೆ 5.30

ದಾಸರ ಪದಗಳ ಗಾಯನ: ಎಸ್. ಭೂಮಿಕಾ, ಅನ್ವಿತಾ ಸಾವಿತ್ರಿ ಮತ್ತು ಎಚ್.ಜೆ.ಅನಘಾ, ಆಯೋಜನೆ–ಶ್ರೀರಾಮ ಭಕ್ತ ಸಭಾ, ಸ್ಥಳ–ಶ್ರೀಕಂಠೇಶ್ವರ ಭವನ, ಮಲ್ಲೇಶ್ವರಂ, ಸಂಜೆ 6

ಪೌರಾಡಳಿತ ಇಲಾಖೆ
ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ ಕಾರ್ಯಾಲಯ
ಬಾಶೆಟ್ಟಿಹಳ್ಳಿ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಕರ್ನಾಟಕ ಸರ್ಕಾರ
Email : itstaff.ulb.bashettihalli1@gmail.com
ಸಂಖ್ಯೆ/ಬಾ.ಪ.ಪಂ/ವಿ.ಸಾ.ಸ/ 01 /2021–22 ದಿನಾಂಕ:31/03/2022

–:ಸಾಮಾನ್ಯ ಸಭೆಯ ನಡವಳಿಗಳು:–

ದಿನಾಂಕ: 31/03/2022 ರಂದು ಗುರುವಾರ ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಆಡಳಿತಾಧಿಕಾರಿಗಳು/ ತಹಶಿಲ್ದಾರ್ ರವರಾದ ಶ್ರೀಮತಿ ಮೋಹನಕುಮಾರಿ, ಕೆ.ಎ.ಎಸ್ ರವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಾಮಾನ್ಯ ಸಭೆಯ ನಡವಳಿಗಳು.

ವಿಷಯ	ತೀರ್ಮಾನ		
	ವಿವರ	2021–22ನೇ ಸಾಲಿನ ಪರಿಷ್ಕೃತ ಆಯ–ವ್ಯಯ ಅಂದಾಜು	2022–23ನೇ ಸಾಲಿನ ಆಯ–ವ್ಯಯ ಅಂದಾಜು
2022–23 ನೇ ಸಾಲಿನ ನಿರೀಕ್ಷಿತ ಆಯ–ವ್ಯಯ ಅಂದಾಜನ್ನು ಹಾಗೂ 2021–22ನೇ ಸಾಲಿನ ಪರಿಷ್ಕೃತ ಆಯ–ವ್ಯಯ ಅಂದಾಜನ್ನು ಅನುಮೋದಿಸುವ ವಿಚಾರ.	ಪ್ರಾರಂಭಿಕ ಶಿಲ್ಕು	2869242	19308276
	ರಾಜಸ್ವ ಲೆಕ್ಕ		
	ರಾಜಸ್ವ ಜಮೆಗಳು	32307744	82703939
	ರಾಜಸ್ವ ಖರ್ಚುಗಳು	15573399	72055000
	ರಾಜಸ್ವ ಖಾತೆಯ ಹೆಚ್ಚು/(ಕೊರತೆ)	16734345	10648939
	ಬಂಡವಾಳ ಲೆಕ್ಕ		
	ಬಂಡವಾಳ ಜಮೆಗಳು	0	12300000
	ಬಂಡವಾಳ ಪಾವತಿಗಳು	1045764	35900000
	ಬಂಡವಾಳ ಖಾತೆಯ ಮೇಲೆ ಹೆಚ್ಚು/(ಕೊರತೆ)	(1045764)	(23600000)
	ಅಸಮಾನ್ಯ ಲೆಕ್ಕ		
	ಅಸಮಾನ್ಯ ಖಾತೆಯ ಜಮೆಗಳು	5284073	28382517
	ಅಸಮಾನ್ಯ ಖಾತೆಯ ಪಾವತಿಗಳು	4533620	28902517
	ಅಸಮಾನ್ಯ ಖಾತೆಯ ಮೇಲೆ ಹೆಚ್ಚು/(ಕೊರತೆ)	750453	(520000)
	ಅಖೈರು ಶಿಲ್ಕು	**19308276**	**5837215**
	ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ 2022–23ನೇ ಸಾಲಿನ ನಿರೀಕ್ಷಿತ ಆಯ–ವ್ಯಯ ಅಂದಾಜನ್ನು ಸಭೆಯಲ್ಲಿ ಮಂಡಿಸಲಾಗಿ, 2022–23ನೇ ಸಾಲಿನ ನಿರೀಕ್ಷಿತ ಆಯ–ವ್ಯಯ ಅಂದಾಜನ್ನು ಹಾಗೂ 2021–22ನೇ ಸಾಲಿನ ಪರಿಷ್ಕೃತ ಆಯ–ವ್ಯಯ ಅಂದಾಜನ್ನು ಈ ಮೇಲಿನಂತೆ ಅನುಮೋದಿಸಲಾಯಿತು.		

ಸಹಿ/– (ಶ್ರೀ ಎ. ಮುನಿರಾಜು), ಮುಖ್ಯಾಧಿಕಾರಿ, ಬಾಶೆಟ್ಟಿಹಳ್ಳಿ ಪ.ಪಂ ಸಹಿ/– (ಶ್ರೀಮತಿ ಮೋಹನಕುಮಾರಿ, ಕೆ.ಎಎಸ್), ಆಡಳಿತಾಧಿಕಾರಿ, ಬಾಶೆಟ್ಟಿಹಳ್ಳಿ ಪ.ಪಂ

ವಿಮಾನದಲ್ಲಿ ಬಂದು ಕಳ್ಳತನ: ಐಷಾರಾಮಿ ಜೀವನ

ಬೆಂಗಳೂರು: ವಿಮಾನದಲ್ಲಿ ನಗರಕ್ಕೆ ಬಂದು ಸರಗಳವು ಮಾಡುತ್ತಿದ್ದ ಆರೋಪದಡಿ ಉಮೇಶ್ ಅಲಿಯಾಸ್ ಖಟಿಕ್ (26) ಎಂಬಾತನನ್ನು ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಗುಜರಾತ್ ಅಹಮದಾಬಾದ್‌ನ ಉಮೇಶ್, ಆಗಾಗ ನಗರಕ್ಕೆ ಬಂದು ಸರಗಳವು ಮಾಡಿಕೊಂಡು ಪರಾರಿಯಾಗುತ್ತಿದ್ದ. ಬನಶಂಕರಿ ಮೂರನೇ ಹಂತದಲ್ಲಿ 2021ರ ಡಿಸೆಂಬರ್ 26ರಂದು ಕೆ. ಉಷಾ ಎಂಬುವರಿಗೆ ಚಾಕು ತೋರಿಸಿ ಬೆದರಿಸಿ ಚಿನ್ನದ ಸರ ಕಿತ್ತೊಯ್ದಿದ್ದ. ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿ ಸುಳಿವು ಸಿಕ್ಕಿತ್ತು. ಅಹಮದಾಬಾದ್ ಸಿಸಿಬಿ ಅಧಿಕಾರಿಗಳ ಜೊತೆ ಜಂಟಿ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಉಮೇಶ್‌ನಿಂದ 75 ಗ್ರಾಂ ಚಿನ್ನಾಭರಣ ಹಾಗೂ ದ್ವಿಚಕ್ರವಾಹನ ಜಪ್ತಿ ಮಾಡಲಾಗಿದೆ. ಗುಜರಾತ್, ರಾಜಸ್ಥಾನ ಹಾಗೂ ತೆಲಂಗಾಣದಲ್ಲಿ ಆರೋಪಿ ಕೃತ್ಯ ಎಸಗಿರುವ ಮಾಹಿತಿ ಇದೆ’ ಎಂದು ತಿಳಿಸಿದರು.

ಪತ್ನಿ ಜೊತೆ ಐಷಾರಾಮಿ ಜೀವನ: ಕೆಲ ವರ್ಷಗಳ ಹಿಂದೆ ಬಾಲಕಿಯನ್ನು ಪ್ರೀತಿಸಿ ಉಮೇಶ್ ಮದುವೆಯಾಗಿದ್ದ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಆರೋಪಿ ಉಮೇಶ್‌ನನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿತ್ತು. ಪ್ರಕರಣದ ವಿಚಾರಣೆ ಚಾಲ್ತಿಯಲ್ಲಿರುವಾಗಲೇ ಬಾಲಕಿಗೆ 18 ವರ್ಷ ತುಂಬಿತ್ತು. ಜಾಮೀನು ಮೇಲೆ ಜೈಲಿನಿಂದ ಹೊರಬಂದಿದ್ದ ಆರೋಪಿ, ಆಕೆಯನ್ನು ಒಪ್ಪಿಸಿ ಮದುವೆಯಾಗಿದ್ದ.

‘ಪತ್ನಿ ಜೊತೆ ಐಷಾರಾಮಿ ಜೀವನ ನಡೆಸಲು ಆರೋಪಿ ಕಳ್ಳತನಕ್ಕೆ ಇಳಿದಿದ್ದ. ವ್ಯಾಪಾರದ ಸೋಗಿನಲ್ಲಿ ಬೆಂಗಳೂರಿಗೆ ವಿಮಾನದಲ್ಲಿ ಬರುತ್ತಿದ್ದ. ದ್ವಿಚಕ್ರವಾಹನ ಕದ್ದು ಅದರಲ್ಲೇ ಸುತ್ತಾಡಿ, ರಸ್ತೆಯಲ್ಲಿ ಒಂಟಿಯಾಗಿ ಹೋಗುವವರನ್ನು ಹಿಂಬಾಲಿಸಿ ಸರಗಳವು ಹಾಗೂ ಸುಲಿಗೆ ಮಾಡುತ್ತಿದ್ದ. ಬಳಿಕ, ಅಹಮದಾಬಾದ್‌ಗೆ ವಾಪಸು ಹೋಗುತ್ತಿದ್ದ. ಚಿನ್ನಾಭರಣವನ್ನು ಪತ್ನಿಗೆ ನೀಡುತ್ತಿದ್ದ. ತಿಂಗಳಿಗೊಮ್ಮೆ ಹೊರ ರಾಜ್ಯಗಳಿಗೆ ಪ್ರವಾಸಕ್ಕೆ ಕರೆದೊಯ್ಯುತ್ತಿದ್ದ’ ಎಂದೂ ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

Manager

SKY SCOPE housing ltd Vp with min 2 yrs exp req Branch manager ,Sales manager Interested candidates share resume at - mrchandrasshp@gmail.com Contact-7411124596

Wanted

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

REAL ESTATE SELLING

Sites

Hosur Road

APPROX ONE Acre Industrial Land near Attibele Off: Hosur Road for Sale. Brokers Excuse. Contact: 9620938350/ 9844243147.

5-ACRE-LAND-SALE
Bank Seased With Rera Approval For 600 FLAT Construction Just Rs.24 Crore Market Rate Rs 38 Crore+ Only Genuine Investors /Builders Contact: 99009 76000

FUTURE FOCUS

Astrology

DIVYA JYOTHEE COLLEGE OF ASTROLOGY (R) Will be Conducting Regular Classes on, Sunday's at 'SURANA COLLEGE' South End Circle Branch, Bangalore. Jyothishya, Vaasthu, Numerology and Medical Astrology Certificate Courses are Provided. Contact: 98800-36277 or 97418-67755

BUSINESS

Business Offers

Finance

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

HOUSING LOANS @ 6.5% Loan Against Property @ 7.5% Business Loans @ 10.5% & Balance Transfer. Call Srinidhi: 9739645566

NRI'S INVESTMENT
And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

PERSONAL

Change of Name

I, MAHADEV Residing at Aurada B Village, Taluk & District Kalburgi, Karnataka, have changed my name to MAHADEV RAJOLE, affidavit dated 04.04.2022, notary A. Idinabba, Bangalore.

I, EX. #14390334H, L/NK, Palani. A, R/o. #211 3rd Cross Manjunathnagar Oorgaumpet Post, K.G.F-563121 declare that my wife's name in my service record mentioned as VISHALAKSHI instead of VISHALAKSHI. K. correct name is VISHALAKSHI. K. affidavit dated 04.04.2022 before notary S.I. Balaguru Bangalore.

I, A.R. KHADAR SHOAIM S/o Rizwan khadeer, aged about 46year, resident of house No 3. khushal nagar, keelukote Layout, Housing Board Colony, Kolar. I have changed name to A.R. KHADAR SHOUIM Vide affidavit dated 07.12.2021 before Notary M. Ramalinge gowda. Henceforth I shall be called as A.R. Khadar shouim only

I, REDDAMMA. C. Residing at No. 9, 6th Cross, Swathantranagara, Dooravaninagara, K.R.Puram, Bengaluru, have changed my name to ROOPA. C vide affidavit dated 04.04.2022, before notary Gangaraju, Bengaluru. Henceforth I shall be called ROOPA. C only.

I Preetha Vinay D/O, N Prabhakaran R/o 101/25, Sopanam, 3rd Main, Kalidasa Layout, Kattigenahalli, Yelahanka, Bangalore-560064 have changed my name to Preetha Prabhakaran for all purposes

I SHRAVANA Ramchandra Reddy have changed my name to Shravan Ramchandra Reddy, Vide affidavit dated 1/4/2022 Sworn before Notary Sivakumara. M.N Advocate Bangalore-32

PUBLIC NOTICE

PUBLIC NOTICE
My client is intending to purchase the below mentioned schedule property. Any person/s or entity claiming to have any right, title or interest over the property shall file objection/claim with proof within 7 days, failing which my client will proceed with the transaction and thereafter claim if any will be considered as waived or abandoned and not binding on my client.

SCHEDULE
All that piece and parcel of the site bearing No.2572 situated at A-Block, AECS Layout, Singasandra, Bengaluru in ward No.191 of BBMP measuring 223.07 sq.mtrs bounded on the East by Site No.2573, West by Site No.2571, North by Site No.2565 and South by Road.

Rana I'chettira, Advocate, No.63, First Floor, Gold Tower, No.50, Field Marshal K.M. Cariappa Road, Bengaluru-560025. Mobile No. 97390 11934

DH DECCAN HERALD
SELL, RENT, BUY PROPERTY
THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM
ಪ್ರಜಾವಾಣಿ ಕ್ಲಾಸಿಫೈಡ್ಸ್

FOR MORE INFORMATION
CONTACT 9880856233 | 9886213331
Email: santhoshkumar@deccanherald.co.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಸ್ಮಾರ್ಟ್ ಆಗದ ಬಿಎಂಟಿಸಿ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗುತ್ತಿರುವುದು ಒಂದೆಡೆಯಾದರೆ, ಪ್ರಯಾಣಿಕರಿಗೆ ಹತ್ತಿರವಾಗುವ ಪ್ರಯತ್ನದಲ್ಲಿ ಇನ್ನೂ ಹಿಂದೆಯೇ ಉಳಿದಿದೆ.

ಬಸ್ ಆದ್ಯತಾ ಪಥ ಹೆಚ್ಚಿಸುವುದು, ಬಸ್‌ಗಳು ಬರುವ ನೈಜ ಸಮಯದ ಬಗ್ಗೆ ಮಾಹಿತಿ ಫಲಕ ಅಳವಡಿಕೆ, ಕೊನೆ ತಾಣಗಳಿಗೆ ಬಸ್ ಸೌಕರ್ಯ ಕಲ್ಪಿಸುವ ಬಗ್ಗೆ ಬಿಎಂಟಿಸಿ ಹಲವು ವರ್ಷಗಳಿಂದ ಹೇಳುತ್ತಿದ್ದರೂ, ಅನುಷ್ಠಾನಕ್ಕೆ ಮಾತ್ರ ಬಂದಿಲ್ಲ. ಇದೆಲ್ಲದರ ಪರಿಣಾಮವಾಗಿ ಬಸ್‌ಗಳಿಗೆ ಜನ ಹತ್ತುವುದು ಕಡಿಮೆಯಾಗಿದ್ದು, ರಸ್ತೆಗಳಲ್ಲಿ ಬೇರೆ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದೆ.

6,565 ಬಸ್‌ಗಳನ್ನು ಹೊಂದಿರುವ ಬಿಎಂಟಿಸಿ, 5,452 ಮಾರ್ಗಗಳಲ್ಲಿ ಪ್ರತಿ ದಿನ 9.41 ಲಕ್ಷ ಕಿಲೋ ಮೀಟರ್ ಕಾರ್ಯಾಚರಣೆ ಮಾಡುತ್ತಿದೆ. 45 ಘಟಕ, 54 ಬಸ್ ನಿಲ್ದಾಣಗಳನ್ನು ಹೊಂದಿದ್ದು, ಪ್ರತಿನಿತ್ಯ 20 ಲಕ್ಷಕ್ಕೂ ಹೆಚ್ಚು ಮಂದಿ ಈ ಬಸ್‌ಗಳಲ್ಲಿ ಪ್ರಯಾಣ ಮಾಡುತ್ತಿದ್ದು, ₹2.60 ಕೋಟಿ ವರಮಾನ ಸಂಗ್ರಹಿಸುತ್ತಿದೆ.

ಕೆಲವೇ ವರ್ಷಗಳ ಹಿಂದೆ ದಿನಕ್ಕೆ 50 ಲಕ್ಷ ಪ್ರಯಾಣಿಕರನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುತ್ತಿದ್ದ ಬಿಎಂಟಿಸಿ ಬಸ್‌ಗಳಲ್ಲಿ ಈಗ ಪ್ರಯಾಣಿಕರ ಸಂಖ್ಯೆ ಶೇ 50ಕ್ಕೂ ಕಡಿಮೆಯಾಗಿದೆ. ಸಂಸ್ಥೆಯನ್ನು ಸ್ಮಾರ್ಟ್ ಆಗಿಸುವ ಜತೆಗೆ ಪ್ರಯಾಣಿಕರ ಸಂಖ್ಯೆ ಹೆಚ್ಚಳಕ್ಕೆ ಸಂಸ್ಥೆ ಹಾಕಿಕೊಂಡಿರುವ ಯೋಜನೆಗಳು ಹಲವು ವರ್ಷಗಳಿಂದ ಅಲ್ಲೇ ಉಳಿದುಕೊಂಡಿವೆ.

'ಬಸ್ ದರ ಕಡಿಮೆ ಮಾಡಬೇಕು, ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಬೇಕು ಎಂಬ ಕೂಗಿಗೆ ಸರ್ಕಾರ ಕಿವಿಗೊಟ್ಟೇ ಇಲ್ಲ. ಕೋವಿಡ್ ಬಳಿಕ ಹಲವರು ಉದ್ಯೋಗ ಕಳೆದುಕೊಂಡಿದ್ದರೆ, ಬಹುತೇಕರಿಗೆ ವರಮಾನ ಕಡಿಮೆಯಾಗಿದೆ. ಆದ್ದರಿಂದ ಅವರಿಗೆ ಬಸ್ ದರ ದುಬಾರಿ ಎನಿಸುತ್ತಿದೆ. ಬಸ್ ದರ ಕಡಿಮೆ ಮಾಡಿದರೆ ಅದರಿಂದ ಬೇರೆ ರೀತಿಯ ಆರ್ಥಿಕ ಚಟುವಟಿಕೆ ಹೆಚ್ಚಾಗುತ್ತದೆ. ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿಕೊಡುವುದರಿಂದ ಅವರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣಕ್ಕೆ ಅನುಕೂಲ ಆಗಲಿದೆ. ಅದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು' ಎಂಬುದು ಬಸ್ ಪ್ರಯಾಣಿಕರ ವೇದಿಕೆಯ ಪದಾಧಿಕಾರಿಗಳ ಅಭಿಪ್ರಾಯ.

ಮಾಯವಾದವು ಇಟಿಎಂ

ಬಿಎಂಟಿಸಿ ಬಸ್‌ಗಳಲ್ಲಿ ಇಟಿಎಂ (ಎಲೆಕ್ಟ್ರಾನಿಕ್ ಟಿಕೆಟಿಂಗ್ ಮಷಿನ್) ಮೂಲಕ ಟಿಕೆಟ್ ವಿತರಿಸುವ ಪದ್ಧತಿ ಕ್ರಮೇಣ ಮಾಯವಾಗಿ ಹೋಗಿದೆ. ಹಿಂದೆ ಇದ್ದಂತೆ ಟಿಕೆಟ್ ವಿತರಿಸುವ ಪದ್ಧತಿ ಇದೆ.

ಒಂದಕ್ಕೊಂದು ಅಂಟಿಕೊಂಡಿರುವ ಟಿಕೆಟ್‌ಗಳನ್ನು ಬಿಡಿಸಿ ವಿತರಿಸಲು ನಿರ್ವಾಹಕರು ಎಂಜಲು ಹಚ್ಚಬೇಕಾದ ಅನಿವಾರ್ಯತೆ ಇದೆ. ಇದಕ್ಕೆ ವಿರೋಧ ವ್ಯಕ್ತವಾದ ಬಳಿಕ ಈಗ ಬಹುತೇಕ ನಿರ್ವಾಹಕರು ದುಡ್ಡಿನ ಚೀಲದ ಜತೆಗೊಂದು ನೀರಿನ ಸಣ್ಣ ಡಬ್ಬಿಯೊಂದನ್ನು ಜೋಡಿಸಿಕೊಂಡಿದ್ದಾರೆ. ಅದರಲ್ಲಿ ಬೆರಳು ಒದ್ದೆ ಮಾಡಿಕೊಂಡು ಬಳಿಕ ಟಿಕೆಟ್ ವಿತರಿಸುತ್ತಿದ್ದಾರೆ. ಇಟಿಎಂ ಯಂತ್ರಗಳನ್ನು ನಿರ್ವಾಹಕರಿಗೆ ಒದಗಿಸಲು ಹಲವು ವರ್ಷಗಳಿಂದ ಬಿಎಂಟಿಸಿ ತಿಣುಕಾಡುತ್ತಲೇ ಇದೆ.

ಬರಲೇ ಇಲ್ಲ ನೈಜ ಸಮಯದ ಫಲಕ

ಬಸ್‌ಗಳ ಬರುವ ಮತ್ತು ಹೊರಡುವ ನೈಜ ಸಮಯದ ಬಗ್ಗೆ ಮಾಹಿತಿ ಒದಗಿಸುವ ಫಲಕಗಳನ್ನು ಎಲ್ಲ ನಿಲ್ದಾಣಗಳಲ್ಲಿ ಅಳವಡಿಸುವ ಯೋಜನೆಯೂ ಹಲವು ವರ್ಷಗಳಿಂದ ಪ್ರಸ್ತಾವನೆ ಹಂತದಲ್ಲೇ ಉಳಿದುಕೊಂಡಿದೆ.

ಯಾವ ಮಾರ್ಗದ ಬಸ್ ಎಷ್ಟು ಗಂಟೆಗೆ ನಿಲ್ದಾಣಕ್ಕೆ ಬರಲಿದೆ ಎಂಬ ಮಾಹಿತಿ ಪ್ರಯಾಣಿಕರಿಗೆ ಲಭ್ಯವಾಗದೆ ಕಾದು ನಿಲ್ಲಬೇಕಾದ ಅನಿವಾರ್ಯತೆ ಇದೆ. ಇದನ್ನು ತಪ್ಪಿಸಲು ಬಸ್ ಬರಲಿರುವ ನೈಜ ಸಮಯದ ಮಾಹಿತಿ ಒಳಗೊಂಡ ಡಿಜಿಟಲ್ ಫಲಕ ಅಳವಡಿಕೆ ಮಾಡುವುದಾಗಿ ಬಿಎಂಟಿಸಿ ಹೇಳುತ್ತಲೇ ಇದೆ. ಕಾರ್ಯರೂಪಕ್ಕೆ ಮಾತ್ರ ಬರಲೇ ಇಲ್ಲ.

'ಮಾಹಿತಿ ತಂತ್ರಜ್ಞಾನದ (ಐ.ಟಿ) ಬೀಡು ಎಂದು ಕರೆಸಿಕೊಳ್ಳುವ ಬೆಂಗಳೂರಿನಲ್ಲಿ ಮಾಹಿತಿ ಫಲಕ ಅಳವಡಿಸುವುದು ಕಷ್ಟದ ಕೆಲಸವೇನೂ ಅಲ್ಲ. ಇಂತಹ ಸೂಕ್ಷ್ಮ ಗಂಭೀರವಾಗಿ ಪರಿಗಣಿಸುವ ಇಚ್ಛಾಶಕ್ತಿ ಬೇಕು' ಎಂಬುದು ಪ್ರಯಾಣಿಕರ ಅಭಿಪ್ರಾಯ.

ಬೇಕಿರುವುದು ಇಚ್ಛಾಶಕ್ತಿ ಮಾತ್ರ

'ಬಸ್ ಪ್ರಯಾಣಿಕರ ಸಂಖ್ಯೆ ಹೆಚ್ಚಿಸಲು ಹೆಚ್ಚಿನ ಹಣ ಮತ್ತು ಸಮಯ ಬೇಕಿಲ್ಲ. ಬೇಕಿರುವುದು ರಾಜಕೀಯ ಇಚ್ಛಾಶಕ್ತಿ ಮಾತ್ರ' ಎಂದು ಬಸ್ ಪ್ರಯಾಣಿಕರ ವೇದಿಕೆಯ ಶಾಹೀನ್ ಶಸಾ ಹೇಳಿದರು.

'ಮೆಟ್ರೊ ರೈಲು ಮಾರ್ಗಕ್ಕೆ ಸಾವಿರಾರು ಕೋಟಿ ಖರ್ಚು ಮಾಡಲಾಗುತ್ತಿದೆ. ಬಸ್ ಆದ್ಯತಾ ಪಥಕ್ಕೆ ಅಷ್ಟೇನೂ ಹಣದ ಅಗತ್ಯ ಇಲ್ಲ. ಇರುವ ರಸ್ತೆಗಳಲ್ಲಿ ಬಸ್ ಆದ್ಯತಾ ಪಥ ಮೀಸಲಿಟ್ಟರೆ ಸಾಕು. ಪ್ರಯಾಣಿಕರನ್ನು ಬಸ್‌ಗಳಿಗೆ ಸೆಳೆಯಬಹುದು ಮತ್ತು ಬೆಂಗಳೂರನ್ನು ಸುಂದರ ನಗರವಾಗಿ ಉಳಿಸಿಕೊಳ್ಳಬಹುದು' ಎಂದರು.

ಬಸ್ ಪಥಕ್ಕೆ ಇಲ್ಲವಾದ ಆದ್ಯತೆ

ಸಂಚಾರ ದಟ್ಟಣೆ ಕಡಿಮೆ ಮಾಡಲು ಅನುಕೂಲ ಆಗಲಿರುವ ಬಸ್ ಆದ್ಯತಾ ಪಥ ನಿರ್ಮಿಸಲು ಸರ್ಕಾರ ಆದ್ಯತೆಯನ್ನೇ ನೀಡಿಲ್ಲ. ಇದ್ದ ಒಂದು ಆದ್ಯತಾ ಪಥವೂ ಈಗ ಹೆಸರಿಗಷ್ಟೇ ಎನ್ನುವಂತಾಗಿದೆ.

ಐ.ಟಿ ಕಂಪನಿಗಳೇ ಹೆಚ್ಚಿರುವ ಹೊರವರ್ತುಲ ರಸ್ತೆಯಲ್ಲಿ ನಿರ್ಮಾಣವಾದ ಬಸ್ ಆದ್ಯತಾ ಪಥ ಈಗ ಇದ್ದೂ ಇಲ್ಲದಂತಾಗಿದೆ. ಅದೇ ಮಾರ್ಗದಲ್ಲಿ ಮೆಟ್ರೊ ರೈಲು ಮಾರ್ಗದ ಕಾಮಗಾರಿ ಆರಂಭ ಆಗಿರುವುದರಿಂದ ಬಸ್ ಆದ್ಯತಾ ಪಥ ಬಹುತೇಕ ಇಲ್ಲವಾಗಿದೆ.

'ಒಟ್ಟು 12 ಪ್ರಮುಖ ರಸ್ತೆಗಳಲ್ಲಿ ಬಸ್ ಆದ್ಯತಾ ಪಥ ನಿರ್ಮಿಸಲು ಉದ್ದೇಶಿಸಲಾಗಿದೆ ಎಂಬ ಘೋಷಣೆ ಮಾಡಿ ಹಲವು ವರ್ಷಗಳೇ ಕಳೆದಿವೆ. ಆದರೆ, ಆ ಬಗ್ಗೆ ಸರ್ಕಾರವಾಗಲೀ, ಬಿಎಂಟಿಸಿಯಾಗಲಿ ಪ್ರಸ್ತಾಪಿಸುತ್ತಲೇ ಇಲ್ಲ. ಬಸ್‌ನಲ್ಲಿ ಪ್ರಯಾಣಿಸಿದರೆ ಬೇಗನೆ ಕಚೇರಿ ಅಥವಾ ಮನೆ ತಲುಪಬಹುದು ಎಂಬ ನಂಬಿಕೆ ಜನರಿಗೆ ಬಂದರೆ ಬಸ್ ಹತ್ತಲು ಹಿಂಜರಿಯುವುದಿಲ್ಲ. ಆದರೆ, ಪ್ರಯಾಣಿಕರನ್ನು ಆಕರ್ಷಿಸಲು ಸರ್ಕಾರ ಹಿಂದೆ ಬಿದ್ದಿದೆ' ಎನ್ನುತ್ತಾರೆ ಬಸ್ ಪ್ರಯಾಣಿಕರ ವೇದಿಕೆಯ ಶಾಹೀನ್ ಶಸಾ.

ಎಲೆಕ್ಟ್ರಿಕ್ ಬಸ್‌ಗೆ ಚಾರ್ಜಿಂಗ್ ಸಮಸ್ಯೆ

ಎಲೆಕ್ಟ್ರಿಕ್ ವಾಹನಗಳ ಯುಗಕ್ಕೆ ತೆರೆದುಕೊಳ್ಳುವ ಮೊದಲ ಪ್ರಯತ್ನದಲ್ಲೇ ಬಿಎಂಟಿಸಿ ಹಿಂದೆ ಬಿದ್ದಿದೆ. 90 ಮಿನಿ ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳುವ ಪ್ರಯತ್ನವೇ ಇನ್ನೂ ಪೂರ್ಣ ಪ್ರಮಾಣದಲ್ಲಿ ಸಾಕಾರಗೊಂಡಿಲ್ಲ.

ಬಸ್‌ಗಳು ಸಿದ್ಧವಿದ್ದರೂ ಚಾರ್ಜಿಂಗ್ ಸೌಲಭ್ಯ ಇಲ್ಲದಿರುವ ಕಾರಣಕ್ಕೆ ವಿಳಂಬವಾಗುತ್ತಿದೆ ಎಂಬುದನ್ನು ಬಿಎಂಟಿಸಿಯೇ ಹೇಳುತ್ತಿದೆ. 'ಎಲೆಕ್ಟ್ರಿಕ್ ಬಸ್‌ಗಳನ್ನು ಏಕಾಏಕಿ ಗುತ್ತಿಗೆ ಆಧಾರದಲ್ಲಿ ಪಡೆದುಕೊಂಡಿಲ್ಲ. ಎಲ್ಲ ರೀತಿಯ ಒಪ್ಪಂದ, ಪೂರ್ವ ತಯಾರಿಕೆ ಮಾಡಿಕೊಂಡಿಯೇ ಹೆಜ್ಜೆ ಇಡಲಾಗಿದ್ದರೂ ವಿಳಂಬ ಆಗುವುದೇಕೆ' ಎಂಬುದು ಪ್ರಯಾಣಿಕರ ಪ್ರಶ್ನೆ.

'ತಾಪಮಾನ ಏರಿಕೆ ತಡೆಗೆ ಹಸಿರುಮನೆ ಅನಿಲ ನಿಯಂತ್ರಣವೊಂದೇ ಮಾರ್ಗ'

ಪ್ಯಾರಿಸ್(ಎಎಫ್‌ಪಿ): ಜಾಗತಿಕ ತಾಪಮಾನ ಏರಿಕೆಯು ಮಾನವನ ಸಂಕಟ ಹಾಗೂ ಪರಿಸರ ವಿಪತ್ತುಗಳಿಗೆ ಕಾರಣವಾಗುವ ಸಾಧ್ಯತೆಯನ್ನು ಹೆಚ್ಚಿಸುತ್ತಿದೆ. ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು ತಡೆಯುವುದು ಜಾಗತಿಕ ತಾಪಮಾನ ನಿಯಂತ್ರಣದ ಅನಾಹುತ ತಡೆಗೆ ಇರುವ ಏಕೈಕ ಮಾರ್ಗ ಎಂದು ವಿಶ್ವಸಂಸ್ಥೆಯ ವರದಿ ತಿಳಿಸಿದೆ.

ಜಾಗತಿಕ ತಾಪಮಾನ ನಿಯಂತ್ರಣಕ್ಕೆ ಏನೆಲ್ಲ ಕ್ರಮ ಕೈಗೊಳ್ಳಬಹುದು ಎಂಬ ಕುರಿತು ವಿಶ್ವಸಂಸ್ಥೆಯು 10,000 ಪುಟಗಳ ವರದಿಯನ್ನು ಸೋಮವಾರ ಬಿಡುಗಡೆ ಮಾಡಿದೆ.

ಜಾಗತಿಕ ತಾಪಮಾನ ಏರಿಕೆಗೆ ಮಾನವ ಚಟುವಟಿಕೆಗಳೇ ಕಾರಣವಾಗಿದ್ದು, ಭೂಮಿಯ ತಾಪವು ಕೈಗಾರಿಕಾ ಪೂರ್ವದ 1.1 ಡಿಗ್ರಿಯಷ್ಟು ಹೆಚ್ಚಾಗಿದೆ. ಪಳೆಯುಳಿಕೆ ಇಂಧನಗಳಿಂದ ಬಿಡುಗಡೆಯಾಗುವ ಕಾರ್ಬನ್ ಡೈ ಆಕ್ಸೈಡ್ ತಾಪಮಾನ ಏರಿಕೆಯ ಪ್ರಮುಖ ಅಂಶವಾಗಿದ್ದು, 1900 ರಿಂದ 2019ರ ಅವಧಿಯಲ್ಲಿ ತಾಪವು ಕನಿಷ್ಠ 10 ಪಟ್ಟು ವೇಗವಾಗಿ ಹೆಚ್ಚಿದೆ.

ಪ್ಯಾರಿಸ್ ಒಪ್ಪಂದದಂತೆ ಎಲ್ಲಾ ದೇಶಗಳು ಮಾಲಿನ್ಯಕಾರಕ ಅನಿಲ ನಿಯಂತ್ರಣಕ್ಕೆ ಮುಂದಾಗದಿದ್ದರೆ, 2 ಡಿಗ್ರಿ ಸೆಲ್ಸಿಯಸ್‌ನೊಳಗೆ ತಾಪವಿದ್ದರೂ, ಗಂಭೀರ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಪ್ರಸ್ತುತ ಇರುವ ರಾಷ್ಟ್ರೀಯ ನೀತಿಗಳಿಂದ 2100ರ ಇಸವಿ ವೇಳೆಗೆ ಭೂಮಿಯ ತಾಪ 3.2 ಡಿಗ್ರಿ ಸೆಲ್ಸಿಯಸ್‌ಗೆ ಜಿಗಿಯಲಿದೆ ಎಂದು ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಇಂಧನ ವಲಯದಲ್ಲಿ ಪಳೆಯುಳಿಕೆ ಇಂಧನದ ಬಳಕೆ ಸೇರಿದಂತೆ ಮತ್ತಿತ್ತರ ಅಗತ್ಯ ಬದಲಾವಣೆಗಳ ಮೂಲಕ 2030ರ ವೇಳೆಗೆ ಜಾಗತಿಕ ತಾಪಮಾನವನ್ನು ಅರ್ಧದಷ್ಟು ಇಳಿಸಬಹುದು. ಅಲ್ಲದೆ ಜಾಗತಿಕ ತಾಪಮಾನವನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಸೀಮಿತಗೊಳಿಸಬೇಕು ಎಂದು ವರದಿಯಲ್ಲಿ ಪ್ರಧಾನವಾಗಿ ವಿವರಿಸಲಾಗಿದೆ.

ಭಾನುವಾರ ಹೊರತುಪಡಿಸಿ ನಿತ್ಯ ರೈಲು ಸಂಚಾರ: ಪ್ರಯಾಣದ ಖರ್ಚು ಉಳಿತಾಯ

8ರಿಂದ ಬೆಂಗಳೂರು – ಹಾಸನ ಡೆಮು ರೈಲು

ಪ್ರಜಾವಾಣಿ ವಾರ್ತೆ

ಹಾಸನ: ಬೆಂಗಳೂರು– ಹಾಸನ ನಡುವೆ ಏ. 8ರಿಂದ 'ಡೆಮು ರೈಲು' ಸಂಚಾರ ಆರಂಭವಾಗಲಿದೆ.

'ಕೋವಿಡ್ ಮೊದಲ ಅಲೆ ಪೂರ್ವದಲ್ಲಿ ಡೆಮು ರೈಲು ಯಶವಂತಪುರ– ಹಾಸನ ನಡುವೆ ಸಂಚರಿಸುತ್ತಿತ್ತು. ಸೋಂಕು ನಿಯಂತ್ರಣಕ್ಕಾಗಿ ಸಂಚಾರ ಸ್ಥಗಿತವಾಗಿತ್ತು. ಈಗ ಯಶವಂತಪುರ ನಿಲ್ದಾಣದ ಬದಲು ಡೆಮು ರೈಲು ಮೆಜೆಸ್ಟಿಕ್ ರೈಲು ನಿಲ್ದಾಣದಿಂದಲೇ ಸಂಚಾರ ಆರಂಭಿಸಲಿದೆ' ಎಂದು ನೈಋತ್ಯ ರೈಲ್ವೆ ವಲಯ ಪ್ರಕಟಿಸಿದೆ.

ಭಾನುವಾರ ಹೊರತುಪಡಿಸಿ ವಾರದಲ್ಲಿ ಆರು ದಿನ ಸಂಚರಿಸುವ ರೈಲು ನಿತ್ಯ ಬೆಳಿಗ್ಗೆ 9.45ಕ್ಕೆ ಮೆಜೆಸ್ಟಿಕ್ ರೈಲು ನಿಲ್ದಾಣದಿಂದ ಹೊರಟು ಯಶವಂತಪುರ ರೈಲು ನಿಲ್ದಾಣಕ್ಕೆ 9.57ಕ್ಕೆ ಬರಲಿದೆ. ಅಲ್ಲಿಂದ 9.59ಕ್ಕೆ ಹೊರಟು ಕುಣಿಗಲ್, ಶ್ರವಣಬೆಳಗೊಳ, ಚನ್ನರಾಯಪಟ್ಟಣ ಮಾರ್ಗವಾಗಿ 1.45ಕ್ಕೆ ಹಾಸನ ರೈಲು ನಿಲ್ದಾಣ ತಲುಪಲಿದೆ.

ಹಾಸನ ರೈಲು ನಿಲ್ದಾಣದಲ್ಲಿ ಸುಮಾರು ಅರ್ಧ ಗಂಟೆ ನಿಲುಗಡೆ ನಂತರ ಮಧ್ಯಾಹ್ನ 2.15ಕ್ಕೆ ಬೆಂಗಳೂರಿಗೆ ಹೊರಡುವ ಡೆಮು ರೈಲು ಬೆಂಗಳೂರು ಸಿಟಿ ನಿಲ್ದಾಣಕ್ಕೆ ಸಂಜೆ 6 ಗಂಟೆಗೆ ತಲುಪಲಿದೆ. ಎಂಟು ಬೋಗಿಗಳಿರುವ ಡೆಮು ರೈಲಿಗೆ ಹಾಸನ– ಬೆಂಗಳೂರು ಸಿಟಿ ರೈಲು ನಿಲ್ದಾಣಗಳ ನಡುವೆ ಇರುವ ಹದಿನೈದು ನಿಲ್ದಾಣದಲ್ಲೂ ನಿಲುಗಡೆಯಿದೆ.

> **ಹಾಸನ - ಚಿಕ್ಕಬಾಣಾವರ ನಡುವಿನ ರೈಲು ಮಾರ್ಗದ ವಿದ್ಯುದ್ದೀಕರಣವಾದ ನಂತರ ಈ ಡೆಮು ರೈಲು ಮೆಮು ರೈಲು ಆಗಿ 16 ಬೋಗಿಗಳವರೆಗೂ ವಿಸ್ತರಣೆಯಾಗಲು ಅವಕಾಶವಿದೆ**
> **ಟಿ.ಪಿ.ಲೋಕೇಶ್,** ಕರ್ನಾಟಕ ರೈಲ್ವೆ ವೇದಿಕೆ ಸಂಚಾಲಕ

ರೈಲು ಮೆಜೆಸ್ಟಿಕ್ ನಿಲ್ದಾಣ ತಲುಪಿದ ನಂತರ ದೇವನಹಳ್ಳಿ ಚಿಕ್ಕಬಳ್ಳಾಪುರ ಮಾರ್ಗವಾಗಿ ಮರುದಿನ ಹಾಸನಕ್ಕೆ ಬರುವುದರಿಂದ ಚಿಕ್ಕಬಳ್ಳಾಪುರ ಮತ್ತು ಕೋಲಾರಕ್ಕೆ ತೆರಳುವ ಪ್ರಯಾಣಿಕರಿಗೂ ಅನುಕೂಲವಾಗಲಿದೆ.

'ಹಾಸನ– ಬೆಂಗಳೂರು ನಡುವಿನ ರೈಲು ಮಾರ್ಗದ ವಿದ್ಯುದ್ದೀಕರಣಕ್ಕೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾಮಗಾರಿ ಶೀಘ್ರ ಆರಂಭವಾಗಲಿದೆ. ಈ ಕಾಮಗಾರಿ ಪೂರ್ಣಗೊಂಡ ಬಳಿಕ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಇನ್ನೂ ಹೆಚ್ಚು ರೈಲು ಸಂಚಾರ ಆರಂಭವಾಗುವ ನಿರೀಕ್ಷೆಯಿದೆ' ಎಂದು ಕರ್ನಾಟಕ ರೈಲ್ವೆ ವೇದಿಕೆ ಸಂಚಾಲಕ ಟಿ.ಪಿ.ಲೋಕೇಶ್ ಸಂತಸ ವ್ಯಕ್ತಪಡಿಸಿದ್ದಾರೆ.

'ಬೆಂಗಳೂರು ಸಿಟಿ - ಹಾಸನ ನಡುವೆ ಡೆಮು ರೈಲು ಸಂಚಾರ ಆರಂಭಿಸಬೇಕು ಎಂದು ರೈಲ್ವೆ ಇಲಾಖೆ ಅಧಿಕಾರಿಗಳಿಗೆ ಮಾಡಿದ ಮನವಿಗೆ ಸ್ಪಂದನೆ ಸಿಕ್ಕಿದೆ. ಬಸ್ ಪ್ರಯಾಣ ದರ ದುಬಾರಿಯಾಗುತ್ತಿರುವ ಈಗಿನ ಸಂದರ್ಭದಲ್ಲಿ ಕಡಿಮೆ ವೆಚ್ಚದಲ್ಲಿ ರೈಲುಗಳಲ್ಲಿ ಪ್ರಯಾಣ ಮಾಡಬಹುದು. ಹಾಸನ ಮತ್ತು ತುಮಕೂರು ಜಿಲ್ಲೆಯ ಜನರು ಡೆಮು ರೈಲು ಸಂಚಾರದ ಸೌಲಭ್ಯವನ್ನು ಬಳಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

14ರಿಂದ 'ಅಮೃತ ಸಂಗೀತಮ್' ಸಂಗೀತೋತ್ಸವ

ಬೆಂಗಳೂರು: ಭಾರತೀಯ ಸಾಮಗಾನ ಸಭಾ ವತಿಯಿಂದ 'ಅಮೃತ ಸಂಗೀತಂ' ಶೀರ್ಷಿಕೆಯಡಿ ವೈವಿಧ್ಯಮಯ ಸಂಗೀತ ಕಛೇರಿಗಳನ್ನು ಏ.14 ಮತ್ತು 15ರಂದು ಮಲ್ಲೇಶ್ವರದ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಲಾಗಿದೆ.

14ರಂದು ಸಂಜೆ 5 ಗಂಟೆಗೆ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದೆ. ಸಂಜೆ 5.30ರಿಂದ ಭಾರ್ಗವಿ ವೆಂಕಟರಾಮ್ ಅವರಿಂದ ಕರ್ನಾಟಕ ಸಂಗೀತ ಹಾಡುಗಾರಿಕೆ, ಅನೂಪ್ ಶಂಕರ್ ಅವರಿಂದ ಕರ್ನಾಟಕ ಭಕ್ತಿ ಸಂಗೀತ ಇರಲಿದೆ.

15ರಂದು ಸಂಜೆ 5.30ಕ್ಕೆ ಓಂಕಾರ್‌ನಾಥ್ ಹವಲ್ದಾರ್ ಅವರಿಂದ ಹಿಂದೂಸ್ತಾನಿ ಸಂಗೀತ, ರಂಜನಿ ಗಾಯತ್ರಿ ಅವರಿಂದ ಕರ್ನಾಟಕ ಸಂಗೀತ ಗಾಯನ ಇರಲಿದ್ದು, ಬುಕ್ ಮೈ ಶೋ ಮೂಲಕ ಆಸನಗಳನ್ನು ಮುಂಗಡ ಕಾಯ್ದಿರಿಸಬಹುದು ಎಂದು ಭಾರತೀಯ ಸಾಮಗಾನ ಸಭಾದ ಅಧ್ಯಕ್ಷ ಆರ್.ಆರ್. ರವಿಶಂಕರ್ ತಿಳಿಸಿದ್ದಾರೆ.

ಸಂಪರ್ಕ:9845833033



ಪುಸ್ತಕ ಬಿಡುಗಡೆ

ಸ್ನೇಹ ಬುಕ್ ಹೌಸ್ ವತಿಯಿಂದ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಪ್ರಮೋದ ಮೋಹನ ಹೆಗಡೆ ಅವರ 'ಮೈಸೂರ್ ಪಾಕ್ ಹುಡುಗ' ಹಾಗೂ ಲೇಖಕ ಮೋಹನ ಭಾಸ್ಕರ ಹೆಗಡೆ ಅವರ 'ಪ್ರಭಾರಿ' ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಲೇಖಕಿ ವಸುಂಧರಾ ಭೂಪತಿ, ಪತ್ರಕರ್ತ ಜೋಗಿ, ಬಿಬಿಎಂಪಿ ವಿಶೇಷ ಆಯುಕ್ತ ಕೆ.ಹರೀಶ್ ಕುಮಾರ್, ಪತ್ರಕರ್ತ ಗೋಪಾಲಕೃಷ್ಣ ಕುಂಟಿನಿ, ಸೆಲ್ಕೋ ಸಂಸ್ಥಾಪಕ ಹರೀಶ ಹಂದೆ, ಪುಸ್ತಕ ಲೇಖಕರು ಹಾಗೂ ಇತರರು ಇದ್ದಾರೆ

ಕಲಾಭಾರತಿ ಸಂಗೀತ ತರಗತಿಗಳಿಗೆ ಪ್ರವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವಿದ್ಯಾಭವನದ ಸಾಂಸ್ಕೃತಿಕ ವಿಭಾಗದ 'ಕಲಾಭಾರತಿ' ತರಗತಿಗಳಾದ ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಮೃದಂಗ, ತಬಲಾ, ವೀಣಾ, ಕೀಬೋರ್ಡ್, ಭರತನಾಟ್ಯ, ಕಥಕ್ ಹಾಗೂ ಚಿತ್ರಕಲೆ ತರಗತಿಗಳಿಗೆ ಪ್ರವೇಶಾತಿ ಆರಂಭವಾಗಿದೆ.

ನುರಿತ ಶಿಕ್ಷಕರು ತರಬೇತಿ ನೀಡಲಿದ್ದಾರೆ. ತರಗತಿಗಳಿಗೆ ತಿಂಗಳ ಶುಲ್ಕ ಇರಲಿದೆ. ಆಸಕ್ತರು ಹೆಸರು ನೋಂದಾಯಿಸಿಕೊಳ್ಳುವಂತೆ ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್.ಸುರೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಳಾಸ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು. ಸಂಪರ್ಕ:9980065746

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.

Tender Notification

The Karnataka State Cricket Association, M.Chinnaswamy Stadium, Cubbon Road, Bangalore, invites sealed tenders from GST Compliant for Proposed Entrance Canopy (Tensile Fabric) for the Sports Centre for KSCA Cricket Ground, Phase-2 at Hubli

The details of issue/submission of tender document are as follows:-

1. Name of the work :- Proposed Entrance Canopy (Tensile Fabric) for the Sports Centre for KSCA Cricket Ground, Phase-2 at Hubli
2. Estimated Cost :- Rs 24.8 Lakhs
3. Earnest Money Deposit :- Rs 25,000 (Rs Twenty Five Thousand Only) should be Enclosed in the technical bid
4. Cost of tender form :- Rs. 2500 (Two Thousand Five Hundred) /- plus GST (Non Refundable)
5. Date of issue of tender form :- 6-04-2022 to 19-04-2022
6. Last date of submission of filled tender form :- 25-04-2022 before 4.30 P.M
7. Two covers bid system :- Technical and Commercial Bid separately. Technical bid will be opened on same day. If any delay, will be intimated.
8. Completion of work by :- 75 days from the date of work order

Tender documents may be obtained from the Office of the KSCA, by submitting a requisition in the company's letter head between 11.00 a.m to 5.00 p.m on any working days. For any clarification please contact Mr.H.A.Venkatesprasad, AGM Civil Engineering Dept, Mobile No. 9945604515/8150900022

Hon. Secretary, KSCA

ಪ್ರಕಾಶ್ ಬೆಳವಾಡಿ (ಎಡದಿಂದ ಮೂರನೇಯವರು) ಸ್ವದೇಶಿ ಮೇಳದ ಕೈಪಿಡಿ ಬಿಡುಗಡೆ ಮಾಡಿದರು. ಮೇಳದ ಸಂಘಟಕ ಬಿ.ಎಚ್‌ರಘುರಾಮ್, ಕೆ.ಜಗದೀಶ, ಕಿಶೋರ್ ಪಟವರ್ಧನ್ ಇದ್ದರು –ಪ್ರಜಾವಾಣಿ ಚಿತ್ರ

ನಾಳೆಯಿಂದ 'ಸ್ವದೇಶಿ ಮೇಳ'

ಬೆಂಗಳೂರು: ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಹಾಗೂ ಗೃಹ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸುವ ಸಲುವಾಗಿ ಸ್ವದೇಶಿ ಜಾಗರಣ ಮಂಚ್–ಕರ್ನಾಟಕವು 'ಸ್ವದೇಶಿ ಮೇಳ' ಹಮ್ಮಿಕೊಂಡಿದೆ.

ಇದೇ 6ರಿಂದ 10ರವರೆಗೆ (ಬೆಳಿಗ್ಗೆ 10 ರಿಂದ ರಾತ್ರಿ 9) ಜಯನಗರದ ಚಂದ್ರಗುಪ್ತ ಮೌರ್ಯ ಆಟದ ಮೈದಾನದಲ್ಲಿ (ಶಾಲಿನಿ ಮೈದಾನ) ಮೇಳ ನಡೆಯಲಿದ್ದು ಸಾರ್ವಜನಿಕರಿಗೆ ಉಚಿತ ಪ್ರವೇಶ ಇರಲಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸ್ವದೇಶಿ ಮೇಳದ ಸಂಚಾಲಕ ಪ್ರಕಾಶ್ ಬೆಳವಾಡಿ, 'ಜನರಲ್ಲಿ ಸ್ವದೇಶಿ ಭಾವ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಅಪಾಯದ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ 1991ರಲ್ಲಿ ಸ್ವದೇಶಿ ಜಾಗರಣ ಮಂಚ್ ಸ್ಥಾಪನೆಗೊಂಡಿತು. ಇದು ಸ್ವದೇಶಿ ವಸ್ತುಗಳ ಪರಿಚಯ, ಸಾವಯವ ಸಂತೆ, ಸ್ವಯಂ ಉದ್ಯೋಗ ತರಬೇತಿ, ಆಯುರ್ವೇದ ಶಿಬಿರ ಹಾಗೂ ಸ್ವದೇಶಿ ಮೇಳದಂತಹ ಹಲವಾರು ರಚನಾತ್ಮಕ ಕೆಲಸಗಳನ್ನು ಮಾಡಿಕೊಂಡು ಬಂದಿದೆ' ಎಂದು ತಿಳಿಸಿದರು.

'ಸ್ವದೇಶಿ ಮೇಳದಲ್ಲಿ ತಜ್ಞರು ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಲಿದ್ದಾರೆ. ಏಪ್ರಿಲ್ 7ರಂದು ತಾರಸಿ ತೋಟ ಕುರಿತ ತರಬೇತಿ, ಏಪ್ರಿಲ್ 8ರಂದು ನಿತ್ಯ ಬಳಕೆ ವಸ್ತು ತಯಾರಿ ಶಿಬಿರ, ಏಪ್ರಿಲ್ 9ರಂದು ಆಯುರ್ವೇದ ಹಾಗೂ ಪಂಚಗವ್ಯ ಚಿಕಿತ್ಸಾ ಶಿಬಿರಗಳು ಹಾಗೂ ಏಪ್ರಿಲ್ 10ರಂದು ಸ್ವದೇಶಿ ವಸ್ತು ಭಂಡಾರ ತರಬೇತಿ ಕಾರ್ಯಾಗಾರ ಏರ್ಪಡಿಸಲಾಗಿದೆ. ಶಿಬಿರ ಹಾಗೂ ಕಾರ್ಯಾಗಾರಗಳಲ್ಲಿ ಪಾಲ್ಗೊಳ್ಳುವವರಿಗೆ ₹200 ಶುಲ್ಕ ನಿಗದಿಪಡಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಸ್ವದೇಶಿ ಜಾಗರಣ ಮಂಚ್‌ನ ಕ್ಷೇತ್ರೀಯ ಸಂಘಟಕ ಕೆ.ಜಗದೀಶ ಇದ್ದರು.

ಉಡುಗೊರೆ

ಸೀರೆ ಧರಿಸಿಕೊಂಡು ಮೇಳದಲ್ಲಿ ಭಾಗವಹಿಸುವ ಮಹಿಳೆಯರಿಗೆ ಲಕ್ಕಿ ಡಿಪ್ ಮೂಲಕ 'ಸೌಭಾಗ್ಯವತಿ ಉಡುಗೊರೆ' ಹೆಸರಿನಲ್ಲಿ ರೇಷ್ಮೆ ಸೀರೆ ನೀಡಲಾಗುತ್ತದೆ.

6 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ದೇಶೀಯ ಕ್ರೀಡೆಗಳನ್ನು ಪರಿಚಯಿಸುವ ಸಲುವಾಗಿ ಏಪ್ರಿಲ್ 7 ಮತ್ತು 8 ರಂದು ಲಗೋರಿ, ಬುಗುರಿ ಸೇರಿದಂತೆ ವಿವಿಧ ಆಟಗಳನ್ನು ಆಡಿಸಲಾಗುತ್ತದೆ.

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ಸಮಾಜ ಕಲ್ಯಾಣ ಇಲಾಖೆ



"ರಾಷ್ಟ್ರದ ಆರ್ಥಿಕ ಬೆಳವಣಿಗೆಯು ಒಂದು ರೀತಿಯಲ್ಲಿ ಕೃಷಿಯ ಬೆಳವಣಿಗೆಯೇ ಆಗಿದೆ"
-ಡಾ॥ ಬಾಬು ಜಗಜೀವನ ರಾಂ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಹಸಿರು ಕ್ರಾಂತಿಯ ಹರಿಕಾರ, ಭಾರತದ ಮಾಜಿ ಉಪ ಪ್ರಧಾನಮಂತ್ರಿಗಳಾದ

ಡಾ॥ ಬಾಬು ಜಗಜೀವನ ರಾಂ ರವರ
115ನೇ ಜನ್ಮ ದಿನಾಚರಣೆ

ಡಾ॥ ಬಾಬು ಜಗಜೀವನ ರಾಂ ಅವರ ಪ್ರತಿಮೆಗೆ ಮಾಲಾರ್ಪಣೆ
ದಿನಾಂಕ: 05.04.2022 ಮಂಗಳವಾರ, ಬೆಳಗ್ಗೆ 10:00 ಗಂಟೆಗೆ | ಸ್ಥಳ: ವಿಧಾನ ಸೌಧದ ಪಶ್ಚಿಮ ದ್ವಾರ, ಬೆಂಗಳೂರು

ಡಾ॥ ಬಾಬು ಜಗಜೀವನ ರಾಂ ಪ್ರಶಸ್ತಿ ಪ್ರದಾನ ಮತ್ತು ಸಾರ್ವಜನಿಕ ಸಮಾರಂಭ
ದಿನಾಂಕ: 05.04.2022 ಮಂಗಳವಾರ, ಬೆಳಗ್ಗೆ 10:15 ಗಂಟೆಗೆ | ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನ ಸೌಧ, ಬೆಂಗಳೂರು

ಉದ್ಘಾಟನೆ | ಶ್ರೀ ಬಸವರಾಜ ಎಸ್. ಬೊಮ್ಮಾಯಿ, ಸನ್ಮಾನ್ಯ ಮುಖ್ಯಮಂತ್ರಿಗಳು

ಉಪಸ್ಥಿತಿ | ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಅಧ್ಯಕ್ಷತೆ | ಶ್ರೀ ರಿಜ್ವಾನ್ ಅರ್ಷದ್, ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

ಸರ್ವರಿಗೂ ಆದರದ ಸುಸ್ವಾಗತ

ಶ್ರೀ ದಯಾನಂದ ಕೆ.ಎ., ಭಾ.ಆ.ಸೇ., ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ

ಮೇಜರ್ ಪಿ. ಮಣಿವಣ್ಣನ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ

ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರು ಇಲಾಖಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು.

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು"
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

'ಎಲ್ಲ ದೇವಸ್ಥಾನಗಳಲ್ಲೂ ಧ್ವನಿವರ್ಧಕ ಹಾಕುತ್ತೇವೆ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಸಾರ್ವಜನಿಕರಿಗೆ ಆಗುತ್ತಿರುವ ಕಿರಿಕಿರಿ ತಪ್ಪಿಸಲು ಎಲ್ಲ ಮಸೀದಿಗಳ ಮೇಲಿನ ಧ್ವನಿವರ್ಧಕಗಳನ್ನು ತೆರವುಗೊಳಿಸಬೇಕು. ಇಲ್ಲದಿದ್ದರೆ ರಾಜ್ಯದ ಎಲ್ಲ ಹಿಂದೂ ದೇವಾಲಯಗಳಲ್ಲೂ ಹನುಮಾನ್ ಚಾಲೀಸಾ ಹಾಗೂ ರಾಮನಾಮ ಜಪ ಭಜನೆಗಳನ್ನು ಧ್ವನಿವರ್ಧಕದ ಮೂಲಕ ಪ್ರಸಾರ ಮಾಡಲಾಗುವುದು' ಎಂದು ಶ್ರೀರಾಮ ಸೇನೆ ರಾಜ್ಯ ಘಟಕದ ಅಧ್ಯಕ್ಷ ಆಂದೋಲಾ ಸಿದ್ಧಲಿಂಗ ಸ್ವಾಮೀಜಿ ಅವರು ಹೇಳಿದರು.

'ಧ್ವನಿವರ್ಧಕಗಳ ವಿಷಯದಲ್ಲಿ ಸುಪ್ರೀಂ ಕೋರ್ಟ್ ಆದೇಶ ಪಾಲನೆಯಾಗುತ್ತಿಲ್ಲ. ಇದನ್ನು ಖಂಡಿಸಿ ಏಪ್ರಿಲ್ 13ರಂದು ಎಲ್ಲ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ಮಾಡಲಾಗುವುದು. ನಂತರ ಮಾಹಿತಿ ಸಮಿತಿಗಳು ಹಾಗೂ ರಾಜ್ಯ ಸರ್ಕಾರದ ವಿರುದ್ಧ ರಿಟ್ ಅರ್ಜಿ ಸಲ್ಲಿಸಲಾಗುವುದು' ಎಂದು ಸ್ವಾಮೀಜಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಮಸೀದಿಗಳ ಮೇಲಿನ ಧ್ವನಿವರ್ಧಕ ತೆರವು ಮಾಡದಿದ್ದರೆ ರಾಮನವಮಿ (ಏ.10) ದಿನದಿಂದ ಬಹುಪಾಲು ದೇವಸ್ಥಾನಗಳಲ್ಲಿ ನಾವೇ ಧ್ವನಿವರ್ಧಕ ಹಾಕಿ, ಭಜನೆ ಆರಂಭಿಸುತ್ತೇವೆ. ಕಾನೂನು ಎಲ್ಲರಿಗೂ ಒಂದೇ ಆಗಲಿ' ಎಂದು ಹಿಂದೂ ಮಹಿಳಾ ಜಾಗೃತಿ ವೇದಿಕೆ ನಾಯಕಿ ದಿವ್ಯಾ ಹಾಗರಗಿ ಅವರು ಹೇಳಿದರು.

ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆ ವಿಚಾರ

'ಮುಸ್ಲಿಂ ಮುಖಂಡರೇ ಚಿಂತಿಸಲಿ'

ಪ್ರಜಾವಾಣಿ ವಾರ್ತೆ

ಕೆ.ಎಸ್.ಈಶ್ವರಪ್ಪ

ಬಳಲೆ (ಕಾರವಾರ): 'ಮಸೀದಿಯಲ್ಲಿ ಜೋರಾಗಿ ಧ್ವನಿವರ್ಧಕ ಬಳಸುವಾಗ ನಾವು ಹನುಮಾನ್ ಚಾಲೀಸಾ ಅನ್ನು ಧ್ವನಿವರ್ಧಕದಲ್ಲಿ ಕೇಳಿಸುತ್ತೇವೆ ಎಂದು ಕೆಲವರು ಹೇಳುತ್ತಿದ್ದಾರೆ. ಈ ರೀತಿ ಮಾಡುವುದರಿಂದ ಧರ್ಮಗಳ ನಡುವೆ ಸಂಘರ್ಷವಾಗಬಹುದು. ಇದರ ಬದಲು ಮುಸ್ಲಿಂ ಮುಖಂಡರೇ ಚಿಂತಿಸಬೇಕು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ಕುಮಟಾ ತಾಲ್ಲೂಕಿನ ಗೋಕರ್ಣ ಬಳಿಯ ಬಳಲೆಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದರು.

'ದೇವಸ್ಥಾನಗಳಲ್ಲಿ, ಚರ್ಚ್‌ಗಳಲ್ಲಿ ನಡೆಯುವಂತೆ ಇತರರಿಗೆ ತೊಂದರೆಯಾಗದಂತೆ ಮಸೀದಿಯೊಳಗೇ ಧ್ವನಿವರ್ಧಕ ಬಳಸುವುದು ಸೂಕ್ತ. ಇದು ನನ್ನ ವೈಯಕ್ತಿಕ ಅಭಿಪ್ರಾಯ' ಎಂದು ಸಲಹೆ ನೀಡಿದರು.

'ಮಸೀದಿಗಳಲ್ಲಿ ಬೆಳಿಗ್ಗೆ, ಸಂಜೆ ಧ್ವನಿವರ್ಧಕಗಳನ್ನು ಬಳಸುವುದರಿಂದ ಓದುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದು ಹಲವು ವರ್ಷಗಳಿಂದ ದೂರುಗಳಿವೆ. ಮುಸ್ಲಿಂ ವಿದ್ಯಾರ್ಥಿಗಳೂ ಇದ್ದಾರೆ. ಈ ಬಗ್ಗೆ ಮುಸ್ಲಿಂ ಮುಖಂಡರ ಮನವೊಲಿಸಿ ನಿರ್ಧಾರ ತೆಗೆದುಕೊಳ್ಳಬೇಕು' ಎಂದು ಸಲಹೆ ನೀಡಿದರು.

'ನಿಬಂಧನೆಗೊಳಪಟ್ಟು ಮೈಕ್ ಬಳಸಬಹುದು'

ಉಡುಪಿ: ಕರ್ನಾಟಕ ಪೊಲೀಸ್ ಕಾಯ್ದೆಯಡಿ ನಿಬಂಧನೆಗೊಳಪಟ್ಟು ಬೆಳಿಗ್ಗೆ 6ರಿಂದ ರಾತ್ರಿ 10ರವರೆಗೆ ಮೈಕ್ ಬಳಸಲು ಅವಕಾಶವಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದರು.

ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆ ಕುರಿತು ಸೋಮವಾರ ಬೈಂದೂರಿನಲ್ಲಿ ಪ್ರತಿಕ್ರಿಯೆ ನೀಡಿದ ಸಚಿವರು, ಪರವಾನಗಿ ಪಡೆದು ಧ್ವನಿವರ್ಧಕಗಳನ್ನು ಬಳಸಬಹುದು. ಆದರೆ, 50 ಅಡಿಗೂ ಎತ್ತರದಲ್ಲಿ ಮೈಕ್‌ಗಳನ್ನು ಅಳವಡಿಸುವಂತಿಲ್ಲ ಎಂದರು. ಹಲಾಲ್, ಜಟ್ಕಾ ವಿಚಾರದಲ್ಲಿ ಸರ್ಕಾರದ ನಿಲುವಿಗಿಂತ ಸಾರ್ವಜನಿಕರ ನಿಲುವು ಮುಖ್ಯ. ಹಲಾಲ್ ಬೇಕೋ, ಜಟ್ಕಾ ಬೇಕೋ ಎಂಬುದನ್ನು ಜನರೇ ನಿರ್ಧರಿಸಬೇಕು. ಸರ್ಕಾರ ಮಧ್ಯ ಪ್ರವೇಶಿಸುವುದು ಸರಿಯಲ್ಲ ಎಂದರು.

ಕಾನೂನು ಪ್ರಕಾರ ತೀರ್ಮಾನ

ಬೆಂಗಳೂರು: 'ನಮ್ಮ ಸರ್ಕಾರ ಕಾನೂನು ಮತ್ತು ಸಂವಿಧಾನದ ಪ್ರಕಾರವೇ ನಡೆದುಕೊಳ್ಳುತ್ತದೆ. ಹೊಸದಾಗಿ ಏನನ್ನೂ ಮಾಡುವುದಿಲ್ಲ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು. ಮಸೀದಿಗಳಲ್ಲಿ ಆಜಾನ್‌ಗೆ ಪ್ರತಿಯಾಗಿ ಹನುಮಾನ್ ಚಾಲೀಸ ಅಥವಾ ಸ್ತೋತ್ರಗಳನ್ನು ಮೈಕ್‌ಗಳಲ್ಲಿ ಹಾಕುವುದಾಗಿ ಕೆಲವು ಸಂಘಟನೆಗಳು ಹೇಳಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಮೇಲಿನಂತೆ ಪ್ರತಿಕ್ರಿಯಿಸಿದರು. 'ನಮ್ಮ ಸರ್ಕಾರ ಕಾನೂನು ಬಿಟ್ಟು ಬೇರೆ ಏನೂ ಮಾಡುತ್ತಿಲ್ಲ. ಕಾನೂನಿನಲ್ಲಿ ಏನೆಲ್ಲಾ ಸೂಚನೆ ಇದೆಯೋ ಅದೇ ರೀತಿ ನಡೆದುಕೊಂಡಿದ್ದೇವೆ. ಹಿಜಾಬ್ ಸೇರಿದಂತೆ ಎಲ್ಲ ವಿಷಯಗಳಲ್ಲೂ ನಾವು ಹೊಸದಾಗಿ ಏನನ್ನೂ ಹೇರಿಲ್ಲ ಮತ್ತು ಪರ್ಯಾಯ ಕಾನೂನು ತಂದಿಲ್ಲ. ಸರ್ಕಾರ ಯಾರ ವಿರುದ್ಧವೂ ಇಲ್ಲ ಯಾರ ಪರವೂ ಇಲ್ಲ. ಎಲ್ಲರ ಪರವಾಗಿ ಕೆಲಸ ಮಾಡುವುದರ ವಿಚಾರದಲ್ಲಿ ಸ್ಪಷ್ಟತೆ ಹೊಂದಿದ್ದೇವೆ' ಎಂದರು.

'ಸುಪ್ರೀಂ' ತೀರ್ಪಿನಂತೆ ನಿಗದಿ'

ಬೆಂಗಳೂರು: 'ಸುಪ್ರೀಂ ಕೋರ್ಟ್ ತೀರ್ಪಿನಂತೆ ಧ್ವನಿವರ್ಧಕಗಳ ಶಬ್ದದ ಪ್ರಮಾಣಕ್ಕೆ ಮಾಲಿನ್ಯ ನಿಯಂತ್ರಣ ಮಂಡಳಿ ಮಿತಿ ನಿಗದಿಪಡಿಸಿ ಅನುಮತಿ ನೀಡಿದೆ. ಮಂಡಳಿ ಹೊರಡಿಸಿರುವ ಆದೇಶ ಮಸೀದಿಗಳಿಗಷ್ಟೆ ಸೀಮಿತವಲ್ಲ. ಸಭೆ, ಸಮಾರಂಭಗಳಿಗೂ ಅನ್ವಯ. ಈ ಆದೇಶ ಉಲ್ಲಂಘಿಸಿದರೆ ಸರ್ಕಾರ ಕಾನೂನು ಕ್ರಮ ಕೈಗೊಳ್ಳಲಿ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆ, ಭ್ರಷ್ಟಾಚಾರ ವಿಷಯ ಮರೆಮಾಚಲು ಹಿಜಾಬ್, ಜಾತ್ರೆಯಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ, ಹಲಾಲ್ ಕಟ್ ವಿಚಾರ ತೆಗೆದಿರುವ ಬಿಜೆಪಿಯವರು, ಇದೀಗ ಮಸೀದಿಗಳ ಮೇಲಿನ ಧ್ವನಿವರ್ಧಕ ವಿಷಯವನ್ನು ಎತ್ತಿದ್ದಾರೆ' ಎಂದರು

ಸುದ್ದಿ 2 ನಿಮಿಷ

ಆಜಾನ್‌ಗೆ ಧ್ವನಿವರ್ಧಕ: ರಾಜ್ ಠಾಕ್ರೆ ತಕರಾರು

ಮುಂಬೈ (ಪಿಟಿಐ): ಮಸೀದಿಗಳಲ್ಲಿ ದೊಡ್ಡದಾಗಿ ಶಬ್ದ ಮೂಡುವಂತೆ ಧ್ವನಿವರ್ಧಕ ಬಳಸುವುದಕ್ಕೆ ಮಹಾರಾಷ್ಟ್ರ ನವನಿರ್ಮಾಣ ಸೇನೆ (ಎಂಎನ್‌ಎಸ್) ತಕರಾರು ತೆಗೆದಿದೆ.

'ಆಜಾನ್ ಕೇಳಿಸಲು ಧ್ವನಿವರ್ಧಕದ ಬಳಕೆ ಸರಿಯಲ್ಲ. ಅದನ್ನು ನಿಲ್ಲಿಸಬೇಕು. ನಿಲ್ಲದಿದ್ದರೆ, ಅದರ ದುಪ್ಪಟ್ಟು ಶಬ್ದದಲ್ಲಿ ಮಸೀದಿಗಳ ಎದುರು ಹನುಮಾನ್ ಚಾಲೀಸಾ ಮೊಳಗಿಸುತ್ತೇವೆ' ಎಂದು ಪಕ್ಷದ ಅಧ್ಯಕ್ಷ ರಾಜ್ ಠಾಕ್ರೆ ಎಚ್ಚರಿಸಿದ್ದಾರೆ.

ಶಿವಾಜಿ ಪಾರ್ಕ್‌ನಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ನಾನು ಪ್ರಾರ್ಥನೆ ಅಥವಾ ಯಾವುದೇ ಧರ್ಮದ ವಿರುದ್ಧವಾಗಿ ಇಲ್ಲ. ನನಗೆ ನನ್ನ ಧರ್ಮದ ಬಗ್ಗೆ ಹೆಮ್ಮೆ ಇದೆ' ಎಂದು ಹೇಳಿದರು.

ರಾಜ್ ಠಾಕ್ರೆ ಹೇಳಿಕೆಯ ಹಿಂದೆಯೇ ಪುಣೆಯಲ್ಲಿ ಇರುವ ಎಂಎನ್‌ಎಸ್ ಕಚೇರಿ ಎದುರು ಅದರ ಕಾರ್ಯಕರ್ತರು ಧ್ವನಿವರ್ಧಕದಲ್ಲಿ ಹನುಮಾನ್ ಚಾಲೀಸಾ ಮೊಳಗಿಸಿದರು. ಅಲ್ಲದೆ, ಜೈ ಶ್ರೀರಾಂ ಘೋಷಣೆ ಕೂಗಿದರು.

ಪಕ್ಷದ ನಾಯಕರ ಆದೇಶ ಪಾಲನೆಯಲ್ಲಿ ಕಾರ್ಯಕರ್ತರು ಹಿಂದೆ ಉಳಿಯುವುದಿಲ್ಲ ಎಂದು ಎಂಎನ್‌ಎಸ್ ಪುಣೆ ಘಟಕ ತಿಳಿಸಿದೆ.

ಕೆಎಸ್‌ಒಯು: 'ಬಿ' ರಿಪೋರ್ಟ್ ತಿರಸ್ಕಾರ– ಮತ್ತೆ ತನಿಖೆಗೆ ಆದೇಶ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅಕ್ರಮಗಳಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿದ್ದ 'ಬಿ' ರಿಪೋರ್ಟ್ ತಿರಸ್ಕರಿಸಿರುವ ಮೈಸೂರಿನ ಸಿಜೆಎಂ ನ್ಯಾಯಾಲಯ ಹೊಸದಾಗಿ ತನಿಖೆ ನಡೆಸಲು ಆದೇಶಿಸಿದೆ.

ಕೆಎಸ್‌ಒಯು ವಿಶ್ರಾಂತ ಕುಲಪತಿಗಳಾದ ಪ್ರೊ.ಕೆ.ಎಸ್.ರಂಗಪ್ಪ, ಪ್ರೊ.ಎಂ.ಜಿ.ಕೃಷ್ಣನ್, ಹಿಂದಿನ ಕುಲಸಚಿವರಾದ ಪ್ರೊ.ಬಿ.ಎಸ್.ವಿಶ್ವನಾಥ್, ಪ್ರೊ.ಪಿ.ಎಸ್.ನಾಯಕ, ಮಾಜಿ ಡೀನ್ ಪ್ರೊ.ಟಿ.ಡಿ.ದೇವೇಗೌಡ, ಹಾಲಿ ಪ್ರಾಧ್ಯಾಪಕ ಡಾ.ರಾಮನಾತಂ ನಾಯ್ಡು ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗದ ನಿವೃತ್ತ ನಿರ್ದೇಶಕ ಡಾ.ಕಮಲೇಶ್ ವಿರುದ್ಧ ಇಲ್ಲಿನ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಕೆಯಾಗಿದ್ದ 'ಬಿ' ವರದಿಯನ್ನು ವಜಾಗೊಳಿಸಿದೆ.

ಈ ಪ್ರಕರಣದಲ್ಲಿ ಹೊಸದಾಗಿ ತನಿಖೆ ನಡೆಸಿ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸುವಂತೆ ತನಿಖಾಧಿಕಾರಿಗಳಿಗೆ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಸಿಜೆಎಂ ಆದೇಶಿಸಿದ್ದಾರೆ.

ಮುಕ್ತ ವಿಶ್ವವಿದ್ಯಾಲಯದ ಅವ್ಯವಹಾರಗಳ ಕುರಿತಂತೆ ನ್ಯಾ.ಕೆ.ಭಕ್ತವತ್ಸಲ ಸತ್ಯ ಶೋಧನಾ ಸಮಿತಿ ತನಿಖೆ ನಡೆಸಿ ಸಲ್ಲಿಸಿದ್ದ ವರದಿ ಆಧರಿಸಿ ರಾಜ್ಯಪಾಲರ ಸೂಚನೆಯಂತೆ 2016ರ ಆಗಸ್ಟ್‌ನಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ನಂತರ ಪ್ರಕರಣವನ್ನು ಸಿಐಡಿ ಆರ್ಥಿಕ ಅಪರಾಧಗಳ ವಿಭಾಗಕ್ಕೆ ವರ್ಗಾಯಿಸಲಾಗಿತ್ತು. ಅದು ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿತ್ತು. ಅದರ ವಿರುದ್ಧ 2018ರಲ್ಲಿ ಕೆಎಸ್‌ಒಯು ಹಣಕಾಸು ಅಧಿಕಾರಿ ಡಾ.ಖಾದರ್ ಪಾಷ ದಾಖಲೆಗಳೊಂದಿಗೆ ನ್ಯಾಯಾಲಯಕ್ಕೆ ತಕರಾರು ಸಲ್ಲಿಸಿ ಸಾಕ್ಷ್ಯ ನುಡಿದಿದ್ದರು.

ಈ ಪ್ರಕರಣದಲ್ಲಿ ವಕೀಲ ಸಿ.ಸಿ.ಜೀವನ್, ಕೆಎಸ್‌ಒಯು ಪರ ವಕಾಲತ್ತು ವಹಿಸಿದ್ದರು.

ರಥೋತ್ಸವ: ಹಿಂದೂಯೇತರರಿಗೆ ನಿಷೇಧ

ಶಿರಸಿ: ತಾಲ್ಲೂಕಿನ ಬನವಾಸಿಯ ಉಮಾಮಧುಕೇಶ್ವರ ದೇವರ ರಥೋತ್ಸವ ಏ.11, 12 ರಂದು ನಡೆಯಲಿದ್ದು ದೇವಸ್ಥಾನದ ಸಮೀಪದ ಕಟ್ಟಡ ಅಥವಾ ನಿವೇಶನಗಳಲ್ಲಿ ಹಿಂದೂಯೇತರರಿಗೆ ಮಳಿಗೆ ನೀಡದಿರಲು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ನಿರ್ಧರಿಸಿದೆ.

'ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ನಿಯಮದ ಅನ್ವಯ ಹಿಂದೂಯೇತರರಿಗೆ ಅವಕಾಶ ನೀಡದಂತೆ ಹಿಂದೂ ಸಂಘಟನೆಗಳು ಕೋರಿದ್ದವು. ಅದರಂತೆ ಕ್ರಮ ನಿರ್ಣಯಿಸಲಾಗಿದೆ' ಎಂದು ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ರಾಜಶೇಖರ ಒಡೆಯರ್ ಪ್ರತಿಕ್ರಿಯಿಸಿದ್ದಾರೆ.

ಕ್ರೈಸ್ತರ ಕಾರ್ಯಕ್ರಮಕ್ಕೆ ಅಡ್ಡಿ

ಬಳ್ಳಾರಿ: ಇಲ್ಲಿನ ವಾಲ್ಮೀಕಿ ಭವನದಲ್ಲಿ ನಡೆಯುತ್ತಿದ್ದ ಕ್ರೈಸ್ತ ಸಮುದಾಯದವರ ಧಾರ್ಮಿಕ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದ ವಿಶ್ವ ಹಿಂದೂ ಪರಿಷತ್, ಬಜರಂಗದಳ ಹಾಗೂ ಶ್ರೀರಾಮಸೇನೆ ಕಾರ್ಯಕರ್ತರು ಮನವೊಲಿಕೆ ಬಳಿಕ ಅವಕಾಶ ಕೊಟ್ಟರು.

ಸೋಮವಾರ ಸಂಜೆ 6.30ರ ಸುಮಾರಿಗೆ ಕಾರ್ಯಕ್ರಮ ಆರಂಭಕ್ಕೆ ಮೊದಲು ವಾಲ್ಮೀಕಿ ಭವನಕ್ಕೆ ಬಂದ ಕಾರ್ಯಕರ್ತರು, 'ಕ್ರೈಸ್ತ ಸಮುದಾಯದವರು ಇಲ್ಲಿ ಕಾರ್ಯಕ್ರಮ ನಡೆಸುವಂತಿಲ್ಲ' ಎಂದು ಆಕ್ಷೇಪಿಸಿದರು. 'ಕಾರ್ಯಕ್ರಮ ನಡೆಸಲು ಸಂಬಂಧಿಸಿದ ಅಧಿಕಾರಿಗಳಿಂದ ಅನುಮತಿ ಪಡೆಯಲಾಗಿದೆ' ಎಂದು ಸಂಘಟಕರು ಸ್ಪಷ್ಟಪಡಿಸಿದರು. ಅದಕ್ಕೆ ಕಾರ್ಯಕರ್ತರು ಒಪ್ಪಲಿಲ್ಲ. 'ನೀವು ವಾಲ್ಮೀಕಿ ಭವನದಲ್ಲಿ ಕಾರ್ಯಕ್ರಮ ನಡೆಸುವಂತಿಲ್ಲ' ಎಂದು ಪಟ್ಟು ಹಿಡಿದರು.

ಕ್ರೈಸ್ತ ಸಮುದಾಯದವರು ಕಾರ್ಯಕರ್ತರ ಮನವೊಲಿಸಲು ಸತತ ಪ್ರಯತ್ನ ನಡೆಸಿದರು. 'ನಾವೂ ವಾಲ್ಮೀಕಿ ಪೂಜಿಸುತ್ತೇವೆ' ಎಂದು ತಿಳಿಹೇಳಿದರು. 'ನೀವು ವಾಲ್ಮೀಕಿ ಪೂಜಿಸುವುದಾದರೆ ಅವರ ಮೂರ್ತಿಗೆ ಏಕೆ ಹಾರ ಹಾಕಿಲ್ಲ' ಎಂದು ಮರು ಪ್ರಶ್ನಿಸಿದರು. ಆನಂತರ, ಸಂಘಟಕರು ಹೂವಿನ ಹಾರ ತರಿಸಿ ವಾಲ್ಮೀಕಿ ಪ್ರತಿಮೆಗೆ ಹಾರ ಹಾಕಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಇದಾದ ಬಳಿಕ ಕಾರ್ಯಕ್ರಮ ಮುಂದುವರಿಸಲು ಅವಕಾಶ ಕೊಡಲಾಯಿತು.

ತೆಲಂಗಾಣ ಸಚಿವ ಕೆಟಿಆರ್‌ಗೆ ಡಿಕೆಶಿ ತಿರುಗೇಟು!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನಿಂದ ಹೈದರಾಬಾದ್‌ಗೆ ನಿಮ್ಮ ಬ್ಯಾಗ್‌ಗಳನ್ನು ಪ್ಯಾಕ್ ಮಾಡಿ' ಎಂದು ಉದ್ಯಮಿಗಳನ್ನು ಉದ್ದೇಶಿಸಿ ತೆಲಂಗಾಣ ಪೌರಾಡಳಿತ ಮತ್ತು ನಗರಾಭಿವೃದ್ಧಿ ಸಚಿವ ಕೆ.ಟಿ. ರಾಮರಾವ್ ಮಾಡಿದ್ದ ಟ್ವೀಟ್‌ಗೆ, ಮರು ಟ್ವೀಟ್ ಮೂಲಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದ್ದಾರೆ.

'ನನ್ನ ಸ್ನೇಹಿತರಾದ ಕೆ.ಟಿ. ರಾಮರಾವ್ ಅವರೇ.. ನಾನು ನಿಮ್ಮ ಸವಾಲು ಸ್ವೀಕರಿಸುತ್ತೇನೆ. 2023ರ ಅಂತ್ಯದ ವೇಳೆಗೆ, ಕರ್ನಾಟಕದಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದರೆ ನಾವು ಬೆಂಗಳೂರಿನ ಕೀರ್ತಿಯನ್ನು ಹೆಚ್ಚಿಸಿ ಭಾರತದ ಅತ್ಯುತ್ತಮ ನಗರವಾಗಿ ಮರು ಸ್ಥಾಪಿಸುತ್ತೇವೆ' ಎಂದು ಶಿವಕುಮಾರ್ ಟ್ವೀಟ್ ಮಾಡಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಕೆಟಿಆರ್, 'ಡಿಯರ್ ಡಿ.ಕೆ. ಶಿವಕುಮಾರ್ ಅಣ್ಣ, ನನಗೆ ಕರ್ನಾಟಕ ರಾಜಕೀಯದ ಬಗ್ಗೆ ಅಷ್ಟಾಗಿ ಗೊತ್ತಿಲ್ಲ. ಯಾರು ಗೆಲ್ಲುತ್ತಾರೆ ಎನ್ನುವುದು ತಿಳಿದಿಲ್ಲ. ಆದರೆ, ನಿಮ್ಮ ಸವಾಲು ಸ್ವೀಕರಿಸುವೆ. ಬೆಂಗಳೂರು, ಹೈದರಾಬಾದ್ ನಡುವೆ ಆರೋಗ್ಯಕರ ಸ್ಪರ್ಧೆ ಏರ್ಪಡಲಿ. ಯುವಕರಿಗೆ ಉದ್ಯೋಗ, ಉತ್ತಮ ಸೌಹಾರ್ದ ಸಂಬಂಧ ಏರ್ಪಡಲಿ. ಮೂಲಸೌಕರ್ಯ, ಐಟಿ, ಬಿಟಿ ಕಡೆ ಗಮನ ಇರಲಿ, ಹಲಾಲ್, ಹಿಜಾಬ್ ಕಡೆ ಗಮನಹರಿಸಬೇಡಿ' ಎಂದು ಮನವಿ ಮಾಡಿದ್ದಾರೆ.

ಯಾಕೆ ಈ 'ಟ್ವೀಟ್ ಸಮರ': 'ಕೋರಮಂಗಲದ ಎಚ್‌ಎಸ್‌ಆರ್‌ನಲ್ಲಿ (ಭಾರತದ ಸಿಲಿಕಾನ್ ವ್ಯಾಲಿ) ಸ್ಟಾರ್ಟ್ ಅಪ್‌ಗಳು ಈಗಾಗಲೇ ಶತಕೋಟಿ ಡಾಲರ್ ತೆರಿಗೆ ಪಾವತಿಸುತ್ತಿವೆ' ಎಂದು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದ ಬೆಂಗಳೂರಿನ ಉದ್ಯಮಿ ರವೀಶ್ ನರೇಶ್ ಎಂಬುವರು, 'ನಮ್ಮಲ್ಲಿ ಹದಗೆಟ್ಟ ರಸ್ತೆಗಳು, ವಿದ್ಯುತ್ ಕಡಿತ, ಕಳಪೆ ಗುಣಮಟ್ಟದ ನೀರು ಪೂರೈಕೆ, ಬಳಸಲಾಗದ ಕಾಲುದಾರಿಗಳು ಇವೆ. ಭಾರತದ ಸಿಲಿಕಾನ್ ವ್ಯಾಲಿಗಿಂತ ಅನೇಕ ಗ್ರಾಮೀಣ ಪ್ರದೇಶಗಳು ಈಗ ಉತ್ತಮ ಮೂಲಸೌಕರ್ಯ ಹೊಂದಿವೆ. ವಿಮಾನ ನಿಲ್ದಾಣಕ್ಕೆ ಮೂರು ಗಂಟೆ ಸಂಚಾರ ದಟ್ಟಣೆಯಲ್ಲೇ ಕ್ರಮಿಸಬೇಕು' ಎಂದೂ ಉಲ್ಲೇಖಿಸಿದ್ದರು.

ಈ ಟ್ವೀಟ್‌ಗೆ ಕೆ.ಟಿ. ರಾಮರಾವ್, 'ನಿಮ್ಮ ಬ್ಯಾಗ್‌ಗಳನ್ನು ಪ್ಯಾಕ್ ಮಾಡಿ ಹೈದರಾಬಾದ್‌ಗೆ ಬನ್ನಿ' ಎಂದು ಉದ್ಯಮಿಗಳಿಗೆ ಆಹ್ವಾನಿಸಿದ್ದರು. 'ನಾವು ಉತ್ತಮ ಭೌತಿಕ ಮೂಲಸೌಕರ್ಯ ಮತ್ತು ಸಮಾನವಾಗಿ ಉತ್ತಮ ಸಾಮಾಜಿಕ ಮೂಲಸೌಕರ್ಯವನ್ನು ಹೊಂದಿದ್ದೇವೆ' ಎಂದೂ ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದರು.

'ಸದಭಿರುಚಿ ಇಲ್ಲದ ಟ್ವೀಟ್'

ಕೆಟಿಆರ್ ಟ್ವೀಟ್ ಖಂಡಿಸಿರುವ ಉನ್ನತ ಶಿಕ್ಷಣ ಮತ್ತು ಐಟಿ–ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ, 'ನಿಮ್ಮ ಟ್ವೀಟ್‌ನಲ್ಲಿ ಸದಭಿರುಚಿ ಇಲ್ಲ. ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರು ಈ ರೀತಿ ವರ್ತಿಸಬಾರದು. ಒಬ್ಬರಿಗೊಬ್ಬರು ಕಾಲೆಳೆಯುವ ಪ್ರವೃತ್ತಿ ಯಾವ ಸರ್ಕಾರಕ್ಕೂ ಸಲ್ಲದು. ನಾವು ಭಾರತೀಯರು, ಇಡೀ ವಿಶ್ವದ ಜತೆ ಸ್ಪರ್ಧಿಸಬೇಕಾಗಿದೆ' ಎಂದು ತಿಳಿಸಿದ್ದಾರೆ.

ಡಿ.ಕೆ.ಶಿವಕುಮಾರ್ ಅವರಿಗೆ ತಿರುಗೇಟು ನೀಡಿರುವ ಅವರು, 'ಶಿವಕುಮಾರ್ ಅವರೇ ರಾಜ್ಯದ ಹಿತ ಕಾಪಾಡುವ ಬಗ್ಗೆ ನೀವು ಯೋಚಿಸುತ್ತಿಲ್ಲ ಎಂಬುದು ಸ್ಪಷ್ಟವಾಗಿದೆ. ತೆಲಂಗಾಣ ಸರ್ಕಾರದೊಂದಿಗೆ ನೀವು ಯಾವ ರೀತಿಯ ರಾಜಕೀಯ ಹೊಂದಾಣಿಕೆಯನ್ನು ಹೊಂದಿದ್ದೀರಿ? ನಿಮ್ಮ ರಾಜಕೀಯ ಲೆಕ್ಕಾಚಾರಗಳಿಗೆ ಬೇಕಾಗಿ ರಾಜ್ಯದ ಘನತೆಯ ಬಗ್ಗೆ ಸವಾಲು ಹಾಕಬೇಡಿ' ಎಂದು ಹೇಳಿದ್ದಾರೆ.

ಎಸ್ಪಿ ಹುದ್ದೆಗೆ ಬಡ್ತಿ

ಬೆಂಗಳೂರು: ರಾಜ್ಯದ ಐವರು ಡಿವೈಎಸ್ಪಿಗಳಿಗೆ ಬಡ್ತಿ ನೀಡಿ, ಪೊಲೀಸ್ ಅಧೀಕ್ಷಕ (ಎಸ್ಪಿ) ಹುದ್ದೆಗಳಿಗೆ ವರ್ಗಾವಣೆ ಮಾಡಿ ಗೃಹ ಇಲಾಖೆ ಆದೇಶ ಹೊರಡಿಸಿದೆ.

ಬಡ್ತಿ ಪಡೆದವರು: ಶೋಭಾ ಕಟಾವ್ಕರ್, ಕಲಬುರ್ಗಿ ಪೊಲೀಸ್ ತರಬೇತಿ ಶಾಲೆಯ ಉಪ ಪ್ರಾಂಶುಪಾಲರು; ಸಿ.ಟಿ. ಜಯಕುಮಾರ್, ರಾಜ್ಯ ಆಂತರಿಕ ಭದ್ರತಾ ವಿಭಾಗದ ಎಸ್ಪಿ; ಕೆ.ನಂಜುಂಡೇಗೌಡ, ಹುಬ್ಬಳ್ಳಿ ಹೆಸ್ಕಾಂ ಎಸ್ಪಿ; ಎನ್. ಶ್ರೀನಿಧಿ, ಲೋಕಾಯುಕ್ತ ಎಸ್ಪಿ; ಬಿ.ಕೆ. ಉಮೇಶ್, ಲೋಕಾಯುಕ್ತ ಎಸ್ಪಿ.

ಮಳೆ: ದ್ರಾಕ್ಷಿ ಬೆಳೆಗಾರರಿಗೆ ಹಾನಿ

ಪ್ರಜಾವಾಣಿ ವಾರ್ತೆ

ಐಗಳಿಯ ಕಲ್ಯಾಣ ನಗರ ಸಮೀಪದ ಒಣ ದ್ರಾಕ್ಷಿ ಸಂಸ್ಕರಣಾ ಘಟಕದ ಬಳಿ ಒಣಗಲು ಹಾಕಿದ್ದ ದ್ರಾಕ್ಷಿಗೆ ಹಾನಿಯಾಗಿದೆ

ಬೆಳಗಾವಿ: ನಗರದಲ್ಲಿ ಸೋಮವಾರ ಅರ್ಧ ಗಂಟೆಗೂ ಹೆಚ್ಚು ಸಮಯ ಗುಡುಗು– ಸಿಡಿಲು ಸಹಿತ ಜೋರು ಮಳೆಯಾಗಿದೆ. ಜೋರು ಗಾಳಿಯಿಂದಾಗಿ ಅಲ್ಲಲ್ಲಿ ಮರ ಹಾಗೂ ವಿದ್ಯುತ್ ಕಂಬಗಳು ಬಿದ್ದಿವೆ. ತಾಲ್ಲೂಕಿನ ಪಂತಬಾಳೇಕುಂದ್ರಿ ಗ್ರಾಮದಲ್ಲಿ ಕೆಲವು ಮನೆಗಳ ತಗಡಿನ ಶೀಟುಗಳು ಹಾರಿ ಹೋಗಿವೆ.

ಅಥಣಿ ತಾಲ್ಲೂಕಿನ ಪೂರ್ವ ಭಾಗದಲ್ಲಿ ಭಾನುವಾರ ಸಂಜೆ ಸುರಿದ ಅಕಾಲಿಕ ಮಳೆ, ಬಿರುಗಾಳಿಯಿಂದ ದ್ರಾಕ್ಷಿ ಬೆಳೆಗಾರರಿಗೆ ಲಕ್ಷಾಂತರ ರೂಪಾಯಿ ಹಾನಿಯಾಗಿದೆ. ಐಗಳಿಯ ಕಲ್ಯಾಣ ನಗರದಲ್ಲಿರುವ ಒಣ ದ್ರಾಕ್ಷಿ ಸಂಸ್ಕರಣಾ ಘಟಕದ ಬಳಿ ಅಡಹಳ್ಳಿ, ಕೋಹಳ್ಳಿ, ಕಕಮರಿ, ಅಡಹಳಟ್ಟಿ, ಸುಟಟ್ಟಿ, ಕೊಕಟನೂರ, ಯಲಹಡಗಿ ಮೊದಲಾದ ಗ್ರಾಮಗಳ ಬೆಳೆಗಾರರು ದ್ರಾಕ್ಷಿಯನ್ನು ಒಣಗಲು ಹಾಕಿದ್ದರು. ಏಕಾಏಕಿ ಸುರಿದ ಮಳೆಯಿಂದಾಗಿ ಅಂದಾಜು 50 ಟನ್ ದ್ರಾಕ್ಷಿ ನೀರು ಪಾಲಾಗಿದೆ.

'ಬೆಳೆಗಾರರು ಅಪಾರ ಹಾನಿ ಅನುಭವಿಸಿದ್ದಾರೆ. ಸರ್ಕಾರ ಮತ್ತು ವಿಮಾ ಕಂಪನಿಯವರು ಪರಿಹಾರ ಕೊಡಲು ಕೂಡಲೇ ಮುಂದಾಗಬೇಕು' ಎಂದು ಒಣ ದ್ರಾಕ್ಷಿ ಸಂಸ್ಕರಣಾ ಘಟಕದ ಅಧ್ಯಕ್ಷ ಶಹಜಹಾನ್ ಡೊಂಗರಗಾಂವ ಅವರು ಒತ್ತಾಯಿಸಿದರು.

ರಭಸದ ಗಾಳಿ-ಮಳೆ (ಬಸವನಬಾಗೇವಾಡಿ ವರದಿ): ಪಟ್ಟಣ ಸೇರಿದಂತೆ ವಿವಿಧೆಡೆ ಗುಡುಗು, ಮಿಂಚು, ರಭಸದ ಸಹಿತ ಗಾಳಿಯೊಂದಿಗೆ ಮಳೆಯಾಗಿದೆ.

ರಭಸದ ಗಾಳಿಗೆ ಕೆಲ ತೋಟಗಳು ಹಾಗೂ ಮನೆ, ಕಟ್ಟಡಗಳ ನಿರ್ಮಾಣಕ್ಕಾಗಿ ಹಾಕಲಾಗಿದ್ದ ಪತ್ರಾಸ್‌ಗಳು ಹಾರಿ ಹೋಗಿವೆ. ವಿವಿಧೆಡೆ ಮರಗಳ ಟೊಂಗೆಗಳು ಮುರಿದು ಬಿದ್ದಿವೆ.

ನಿಧನ ವಾರ್ತೆ

ಪದ್ಮಾವತಿ ಕೃಷ್ಣಗೌಡ ಪಾಟೀಲ

ಗದಗ: ದಿ. ಕೆ.ಎಚ್. ಪಾಟೀಲ ಅವರ ಪತ್ನಿ, ಶಾಸಕ ಎಚ್.ಕೆ.ಪಾಟೀಲ ಅವರ ತಾಯಿ ಪದ್ಮಾವತಿ ಕೃಷ್ಣಗೌಡ ಪಾಟೀಲ (88) ಸೋಮವಾರ ಹುಬ್ಬಳ್ಳಿಯಲ್ಲಿ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು ಇದ್ದಾರೆ.

ಮೃತರ ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 2ಕ್ಕೆ ಹುಲಕೋಟಿ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೀರಾಬಾಯಿ



ಮೈಸೂರು: ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರ ಪತ್ನಿ ಮೀರಾಬಾಯಿ (75) ಅನಾರೋಗ್ಯದಿಂದ ಸೋಮವಾರ ಮಧ್ಯಾಹ್ನ ಇಲ್ಲಿನ ಬಿಜಿಎಸ್–ಅಪೋಲೊ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತಿ ಡಾ. ತಿಮ್ಮಯ್ಯ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.

ಅವರ ಪುತ್ರಿ ಸವಿತಾ ಬೆಹರೇನ್‌ನಲ್ಲಿ ನೆಲೆಸಿದ್ದು, ಮಂಗಳವಾರ ಬೆಳಿಗ್ಗೆ ಹೊತ್ತಿಗೆ ಮೈಸೂರಿಗೆ ಬರುವ ನಿರೀಕ್ಷೆ ಇದೆ. ಬಳಿಕ ಮೃತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕರ್ನಾಟಕ ಸರ್ಕಾರ GOVERNMENT OF KARNATAKA
ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ
VIJAYANAGAR INSTITUTE OF MEDICAL SCIENCES, BALLARI Cantonment Area, Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979
Director: 8147796529, Principal :8147796527, CAO:8147796526 PA : 8147796539,
e-mail-ids : directorvimsbellary@gmail.com,
ಸಂ.ವಿಮ್ಸ್/ಸಿ(2)/188/2021–22 ದಿನಾಂಕ: 01.04.2022
ತಿದ್ದುಪಡಿ ಆದೇಶ
ದಿನಾಂಕ: 28.03.2022 ರಂದು ಪ್ರಕಟಿಸಿರುವ ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲಿನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅರವಳಿಕೆಶಾಸ್ತ್ರ ವಿಭಾಗದ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರು ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಪತ್ರಿಕಾ ಪ್ರಕಟಣೆಯಲ್ಲಿ ವೆಬ್‌ಸೈಟ್ ವಿಳಾಸವನ್ನು www.directorvimsbellary@gmail.com ಬದಲಾಗಿ Web: https://vims.karnataka.gov.in ಎಂದು ಓದಿಕೊಳ್ಳತಕ್ಕದ್ದು., ಇನ್ನೂಳಿದ ಎಲ್ಲಾ ಮಾಹಿತಿಯು ಯಥಾರೀತಿಯಲ್ಲಿ ಮುಂದುವರಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು Web: https://vims.karnataka.gov.in ಪಡೆಯತಕ್ಕದ್ದು.
ಸಹಿ/– ನಿರ್ದೇಶಕರು, ವಿಮ್ಸ್, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/15/ಎಂಸಿಎ/2022–23

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN-U04010KA2002SGC030438
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)
ಬೆ.ವಿ.ಕಂ., ವಿಚಾರಣೆ ಸಂಖ್ಯೆ: ಮುಇಂವಿ/ಬೆಂಮಕ್ಷೇಉವ/ಅಇಂವಿ(ಕ)/ಸಕಾನಿಇಂ-2/22-23/ವಿ 01 ದಿನಾಂಕ: 04.04.2022 ರ ಅನ್ವಯ ಬೆವಿಕಂ, ಬೆಂಗಳೂರು, ಬೆಂಮಕ್ಷೇಉವ ಪೂರ್ವ ಮತ್ತು ಉತ್ತರ ವೃತ್ತಗಳಲ್ಲಿರುವ ವಿವಿಧ ವಾ, ಕಾ ಮತ್ತು ಪಾ ನಗದು ಕೌಂಟರ್‌ಗಳು, ಕಛೇರಿಗಳು ಮತ್ತು ಉಗ್ರಾಣಗಳಿಗೆ 96 ಸಂಖ್ಯೆಯ ಬಂದೂಕು ಸಹಿತ ಸೆಕ್ಯೂರಿಟಿ ಗಾರ್ಡ್ ಮತ್ತು 22 ಸಂಖ್ಯೆಯ ಬಂದೂಕು ರಹಿತ ಸೆಕ್ಯೂರಿಟಿ ಗಾರ್ಡ್ ಒಟ್ಟು 118 ಸಂಖ್ಯೆಯ ಸೆಕ್ಯೂರಿಟಿ ಗಾರ್ಡ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷ ಅವಧಿಗೆ ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಿದೆ.
ಬಿಡ್ ದಸ್ತಾವೇಜುಗಳು ವಿತರಿಸುವ ದಿನಾಂಕ: 06.04.2022ರ ರಿಂದ 20.04.2022, 14.00 ಗಂಟೆಗೆ. ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ: 20.04.2022, 16.00 ಗಂಟೆಯ ವರೆಗೆ. ಬಿಡ್ ತೆರೆಯುವ ದಿನಾಂಕ: 22.04.2022, 11.00 ಗಂಟೆಗೆ ಅಥವಾ ನಂತರ ತೆರೆಯಲಾಗುವುದು.
ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ನಿಂದ ಅಥವಾ ನೇರವಾಗಿ ಟೆಂಡರಿಂಗ್ ವೆಬ್‌ಸೈಟ್: https://eproc.karnataka.gov.in ನಿಂದ ಪಡೆಯಬುಹುದು.
ಇ-ಪಾವತಿ ಬಗ್ಗೆ ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080-23010900, 22340948 ಅಥವಾ ಇ-ಮೇಲ್: hphelpdesk.blr@rtservises.com ನಿಂದ ಪಡೆದುಕೊಳ್ಳಬಹುದು.
ಸಹಿ/–
ಮುಖ್ಯ ಇಂಜಿನಿಯರ್ (ವಿದ್ಯುತ್), (ವಾ, ಕಾ & ಪಾ), ಬೆಂಮಕ್ಷೇವ-ಉತ್ತರ ಬೆವಿಕಂ, ಬೆಂಗಳೂರು.
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ
ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ
ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ
ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560027, ದೂರವಾಣಿ : 080–22226627/6628, ಫ್ಯಾಕ್ಸ್ : 080–22226630, ಇಮೇಲ್ : dultbangalore@gmail.com
ಸಂಖ್ಯೆ: DULT-TECH/8/2021 ದಿನಾಂಕ : 01.04.2022
ಅಲ್ಪಾವಧಿ ಟೆಂಡರು ಪ್ರಕಟಣೆ
(ಇ–ಸಂಗ್ರಹಣಾ ಪೋರ್ಟಲ್ ಮುಖಾಂತರ ಮಾತ್ರ)
ನಗರ ಭೂ ಸಾರಿಗೆ ನಿರ್ದೇಶನಾಲಯ, ಕೆ.ಎಚ್. ರಸ್ತೆ, ಶಾಂತಿನಗರ, ಬೆಂಗಳೂರು ಇವರಿಂದ, "ಪ್ಯಾಕೇಜ್ 1 : ದಕ್ಷಿಣ ವಲಯ ಮತ್ತು ಪ್ಯಾಕೇಜ್ 2 : ಪಶ್ಚಿಮ ವಲಯ" ಎರಡು ಪ್ಯಾಕೇಜುಗಳಲ್ಲಿ ಬೆಂಗಳೂರಿನ ಆಯ್ದ ರಸ್ತೆಗಳಿಗೆ "ಟೋಪೋಗ್ರಾಫಿಕ್ ಸರ್ವೇಗಳನ್ನು (ಟೋಟಲ್ ಸ್ಟೇಷನ್ ಬಳಸಿ) ನಡೆಸಲು ಅಲ್ಪಾವಧಿಯ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ, ಸದರಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದ ದಾಖಲಾತಿಗಳು, ದಿನಾಂಕ:01.04.2022 ರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://eproc.karnataka.gov.in), ಲಭ್ಯವಾಗುವುದು. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 19.04.2022 ರಂದು ಸಂಜೆ : 5.30 ಆಗಿರುತ್ತದೆ.
ಸಹಿ/– ಜಂಟಿ ನಿರ್ದೇಶಕರು (ಆಡಳಿತ) ನಗರ ಭೂ ಸಾರಿಗೆ ನಿರ್ದೇಶನಾಲಯ ನಗರಾಭಿವೃದ್ಧಿ ಇಲಾಖೆ
ವಾಸಾಸಂಇ/ವಾಪ್ರ/19/ಶಿರಡಿ ಸಾಯಿ/2022–23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

:ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ:
ಕಾರ್ಯನಿರ್ವಾಹಕ ಇಂಜಿನೀಯರವರ ಕಾರ್ಯಾಲಯ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ವಿಭಾಗ ನಂ: 01, ಬಾಗಲಕೋಟೆ–587102. ದೂರವಾಣಿ ಸಂಖ್ಯೆ: 08354–233372
ಟೆಂಡರ್ ಪ್ರಕಟಣೆ ಸಂಖ್ಯೆ: ಕಾನಿಇಂ/ಬಾ.ಪ.ಅ.ಪ್ರಾ/ವಿ–1/ಪಿಬಿ–02/ಟೆ.ಪ್ರ. ಸಂಖ್ಯೆ–11/2021–22/3710 ದಿನಾಂಕ:31/03/2022
ಅಲ್ಪಾವಧಿ ಟೆಂಡರ್ ಪ್ರಕಟಣೆ.
(ಇ–ಪ್ರೋಕ್ಯೂರಮೆಂಟ್ ಮುಖಾಂತರ)
ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿನ ವಿವಿಧ ಕಾಮಗಾರಿಗಳಿಗೆ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ. ಇಂಡೆಂಟ್ ನಂ:1170, 1171, 1172, 1173, 1179 ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತವು ರೂ. 258.03 ಲಕ್ಷಗಳಿಂದ ರೂ. 422.47 ಲಕ್ಷಗಳ ವರೆಗೆ ಇರುತ್ತದೆ.
ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಗಳ ವಿವರಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ:18.04.2022 ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ನ್ನು ದಿನಾಂಕ:21.04.2022 ರಂದು ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ), ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 25.04.2022 ರಂದು ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ:08354–295372 ಸಂಪರ್ಕಿಸಬಹುದಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಬಾ.ಪ.ಅ.ಪ್ರಾ, ವಿಭಾಗ ನಂ: 01, ಬಾಗಲಕೋಟೆ.
DIPR/BGK/RO-NO-03/MCA/2022-23

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಬೆಂಗಳೂರು ನಗರ ವಿಭಾಗ, ಅರಣ್ಯ ಭವನ ಸಂಕೀರ್ಣ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. Email ID: dcfurban82@yahoo.co.in
ಸಂಖ್ಯೆ: ಎ2/ಬಿಯುಡಿ/ಕಾಮಗಾರಿ/ಸಿಆರ್–141/2021–22 ದಿನಾಂಕ: 18.03.2022
ಇ–ಟೆಂಡರ್ ಪ್ರಕಟಣೆ
2022–23ನೇ ಸಾಲಿನಲ್ಲಿ ಬೆಂಗಳೂರು ನಗರ ಅರಣ್ಯ ವಿಭಾಗದ ಯಲಹಂಕ ವಲಯದ ಕೆಎಫ್‌ಡಿಎಫ್ ಯೋಜನೆಯಡಿ ನೆಡುತೋಪು ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಎರಡನೇಯ ಬಾರಿಗೆ ಬೆಂಗಳೂರು ನಗರ ವಿಭಾಗದಲ್ಲಿ ನೊಂದಾಯಿತ ಗುತ್ತಿಗೆದಾರರಾಗಿ ಹೆಸರನ್ನು ನೊಂದಾಯಿಸಿಕೊಂಡಿರುವಂತಹ ಅರ್ಹ ಗುತ್ತಿಗೆದಾರರು ಮಾತ್ರ ಕರ್ನಾಟಕ ಸರ್ಕಾರದ ಇ–ಪ್ರೊಕ್ ಪೋರ್ಟಲ್ (http://eproc.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11–04–2022 ರ ಸಂಜೆ 5.00 ಗಂಟೆವರೆಗೆ ಮತ್ತು ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 12–04–2022 ರ ಸಂಜೆ 5.00 ಗಂಟೆವರೆಗೆ ಅವಕಾಶವಿರುತ್ತದೆ. ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ದಿನಾಂಕ: 13–4–2022 ರ ಸಂಜೆ 5.00 ಗಂಟೆಗೆ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಪ್ರತ್ಯೇಕ ಕೆಲಸಗಳ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಮಾಹಿತಿಗಳನ್ನು ಪಡೆಯಬಹುದು.
ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು.
DIPR/CP/029/Zenkar/2022-23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ
8ನೇ ಮಹಡಿ, ಇ ಬ್ಲಾಕ್, ಕಾವೇರಿ ಭವನ, ಬೆಂಗಳೂರು–560009.
ದೂರವಾಣಿ: 080–23118888, ಇ–ಮೇಲ್: cerghc@gmail.com
ದಿನಾಂಕ: 04–04–2022
ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತವು ಅರ್ಹ ಗುತ್ತಿಗೆದಾರರಿಂದ 1 ಸರ್ಕಾರಿ ಜಮೀನಿನಲ್ಲಿ 800 ಬಹುಮಹಡಿ [G+3] ಮನೆಗಳ ನಿರ್ಮಾಣದ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.
ಕಾಮಗಾರಿಯ ಹೆಸರು: ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ದಕ್ಷಿಣ ತಾಲ್ಲೂಕಿನ, ಮಾಳಿಗೊಂಡನ ಹಳ್ಳಿ, ಸರ್ವೆ ನಂ. 26ರ ಸರ್ಕಾರಿ ಜಮೀನಿನಲ್ಲಿ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಅಡಿಯಲ್ಲಿ 800 [G+3] ಬಹು ಮಹಡಿ ಕಟ್ಟಡಗಳನ್ನು ಅಗತ್ಯ ಮೂಲಭೂತ ಸೌಕರ್ಯಗಳೊಂದಿಗೆ ನಿರ್ಮಿಸುವ ಕಾಮಗಾರಿಗಳ Work Indent ಗಳನ್ನು ಈ ಕೆಳಗೆ ನಮೂದಿಸಿದೆ:
Work_Indent No: RGRHCL:2021-22:OW:Work_Indent 84 (Call2)
ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 19–04–2022 16.00 ಘಂಟೆ ವರೆಗೆ. ಕಾಮಗಾರಿಯ ಬಗ್ಗೆ / ಇನ್ನಿತರ ವಿವರಗಳನ್ನು https://eproc.karnataka.gov.in ನಲ್ಲಿ ಅಥವಾ ಮುಖ್ಯ ಇಂಜಿನೀಯರ್ ರವರ ಕಛೇರಿ, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು, ಇಲ್ಲಿ ಪಡೆಯಬಹುದಾಗಿದೆ ದೂರವಾಣಿ: 080–23118888.
ಸಹಿ/–
ಮುಖ್ಯ ಅಭಿಯಂತರರು
ವಾಸಾಸಂಇ/ವಾಪ್ರ/33/ಕವಿತಾ ಕಮ್ಯೂನಿಕೇಷನ್ಸ್/2022–23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಾಲಯ: ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿ(ನಿ), ಶಶಾಕಾ,
ಪಾ & ಪೋ, ವಿಭಾಗ, ಭೀಮರಾಯನಗುಡಿ, ಈಮೇಲ್ : kbjnleesbc@gmail.com
ಸಂ:ಕೃಭಾಜನಿನಿ/ಶಶಾಕಾ/ಪಾ&ಪೋ/ಭೀಗುಡಿ/ಟಿಬಿ/ಟೆಂಡರ/2021–22/931 ದಿನಾಂಕ:31–03–2022
ಟೆಂಡರ್ ತಿದ್ದುಪಡಿ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಉಲ್ಲೇಖ:– ಈ ಕಛೇರಿಯ ಟೆಂಡರ್ ಪ್ರಕಟಣೆ ಸಂ. 884, ದಿನಾಂಕ:29.03.2022
ತಾಂತ್ರಿಕ ಕಾರಣಗಳಿಂದಾಗಿ ಮೇಲಿನ ಟೆಂಡರನ್ ಕಾಮಗಾರಿಗಳ ಇಂಡೆಂಟ್ ಸಂ.21949, 21950 & 21951 ಗಳ ಬದಲಾಗಿ ಇಂಡೆಂಟ್ ಸಂ.22006, 22007 & 22008 ಎಂದು ಒದಿಕೊಳ್ಳಲು ತಿಳಿಸಲಾಗಿದೆ ಮತ್ತು ವೇಳಾಪಟ್ಟಿಯನ್ನು ಈ ಕೆಳಗಿನಂತೆ ಬದಲಾವಣೆ ಮಾಡಲಾಗಿದೆ.
ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ ಶ.ಶಾ.ಕಾ ನಿಮಪೋ ವಿಭಾಗ, ಭೀಮರಾಯನಗುಡಿ ರವರು ಇ–ಟೆಂಡರಿಂಗ್ ಮುಖಾಂತರ ಶೇಕಡಾವಾರು ಕಾಮಗಾರಿಗಳಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅಹ್ವಾನಿಸಲಾಗಿದ್ದು, ಕಾಮಗಾರಿಗಳ ವಿವರಗಳು ಈ ಕೆಳಗಿನಂತಿರುತ್ತವೆ; 1) ಕಾಮಗಾರಿಗಳ ವಿವರ : ಕೃಭಾಜನಿನಿ, ಶಶಾಕಾ ನಿಮಪೋ ವಿಭಾಗ, ಭೀಮರಾಯನಗುಡಿ ಅಡಿಯಲ್ಲಿ ಬರುವ 2021–22 ನೇ ಸಾಲಿನ ವಾರ್ಷಿಕ ಅನುದಾನ ಕಾಮಗಾರಿಗಳು. 2) ಟೆಂಡರಗೆ ಇಟ್ಟ ಮೊತ್ತ : ಗರಿಷ್ಠ ಮೊತ್ತ ರೂ. 171.50 ಲಕ್ಷಗಳು & ಕನಿಷ್ಟ ಮೊತ್ತ ರೂ. 130.03 ಲಕ್ಷಗಳು, 3) ಟೆಂಡರಗೆ ಇಟ್ಟ ಇ.ಎಂ.ಡಿ ಮೊತ್ತ: ಗರಿಷ್ಠ ಮೊತ್ತ ರೂ. 2,57,800.00 & ಕನಿಷ್ಟ ಮೊತ್ತ ರೂ. 1,95,100.00, 4) ಇ–ಟೆಂಡರಿಂಗ ಲಭ್ಯವಾಗುವ ಅವಧಿ : ದಿನಾಂಕ: 04.04.2022 ಮುಂಜಾನೆ 11.30 ಗಂಟೆಯಿಂದ ದಿನಾಂಕ: 20.04.2022 ಸಾಯಂಕಾಲ 05.00 ಘಂಟೆ ವರೆಗೆ. 5) ಇ–ಟೆಂಡರಿಂಗ ಕೊನೆಯ ದಿನಾಂಕ: 20.04.2022 ಸಾಯಂಕಾಲ 05.00 ಘಂಟೆ ವರೆಗೆ. 6) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ : 22.04.2022 ಮುಂಜಾನೆ 11.30 ಗಂಟೆಗೆ, ಸದರಿ ವಿಭಾಗ ಕಛೇರಿಯಲ್ಲಿ, 7) ಆರ್ಥಿಕ ಟೆಂಡರ್ ತೆರೆಯುವ ದಿನಾಂಕ : 02.05.2022 ಮುಂಜಾನೆ 11.30 ಗಂಟೆಗೆ ಅಥವಾ ಆರ್ಥಿಕ ಟೆಂಡರ್ ಅನುಮೋದನೆಗೊಂಡ ನಂತರ, 8) ಸಂಪರ್ಕಿಸಬೇಕಾದ ಕಛೇರಿ ವಿಳಾಸ : ಹೆಚ್ಚಿನ ಮಾಹಿತಿಗಾಗಿ ವೆಬಸೈಟ್ http://www.eproc.karnataka.gov.in ನಲ್ಲಿ ನೋಡಬಹುದು ಹಾಗೂ ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿ(ನಿ), ಶಶಾಕಾ ನಿಮಪೋ ವಿಭಾಗ ಭೀಮರಾಯನಗುಡಿ
ವಾ.ಸಾ.ಸಂ.ಇ/ಯಾದಗಿರಿ/03/ಎಂಸಿಎ/2022–23

₹ 3 ಕೋಟಿ ಹಫ್ತಾ ಕೊಡದಿದ್ದಕ್ಕೆ ಉದ್ಯಮಿ ಆರ್.ಎನ್. ನಾಯಕ ಕೊಲೆ ಪ್ರಕರಣ

ಬನ್ನಂಜೆ ರಾಜಾಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ



ಬನ್ನಂಜೆ ರಾಜಾ

ಬೆಳಗಾವಿ: ಉತ್ತರ ಕನ್ನಡ ಜಿಲ್ಲೆ ಅಂಕೋಲಾ ಉದ್ಯಮಿ, ಸಹಕಾರಿ ಧುರೀಣ ಆರ್.ಎನ್. ನಾಯಕ ಕೊಲೆ ಪ್ರಕರಣದಲ್ಲಿ ಭೂಗತ ಪಾತಕಿ ಬನ್ನಂಜೆ ರಾಜಾ ಸೇರಿದಂತೆ ಎಂಟು ಮಂದಿಗೆ ಜೀವಾವಧಿ ಶಿಕ್ಷೆ, ಮತ್ತೊಬ್ಬಗೆ ಐದು ವರ್ಷ ಕಾರಾಗೃಹ ಶಿಕ್ಷೆ ವಿಧಿಸಿ ಇಲ್ಲಿನ 'ಕೋಕಾ' (ಕರ್ನಾಟಕ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ) ನ್ಯಾಯಾಲಯ ಸೋಮವಾರ ತೀರ್ಪು ನೀಡಿದೆ.

ರಾಜ್ಯದ ಮೊದಲ 'ಕೋಕಾ' ಪ್ರಕರಣ ಇದಾಗಿದೆ. ಬನ್ನಂಜೆ ರಾಜಾ, ನಾಯಕ ಅವರ ಬಳಿ ₹ 3 ಕೋಟಿ ಹಫ್ತಾ ಕೇಳಿದ್ದ. ಕೊಡದಿದ್ದಕ್ಕೆ ಕೊಲೆ ಮಾಡಲಾಗಿತ್ತು. ಪ್ರಧಾನ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಧೀಶ ಸಿ.ಎಂ. ಜೋಶಿ ಶಿಕ್ಷೆಯ ಪ್ರಮಾಣ ಪ್ರಕಟಿಸಿದರು.

> **ಬನ್ನಂಜೆ ರಾಜಾ ಸೇರಿ ಅಪರಾಧಿಗಳಿಗೆ ಕೋಕಾ ನ್ಯಾಯಾಲಯದಿಂದ ಜೀವಾವಧಿ ಶಿಕ್ಷೆ ಆಗಿದೆ. ಇದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು**
>
> **ಕೆ.ಜಿ. ಪುರಾಣಿಕಮಠ**
> ವಿಶೇಷ ಸರ್ಕಾರಿ ಅಭಿಯೋಜಕ

ಉತ್ತರಪ್ರದೇಶ ಮೂಲದ ಜಗದೀಶ್ ಪಟೇಲ್, ವಿಜಯಪುರದ ಅಂಭಾಜಿ ಬಂಡುಗಾರ, ಉಡುಪಿ ಜಿಲ್ಲೆ ಕಾರ್ಕಳದ ಮಂಜುನಾಥ ಯಾನೆ ಗಣೇಶ ಲಕ್ಷ್ಮಣ ಭಜಂತ್ರಿ, ಹಾಸನದ ಮಹೇಶ ಅಚ್ಚಂಗಿ, ಕೇರಳದ ಸಂತೋಷ್ ಎಂ.ಬಿ. (ಸುಳ್ಯ ಸಂತೋಷ್), ಉಡುಪಿ ಮೂಲದ ಬನ್ನಂಜೆ ರಾಜಾ, ಬೆಂಗಳೂರಿನ ಜಗದೀಶ್ ಚಂದ್ರರಾಜ ಅರಸ್, ಉತ್ತರ ಪ್ರದೇಶದ ಅಂಕಿತ್‌ಕುಮಾರ್ ಕಶ್ಯಪ್ ಜೀವಾವಧಿ ಶಿಕ್ಷೆಗೆ ಗುರಿಯಾದವರು.

ಕೇರಳದ ಕೆ.ಎಂ. ಇಸ್ಮಾಯಿಲ್‌ಗೆ ಐದು ವರ್ಷ ಸಾದಾ ಶಿಕ್ಷೆ ವಿಧಿಸಲಾಗಿದೆ. ಇವರೆಲ್ಲರೂ 'ಸಂಘಟಿತ ಅಪರಾಧ'ದಲ್ಲಿ ಭಾಗಿಯಾಗಿರುವುದು ದೃಢಪಟ್ಟಿದೆ ಎಂದು ನ್ಯಾಯಾಲಯವು ಮಾರ್ಚ್ 30ರಂದು ತಿಳಿಸಿತ್ತು. ಶಿಕ್ಷೆ ಪ್ರಮಾಣ ಘೋಷಣೆಯನ್ನು ಕಾಯ್ದಿರಿಸಿತ್ತು.

ಕೇರಳದ ರಬ್ದಿನ್ ಸಲೀಂ, ಬೆಂಗಳೂರು ಮೂಲದ ಮಹ್ಮದ್ ಶಹಬಂದ್ರಿ ಹಾಗೂ ಉತ್ತರಕನ್ನಡ ಜಿಲ್ಲೆ ಅಂಕೋಲಾದ ಆನಂದ ರಮೇಶ್ ನಾಯಕ ಎನ್ನುವವರನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ.

'ಮೃತರ ಪತ್ನಿಗೆ ₹ 30 ಲಕ್ಷ ಪರಿಹಾರ ನೀಡಬೇಕು. ಜೀವ ಬೆದರಿಕೆ ಇರುವುದರಿಂದ ಆರ್.ಎನ್. ನಾಯಕ ಪುತ್ರ ಮಯೂರ್ ನಾಯಕ ಹಾಗೂ ಸಾಕ್ಷಿಗಳಿಗೆ ಪೊಲೀಸ್ ಭದ್ರತೆ ನೀಡಬೇಕು' ಎಂದು ನ್ಯಾಯಾಲಯವು ಉತ್ತರ ಕನ್ನಡ ಮತ್ತು ಮೈಸೂರು ಪೊಲೀಸರಿಗೆ ಆದೇಶಿಸಿದೆ.

2013ರ ಡಿ.21ರಂದು ಮಧ್ಯಾಹ್ನ 1.30ರ ಸುಮಾರಿಗೆ ಅಂಕೋಲಾದಲ್ಲಿ ಘಟನೆ ನಡೆದಿತ್ತು. ಪ್ರಕರಣದ 1ನೇ ಆರೋಪಿಯಾಗಿದ್ದ ಉತ್ತರಪ್ರದೇಶದ ವಿವೇಕ್ ಉಪಾಧ್ಯಾಯ ಘಟನೆ ನಡೆದ ದಿನದಂದು ಆರ್.ಎನ್. ನಾಯಕ ಅವರ ಗನ್‌ಮ್ಯಾನ್ ರಮೇಶ್ ಜೊತೆ ನಡೆಸಿದ ಗುಂಡಿನ ಚಕಮಕಿಯಲ್ಲಿ ಮೃತಪಟ್ಟಿದ್ದರು. ಉಳಿದ ಆರೋಪಿಗಳಾದ ಭಟ್ಕಳದ ನಾಜೀಂ ನಿಲಾವರ್, ಮಂಗಳೂರಿನ ಹಾಜಿ ಅಮಿನ್ ಭಾಷಾ ಹಾಗೂ ಸಕಲೇಶಪುರದ ಸುಲೇಮಾನ್ ಜೈನುದ್ದೀನ್ ಪತ್ತೆಯಾಗಿಲ್ಲ.

ಸರ್ಕಾರದ ಪರವಾಗಿ ವಿಶೇಷ ಅಭಿಯೋಜಕರಾದ ಕೆ.ಜಿ. ಪುರಾಣಿಕಮಠ ಹಾಗೂ ಕೆ. ಶಿವಪ್ರಸಾದ್ ಆಳ್ವಾ ವಕಾಲತ್ತು ವಹಿಸಿದ್ದರು. ಆರೋಪಿಗಳನ್ನು ಇಲ್ಲಿನ ಕಾರಾಗೃಹದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಲಾಯಿತು.

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಜೀಬ್ರಾ ಮರಿಯೊಂದಿಗೆ ತಾಯಿ ಕಾವೇರಿ

ಬನ್ನೇರುಘಟ್ಟದಲ್ಲಿ ಜೀಬ್ರಾ ಮರಿ ಜನನ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಜೀಬ್ರಾ ಮರಿಯೊಂದಕ್ಕೆ ಜನ್ಮ ನೀಡಿದ್ದು ನೂತನ ಅತಿಥಿ ಆಗಮನದಿಂದಾಗಿ ಜೀಬ್ರಾ ಕುಟುಂಬದ ಸಂಖ್ಯೆ ಐದಕ್ಕೇರಿದೆ ಎಂದು ಉದ್ಯಾನದ ಪಶುವೈದ್ಯಕೀಯ ವಿಭಾಗದ ಸಹಾಯಕ ನಿರ್ದೇಶಕ ಡಾ.ಕೆ.ಎಸ್. ಉಮಾಶಂಕರ್ ತಿಳಿಸಿದ್ದಾರೆ.

ಉದ್ಯಾನದ ಜೀಬ್ರಾ ಕಾವೇರಿ ಮತ್ತು ಭರತ್ ಜೋಡಿಗೆ ಮರಿ ಜನಿಸಿದೆ. ತಾಯಿ ಮತ್ತು ಮರಿ ಆರೋಗ್ಯವಾಗಿದ್ದು ಪಶುವೈದ್ಯಕೀಯ ತಂಡ ಮತ್ತು ಪ್ರಾಣಿಪಾಲಕರ ವೀಕ್ಷಣೆಯಲ್ಲಿ ವಿಶೇಷ ಕಾಳಜಿ ವಹಿಸಿ ತಾಯಿ ಮತ್ತು ಮರಿಯನ್ನು ಆರೈಕೆ ಮಾಡಲಾಗುತ್ತಿದೆ ಎಂದರು.

ಜೈವಿಕ ಉದ್ಯಾನದ ಉಪನಿರ್ದೇಶಕ ಹರೀಶ್ ಮಾತನಾಡಿ ಮೃಗಾಲಯಕ್ಕೆ ಭೇಟಿ ನೀಡುವ ಸಂದರ್ಶಕರು ಮರಿಯನ್ನು ವೀಕ್ಷಿಸಬಹುದಾಗಿದೆ ಎಂದು ತಿಳಿಸಿದರು.

ನಟ ಆಲಿ, ಸರಿಗಮ ವಿಜಿಗೆ ಕೃಷ್ಣದೇವರಾಯ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಸರಿಗಮ ವಿಜಿ



ನಟ ಆಲಿ

ಬೆಂಗಳೂರು: ತೆಲುಗು ವಿಜ್ಞಾನ ಸಮಿತಿ ವತಿಯಿಂದ ನೀಡಲಾಗುವ 2022ನೇ ಸಾಲಿನ 'ಶ್ರೀಕೃಷ್ಣದೇವರಾಯ ಪುರಸ್ಕಾರ'ಕ್ಕೆ ತೆಲುಗು ಹಾಸ್ಯನಟ ಆಲಿ ಹಾಗೂ ಕನ್ನಡ ನಟ ಸರಿಗಮ ವಿಜಿ ಅವರನ್ನು ಆಯ್ಕೆ ಮಾಡಲಾಗಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಎ.ರಾಧಾಕೃಷ್ಣ ರಾಜು,'ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಲಲಿತ ಕಲೆಗಳಲ್ಲಿ ಅಪ್ರತಿಮ ಸೇವೆ ಸಲ್ಲಿಸಿದವರನ್ನು ಸಮಿತಿ ಹಿಂದಿನಿಂದಲೂ ಗುರುತಿಸಿ, ಗೌರವಿಸುವ ಕೆಲಸ ಮಾಡುತ್ತಾ ಬಂದಿದೆ. ಅದರಂತೆ ಈ ಸಾಲಿನ ಪುರಸ್ಕಾರಕ್ಕೆ ನಟರಾದ ಆಲಿ ಮತ್ತು ವಿಜಿ ಅವರನ್ನು ಆಯ್ಕೆ ಮಾಡಿದ್ದೇವೆ' ಎಂದರು.

'ಪ್ರಶಸ್ತಿ ತಲಾ ₹25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿವೆ. ವೈಯಾಲಿಕಾವಲ್‌ನಲ್ಲಿರುವ ತೆಲುಗು ವಿಜ್ಞಾನ ಸಮಿತಿ ಆವರಣದ ಶ್ರೀಕೃಷ್ಣದೇವರಾಯ ಕಲಾಮಂದಿರದಲ್ಲಿ ಏ.8ರಂದು ಸಂಜೆ 4.30ಕ್ಕೆ 'ಯುಗಾದಿ ಉತ್ಸವ' ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ವಿವರಿಸಿದರು.

'ಕಾರ್ಯಕ್ರಮವನ್ನು ಎಂ.ಎಸ್. ರಾಮಯ್ಯ ಶಿಕ್ಷಣ ಸಂಸ್ಥೆ ಮತ್ತು ಗೋಕುಲ ಫೌಂಡೇಷನ್‌ನ ಅಧ್ಯಕ್ಷ ಎಂ.ಆರ್.ಜಯರಾಮ್ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಶಾಸಕ ಕೆ.ಆರ್.ರಮೇಶ್ ಕುಮಾರ್ ಹಾಗೂ ಸಮಿತಿಯ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷ ಮುನಿಸ್ವಾಮಿ ರಾಜು ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಪ್ರಿನ್ಸ್ ರಾಮವರ್ಮ ಮತ್ತು ತಂಡದಿಂದ ವಿಶೇಷ ಸಂಗೀತ ಕಾರ್ಯಕ್ರಮ ಇರಲಿದೆ' ಎಂದರು.

'ಗಗನಯಾನ'ಕ್ಕೆ ಎಚ್‌ಎಎಲ್ ಯಂತ್ರಾಂಶ

ಪ್ರಜಾವಾಣಿ ವಾರ್ತೆ

ಗಗನಯಾನಕ್ಕಾಗಿ ಎಚ್‌ಎಎಲ್ ಅಭಿವೃದ್ಧಿಪಡಿಸಿದ ಯಂತ್ರಾಂಶ ವೀಕ್ಷಿಸುತ್ತಿರುವ ಇಸ್ರೋ ಅಧ್ಯಕ್ಷ ಎಸ್.ಸೋಮನಾಥ್ ಮತ್ತು ಇತರ ಅಧಿಕಾರಿಗಳು ಇದ್ದರು

ಬೆಂಗಳೂರು: ಇಸ್ರೊ ಕೈಗೊಳ್ಳಲಿರುವ ಮಾನವ ಸಹಿತ 'ಗಗನಯಾನ'ಕ್ಕಾಗಿ ಎಚ್‌ಎಎಲ್ ಇಸ್ರೊಗೆ ಯಂತ್ರಾಂಶವನ್ನು (ಹಾರ್ಡ್‌ವೇರ್) ಸೋಮವಾರ ಹಸ್ತಾಂತರಿಸಿದೆ.

ಎಚ್‌ಎಎಲ್‌ನಲ್ಲಿ ಪಿಎಸ್2/ಜಿಎಸ್2 ಹಂತಗಳ ಸಂಯೋಜನೆ ಸೌಲಭ್ಯಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಮೊದಲ ಸೆಟ್‌ನ ಯಂತ್ರಾಂಶವನ್ನು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಸ್ವೀಕರಿಸಿದರು. ಅಲ್ಲದೆ, 150 ಸ್ಯಾಟಲೈಟ್ ಬಸ್ ಶೆಲ್ಟರ್‌ಗಳನ್ನೂ ಹಸ್ತಾಂತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸೋಮನಾಥ್, ಭಾರತದ ಮಾನವ ಸಹಿತ ಗಗನಯಾನ ಮತ್ತು ಇತರ ಬಾಹ್ಯಾಕಾಶ ಯೋಜನೆಗಳಲ್ಲಿ ಎಚ್‌ಎಎಲ್ ಮಹತ್ವದ ಪಾತ್ರವಹಿಸಲಿದೆ. ಇದಕ್ಕೆ ಅಗತ್ಯವಿರುವ ಕೌಶಲ್ಯ ಮತ್ತು ಜ್ಞಾನವನ್ನು ಕಂಪೆನಿ ಹೊಂದಿದೆ ಎಂದು ಅವರು ಹೇಳಿದರು.

ಬಾಹ್ಯಾಕಾಶ ಯೋಜನೆಗಳಲ್ಲಿ ತಂತ್ರಜ್ಞಾನವನ್ನು ದೇಶೀಯವಾಗಿ ಅಭಿವೃದ್ಧಿಪಡಿಸುವುದು ಮತ್ತು ಕಡಿಮೆ ಬೆಲೆಯಲ್ಲಿ ಉತ್ಪಾದಿಸುವುದು ಸವಾಲಿನ ವಿಷಯವಾಗಿದೆ. ಇದರಲ್ಲಿ ಎಚ್‌ಎಎಲ್ ಮತ್ತು ಖಾಸಗಿ ಕಂಪನಿಗಳ ಪಾತ್ರ ಮಹತ್ವದ್ದು ಎಂದು ಅವರು ಹೇಳಿದರು.

ಎಚ್‌ಎಎಲ್‌ನ ವ್ಯವಸ್ಥಾಪಕ ನಿರ್ದೇಶಕ ಆರ್.ಮಾಧವನ್ ಅವರು, ಇಸ್ರೊ ಜತೆಗೆ 40 ವರ್ಷಗಳ ಸಹಯೋಗವಿದ್ದು, ಹಲವು ಬಾಹ್ಯಾಕಾಶ ಯೋಜನೆಗಳಲ್ಲಿ ಮಹತ್ವದ ಪಾತ್ರವಹಿಸಿದೆ ಎಂದರು.

ಧ್ವಜಸ್ತಂಭ ಪ್ರತಿಷ್ಠಾಪನೆ

ಯಲಹಂಕ: ಇಲ್ಲಿನ ಕೋಟೆ ಬೀದಿಯಲ್ಲಿರುವ ವೇಣುಗೋಪಾಲ ಸ್ವಾಮಿಯವರ ನೂತನ ಬ್ರಹ್ಮರಥ ಮತ್ತು ಧ್ವಜಸ್ತಂಭ ಪ್ರತಿಷ್ಠಾಪನಾ ಸಹಿತ ಜೀರ್ಣೋದ್ಧಾರ ಕುಂಭಾಭಿಷೇಕ ಮಹೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ರಂಗನಿರ್ದೇಶಕ ಡಾ.ಎಸ್.ಎಲ್.ಎನ್.ಸ್ವಾಮಿ ತಿಳಿಸಿದರು.

ವೇಣುಗೋಪಾಲಸ್ವಾಮಿಯವರ ನೂತನ ಬ್ರಹ್ಮರಥ

ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿ, 'ಏಪ್ರಿಲ್ 5ರಂದು ಮಂಗಳವಾರ ಬೆಳಿಗ್ಗೆಯಿಂದಲೇ ಸ್ವಾಮಿಗೆ ವಿವಿಧ ರೀತಿಯ ಪೂಜಾಕೈಂಕರ್ಯಗಳು ಮತ್ತು ಹೋಮ-ಹವನ ಸೇವೆಗಳು ನೆರವೇರಲಿವೆ. ಬುಧವಾರ ಬೆಳಿಗ್ಗೆ 11.45ಕ್ಕೆ ನಗರದ ಪ್ರಮುಖಬೀದಿಗಳಲ್ಲಿ ನೂತನ ಬ್ರಹ್ಮರಥದಲ್ಲಿ ಸ್ವಾಮಿಯವರ ಮೆರವಣಿಗೆ ನಡೆಯಲಿದೆ' ಎಂದರು.

'ಏಪ್ರಿಲ್ 7ರಿಂದ ಮೇ 24ರವರೆಗೆ ವೇಣುಗೋಪಾಲಸ್ವಾಮಿಯವರ ಬ್ರಹ್ಮರಥೋತ್ಸವ ಮತ್ತು ಮಂಡಲಪೂಜೆ ಏರ್ಪಡಿಸಲಾಗಿದೆ. ಇದರ ಪ್ರಯುಕ್ತ ಏಪ್ರಿಲ್ 14ರಂದು ಕಲ್ಯಾಣೋತ್ಸವ ಹಾಗೂ ಏಪ್ರಿಲ್ 16ರಂದು ಮಧ್ಯಾಹ್ನ 12.20ಕ್ಕೆ ಬ್ರಹ್ಮರಥೋತ್ಸವ ಮತ್ತು ಅದೇ ದಿನ ರಾತ್ರಿ ಪಲ್ಲಕ್ಕಿ ಉತ್ಸವ ನಡೆಯಲಿದೆ. ಶಾಸಕ ಎಸ್.ಆರ್.ವಿಶ್ವನಾಥ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್, ಉಪವಿಭಾಗಾಧಿಕಾರಿ ಎಂ.ಜಿ.ಶಿವಣ್ಣ, ತಹಶೀಲ್ದಾರ್ ಕೆ.ನರಸಿಂಹಮೂರ್ತಿ ಮತ್ತಿತರರು ಪಾಲ್ಗೊಳ್ಳಲಿದ್ದಾರೆ' ಎಂದು ಅವರು ಮಾಹಿತಿ ನೀಡಿದರು.

ದೇವಸ್ಥಾನದ ಟ್ರಸ್ಟಿಗಳಾದ ಎಸ್. ಸಂತೋಷ್ ಕುಮಾರ್, ಕೆ.ಜನಾರ್ದನ ಭಟ್, ಮಾರ್ಕಂಡೇಯ, ಪಿ.ನರಸಿಂಹಯ್ಯ, ವೈ.ಆರ್.ರವಿಕುಮಾರ್, ಜಲಸಿರಿ ಪ್ರತಿಷ್ಠಾನದ ಅಧ್ಯಕ್ಷ ಅ.ಬ.ಶಿವಕುಮಾರ್, ಪ್ರಧಾನ ಅರ್ಚಕರಾದ ಆರ್. ಹನುಮಂತಭಟ್ ಇದ್ದರು.

ಭಾರತದ ವಿರೋಧಿ ಅಲ್ಲ: ಇಮ್ರಾನ್

ಇಸ್ಲಾಮಾಬಾದ್ (ಪಿಟಿಐ): 'ನಾನು ಭಾರತದ ಅಥವಾ ಅಮೆರಿಕದ ವಿರೋಧಿ ಅಲ್ಲ. ಅಥವಾ ಯಾವುದೇ ದೇಶದ ವಿರುದ್ಧವೂ ಇಲ್ಲ. ಪರಸ್ಪರ ಗೌರವದಿಂದ ಎಲ್ಲ ರಾಷ್ಟ್ರಗಳೊಂದಿಗೂ ಉತ್ತಮ ಸಂಬಂಧ ಬಯಸುತ್ತೇನೆ' ಎಂದು ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಹೇಳಿದರು.

ದೂರದರ್ಶನದ ಮೂಲಕ ಸಾರ್ವಜನಿಕ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿರೋಧ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದರು.

ರಾಜೀನಾಮೆ: ರಾಜಕೀಯ ಮತ್ತು ಸಾಂವಿಧಾನಿಕ ಬಿಕ್ಕಟ್ಟಿನ ನಡುವೆ ಪಾಕಿಸ್ತಾನದ ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಮೊಯೀದ್ ಯೂಸುಫ್ ಸೋಮವಾರ ರಾಜೀನಾಮೆ ನೀಡಿದ್ದಾರೆ.

'ನಾನು ಅತ್ಯಂತ ತೃಪ್ತಿಯಿಂದ ಹೊರಡುತ್ತಿದ್ದೇನೆ. ಇಷ್ಟು ದಿನ ಕಾರ್ಯನಿರ್ವಹಿಸಲು ಅವಕಾಶ ಒದಗಿಸಿದ ಪ್ರಧಾನಿ ಇಮ್ರಾನ್ ಖಾನ್ ಮತ್ತು ಇತರರಿಗೆ ಧನ್ಯವಾದ' ಎಂದು ಅವರು ಟ್ವೀಟ್ ಮೂಲಕ ತಿಳಿಸಿದ್ದಾರೆ.

ಬ್ರೈಲ್ ಲಿಪಿ ಪಠ್ಯ: ಟೆಂಡರ್‌ಗೆ ಗಡುವು

ಬೆಂಗಳೂರು: ಅಂಧ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಬ್ರೈಲ್ ಲಿಪಿಯ ಪಠ್ಯ ಪುಸ್ತಕಗಳನ್ನು ಇ-ಪಠ್ಯಕ್ಕೆ (ಆಡಿಯೊ ಕಂಪ್ಯಾಟಬಲ್ ಮಾದರಿಗೆ) ಪರಿವರ್ತನೆ ನಿಟ್ಟಿನಲ್ಲಿ ಕರೆಯಲಾಗಿರುವ ಟೆಂಡರ್ ಅಂತಿಮಗೊಳಿಸಲು ಹೈಕೋರ್ಟ್, ಜೂನ್‌ವರೆಗೆ ಗಡುವು ನೀಡಿದೆ.

ಈ ಸಂಬಂಧ, 'ದಿ ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್' ಸಂಸ್ಥೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಹೆಚ್ಚುವರಿ ಸರ್ಕಾರಿ ವಕೀಲ ಎ. ವಿಜಯಕುಮಾರ್ ಪಾಟೀಲ್, 'ನಾಲ್ಕು ವಾರಗಳ ಕಾಲಾವಕಾಶ ನೀಡಿದರೆ ಟೆಂಡರ್ ಅಂತಿಮ ಗೊಳಿಸಲಾಗುವುದು' ಎಂದರು.

ನ್ಯಾಯಪೀಠವು ವಿಚಾರಣೆಯನ್ನು ಜೂನ್ ಮೊದಲ ವಾರಕ್ಕೆ ಮುಂದೂಡಿ, ಸರ್ಕಾರ ಒದಗಿಸಿರುವ ಅಂಕಿ-ಅಂಶಗಳ ಸತ್ಯಾಸತ್ಯತೆ ಪರಿಶೀಲಿಸಿ ಲಿಖಿತ ಮಾಹಿತಿ ಸಲ್ಲಿಸಲು ಅರ್ಜಿದಾರರ ಪರ ವಕೀಲರಿಗೆ ಸೂಚಿಸಿದೆ.

ನೇಮಕಾತಿ ರದ್ದುಪಡಿಸಿದ್ದ ಹೈಕೋರ್ಟ್ ಆದೇಶಕ್ಕೆ 'ಸುಪ್ರೀಂ' ತಡೆ

ಬೆಂಗಳೂರು ವಿ.ವಿ: ವೇಣುಗೋಪಾಲ್ ಮುಂದುವರಿಕೆ

ಪ್ರಜಾವಾಣಿ ವಾರ್ತೆ



ಪ್ರೊ.ಕೆ.ಆರ್. ವೇಣುಗೋಪಾಲ್

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಅವರ ನೇಮಕವನ್ನು ಅಸಿಂಧುಗೊಳಿಸಿ ರಾಜ್ಯ ಹೈಕೋರ್ಟ್‌ನ ವಿಭಾಗೀಯ ಪೀಠ ನೀಡಿದ್ದ ತೀರ್ಪಿಗೆ ಸುಪ್ರೀಂಕೋರ್ಟ್ ಸೋಮವಾರ ತಡೆಯಾಜ್ಞೆ ನೀಡಿದೆ.

> ## 'ಸತ್ಯಕ್ಕೆ ಸಂದ ಗೆಲುವು'
>
> 'ಇದು ಕಾನೂನು, ಸತ್ಯ, ಪ್ರಾಮಾಣಿಕತೆ, ಶ್ರದ್ಧೆ ಮತ್ತು ಪ್ರಗತಿಯ ಗೆಲುವು. ಅಪ್ರಾಮಾಣಿಕತೆ, ಸುಳ್ಳು ಪ್ರಚಾರ, ಸೇಡು ಮತ್ತು ಅಸೂಯೆಯ ಸೋಲು. ಎಲ್ಲಕ್ಕಿಂತ ಹೆಚ್ಚಾಗಿ ಭ್ರಷ್ಟಾಚಾರದ ಮೇಲಿನ ವಿಜಯ' ಎಂದು ಪ್ರೊ.ಕೆ.ಆರ್. ವೇಣುಗೋಪಾಲ್ ಪ್ರತಿಕ್ರಿಯಿಸಿದ್ದಾರೆ.

ಇದರಿಂದಾಗಿ, ಕುಲಪತಿಯಾಗಿ ಪ್ರೊ. ವೇಣುಗೋಪಾಲ್ ಮುಂದುವರಿಯಲಿದ್ದಾರೆ. ರಾಜ್ಯ ಹೈಕೋರ್ಟ್ ತೀರ್ಪು ಪ್ರಶ್ನಿಸಿ ರಾಜ್ಯಪಾಲರು, ಸರ್ಕಾರ ಹಾಗೂ ಪ್ರೊ. ವೇಣುಗೋಪಾಲ್ ಅವರು ಸುಪ್ರೀಂಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಸೂರ್ಯಕಾಂತ್ ಅವರು ಆರಂಭದಲ್ಲಿ ತಡೆಯಾಜ್ಞೆ ನೀಡುವ ಇಂಗಿತ ವ್ಯಕ್ತಪಡಿಸಿದರು. ಆದರೆ, ಪ್ರತಿವಾದಿ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿದಾಗ, ಲಿಖಿತ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ತಡೆಯಾಜ್ಞೆ ನೀಡಿದರು.

ವಿವಾದ ಏನು?: ಡಾ. ಸಂಗಮೇಶ್ ಪಾಟೀಲ ಅವರು ಪ್ರೊ. ಕೆ.ಆರ್. ವೇಣುಗೋಪಾಲ್ ಅವರ ನೇಮಕಾತಿಯನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಸರ್ಕಾರದ ಅನುಮತಿಯನ್ನು ಪಡೆಯದೆ ಈ ನೇಮಕಾತಿ ಮಾಡಲಾಗಿದೆ ಎಂದು ಅವರು ಅರ್ಜಿ ಸಲ್ಲಿಸಿದ್ದರು. ವೇಣುಗೋಪಾಲ್ ಅವರ ನೇಮಕಾತಿಯನ್ನು ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠ ರದ್ದುಪಡಿಸಿತ್ತು.

ಹೋಟೆಲ್: ಗ್ರಾಹಕರಿಗೆ ದರ ಏರಿಕೆ ಬಿಸಿ

ಆಹಾರ ದರ ಶೇ 10ರಷ್ಟು ಹೆಚ್ಚಳ • ಈ ವಾರದಿಂದಲೇ ಪರಿಷ್ಕೃತ ದರ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗತ್ಯ ವಸ್ತುಗಳ ಬೆಲೆ ಏರಿಕೆ ಬೆನ್ನಲ್ಲೇ ಹೋಟೆಲ್ ಆಹಾರ ದರವೂ ಶೇ 10ರಷ್ಟು ಹೆಚ್ಚಿಸಲು ಬೃಹತ್ ಬೆಂಗಳೂರು ಹೋಟೆಲುಗಳ ಸಂಘ ತೀರ್ಮಾನಿಸಿದೆ. ಬೆಂಗಳೂರಿನ ಹೋಟೆಲ್‌ಗಳಲ್ಲಿ ಈ ವಾರದಿಂದಲೇ ಪರಿಷ್ಕೃತ ದರ ಜಾರಿಯಾಗಲಿದೆ.

ದರ ಏರಿಸುವ ಸಂಬಂಧ ಸಂಘದ ನೇತೃತ್ವದಲ್ಲಿ ಹೋಟೆಲ್ ಮಾಲೀಕರ ಸಭೆ ನಗರದಲ್ಲಿ ಸೋಮವಾರ ನಡೆಯಿತು.

'ಅಗತ್ಯ ವಸ್ತುಗಳ ದರ ಏರಿಕೆ ಆಗಿರುವುದರಿಂದ ಹೋಟೆಲ್ ಆಹಾರಗಳ ಬೆಲೆ ಹೆಚ್ಚಿಸುವುದು ಅನಿವಾರ್ಯ' ಎಂದು ಸಭೆಯಲ್ಲಿ ಹೋಟೆಲ್ ಮಾಲೀಕರು ಅಭಿಪ್ರಾಯ ತಿಳಿಸಿದ್ದರು. ಹೋಟೆಲ್ ಉದ್ಯಮದ ಉಳಿವಿಗಾಗಿ ಕನಿಷ್ಠ ಶೇ 10ರಷ್ಟು ದರ ಏರಿಸಬಹುದು' ಎಂದು ಸಂಘ ತೀರ್ಮಾನಿಸಿದೆ.


ಪಿ.ಸಿ.ರಾವ್

ಕೆಲ ಹೋಟೆಲ್ ಮಾಲೀಕರು ತಮ್ಮ ಅನುಕೂಲಕ್ಕೆ ತಕ್ಕಂತೆ ಬೆಲೆ ಏರಿಸಲು ನಿರ್ಧರಿಸಿದ್ದಾರೆ. 'ಗ್ರಾಹಕರ ದೃಷ್ಟಿಯಿಂದ ಸದ್ಯಕ್ಕೆ ಬೆಲೆ ಏರಿಕೆ ಮಾಡುವುದಿಲ್ಲ' ಎಂದೂ ಕೆಲ ಹೋಟೆಲ್‌ನವರು ತೀರ್ಮಾನಿಸಿದ್ದಾರೆ. ಮುಂದಿನ ವಾರದಿಂದ ಬಹುತೇಕ ಹೋಟೆಲ್‌ಗಳಲ್ಲಿ ಪರಿಷ್ಕೃತ ದರ ಜಾರಿಯಾಗಲಿದೆ.

'ಅಡುಗೆ ಎಣ್ಣೆ, ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಹೋಟೆಲು ಮಾಲೀಕರಿಗೆ ನುಂಗಲಾರದ ತುತ್ತಾಗಿದೆ. ಈ ಸಂದರ್ಭದಲ್ಲಿ ಆಹಾರ ದರ ಏರಿಕೆ ಅನಿವಾರ್ಯ. ಗ್ರಾಹಕರ ಹಿತದೃಷ್ಟಿಯಿಂದ ಶೇ 10ರಷ್ಟು ದರ ಹೆಚ್ಚಿಸಲು ನಿರ್ಧರಿಸಲಾಗಿದೆ' ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷ ಪಿ.ಸಿ. ರಾವ್ 'ಪ್ರಜಾವಾಣಿ'ಗೆ ತಿಳಿಸಿದರು.

ದರಪಟ್ಟಿ (₹ಗಳಲ್ಲಿ)

ಆಹಾರ	ಅಂದಾಜು ದರ	ಪರಿಷ್ಕೃತ ದರ
ಊಟ	120	132
ದೋಸೆ	70	77
ಪಲಾವ್	50	55
ಚಪಾತಿ	60	66
ಪೂರಿ	60	66
ಇಡ್ಲಿ	40	44
ವಡೆ	40	44
ಕಾಫಿ,ಟೀ,ಹಾಲು	10	12

'ಹೋಟೆಲ್ ಮಾಲೀಕರಿಗೆ ಕನಿಷ್ಠ ಶೇ 10ರಷ್ಟು ದರ ಹೆಚ್ಚಿಸಲು ಸೂಚಿಸಲಾಗಿದೆ. ಕೆಲವರು ಅದಕ್ಕೂ ಮೀರಿ ಅಥವಾ ಅದಕ್ಕಿಂತ ಕಡಿಮೆ ಪ್ರಮಾಣದಲ್ಲೂ ದರ ಏರಿಸಬಹುದು. ದರ ನಿಗದಿ ನಿರ್ಧಾರವನ್ನು ಹೋಟೆಲ್ ಮಾಲೀಕರಿಗೆ ಬಿಟ್ಟಿದ್ದೇವೆ' ಎಂದೂ ಹೇಳಿದರು.

ಸದ್ಯಕ್ಕಿಲ್ಲ ದರ ಏರಿಕೆ: 'ಹೋಟೆಲ್‌ಗಳ ಸಂಘ ದರ ಏರಿಸುವಂತೆ ಸಲಹೆ ನೀಡಿದೆ. ನಾಲ್ಕು ತಿಂಗಳ ಹಿಂದೆಯಷ್ಟೇ ದರಗಳನ್ನು ತುಸು ಹೆಚ್ಚಿಸಿದ್ದೆವು. ಈಗ ಮತ್ತೆ ದರ ಏರಿಸಿ ಗ್ರಾಹಕರಿಗೆ ತೊಂದರೆ ನೀಡುವುದು ಸರಿಯಲ್ಲ. ಹಾಗಾಗಿ ಸದ್ಯಕ್ಕೆ ದರ ಏರಿಸುವುದಿಲ್ಲ' ಎಂದು ನಿಸರ್ಗ ಗ್ರ್ಯಾಂಡ್ ಹೋಟೆಲ್ ಮಾಲೀಕ ಎಸ್.ಪಿ.ಕೃಷ್ಣರಾಜ್ ತಿಳಿಸಿದರು.

ವಿದ್ಯುತ್ ದರ ಏರಿಕೆ: ಪ್ರತಿಕ್ರಿಯೆ

ಅಂಗಡಿ ಬಾಗಿಲು ಮುಚ್ಚಿ ಮನೆಯಲ್ಲಿ ಕೂರಬೇಕೇ?

ಬೆಲೆ ಏರಿಕೆಯ ಮೂಲಕ ಜನರ ಬದುಕಿನ ಮೇಲೆ ಬರೆ ಎಳೆದಿದ್ದ ಸರ್ಕಾರ ಈಗ ವಿದ್ಯುತ್ 'ಶಾಕ್' ನೀಡಿದೆ. ಜೀವನೋದ್ದೇಶಕ್ಕಾಗಿ ಅಂಗಡಿಯೊಂದನ್ನು ಇಟ್ಟುಕೊಂಡಿದ್ದೇನೆ. ಬೇಸಿಗೆ ಕಾಲವಾಗಿರುವುದರಿಂದ ಐಸ್‌ಕ್ರೀಂ ಕೂಡ ಮಾರಾಟ ಮಾಡುತ್ತಿದ್ದೇನೆ. ಭದ್ರತಾ ದೃಷ್ಟಿಯಿಂದ ಅಂಗಡಿ ಸುತ್ತ ಸಿಸಿಟಿವಿ ಕ್ಯಾಮೆರಾ ಅಳವಡಿಸಿದ್ದೇನೆ. ಇದಕ್ಕೆ ದಿನದ 24 ಗಂಟೆಯೂ ವಿದ್ಯುತ್ ಬೇಕು. ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಹೀಗೆ ಏಕಾಏಕಿ ದರ ಏರಿಕೆ ಮಾಡಿದರೆ ಅಂಗಡಿ ಬಾಗಿಲು ಮುಚ್ಚಿ ಮನೆಯಲ್ಲಿ ಕೂರಬೇಕಷ್ಟೆ.

ಎಂ.ಆರ್.ಸುಕೃತ, ಸಂಸ್ಥಿತಿ ಆರ್ಗ್ಯಾನಿಕ್ ಮತ್ತು ನ್ಯಾಚುರಲ್ಸ್

ಎಲೆಕ್ಟ್ರಿಕಲ್ ವಾಹನ ಬಳಸಲು ಸಾಧ್ಯವೇ?

ಪೆಟ್ರೋಲ್, ಡೀಸೆಲ್ ದರ ಗಗನಮುಖಿಯಾಗಿದೆ. ವಾಯು ಮಾಲಿನ್ಯ ನಿಯಂತ್ರಣಕ್ಕೆ ಎಲೆಕ್ಟ್ರಿಕಲ್ ವಾಹನಗಳ ಬಳಕೆ ಸೂಕ್ತ ಎಂದು ಸರ್ಕಾರ ಹೇಳುತ್ತಿದೆ. ಮತ್ತೊಂದೆಡೆ ವಿದ್ಯುತ್ ದರ ಏರಿಕೆ ಮಾಡಲಾಗುತ್ತಿದೆ. ಹೀಗಾದರೆ ಜೀವನ ನಡೆಸುವುದಾದರೂ ಹೇಗೆ? ಹಿಂದೆಲ್ಲಾ ಮೇಣದ ಬತ್ತಿ ಹಾಗೂ ಸೀಮೆಎಣ್ಣೆ ಚಿಮಣಿಯ ಬೆಳಕಿನಲ್ಲಿ ಓದುತ್ತಿದ್ದೆವು. ಆ ಪರಿಸ್ಥಿತಿ ಮತ್ತೆ ಬಂದರೂ ಅಚ್ಚರಿಪಡಬೇಕಿಲ್ಲ.

ನಾಗಭೂಷಣ್, ಜಿಮ್ ಮಾಲೀಕ.

'ವರ್ಕ್ ಫ್ರಂ ಹೋಂ' ಕಷ್ಟ

ಕೋವಿಡ್ ಕಾರಣ ಮನೆಯಿಂದಲೇ ಕೆಲಸ ಮಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಲ್ಯಾಪ್‌ಟಾಪ್, ಮೊಬೈಲ್, ವೈಫೈ ಹೀಗೆ ಪ್ರತಿಯೊಂದಕ್ಕೂ ವಿದ್ಯುತ್ ಬೇಕು. ಬೇಸಿಗೆಯಾಗಿರುವುದರಿಂದ ಫ್ಯಾನ್ ಹಾಗೂ ಹವಾನಿಯಂತ್ರಿತ ವ್ಯವಸ್ಥೆ (ಎ.ಸಿ) ಇಲ್ಲದೆ ಕೊಠಡಿಯಲ್ಲಿ ಕೂರಲು ಆಗುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ವಿದ್ಯುತ್ ದರ ಏರಿಕೆ ಮಾಡುವುದು ಎಷ್ಟು ಸರಿ. ಸರ್ಕಾರ ಹಾಗೂ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ನಾಗರಿಕರ ನೋವಿನ ಅರಿವಿಲ್ಲವೆ.

ಅರ್ಚನಾ, ಐಟಿ ಕಂಪನಿ ಉದ್ಯೋಗಿ.

'ಜನರ ಸುಲಿಗೆ ಸರಿಯಲ್ಲ'



ಹೊಸದಾಗಿ ಅಳವಡಿಸಿರುವ ಮೀಟರ್‌ಗಳು ವೇಗವಾಗಿ ಓಡುತ್ತವೆ. ಹೀಗಾಗಿ ವಿದ್ಯುತ್ ಹೆಚ್ಚು ಬಳಸದಿದ್ದರೂ ದುಬಾರಿ ಶುಲ್ಕ ಕಟ್ಟಬೇಕಾದ ಅನಿವಾರ್ಯತೆ ಎದುರಾಗಿದೆ. ಇದರ ಜೊತೆಗೆ ಬೆಸ್ಕಾಂ, ಎಂ.ಸಿ.ಶುಲ್ಕ, ಮೀಟರ್ ಶುಲ್ಕವೆಂದು ಪ್ರತ್ಯೇಕವಾಗಿ ಜನರನ್ನು ಸುಲಿಗೆ ಮಾಡುತ್ತಿದೆ. ನೀರಿನ ಶುಲ್ಕ, ಪೆಟ್ರೋಲ್, ಡೀಸೆಲ್ ದರ ಏರಿಕೆಯಿಂದ ಜನ ರೋಸಿ ಹೋಗಿದ್ದಾರೆ. ವಿದ್ಯುತ್ ಶುಲ್ಕ ಏರಿಸುವ ಮೂಲಕ ಗಾಯದ ಮೇಲೆ ಬರೆ ಎಳೆಯಲಾಗಿದೆ.

ಸಿದ್ಧಾರ್ಥ್, ರಂಗಭೂಮಿ ಕಲಾವಿದ.

ಮಧ್ಯಮ ವರ್ಗದವರಿಗೆ ಹೊರೆ

ಪ್ರತಿ ಯೂನಿಟ್‌ಗೆ 35 ಪೈಸೆ ಹೆಚ್ಚಳ ಮಾಡಿರುವುದರಿಂದ ಬಡವರು ಹಾಗೂ ಮಧ್ಯಮ ವರ್ಗದವರಿಗೆ ಹೆಚ್ಚು ಹೊರೆಯಾಗಲಿದೆ. ಅವರ ಬದುಕು ಮತ್ತಷ್ಟು ದುಸ್ಥರವಾಗಲಿದೆ. ಜನ ಪ್ರತಿಯೊಂದಕ್ಕೂ ವಿದ್ಯುತ್ ಮೇಲೆ ಅವಲಂಬಿತರಾಗಿದ್ದಾರೆ. ಹೀಗಿರುವಾಗ ದರ ಕಡಿತಗೊಳಿಸುವುದನ್ನು ಬಿಟ್ಟು ಹೆಚ್ಚಳ ಮಾಡಿರುವುದು ಎಷ್ಟು ಸರಿ?

ರೇಖಾ ಎಸ್.ಮಹೇಂದ್ರಕರ್, ಅಯ್ಯಪ್ಪನಗರ ನಿವಾಸಿ

'ಕತ್ತಲೆಯಲ್ಲೇ ಕಾಲ ಕಳೆಯಬೇಕಷ್ಟೇ'

ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಕುಗ್ಗಿಹೋಗಿರುವ ಜನ ಈಗ ಮನೆಯಲ್ಲಿ ದೀಪ ಹೊತ್ತಿಸಲೂ ಭಯ ಬೀಳಬೇಕಾದ ಪರಿಸ್ಥಿತಿ ಎದುರಾಗಿದೆ. ವಿದ್ಯುತ್ ದರ ಏರಿಕೆಯ ಮೂಲಕ ಜನರ ಜೀವನದ ಜೊತೆ ಚೆಲ್ಲಾಟವಾಡಲಾಗುತ್ತಿದೆ. ಬೇಸಿಗೆಯಲ್ಲಿ ಫ್ಯಾನ್ ಇಲ್ಲದೆ ಮಲಗಲು ಸಾಧ್ಯವೆ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಇದರ ಅರಿವಿದೆಯೇ?

ಎಸ್.ದರ್ಶನ್, ಕತ್ರಿಗುಪ್ಪೆ ನಿವಾಸಿ.

'ಜೀವನ ನಡೆಸುವುದೇ ಕಷ್ಟ'

ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಬೆಲೆ ದಿನೇ ದಿನೇ ಏರುತ್ತಿದೆ. ಈಗ ವಿದ್ಯುತ್ ದರವನ್ನೂ ಹೆಚ್ಚಳ ಮಾಡಲಾಗಿದೆ. ದುಡಿದಿದ್ದೆಲ್ಲಾ ಇವುಗಳಿಗೆ ಸರಿಹೋಗುತ್ತಿದೆ. ಉಳ್ಳವರು ಹೇಗೋ ಜೀವನ ನಡೆಸುತ್ತಾರೆ. ಆದರೆ ಬಡವರು, ಮಧ್ಯಮ ವರ್ಗದ ಜನ ಉಪವಾಸ ಮಲಗಬೇಕಷ್ಟೆ. ಸರ್ಕಾರಕ್ಕೆ ಇದರ ಅರಿವಿಲ್ಲವೇ?

ವಿಶಾಲಾಕ್ಷಿ,
ಗೃಹಿಣಿ

'ಕೋರಮಂಗಲ–ಈಜಿಪುರ ಮೇಲ್ಸೇತುವೆ ವರ್ಷಾಂತ್ಯಕ್ಕೆ ಪೂರ್ಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಕೇಂದ್ರೀಯ ಸದನ ಮತ್ತು ಈಜಿಪುರ ನಡುವಿನ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯನ್ನು ಈ ವರ್ಷಾಂತ್ಯದೊಳಗೆ ಪೂರ್ಣಗೊಳಿಸುವುದಾಗಿ ಗುತ್ತಿಗೆದಾರ ಕಂಪನಿ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಹೈಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿದೆ.

ಮೇಲ್ಸೇತುವೆ ಕಾಮಗಾರಿ ವಿಳಂಬ ಪ್ರಶ್ನಿಸಿ ಕೋರಮಂಗಲದ ಆದಿನಾರಾಯಣ ಶೆಟ್ಟಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಗುತ್ತಿಗೆದಾರ ಸಂಸ್ಥೆಯ ಪರ ವಕೀಲರು, 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ (ಬಿಬಿಎಂಪಿ) ಸೂಕ್ತ ಸಹಕಾರ ದೊರೆತರೆ ಶೀಘ್ರವೇ ಕಾಮಗಾರಿ ಆರಂಭಿಸಲಾಗುವುದು ಹಾಗೂ ಪ್ರಸಕ್ತ ವರ್ಷದ ಡಿಸೆಂಬರ್ 31ರೊಳಗೆ ಪೂರ್ಣಗೊಳಿಸಲಾಗುವುದು' ಎಂದು ನ್ಯಾಯಪೀಠಕ್ಕೆ ಭರವಸೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಪಾಲಿಕೆ ಮುಖ್ಯ ಆಯುಕ್ತರು ಸಂಸ್ಥೆಯೊಂದಿಗೆ ಸಭೆ ನಡೆಸಿ, ಸಮಸ್ಯೆ ಬಗೆಹರಿಸಲು ಪ್ರಯತ್ನಿಸಬೇಕು. ಶೀಘ್ರ ಕಾಮಗಾರಿ ಆರಂಭಕ್ಕೆ ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಿ ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಿದೆ.

ಕೊರತೆ ಇಲ್ಲವೆಂದರೆ ದರ ಏರಿಕೆ ಏಕೆ?: ಎಚ್‌ಡಿಕೆ

ಬೆಂಗಳೂರು: 'ವಿದ್ಯುತ್ ಕೊರತೆಯೇ ಇಲ್ಲ ಎನ್ನುವ ಸರ್ಕಾರ, ಈಗ ದರ ಏರಿಕೆ ಮಾಡಿದ್ದು ಏಕೆ? ಜನರ ಮೇಲೆ ಭಾರ ಹೊರಿಸಿ ವಿದ್ಯುತ್ತನ್ನು ಕಳ್ಳ ಮಾರ್ಗದಲ್ಲಿ ಮಾರಾಟ ಮಾಡುತ್ತಿದೆಯೇ? ಇಲ್ಲ ಎನ್ನುವುದಾದರೆ ದರ ಏರಿಕೆ ಹಿಂಪಡೆಯಲಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಒತ್ತಾಯಿಸಿದ್ದಾರೆ

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ದರ ಏರಿಕೆಯ ಜತೆ ಜತೆಗೇ, ಈಗ ವಿದ್ಯುತ್ ಶಾಕ್ ಕೊಟ್ಟಿದೆ. ಪ್ರತಿ ಯೂನಿಟ್‌ಗೆ 35 ಪೈಸೆ ಹೆಚ್ಚಿಸಿದೆ. ಗುಣಮಟ್ಟದ ವಿದ್ಯುತ್ ಕೊಡಲಾಗದೆ, ಬೆಲೆ ಏರಿಕೆಯಲ್ಲಿ ಮಾತ್ರ ರಾಕೆಟ್ ವೇಗದಲ್ಲಿದೆ' ಎಂದೂ ಟೀಕಿಸಿದ್ದಾರೆ.

'ಬಡವರ ವಿರುದ್ಧ ಬಿಜೆಪಿ ಬೆಲೆ ಏರಿಕೆ ಸಮರ ಹೂಡಿದೆಯಾ ಎನ್ನುವ ಅನುಮಾನ ನನ್ನದು' ಎಂದಿರುವ ಕುಮಾರಸ್ವಾಮಿ, 'ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ಇಲ್ಲದೆ ರೈತರು ಬೀದಿಯಲ್ಲಿದ್ದಾರೆ. ರಾಗಿ ಬೆಳೆಗಾರರು ಸಂಕಷ್ಟದಲ್ಲಿದ್ದಾರೆ. ಜನರನ್ನು ಬೆಲೆ ಏರಿಕೆ ಬಿಸಿಗೆ ಸಿಲುಕಿಸಿ ಬೆಲೆ ಬಾರುಕೋಲು ಅಭಿಯಾನವನ್ನು ಬಿಜೆಪಿ ಸರ್ಕಾರ ಆರಂಭಿಸಿದೆ' ಎಂದೂ ಆರೋಪಿಸಿದ್ದಾರೆ.

'ಹಲಾಲ್–ಜಟ್ಕಾ: ಯಾರಿಗೂ ಬಿಜೆಪಿ ಬೆಂಬಲ ಇಲ್ಲ'

ಬೆಂಗಳೂರು: 'ಸಮಾಜದಲ್ಲಿ ಈಗಿನ ಬೆಳವಣಿಗೆಗಳಿಗೂ ಬಿಜೆಪಿಗೂ ಯಾವುದೇ ಸಂಬಂಧವಿಲ್ಲ. ಹಲಾಲ್ ಕಟ್ ಮತ್ತು ಜಟ್ಕಾ ಕಟ್ ವಿಚಾರದಲ್ಲಿ ಬಿಜೆಪಿ ಯಾರನ್ನೂ ಬೆಂಬಲಿಸಿಲ್ಲ. ಆದರೆ, ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಈ ವಿಷಯವಾಗಿ ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಆರೋಪಿಸಿದ್ದಾರೆ.

ಹಲಾಲ್ ಕಟ್ ಮತ್ತು ಜಟ್ಕಾ ಕಟ್ ವಿಚಾರದಲ್ಲಿ ಜನರು ತಮ್ಮದೇ ಆದ ನಿಲುವು ತೆಗೆದುಕೊಂಡಿದ್ದಾರೆ. ಬಿಜೆಪಿ ಈ ವಿಚಾರದಲ್ಲಿ ಯಾರನ್ನೂ ಬೆಂಬಲಿಸಿಲ್ಲ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹಿಜಾಬ್, ಹಲಾಲ್ ಕಟ್ ಮತ್ತು ಮಸೀದಿಗಳಲ್ಲಿ ಧ್ವನಿ ವರ್ಧಕ ಬಳಕೆ ಕುರಿತು ವಿರೋಧ ಪಕ್ಷಗಳ ನಾಯಕರಾದ ಎಚ್.ಡಿ.ಕುಮಾರಸ್ವಾಮಿ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ಓಲೈಕೆ ರಾಜಕಾರಣ ಬಿಟ್ಟು, ಸ್ಪಷ್ಟ ನಿಲುವು ವ್ಯಕ್ತಪಡಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಈಗಾಗಲೇ ದೇಶಾದ್ಯಂತ ಕಣ್ಮರೆಯಾಗುತ್ತಿದೆ. ಸುಳ್ಳಿನ ಸರದಾರರಾದ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರ ನಡುವಿನ ಶೀತಲ ಸಮರದಿಂದ ಕಾಂಗ್ರೆಸ್ ಪಕ್ಷ ನೆಲಕಚ್ಚಲಿದೆ. ಕುಟುಂಬ ರಾಜಕಾರಣವನ್ನೇ ನೆಚ್ಚಿಕೊಂಡಿರುವ ಹಾಗೂ ಕೆಲವೇ ಜಿಲ್ಲೆಗಳಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವ ಜೆಡಿಎಸ್ ಕೂಡಾ ರಾಜ್ಯದಲ್ಲಿ ನಿರ್ನಾಮವಾಗಲಿದೆ. ಇದೇ ಆತಂಕದಿಂದ ಜೆಡಿಎಸ್ ನಾಯಕ ಕುಮಾರಸ್ವಾಮಿ ಅವರು ಬಿಜೆಪಿ ವಿರುದ್ಧ ಟೀಕೆ ಮಾಡುತ್ತಿದ್ದಾರೆ ಎಂದರು.

ಲಿಂಗಾನುಪಾತದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಳ: ಸ್ಮೃತಿ ಇರಾನಿ

ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಕಠಿಣ ಕ್ರಮ ಕೈಗೊಳ್ಳುವುದರ ಜತೆಗೆ, ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಮಹಿಳಾ ಸಹಾಯ ಕೇಂದ್ರ ತೆರೆಯಲಾಗಿದೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಸ್ಮೃತಿ ಇರಾನಿ ತಿಳಿಸಿದರು.

ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಜತೆ ಸೋಮವಾರ ನಡೆದ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮಹಿಳೆಯರ ವಿರುದ್ಧದ ಎಲ್ಲಾ ರೀತಿಯ ದೌರ್ಜನ್ಯಗಳಿಗೆ ಪರಿಹಾರ ಒದಗಿಸಲು ಮಹಿಳಾ ಸಹಾಯ ಕೇಂದ್ರಗಳು ನೆರವಾಗುತ್ತಿವೆ. ಸದ್ಯ ಇಂತಹ 704 ಮಹಿಳಾ ಸಹಾಯ ಕೇಂದ್ರಗಳು ಕೆಲಸ ಮಾಡುತ್ತಿವೆ. 70 ಲಕ್ಷ ಮಹಿಳೆಯರಿಗೆ ಸಹಾಯ ಕೇಂದ್ರಗಳಿಂದ ನೆರವು ದೊರೆತಿದೆ. ಅಲ್ಲದೆ, ಮಕ್ಕಳ ಮೇಲಿನ ದೌರ್ಜನ್ಯವನ್ನು ತಡೆಯಲು ನಿಯಮಗಳನ್ನು ಮತ್ತಷ್ಟು ಕಠಿಣ ಮಾಡಿರುವುದಾಗಿಯೂ ವಿವರಿಸಿದರು.

ಕೇಂದ್ರ ಸಚಿವೆ ಸ್ಮೃತಿ ಇರಾನಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಈ ಸಂದರ್ಭ ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಹಾಲಪ್ಪ ಆಚಾರ್ ಇದ್ದರು.

ತಮ್ಮ ಜೀವಮಾನವಿಡಿ ಬ್ಯಾಂಕ್ ಖಾತೆಯನ್ನು ಹೊಂದಿರದ ಸುಮಾರು 24 ಕೋಟಿ ಮಹಿಳೆಯರಿಗಾಗಿ ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದೆ. ಸಖಿ ಯೋಜನೆಯಡಿ 8 ಕೋಟಿ ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆಗೆ ನೆರವು ನೀಡಲಾಗಿದೆ ಎಂದರು.

ದೇಶದಲ್ಲಿ 14 ಲಕ್ಷ ಅಂಗನವಾಡಿಗಳ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸಲಾಗಿದ್ದು, ಇದರಡಿ 11 ಲಕ್ಷ ಅಂಗನವಾಡಿಗಳು ಸಿದ್ಧವಾಗಿವೆ. ಇದರಿಂದ 9 ಲಕ್ಷ ಮಂದಿಗೆ ಉಪಯೋಗವಾಗಲಿದೆ. ಅಂಗನವಾಡಿಗಳಿಗೆ ಸ್ಮಾರ್ಟ್ ಉಪಕರಣಗಳನ್ನು ನೀಡುತ್ತಿದ್ದು, ಈಗಾಗಲೇ 11 ಲಕ್ಷ ಸ್ಮಾರ್ಟ್ ಉಪಕರಣಗಳನ್ನು ಒದಗಿಸಲಾಗಿದೆ ಎಂದು ಸ್ಮೃತಿ ಇರಾನಿ ಹೇಳಿದರು.

ಕೇಂದ್ರ ಸರ್ಕಾರದ ವತಿಯಿಂದ ಅಂಗನಾಡಿ ಕಾರ್ಯಕರ್ತೆಯರಿಗೆ ತಲಾ ₹4,500 ಗೌರವಧನ, 180 ದಿನ ಹೆರಿಗೆ ರಜೆ, 20 ದಿನ ವೇತನ ಸಹಿತ ರಜೆ ಮತ್ತು ಇತರ ಸೌಲಭ್ಯಗಳನ್ನು ನೀಡಲಾಗಿದೆ. ಇದಕ್ಕೆ ಸಂಬಂಧಿಸಿದ ಅನುದಾನವನ್ನು ರಾಜ್ಯಗಳಿಗೆ ನೀಡಲಾಗುತ್ತಿದೆ. ಕೇಂದ್ರ ಸರ್ಕಾರ ಸಕಾಲದಲ್ಲಿ ಗೌರವ ಧನ ಪಾವತಿ ಮಾಡುತ್ತಿದೆ ಎಂದರು.

ಸಿಎಂ ಮನೆಗೂ ಭೇಟಿ: ಈ ಕಾರ್ಯಕ್ರಮಕ್ಕೂ ಮೊದಲು ಮುಖ್ಯಮಂತ್ರಿಯವರ ರೇಸ್ ವ್ಯೂ ಕಾಟೇಜ್ ನಿವಾಸಕ್ಕೆ ಸ್ಮೃತಿ ಇರಾನಿ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಅಂಗನವಾಡಿ ಡ್ಯಾಷ್‌ಬೋರ್ಡ್ ಕುರಿತು ಬಸವರಾಜ ಬೊಮ್ಮಾಯಿ ಜತೆಗೆ ಚರ್ಚೆ ನಡೆಸಿದರು. ಡ್ಯಾಷ್‌ಬೋರ್ಡ್ ಕಾರ್ಯ ನಿರ್ವಹಿಸುವ ವಿಧಾನದ ಬಗ್ಗೆ ಬೊಮ್ಮಾಯಿ ಪೂರ್ಣ ವಿವರ ನೀಡಿದರು. ಯಾವ ಯಾವ ಅಂಗನವಾಡಿಗಳಲ್ಲಿ ಶಿಕ್ಷಕಿಯರು ಮತ್ತು ಸಿಡಿಪಿಗಳು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೊ ಅಂತಹವರನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವುದನ್ನೂ ಅವರ ಗಮನಕ್ಕೆ ತಂದರು.

ಕ್ಷೇಮ ಕುಶಲ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಆರೋಗ್ಯಕ್ಕೆ ಶಿಸ್ತಿನ ಬಲ

ಡಾ. ಕಿರಣ್ ವಿ. ಎಸ್.

ಯಶಸ್ವಿ ವ್ಯಕ್ತಿಗಳ ಸಾಧನೆಯ ಹಿಂದಿನ ಮರ್ಮಗಳನ್ನು ಅರಿಯಲು ಹಲವಾರು ಅಧ್ಯಯನಗಳು ನಡೆದಿವೆ. ಜಾಣತನ, ಓದು, ಹಣ, ಚಾಲಾಕಿತನ, ಮೋಸಗೊಳಿಸುವ ಕಲೆಗಾರಿಕೆ, ನಯವಾದ ಮಾತುಗಾರಿಕೆ ಮೊದಲಾದವು ಜೀವನದಲ್ಲಿ ಸಫಲತೆಯನ್ನು ನೀಡಬಹುದೆಂದು ಹಲವರ ನಂಬಿಕೆ. ಆದರೆ ವೈಜ್ಞಾನಿಕ ಅಧ್ಯಯನಗಳು, 'ಮಾಡುವ ಕೆಲಸದ ಬಗ್ಗೆ ನಿಷ್ಠೆ, ಅದನ್ನು ಸಾಧಿಸುವ ಛಲ, ಮತ್ತು ಶಿಸ್ತುಬದ್ಧ ನಡವಳಿಕೆ' ಯಶಸ್ಸಿನ ಮೂಲಕಾರಣಗಳು ಎಂದು ತೋರಿವೆ. ಈ ಮಾತನ್ನು ಆರೋಗ್ಯರಕ್ಷಣೆಯ ವಿಷಯದಲ್ಲೂ ಹೇಳಬಹುದು. ಜೀವನವಿಡೀ ಒಳ್ಳೆಯ ಆರೋಗ್ಯಕ್ಕಿಂತ ಹೆಚ್ಚಿನ ಸಾಫಲ್ಯ ಬೇರೇನೂ ಇರಲಿಕ್ಕಿಲ್ಲ.

ವಿಶ್ವ ಆರೋಗ್ಯ ಸಂಸ್ಥೆ 'ಆರೋಗ್ಯವೆಂಬುದು ಸಂಪೂರ್ಣ ದೈಹಿಕ, ಮಾನಸಿಕ, ಮತ್ತು ಸಾಮಾಜಿಕ ಯೋಗಕ್ಷೇಮದ ಸ್ಥಿತಿ; ಅದು ಕೇವಲ ಕಾಯಿಲೆಯ ಅಥವಾ ಶರೀರ ದೌರ್ಬಲ್ಯದ ಅನುಪಸ್ಥಿತಿ ಅಲ್ಲ' ಎಂದು ವ್ಯಾಖ್ಯಾನ ಮಾಡಿದೆ. ಅಂದರೆ, ಕೇವಲ ಕಾಯಿಲೆ ಬಾರದಂತೆ ಎಚ್ಚರಿಕೆ ತೆಗೆದುಕೊಳ್ಳುವುದು ಮಾತ್ರ ಆರೋಗ್ಯವನ್ನು ಕಾಪಾಡಿಕೊಳ್ಳುವ ವಿಧಾನವಲ್ಲ. ಆರೋಗ್ಯರಕ್ಷಣೆ ಪ್ರತಿಯೊಬ್ಬರ ವೈಯಕ್ತಿಕ ಮತ್ತು ಸಾಮಾಜಿಕ ಜವಾಬ್ದಾರಿ.

> ಎಲ್ಲರಿಗೂ ದಿನದಲ್ಲಿ ಇಪ್ಪತ್ತನಾಲ್ಕು ಗಂಟೆಗಳ ಕಾಲಾವಧಿಯೇ ಇರುತ್ತದೆ. ಶಿಸ್ತಿನ ಪಾಲನೆ ಮಾಡುವವರು ಈ ಅವಧಿಯಲ್ಲಿ ಹೆಚ್ಚು ಸಾಧಿಸಬಲ್ಲರು. ಇತರರಿಗೆ ಸಮಯವಿಲ್ಲ ಎನ್ನುವ ನೆಪ ಮಾತ್ರ ಉಳಿಯುತ್ತದೆ.

ಶಿಸ್ತಿನ ಬಗ್ಗೆ ಅನೇಕರಿಗೆ ತಪ್ಪು ಕಲ್ಪನೆಗಳಿವೆ. ಶಿಸ್ತು ಎಂದರೆ ತಾನು ಮಾಡಬೇಕಾದ ಕೆಲಸವನ್ನು ಶ್ರದ್ಧೆಯಿಂದ ನಿರ್ವಹಿಸುವುದು; ಕೆಲಸದ ಅವಶ್ಯಕತೆಗಳು, ಜವಾಬ್ದಾರಿಗಳನ್ನು ಅರಿತುಕೊಳ್ಳುವುದು; ಆ ಕೆಲಸದಲ್ಲಿನ ಒತ್ತಡವನ್ನು ನಿರ್ವಹಿಸುವುದು; ಕೆಲಸಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ, ಅರ್ಥ ಮಾಡಿಕೊಳ್ಳುವುದು; ನಮ್ಮ ಕೆಲಸದ ನಿರ್ವಹಣೆಯ ಬಗ್ಗೆ ಪ್ರಾಮಾಣಿಕ ವಿಶ್ಲೇಷಣೆಯನ್ನು ನಡೆಸುವುದು; ಈ ಪ್ರಕ್ರಿಯೆಯಲ್ಲಿನ ಅಡೆತಡೆಗಳನ್ನು ನಿವಾರಿಸಿಕೊಳ್ಳುವ ಮಾರ್ಗೋಪಾಯಗಳನ್ನು ಪತ್ತೆ ಮಾಡುವುದು; ವ್ಯವಸ್ಥಿತ ಕಾರ್ಯನಿರ್ವಹಣೆಯನ್ನು ಮೈಗೂಡಿಸಿಕೊಳ್ಳುವುದು; ಧನಾತ್ಮಕ ಚಿಂತನೆ; ಕೋಪ, ಆವೇಶಗಳ ಮೇಲೆ ಹಿಡಿತ ಸಾಧಿಸುವುದು; ಸೋಲುಗಳನ್ನು ಒಪ್ಪಿ, ಅದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವುದು, ಮುಂತಾದುವು ವೈಯಕ್ತಿಕ ಶಿಸ್ತಿನ ಭಾಗಗಳು. ಆರೋಗ್ಯರಕ್ಷಣೆಯ ಸಾಫಲ್ಯದಲ್ಲಿ ಈ ಎಲ್ಲ ಅಂಶಗಳೂ ಸೇರಿವೆ.

ವಿದ್ಯೆಗೂ ಶಿಸ್ತಿಗೂ ನೇರ ಸಂಬಂಧವಿಲ್ಲ. ಆದರೆ, ಶಿಸ್ತನ್ನು ಮೈಗೂಡಿಸುವಲ್ಲಿ ಶಿಕ್ಷಣ ನೆರವಾಗುತ್ತದೆ. ಗಮ್ಯವನ್ನು ಅರಿತವರ ಹೆಜ್ಜೆಗಳು ಧೃಢವಾಗಿರುತ್ತವೆ; ಸಫಲತೆ ಹೆಚ್ಚಾಗಿರುತ್ತದೆ. ಇತರ ದೈನಂದಿನ ಜವಾಬ್ದಾರಿಗಳನ್ನು ನಿರ್ಲಕ್ಷಿಸದೆ, ಪ್ರತಿಯೊಂದು ಕೆಲಸಕ್ಕೂ ಅಗತ್ಯ ಕಾಲವನ್ನು ನೀಡುವ ಪ್ರಕ್ರಿಯೆಯಲ್ಲಿ ಶಿಸ್ತಿನ ಪಾತ್ರವಿದೆ. ಆರೋಗ್ಯದ ವಿಷಯಗಳಲ್ಲಿ ನೆಪಗಳನ್ನು ಹುಡುಕುವುದು ಬಹಳ ಸುಲಭ. ನೆಪಗಳ ಪ್ರಲೋಭನೆಯನ್ನು ಹತ್ತಿಕ್ಕುವುದಕ್ಕೆ ಶಿಸ್ತು ಮುಖ್ಯ. ಇದರ ಅಗತ್ಯವನ್ನು ಎಲ್ಲರೂ ಮನಗಾಣಬೇಕು. ಆರಂಭದಲ್ಲಿ ಕಷ್ಟವೆನಿಸಿದರೂ, ಶಿಸ್ತಿನ ಪ್ರತ್ಯಕ್ಷ ಮತ್ತು ಪರೋಕ್ಷ ಲಾಭಗಳು ಕಾಲಕ್ರಮೇಣ ಅನುಭವಕ್ಕೆ ಬರುತ್ತವೆ.

ವ್ಯಾಯಾಮ, ಊಟ, ನಿದ್ರೆ, ವಿಶ್ರಾಂತಿ, ಧ್ಯಾನ, ಧನಾತ್ಮಕ ಚಿಂತನೆ, ಒಳ್ಳೆಯ ಆಲೋಚನೆಗಳು, ವಯಸ್ಸಿಗೆ ಅನುಗುಣವಾದ ನಿಯಮಿತ ಆರೋಗ್ಯ ತಪಾಸಣೆಗಳು, ಮನೆಯಲ್ಲಿ ಮತ್ತು ವೃತ್ತಿಕ್ಷೇತ್ರದಲ್ಲಿ ಮಧುರ ಬಾಂಧವ್ಯಗಳು, ಸ್ವಚ್ಛತೆ ಮುಂತಾದುವು ಆರೋಗ್ಯರಕ್ಷಣೆಗೆ ಪೂರಕ. ಇವುಗಳನ್ನು ಕ್ಲುಪ್ತಕಾಲಕ್ಕೆ ನಿಯಮಿತವಾಗಿ ಅಭ್ಯಾಸ ಮಾಡುವುದು ಆರೋಗ್ಯಪಾಲನೆಯ ಅವಶ್ಯಕ ಅಂಗ. ನಿಯಮಿತ ಆಚರಣೆಯನ್ನು ಸಾಧಿಸಲು ಶಿಸ್ತಿನ ಪದ್ಧತಿ ಮುಖ್ಯ. ಇದನ್ನು ಪ್ರಾಯೋಗಿಕವಾಗಿ ಆಚರಿಸಲು ಕೆಲವು ದಾರಿಗಳಿವೆ:

ನಿಯಮಿತ ದೈನಂದಿನ ಆಚರಣೆ: ಪ್ರತಿಯೊಬ್ಬರಿಗೂ ದಿನದಲ್ಲಿ ಇಪ್ಪತ್ತನಾಲ್ಕು ಗಂಟೆಗಳ ಕಾಲಾವಧಿಯೇ ಇರುತ್ತದೆ. ಶಿಸ್ತಿನ ಪಾಲನೆ ಮಾಡುವವರು ಈ ಅವಧಿಯಲ್ಲಿ ಹೆಚ್ಚು ಸಾಧಿಸಬಲ್ಲರು. ಉಳಿದವರಿಗೆ ಸಮಯವಿಲ್ಲ ಎನ್ನುವ ನೆಪ ಮಾತ್ರ ದೊರೆಯುತ್ತದೆ. ಪ್ರತಿನಿತ್ಯವೂ ಆಯಾ ಕಾಲಕ್ಕೆ ಮಾಡಬೇಕಾದ ಕೆಲಸಗಳನ್ನು ಪದ್ಧತಿಯಂತೆ ಮಾಡುತ್ತಾ ಹೋದರೆ ಕಾಲಕ್ರಮೇಣ ಅದೊಂದು ಪರಿಪಾಠವಾಗುತ್ತದೆ. ಇದನ್ನು ಆರಂಭಿಸಿ, ಕೆಲಕಾಲ ತಪ್ಪದೇ ನಡೆಸಿಕೊಂಡು ಹೋದರೆ, ಆನಂತರ ಅದು ತಂತಾನೇ ಜರುಗುತ್ತದೆ.

ಆರೋಗ್ಯರಕ್ಷಣೆಯ ಮಹತ್ವ: ನಮ್ಮ ಅಧೀನದಲ್ಲಿರುವ ವಸ್ತುವಿನ ಮಹತ್ವ ನಮಗೆ ತಿಳಿದಿರುವುದಿಲ್ಲ. ಬಹಳ ವೇಳೆ ಅದನ್ನು ಕಳೆದುಕೊಂಡಾಗಲೇ ಅದರ ಮೌಲ್ಯ ತಿಳಿಯುತ್ತದೆ. ಆರೋಗ್ಯದ ವಿಷಯದಲ್ಲಿ ಈ ಮಾತು ಜಾಗತಿಕ ಸತ್ಯ. ನಮ್ಮ ಆರೋಗ್ಯ ಅಮೂಲ್ಯವೆಂದೂ, ಅದನ್ನು ಒಳ್ಳೆಯ ರೀತಿಯಲ್ಲಿ ಕಾಪಾಡಿಕೊಳ್ಳುವುದು ಅತ್ಯಂತ ಮಹತ್ವಪೂರ್ಣ ಸಂಗತಿಯೆಂದೂ ನಮಗೆ ತಿಳಿದಿರಬೇಕು. ಶಿಸ್ತಿನ ಆಚರಣೆ ಈ ಸಂಗತಿಯನ್ನು ಬೇರೂರಿಸುತ್ತದೆ.

ನಿಯಮಿತ ಆಚರಣೆಯ ಲಾಭಗಳು: ಆರೋಗ್ಯದಲ್ಲಿ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಅಂಗಗಳಿವೆ. ಸಾಂಕ್ರಾಮಿಕ ರೋಗಿಗಳು ಇಡೀ ಸಮಾಜಕ್ಕೆ ಯಾವ ರೀತಿ ಅಪಾಯ ಉಂಟು ಮಾಡಬಲ್ಲರೆಂಬುದನ್ನು ಈಚಿನ ನಮ್ಮ ಕಾಲದ ಜಾಗತಿಕ ಪಿಡುಗೊಂದು ನಮಗೆ ಮನಗಾಣಿಸಿದೆ. ಹೀಗಾಗಿ, ಇಡೀ ಸಮಾಜದ ಆರೋಗ್ಯವೂ ಪ್ರತಿಯೊಬ್ಬರ ವೈಯಕ್ತಿಕ ಹೊಣೆಗಾರಿಕೆ ಎಂಬ ಅರಿವು ಇರಬೇಕು. ಈ ದೃಷ್ಟಿಕೋನ ಶಿಸ್ತು, ಸಂಯಮಗಳ ನಿಯಮಿತ ಆಚರಣೆಯಿಂದ ಮಾತ್ರವೇ ಲಭಿಸುತ್ತದೆ.

ಯುಕ್ತಾಯುಕ್ತ ವಿವೇಚನೆ: ಶಿಸ್ತುಬದ್ಧ ಜೀವನದ ಒಂದು ದೊಡ್ಡ ಲಾಭವೆಂದರೆ ಸರಿ-ತಪ್ಪುಗಳ ಬಗ್ಗೆ ಸರಿಯಾದ ಅರಿವು. ಆಧುನಿಕ ಕಾಲದಲ್ಲಿ ಹಲವಾರು ಪ್ರಲೋಭನೆಗಳು ನಮ್ಮ ಬದುಕಿನೊಡನೆ ಹಾಸುಹೊಕ್ಕಾಗಿವೆ. ಇವುಗಳನ್ನು ಹತ್ತಿಕ್ಕುವುದು ಸುಲಭವಲ್ಲ. ಅಧ್ಯಯನಗಳ ರೀತ್ಯಾ ಶಿಸ್ತಿನ ಪಾಲಕರಿಗೆ ಇಂತಹ ವಿವೇಚನೆಯ ವಿಶ್ಲೇಷಣೆ ಇತರರಿಗಿಂತ ಸುಲಭ. ತಮ್ಮ ದಿನಚರಿಯಲ್ಲಿ ಬೇರೊಂದು ಹವ್ಯಾಸವನ್ನು ರೂಢಿಸಿಕೊಳ್ಳುವಾಗ, ಅದರ ಗುಣಾವಗುಣಗಳನ್ನು ಪರಿಶೀಲಿಸುವ ಸ್ವಭಾವ ಶಿಸ್ತಿನ ಜನರಲ್ಲಿ ಸಹಜವಾಗಿ ಕಾಣುತ್ತದೆ. ಇದರಿಂದ ಯೋಗ್ಯ-ಅಯೋಗ್ಯಗಳ ನಡುವಿನ ನಿರ್ಧಾರ ಸುಲಭವಾಗುತ್ತದೆ.

ಆರೋಗ್ಯರಕ್ಷಣೆಯಲ್ಲಿ ಶಿಸ್ತಿನ ಲಾಭಗಳು ಹಲವಾರು. ಜೀವನವು ನಿಂತ ನೀರಾಗಬಾರದು. ಅದು ಪ್ರಗತಿ ಹೊಂದಲು ಹಿಂದಿನ ಮಟ್ಟವನ್ನು ಕಾಲಾನುಸಾರ ಮೀರಬೇಕು. ಇದು ಒಂದೇ ಏಟಿಗೆ ಆಗುವಂಥದ್ದಲ್ಲ. ಕಾಲಕ್ರಮೇಣ ಕೊಂಚಕೊಂಚ ಪ್ರಗತಿಯನ್ನು ಸಾಧಿಸುತ್ತಾ, ಮೇಲೇರಬೇಕಾಗುತ್ತದೆ. ನಿಯಮಿತ ಆಚರಣೆಗಳಿಂದ ಆಯಾ ಕೆಲಸದಲ್ಲಿ ನಮ್ಮ ಪ್ರಾವೀಣ್ಯ ವೃದ್ಧಿಸುತ್ತದೆ. ಇದು ಶಿಸ್ತುಬದ್ಧ ಪದ್ಧತಿಗಳಿಂದ ಮಾತ್ರ ಸಾಧ್ಯ. ಶಿಸ್ತಿನ ಆಚರಣೆ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಇದು ಆರೋಗ್ಯನಿರ್ವಹಣೆಗೆ ಪೂರಕ.

ಆರೋಗ್ಯರಕ್ಷಣೆ ನಾವು ಜೀವನವಿಡೀ ಪಾಲಿಸಬೇಕಾದ ಕರ್ತವ್ಯ. ಇದಕ್ಕೆ ನಾವೇ ಸರಿಯಾದ ಚೌಕಟ್ಟನ್ನು ನಿರ್ಮಿಸಬೇಕು. ಈ ಪ್ರಕ್ರಿಯೆಯಲ್ಲಿ ಶಿಸ್ತಿನ ಪಾತ್ರ ಮಹತ್ವದ್ದು.

ಒಡೆಯದಿರಲಿ ಮನಸ್ಸು

ಪ್ರಜ್ಞಾ ಮತ್ತಿಹಳ್ಳಿ

ಬಂಧನವದೇನಲ್ಲ ಜೀವಜೀವ ಪ್ರೇಮ
ಒಂದೆನಿಲೆ ಜೀವವರೆ ಬೆರೆತರಳೆ ಪೂರ್ಣ |
ದಂದುಗವನ್ ಅರೆಗೈದು ಸಂತಸವನಿಮ್ಮಡಿಪ
ಬಾಂಧವ್ಯ ದೈವಕೃಪೆ - ಮಂಕುತಿಮ್ಮ ||

ಡಿ.ವಿ.ಜಿ.ಯವರು ಕಗ್ಗದಲ್ಲಿ ಹೇಳಿರುವ ಈ ಮಾತು ಅದೆಷ್ಟು ಅರ್ಥಪೂರ್ಣವಾಗಿದೆ ನೋಡಿ. ಎಷ್ಟೋ ಬಾರಿ ನಾವು ಗೊಣಗಿಕೊಳ್ಳುತ್ತೇವೆ. ಸಂಸಾರವನ್ನು ಬಂಧನವೆಂದು ಕರೆದು ಹೀಗಳೆಯುತ್ತೇವೆ. ಆದರೆ ಮನುಷ್ಯ ಒಬ್ಬಂಟಿಯಾಗಿ ಬದುಕಲಾರ. ಅದಕ್ಕಾಗಿಯೇ ಗುಂಡಪ್ಪನವರು ಒಂದೆ ನಿಲೆ ಜೀವವರೆ ಎನ್ನುತ್ತಾರೆ. ಒಂಟಿಜೀವಿ ಇಡಿಯಾಗಲಾರ. ಮನುಷ್ಯನು ಸಮಾಜದ ಇತರ ಜನಸಮುದಾಯದೊಂದಿಗೆ ಬೆರೆತು ಅಲ್ಲಿನ ಕಷ್ಟ-ಸುಖಗಳನ್ನು ತನ್ನದಾಗಿಸಿಕೊಂಡಾಗಲೇ ಸಂಪೂರ್ಣನಾಗುತ್ತಾನೆ. ರಕ್ತ-ಸಂಬಂಧಿಗಳಿರಲಿ ಅಥವಾ ಭಾವಬಂಧುಗಳಿರಲಿ ಅಥವಾ ನೆರೆಕೆರೆಯ ನಂಟರಲಿ – ಅವೆಲ್ಲವೂ ಸಂತಸವನ್ನು ಹೆಚ್ಚಿಸುವ ನಿಟ್ಟಿನಲಿ ಗಟ್ಟಿಕೊಂಡಿರುತ್ತವೆ.

ಮಾನವಜೀವಗಳ ಸಂಬಂಧವನ್ನು ಗುಂಡಪ್ಪನವರು ದೈವಕೃಪೆ ಎಂದು ಕರೆದಿದ್ದಾರೆ. ಪ್ರತಿಯೊಬ್ಬ ಮನುಷ್ಯ ತನ್ನ ಸುತ್ತಲಿನ ಇತರರೊಂದಿಗೆ ಒಂದಿಲ್ಲ ಒಂದು ಕಾರಣದಿಂದ ಸಂವಹನ ಮಾಡುತ್ತಲೇ ಇರುತ್ತಾನೆ. ಮಾತು, ವರ್ತನೆ, ಭೇಟಿ, ಸಹವಾಸ, ಕೊಡು-ಕೊಳ್ಳುವಿಕೆ – ಇವೆಲ್ಲವೂ ಸಂವಹನದ ರೂಪಗಳೇ ಆಗಿವೆ. ದುಡ್ಡು-ಕಾಸು, ಒಡವೆ-ಆಸ್ತಿ, ಮಮತೆ-ವಾತ್ಸಲ್ಯ, ಪ್ರೀತಿ-ಸ್ನೇಹ ಇವೆಲ್ಲವನ್ನೂ ಮನುಷ್ಯಸಂಬಂಧದಲ್ಲಿ ಪರಸ್ಪರರಿಗೆ ಕೊಡು-ಕೊಳ್ಳುವಿಕೆಯ ಭಾಗವಾಗಿ ಬಳಸುತ್ತೇವೆ. ಮನುಷ್ಯನ ವರ್ತನೆ ಅಥವಾ ಮಾತು ಆಯಾ ಸಂದರ್ಭದಲ್ಲಿನ ಆತನ ಮನಃಸ್ಥಿತಿಗೆ ಅನುಗುಣವಾಗಿ ಬದಲಾಗುತ್ತಿರುತ್ತದೆ.

ಮಾತಿನಲ್ಲಿ ಬಳಕೆಯಾಗುವ ಶಬ್ದಗಳು ಅರ್ಥದಷ್ಟೇ ಅಪಾರ್ಥವನ್ನೂ ಹೊರಡಿಸಬಲ್ಲವು. ಈ ಕಾರಣದಿಂದಲೇ ಮಾನವ ಸಂಬಂಧಗಳಲ್ಲಿ ಪ್ರೀತಿ-ಪ್ರೇಮದಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ದ್ವೇಷ-ಅಸೂಯೆಗಳನ್ನು ಕಾಣುತ್ತೇವೆ. ತನಗೆ ದೊರಕದಿರುವ ಅಮೂಲ್ಯವಾದ ಸಂಗತಿಯೊಂದು ನಮ್ಮ ಆಪ್ತರ ಪಾಲಾದಾಗ ಮನುಷ್ಯ ಹೊಟ್ಟೆಕಿಚ್ಚನ್ನು ಅನುಭವಿಸುತ್ತಾನೆ. ಯಾವುದಾದರೂ ಕ್ಷುಲ್ಲಕವಾದ ಕಾರಣಗಳಿಗಾಗಿ ಪರಸ್ಪರರಲ್ಲಿ ವಿರಸ ಹುಟ್ಟಿಕೊಳ್ಳುತ್ತದೆ. ಈ ವಿರಸ ಎನ್ನುವುದು ವಿಷವಿದ್ದಂತೆ. ಇದಕ್ಕೆ ಸಂಬಂಧವೊಂದು ಬಲಿಯಾದರೆ ಇಬ್ಬರೂ ವ್ಯಕ್ತಿಗಳು ನೋವುಣ್ಣುತ್ತಾರೆ. ಕೆಲವು ಸಂದರ್ಭಗಳಲ್ಲಿ ಇದು ವೈಯಕ್ತಿಕ ನೆಲೆಯನ್ನು ಮೀರಿ ಸಾಮುದಾಯಿಕ ಹಂತಕ್ಕೂ ಹೋಗುತ್ತದೆ. ಆಗ ಇಬ್ಬರು ವ್ಯಕ್ತಿಗಳ ನಡುವಿನ ಅಸಮಾಧಾನದಿಂದ ಇಡೀ ಊರು ದ್ವೇಷದ ದಳ್ಳುರಿಗೆ ಸಿಲುಕಿ ಎರಡು ಹೋಳಾಗುತ್ತದೆ. ಸದಾ ಕಾಲ ಜಗಳ-ಬಡಿದಾಟಗಳಿಂದ ಆ ಊರಿನ ಶಾಂತಿಯೇ ನಾಶವಾಗುತ್ತದೆ. ಸುಖ- ಸಂತೋಷದಿಂದ ನೆಮ್ಮದಿ ಕಾಣಬೇಕಾದ ಸಮುದಾಯವು ಪರಸ್ಪರರನ್ನು ನೋಯಿಸುವ ಜಿದ್ದಿಗೆ ಬಿದ್ದು ಇಡೀ ಊರನ್ನೇ ಸಂಕಟದ ಬೆಂಕಿಯಲ್ಲಿ ಬೀಳಿಸುತ್ತದೆ. ಮಹಾಭಾರತದ ದಾಯಾದಿ ಕಲಹವೇ ಇದಕ್ಕೆ ಉದಾಹರಣೆ.

ದುರ್ಯೋಧನ-ಭೀಮರ ವೈಯಕ್ತಿಕ ದ್ವೇಷ ಪಾಂಡವ-ಕೌರವರ ನಡುವೆ ರೋಷದ ದಳ್ಳುರಿಯನ್ನೇ ಸೃಷ್ಟಿಸಿ ಆ ಕಾಲದ ಸಮಸ್ತ ಭರತ ಖಂಡದಲ್ಲಿರುವ ಕ್ಷತ್ರಿಯರೆಲ್ಲರನ್ನೂ ಯುದ್ಧದ ಬೆಂಕಿಗೆ ಆಹುತಿ ಮಾಡಿತು.

ಪ್ರಾಚೀನ ಕಾವ್ಯಗಳು ನಮಗೆ ಪಾಠವಾಗಬೇಕು. ಮನುಷ್ಯ ಸಂಬಂಧಗಳಲ್ಲಿ ದ್ವೇಷಭಾವನೆ ಹುಟ್ಟಿದರೆ ಅದನ್ನು ಬೆಳೆಯಗೊಡಬಾರದು. ಆಗಾಗ ಪ್ರೀತಿ-ವಾತ್ಸಲ್ಯದ ಮಳೆ ಸುರಿಯುತ್ತಿದ್ದರೆ ಅಹಿತಕರ ಭಾವದ ಬೆಂಕಿ ನಂದಿಹೋಗುತ್ತದೆ. ಜಗಳ-ಮುನಿಸು ಇವೆಲ್ಲವೂ ಮಾನವನ ಸಹಜಭಾವಗಳು. ಆದರೆ ಇಂತಹ ನಕಾರಾತ್ಮಕ ಸಂಗತಿ ಘಟಿಸಿದಾಗ ತಾಳ್ಮೆ ಬೇಕೇ ಬೇಕು. ಸ್ವಲ್ಪ ದಿನಗಳ ಕಾಲ ತಟಸ್ಥವಾಗಿದ್ದರೆ ಮನಸ್ಸು ತಿಳಿಯಾಗುತ್ತದೆ. ಕೊಳದಲ್ಲಿ ಕಲ್ಲು ಬಿದ್ದು ಅಲೆಗಳು ಚೆಲ್ಲಾಪಿಲ್ಲಿಯಾದಾಗ ಕೆಸರು ಮೇಲೆದ್ದು ಬಂದು ರಾಡಿಯಾಗಿರುತ್ತದೆ. ಆದರೆ ಇದು ತಾತ್ಕಾಲಿಕ ಹೊಲಸು. ಸ್ವಲ್ಪ ಕಾಲ ಸುಮ್ಮನೆ ಇದ್ದರೆ ಕೆಸರು ಮತ್ತೆ ತಳ ಸೇರುತ್ತದೆ. ಮೇಲಿನ ನೀರು ತಿಳಿಯಾಗುತ್ತದೆ. ಮತ್ತೆ ಶುದ್ಧವಾದ ಸಲಿಲ ನಮ್ಮ ಬಳಕೆಗೆ ಪ್ರಾಪ್ತವಾಗುತ್ತದೆ. ಸಿಟ್ಟಿನ ವಶಕ್ಕೆ ಮನಸ್ಸನ್ನು ಕೊಟ್ಟರೆ ಅದು ಅನಾಹುತವನ್ನೇ ಸೃಷ್ಟಿಸುತ್ತದೆ. ಆಗ ಕೆಲವೊಂದು ಅನಾಹುತಗಳು ಸಂಭವಿಸಬಹುದು. ಅವುಗಳ ಪರಿಣಾಮಗಳು ಶಾಶ್ವತವಾದ ಹಾನಿಯನ್ನು ಉಂಟುಮಾಡಬಹುದು. ಬದುಕಿಡೀ ಒಬ್ಬರ ಮುಖ ಒಬ್ಬರು ನೋಡಿಕೊಳ್ಳದ ರಕ್ತಸಂಬಂಧಿಗಳು ನಮ್ಮ ನಡುವೆ ಇದ್ದಾರೆ. ಸಣ್ಣ-ಪುಟ್ಟ ಕಾರಣಗಳಿಗಾಗಿ ವಿರಸ ಎಂಬ ವಿಷ ಕುಡಿದು ಕಹಿಯಾಗಿಯೇ ಆಯುಷ್ಯವನ್ನು ಕಳೆದವರಿದ್ದಾರೆ. ಕೆಲವು ಸಂದರ್ಭಗಳಲ್ಲಿ ತಾವು ಯಾವ ಕಾರಣಕ್ಕಾಗಿ ಜಗಳ ಆಡಿದೆವು ಎಂಬುದು ಕೂಡ ನೆನಪಿನಲ್ಲಿ ಉಳಿಯದೇ ಅಂತಹುದರಲ್ಲೂ ದ್ವೇಷವನ್ನು ತಲೆತಲಾಂತರವಾಗಿ ಮುಂದುವರೆಸಿಕೊಂಡು ಹೋಗುವ ಮೂರ್ಖರೂ ಇದ್ದಾರೆ.

ನಕಾರಾತ್ಮಕ ಭಾವಗಳಾದ ದ್ವೇಷ-ಅಸೂಯೆ-ಕೋಪ-ಆಕ್ರೋಶಗಳು ಮೊದಲು ಅದನ್ನು ಹೊತ್ತ ಮನಸ್ಸನ್ನು ವಿಷಮಯವಾಗಿಸುತ್ತವೆ. ಮನಸ್ಸು ವಿಷವಾದಾಗ ಆ ವ್ಯಕ್ತಿಯ ದೇಹದ ಮೇಲೆಯೂ ಅದು ಕಹಿಯಾದ ಪರಿಣಾಮವನ್ನು ಬೀರುತ್ತದೆ. ಆತನ ಆರೋಗ್ಯವೂ ಏರು-ಪೇರಾಗುತ್ತದೆ. ಅದಕ್ಕಾಗಿಯೇ ಚೆಂಬೆಳಕಿನ ಕವಿ ಕಣವಿಯವರು ಹೀಗೆ ಪ್ರಾರ್ಥಿಸುತ್ತಾರೆ: 'ಅಲ್ಲಸಲ್ಲದ ವಿಷಯ ವಿಪರೀತ ಭಾವನೆಯ ವಿಷಗಾಳಿ ಎನ್ನ ಬಳಿ ಸುಳಿಯದಿರಲಿ ಸೊಲ್ಲುಸೊಲ್ಲಿಗೆ ಪರರನಣಕಿಸುವ ಕೆಣಕಿಸುವ ಅಶಿವ ನುಡಿ ಎನ್ನ ಕಿವಿ ಸೇರದಿರಲಿ.'

ನಕಾರಾತ್ಮಕ ಭಾವವು ನಮ್ಮ ಮನಸ್ಸಿಗೆ ಬರುವುದೆಷ್ಟು ಸಹಜವೋ ಅಷ್ಟೇ ಸಹನೆಯಿಂದ ನಾವದನ್ನು ದೂರ ತಳ್ಳಲಿಕ್ಕೆ ಪ್ರಯತ್ನಿಸಬೇಕು. ನಮ್ಮ ಸಂಬಂಧಗಳಲ್ಲಿ ನಾವು ಪರಸ್ಪರರಿಗೆ ಎಷ್ಟೊಂದು ಪ್ರೀತಿ-ಮಮತೆಗಳನ್ನು ಕೊಟ್ಟುಕೊಂಡಿರುತ್ತೇವೆ. ಆ ಮಧುರ ನೆನಪಿನ ಸಿಹಿಯನ್ನು ನೆನಪಿಸಿಕೊಂಡರೆ ಧನಾತ್ಮಕ ಭಾವ ತಾನೇತಾನಾಗಿ ಉಕ್ಕುತ್ತದೆ. ಆಗ ವಿಷಮ ವಿಪರೀತ ಭಾವಗಳು ದೂರವಾಗುತ್ತವೆ. ವೀ. ಸೀತಾರಾಮಯ್ಯ ಹೇಳುವಂತೆ 'ಮೃದು ಸೌಹಾರ್ದವು ನೋವಿಗೆ ಕರಗದೆ ಸಾಹ್ಯಕೆ ನುಗ್ಗದೆ ನಿಂತೀತೆ?'

ಕೋಪದಲಿ ಬಿರುಸುಗೊಂಡ ಮನಸ್ಸು ಮತ್ತೆ ಸೌಹಾರ್ದ ಹುಟ್ಟಿದಾಗ ಮೃದುವಾಗುತ್ತದೆ. ಒಬ್ಬರನ್ನೊಬ್ಬರು ಅರಿತುಕೊಳ್ಳುವುದು ಸುಲಭವಾಗುತ್ತದೆ. ದುಃಖವನ್ನು ಹಂಚಿಕೊಂಡಾಗ ಹಗುರವಾದಂತೆ ಸಂತೋಷ ಹಂಚಿಕೊಂಡು ವೃದ್ಧಿಯಾಗುತ್ತದೆ. ನಮ್ಮವರಿಗಾಗಿ ನಾವು ಸ್ಪಂದಿಸತೊಡಗಿದಾಗ ಮನಸ್ಸುಗಳೆಲ್ಲ ಶ್ರುತಿಗೊಂಡ ವೀಣೆಯಂತಾಗಿ ಜೀವ ಜೀವಾಳದಲಿ ಖುಷಿಯ ಓಂಕಾರ ಮೊಳಗುತ್ತದೆ. ಮಮತೆ ಮಳೆಗರೆದರೆ ಎಂಥ ಬರಡು ಎದೆಯಲ್ಲಿಯೂ ಚೈತನ್ಯದ ಬಂಗಾರ ತೆನೆಯೊಡೆಯುತ್ತದೆ. ತಾಳ್ಮೆಯ ಕೋಲೂರಿಕೊಂಡು ಮೆಲ್ಲಗೆ ಹೆಜ್ಜೆಯಿಡುವ ಮೂಲಕ ಸಂಬಂಧಗಳ ನಾಜೂಕು ಹಾದಿಯಲ್ಲಿ ನಡೆಯಬೇಕಿದೆ. ಏಕೆಂದರೆ ಸಣ್ಣ ಅಜಾಗರೂಕತೆಯಿಂದ ಕೈ ಜಾರಿ ಒಡೆದುಕೊಂಡರೆ ಅಪರೂಪದ ಬಂಧಗಳು ಶಿಥಿಲಗೊಂಡು ಬಾಳಿನರಮನೆ ನೆಲಕ್ಕುರುಳಿ ಒಣಮರಭೂಮಿಯಾದೀತು.

ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ರೆಸಿಮಿಕ್ ಮಿಶ್ರಣ

ರಸಾಯನ ಶಾಸ್ತ್ರ

54) ಯಾವ ಸಂಯುಕ್ತಗಳಿಗೆ 'ದ್ಯುತಿ ಪಟುತ್ವ ಸಂಯುಕ್ತಗಳು' ಎನ್ನುವರು?

ಉತ್ತರ:- ಕೆಲವು ಸಂಯುಕ್ತಗಳು ಸಮತಲದ್ರುವೀಕೃತ ಬೆಳಕನ್ನು (ಸಾಮಾನ್ಯ ಬೆಳಕನ್ನು ನಿಕೋಲ್ ಅಶ್ರಗದ ಮೂಲಕ ಹಾಯಿಸಿ ಪಡೆದದ್ದು) ತಿರುಗಿಸುವ ಗುಣವನ್ನು ಪಡೆದಿರುತ್ತದೆ. ಅಂತಹ ಸಂಯುಕ್ತಗಳಿಗೆ 'ದ್ಯುತಿ ಪಟುತ್ವ ಸಂಯುಕ್ತಗಳು' ಎನ್ನುವರು. ಈ ಸಮತಲ ದ್ರುವಿಕೃತ ಬೆಳಕು ತಿರುಗಿದ ಕೋನವನ್ನು 'ಪೋಲಾರಿಮೀಟರ್' ಎನ್ನುವ ಸಾಧನದಿಂದ ಅಳೆಯುತ್ತಾರೆ.

55) ಕೈರಲ್ ಮತ್ತು ಕೈರಾಲಿಟಿ ಬಗ್ಗೆ ಬರೆಯಿರಿ

ಉತ್ತರ:- ಹಲವಾರು ವಸ್ತುಗಳ ಬಿಂಬವಿನ್ಯಾಸಗಳನ್ನು ಆದ್ಯಾರೋಪಿಸಲು (supreimposable) ಸಾಧ್ಯವಿಲ್ಲ. ಉದಾ; ನಮ್ಮ ಎಡಗೈ ಮತ್ತು ಬಲಗೈ ಒಂದೇ ರೀತಿಯಾಗಿವೆ. ಆದರೆ ನಮ್ಮ ಎಡಗೈಯನ್ನು ಬಲಗೈ ಮೇಲಿಟ್ಟರೆ ಸಹಗಟಿಸುವುದಿಲ್ಲ (coincide) ಬಿಂಬ ವಿನ್ಯಾಸಗಳನ್ನು ಆದ್ಯಾರೋಪಿಸಲು ಸಾಧ್ಯವಿಲ್ಲದ ಗುಣಗಳನ್ನು (ನಮ್ಮ ಎರಡೂ ಕೈಗಳಂತೆ) "ಅಸಮ್ಮಿತಿ"/ಕೈರಲ ಎನ್ನುವರು ಮತ್ತು ಆ ಗುಣಕ್ಕೆ ಕೈರಾಲಿಟಿ ಎನ್ನುವರು.

56) ಯಾವುದಕ್ಕೆ ರೆಸಿಮಿಕ್ ಮಿಶ್ರಣ (racemic mixture) ಅಥವಾ ರೆಸಿಮಿಕ್ ಪರಿವರ್ತನೀಕರಣ (racemic modification) ಎನ್ನುವರು?

ಉತ್ತರ:- ಕರಗುವ ಬಿಂದು, ಕುದಿಯುವ ಬಿಂದು, ವಿಲೀನತೆ ಮತ್ತು ವಕ್ರೀಭವನ ಸೂಚ್ಯಾಂಕ ಮುಂತಾದವುಗಳಲ್ಲಿ ಒಂದೇಯಾಗಿದ್ದು, ಕೇವಲ ಸಮತಲ ದೃವೀಯ ಬೆಳಕನ್ನು ತಿರುಗಿಸುವುದಕ್ಕೆ ಸಂಬಂಧಿಸಿದಂತೆ ಬೇರೆಯಾಗಿರುತ್ತದೆ ಅಷ್ಟೆ. ಅವುಗಳಲ್ಲಿ ಒಂದು ಬಲಭ್ರಾಮಕ (dextro – rotatory) ಮತ್ತು ಇನ್ನೊಂದು ಎಡಭ್ರಾಮಕ (laevo-rotatory) ಎರಡು ಪ್ರತ್ಯಂಗಿಗಳ (Enatiomers) ಸಮ ಪ್ರಮಾಣದ ಮಿಶ್ರಣದಲ್ಲಿ ಒಂದು ಸಮಾಂಗಿಯ ಭ್ರಮಣೆಯನ್ನು ಇನ್ನೊಂದು ಸಮಾಂಗಿಯು ರದ್ದುಪಡಿಸುವುದರಿಂದ ಅವು ಶೂನ್ಯ ದ್ಯುತಿ ಭ್ರಮಣೆಯನ್ನು ಹೊಂದಿರುತ್ತದೆ. ಅಂತಹ ಮಿಶ್ರಣವನ್ನು ರೆಸಿಮಿಕ್ ಮಿಶ್ರಣ (racemic mixture) ಅಥವಾ ರೆಸಿಮಿಕ್ ಪರಿವರ್ತನೀಕರಣ (racemic modification) ಎನ್ನುವರು.

57) ಯಾವುದನ್ನು β-ವರ್ಜ್ಯನ ಕ್ರಿಯೆ ಎನ್ನುವರು?

ಉತ್ತರ:- β-ಹೈಡ್ರೋಜನ್ ಇರುವ ಹ್ಯಾಲೋ ಆಲ್ಕೇನ್‌ನ್ನು ಮದ್ಯಸಾರಯುಕ್ತ ಪೊಟಾಷಿಯಂ ಹೈಡ್ರಾಕ್ಸೈಡ್ ದ್ರಾವಣದೊಂದಿಗೆ ಕಾಯಿಸಿದಾಗ β- ಕಾರ್ಬನ್‌ನೊಂದಿಗೆ ಇರುವ ಹೈಡ್ರೋಜನ್ ಮತ್ತು α-ಕಾರ್ಬನ್‌ನೊಂದಿಗಿರುವ ಹ್ಯಾಲೋಜನ್ ಪರಮಾಣು ವರ್ಜ್ಯನೆಗೊಂಡು ಆಲ್ಕೀನ್ ಉತ್ಪನ್ನ ಉಂಟಾಗುತ್ತದೆ. ಈ ವರ್ಜ್ಯನ ಕ್ರಿಯೆಯಲ್ಲಿ β-ಹೈಡ್ರೋಜನ್ ಪರಮಾಣುವು ಪಾಲ್ಗೊಳ್ಳುವುದರಿಂದ ಇದನ್ನು β-ವರ್ಜ್ಯನ ಕ್ರಿಯೆ ಎನ್ನುವರು.

58) ಯಾವುದನ್ನು 'ಬಹುಹ್ಯಾಲೋಜನ್ ಸಂಯುಕ್ತಗಳು' ಎನ್ನುವರು?

ಉತ್ತರ:- ಒಂದಕ್ಕಿಂತ ಹೆಚ್ಚು ಹ್ಯಾಲೋಜನ್ ಪರಮಾಣುಗಳನ್ನು ಹೊಂದಿರುವ ಕಾರ್ಬನ್ ಸಂಯುಕ್ತಗಳನ್ನು 'ಬಹುಹ್ಯಾಲೋಜನ್ ಸಂಯುಕ್ತಗಳು' ಎನ್ನುವರು ಇವುಗಳಲ್ಲಿ ಹೆಚ್ಚಿನವು ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಉಪಯುಕ್ತವಾಗಿವೆ.

59) ಯಾಕೆ ಕ್ಲೋರೋಫಾರ್ಮ್ ದಪ್ಪ ಬಣ್ಣದ ಬಾಟಲಿಗಳಲ್ಲಿ ಸಂಪೂರ್ಣವಾಗಿ ತುಂಬಿಸಿ ಶೇಖರಿಸುತ್ತಾರೆ?

ಉತ್ತರ:- ಕ್ಲೋರೋಫಾರ್ಮ್ ಬೆಳಕಿನ ಸಾನಿಧ್ಯದಲ್ಲಿ ಗಾಳಿಯೊಂದಿಗೆ ನಿಧಾನವಾಗಿ ಉತ್ಕರ್ಷಿಸಿ ಕಾರ್ಬೊನಿಲ್ ಕ್ಲೋರೈಡ್ ಎಂಬ ಅತ್ಯಂತ ವಿಷಕಾರಿಯಾದ ಅನಿಲವನ್ನು ಬಿಡುಗಡೆ ಮಾಡುತ್ತದೆ. (ಇದನ್ನು 'ಫಾಸ್ಜಿನ್' ಎಂತಲೂ ಕರೆಯುತ್ತಾರೆ). ಆದ್ದರಿಂದ ಇದನ್ನು ದಪ್ಪ ಬಣ್ಣದ ಬಾಟಲಿಗಳಲ್ಲಿ ಸಂಪೂರ್ಣವಾಗಿ ತುಂಬಿಸಿ ಶೇಖರಿಸುತ್ತಾರೆ ಹಾಗೆ ಮಾಡುವ ಮೂಲಕ ಗಾಳಿಯ ಸಂಪರ್ಕವಿಲ್ಲದಂತೆ ನೋಡಿಕೊಳ್ಳಲಾಗುತ್ತದೆ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ರಸಾಯನಶಾಸ್ತ್ರದ ಆಂಗ್ಲಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಂತೋಷಕ್ಕೆ ಕೆಲವು ಸೂತ್ರಗಳು...

ರಮ್ಯಾ ಶ್ರೀಹರಿ

ಸರಳತೆಯೇ ಸಂತೋಷದ ಸೂತ್ರ. ಆದರೆ ಸರಳತೆಯನ್ನು ಸಾಧಿಸುವುದು ಮಾತಿನಲ್ಲಿ ಹೇಳಿದಷ್ಟು ಸರಳವಾದ ಕೆಲಸವಲ್ಲ. ನಾವು ನಮ್ಮ ಜೀವನವನ್ನು ಅನವಶ್ಯಕವಾಗಿ ಸಂಕೀರ್ಣಗೊಳಿಸಿಕೊಂಡಿರುವುದರಿಂದಲೇ ಸಂತೋಷ ಎನ್ನುವುದು ಗಗನಕುಸುಮದಂತೆ ಕಾಣುತ್ತಿರುತ್ತದೆ.

ನಾವೇಕೆ ನಮ್ಮ ಬದುಕನ್ನು, ನಮ್ಮ ವ್ಯಕ್ತಿತ್ವವನ್ನು ಇಷ್ಟು ಸಂಕೀರ್ಣಗೊಳಿಸಿಕೊಂಡಿರುತ್ತೇವೆ? ಉತ್ತರ ಸರಳವಾದದ್ದಲ್ಲ. ಬಹುಶಃ ನಮ್ಮ ಅವಶ್ಯಕತೆಗಳೂ ಅಷ್ಟು ಸರಳವಾಗಿಲ್ಲವೇನೋ? ಆಹಾರ, ನಿದ್ರೆ, ರಕ್ಷಣೆಗಳನ್ನು ಮೀರಿದ ಅವಶ್ಯಕತೆಗಳು ಮನುಷ್ಯರಿಗಿವೆ. ಬದುಕಿನಲ್ಲಿನ ನಮ್ಮ ಅಪೇಕ್ಷೆಗಳೂ ಸುಲಭವಾಗಿ ನೆರವೇರುವಂಥದ್ದಲ್ಲ. ಸವಾಲುಗಳೇ ನಮ್ಮ ಬದುಕನ್ನು ರೋಚಕವಾಗಿಸುವುದು. ಸವಾಲುಗಳೇ ಇರದ ದಾರಿ ನೀರಸವೆನಿಸುತ್ತದೆ. ಹಾಗಾಗಿ ಸುಲಭವಾಗಿ ನೆರವೇರುವಂಥದ್ದನ್ನು ನಾವು ಬಯಸುವುದೇ ಇಲ್ಲ! ನಾವು ಬಯಸುವಂಥದ್ದು ಹೇಗಿರುತ್ತವೆ? ನಮ್ಮ ನಿದ್ದೆ ಕೆಡಿಸುವಂತಹ, ನಮ್ಮನ್ನು ಚಡಪಡಿಸುವಂತೆ ಮಾಡುವ, ಈಗಿರುವ ನಮ್ಮ ಬದುಕಿನಿಂದ ಬಹು ದೂರಹೋಗಿ ಸಪ್ತಸಾಗರಗಳನ್ನು ದಾಟಿ ಪಡೆಯಬೇಕಾಗಿರುವ ಏನೋ ಅಮೂಲ್ಯವಾದಂಥದ್ದು. ಹೀಗೆ ನಮ್ಮ ಗುರಿಗಳೇ ನಾವು ಕಠಿಣವಾದ ಹಾದಿಯನ್ನು ಸವೆಸುವಂತಹ ಅನಿವಾರ್ಯತೆಯನ್ನು ತಂದಿಟ್ಟುಬಿಡುತ್ತವೆ. ನಮ್ಮ ಆಸೆಗಳಲ್ಲಿ ಏನೂ ತಪ್ಪಿಲ್ಲ ನಿಜ; ಆದರೆ ಒಂದು ಆಸೆ, ಒಂದು ಕನಸು ಕೈಗೂಡಿದ ತಕ್ಷಣವೇ ಮತ್ತೊಂದರ ಬೆನ್ನಟ್ಟಿ ಹೋಗುತ್ತೇವಲ್ಲ, ಈ ಸ್ವಭಾವಕ್ಕೆ ಕಾರಣವೇನು?

'ಕಣ್ಮುಂದೆ ಇರೋದು ನಿಕೃಷ್ಟ, ಕಣ್ಮರೆಯಾಗಿ ದೂರದಲ್ಲೆಲ್ಲೋ ಇದ್ದುಕೊಂಡು ನಮ್ಮನ್ನು ಕೆಣಕುವುದೇ ಶ್ರೇಷ್ಠ' ಎಂದುಕೊಳ್ಳುವ ನಮ್ಮ ಜಾಯಮಾನವೇ ಬದುಕಿನ ಕುರಿತು ಅಚ್ಚರಿಯನ್ನು, ಕುತೂಹಲವನ್ನು ಕಾಪಾಡುತ್ತದೆ. ಹಾಗಿಲ್ಲದೇ 'ನಾನು ಯೋಜಿಸಿಕೊಂಡಿದ್ದೆಲ್ಲವನ್ನೂ ಮಾಡಿ ಮುಗಿಸಿದ್ದೇನೆ, ಇನ್ನು ಮಾಡಬೇಕಾದ್ದು ಏನೂ ಇಲ್ಲ' ಎಂದು ಭಾವಿಸಿಕೊಂಡುಬಿಟ್ಟರೆ ಬದುಕಿನ ಬಗ್ಗೆ ಆಸಕ್ತಿಯೂ ಪ್ರೀತಿಯೂ ಕಳೆದುಹೋಗುತ್ತದೆ. ಹೀಗೆ ನಮ್ಮ ಜೀವನವನ್ನು ಸಂಕೀರ್ಣಗೊಳಿಸುವುದು ಮನುಷ್ಯನ ಸಾಹಸಪ್ರವೃತ್ತಿ, ಸವಾಲುಗಳನ್ನು ಇಷ್ಟಪಡುವ ಸ್ವಭಾವ; ಇದುವರೆಗೂ ಕಾಣದ್ದನ್ನು, ಕೇಳದ್ದನ್ನು, ಅನುಭವಿಸದ್ದನ್ನು ಹೊಂದಬೇಕೆನ್ನುವ ತುಡಿತ ಮತ್ತು ಎಲ್ಲವನ್ನೂ ಪ್ರಶ್ನಿಸುವ, ಎಲ್ಲದರ ಬಗ್ಗೆಯೂ ಚಿಂತಿಸುವ, ಎಲ್ಲದರ ಅರ್ಥ ಹುಡುಕುವ ಮೂಲಗುಣ.

ಹೀಗೆ ನಮ್ಮ ಬುದ್ಧಿಗೆ, ಅಸ್ತಿತ್ವಕ್ಕೆ ಸವಾಲೊಡ್ಡುವ ಕೆಲಸವನ್ನು ಮಾಡುವ ಪ್ರಚೋದನೆ ಇಲ್ಲದಿರುತ್ತಿದ್ದರೆ ನಾವು ಪ್ರಾಣಿಗಳಂತೆ ಸುಮ್ಮನೆ ಇರುತ್ತಿದ್ದೆವಷ್ಟೇ. ಪ್ರಾಣಿಗಳು ಸಂತೋಷವಾಗಿರುತ್ತವೋ ಇಲ್ಲವೋ ಗೊತ್ತಿಲ್ಲ; ಆದರೆ ಅವು 'ಸಂತೋಷವಾಗಿರುವುದು ಹೇಗೆ' – ಎಂಬ ಪ್ರಶ್ನೆಯನ್ನಂತೂ ಕೇಳಿಕೊಳ್ಳುವುದಿಲ್ಲ!

ನಮಗೆಲ್ಲರಿಗೂ ನಮ್ಮದೇ ಆದ ಸಂತೋಷದ ಕಲ್ಪನೆಗಳಿರುತ್ತವೆ. ಅವುಗಳಲ್ಲಿ ಮುಖ್ಯವಾದುವು: ಪ್ರಕೃತಿಯೊಂದಿಗೆ ನಿಕಟವಾದ ಸಂಬಂಧ ಹೊಂದಿದ ಅಕ್ಕರೆ ತುಂಬಿದ್ದ ಬಾಲ್ಯ, ಸುಗಮವಾಗಿ ಸಾಗುವ ಶೈಕ್ಷಣಿಕ ಪಯಣ, ಉತ್ತಮ ಉದ್ಯೋಗ, ಯಶಸ್ಸು, ಕೀರ್ತಿ, ಮನ್ನಣೆ, ಸಂತೃಪ್ತ ಕೌಟುಂಬಿಕ ಬದುಕು, ಆರೋಗ್ಯ, ದೇಶ–ವಿದೇಶಗಳನ್ನು ಸುತ್ತುವ ಅವಕಾಶಗಳು, ಸ್ನೇಹಮಯ ಸಂಬಂಧಗಳು, ಮನೆ, ವಾಹನ ಮುಂತಾದ ಸೌಕರ್ಯಗಳು... ಹೀಗೆ ಇನ್ನೂ ಕೆಲವು. ಇವುಗಳಲ್ಲಿ ಯಾವುದನ್ನೇ ಪಡೆಯುವ ದಾರಿಯಲ್ಲಿ ಎಡರುತೊಡರುಗಳು ಎದುರಾದರೂ 'ನಾನು ಸಂತೋಷವಾಗಿಲ್ಲವಲ್ಲ' ಎಂದು ಕೊರಗಲು ಶುರುಮಾಡುತ್ತೇವೆ. ನಮ್ಮ ಸಂತೋಷದ ಕಲ್ಪನೆಯೇ ನಮ್ಮ ಸಂತೋಷವನ್ನು ನಿಜವಾಗಿಯೂ ನಿಯಂತ್ರಿಸುವುದು ಹೌದು. ಹಾಗೆ ನೋಡಿದರೆ ನಮ್ಮ ಸಂತೋಷದ ಕಲ್ಪನೆಯೂ ಪೂರ್ತಿ ನಮ್ಮ ಸ್ವಂತದ್ದೇನಲ್ಲ. ಅದೂ ನಮಗೆ ಸಮಾಜವೇ ಕಟ್ಟಿಕೊಟ್ಟಿರುವ ಚಿತ್ರಣ. ಹಾಗಾಗಿ ಸಂತೋಷ ಎನ್ನುವುದು ಕೇವಲ ವೈಯಕ್ತಿಕವಾಗಿ ಸಾಧಿಸುವಂತಹದ್ದೇನಲ್ಲ; ಅದು ನಮ್ಮ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಪರಿಸ್ಥಿತಿಗಳಿಂದಲೂ ನಿರ್ಧಾರವಾಗುತ್ತದೆ. ಹೀಗಾಗಿ 'ನಮ್ಮ ಸಂತೋಷ ನಿಜವಾಗಲೂ ನಮ್ಮ ಕೈಯಲ್ಲಿದೆಯೇ?' ಎನ್ನುವ ಪ್ರಶ್ನೆಯೇಳುತ್ತದೆ.

ವಿಷಯ ಹೀಗಿದ್ದರೂ ನಮ್ಮ ಸಂತೋಷದ ಚಿತ್ರಣವನ್ನು ಆದಷ್ಟೂ ಸರಳವಾಗಿಟ್ಟುಕೊಳ್ಳುವ ನಿಟ್ಟಿನಲ್ಲಿ ಸಹಾಯಕವಾಗಬಲ್ಲ ಕೆಲವು ಅಂಶಗಳು ಹೀಗಿವೆ:

- ಮಹತ್ವಾಕಾಂಕ್ಷೆಗಳು ಗುರಿಸಾಧನೆಗೆ ಹೇಗೆ ಪ್ರೇರಕವೋ ಹಾಗೆ ಸಂತೋಷಕ್ಕೆ ಮಾರಕವೂ ಹೌದು. ವಾಸ್ತವಕ್ಕೆ ಸರಿಹೊಂದದ ಮಹತ್ವಾಕಾಂಕ್ಷೆಗಳನ್ನು ಮತ್ತೊಮ್ಮೆ ವಿಮರ್ಶಿಸುವುದು ಕ್ಷೇಮ; ಇಲ್ಲದಿದ್ದರೆ ಒತ್ತಡ ಖಂಡಿತ. ಗುರಿಗಳನ್ನು ಪ್ರಾಕ್ಟಿಕಲ್ ಆಗಿಟ್ಟುಕೊಳ್ಳುವುದು ಸಂತೋಷದ ಮೊದಲ ಮೆಟ್ಟಿಲು.
- 'ಜನರು ನನ್ನ ಬಗ್ಗೆ ಏನಂದುಕೊಳ್ಳುತ್ತಾರೆ' – ಎಂದು ಯೋಚಿಸುವುದರಿಂದ ಸಂತೋಷ ಸಾಯುತ್ತದೆ. ಜನರನ್ನು ಮೆಚ್ಚಿಸುವ ಭ್ರಮೆಯನ್ನು ಬಿಟ್ಟು ನಮ್ಮ ಅಂತರಂಗದ ದನಿಗೆ ಬೆಲೆ ಕೊಡಬೇಕು.
- ಸಂತೋಷವಾಗಿರುವುದು ಸಾಧ್ಯವಿದ್ದರೂ ಸದಾ ನಕಾರಾತ್ಮಕ ಭಾವಗಳನ್ನೇ ತೋರ್ಪಡಿಸುವ, ಎಲ್ಲದಕ್ಕೂ ಕೊರಗುವ, ಎಲ್ಲರ ವಿಷಯಕ್ಕೂ ಮೂಗು ತೂರಿಸುವ ಅತೃಪ್ತ ಜನರ ಸಹವಾಸವನ್ನು ಬಿಟ್ಟುಬಿಡುವುದರಿಂದ ತಲೆಯ ಮೇಲಿನ ಅಗಾಧ ಭಾರವನ್ನು ಇಳಿಸಿದಂತಾಗುತ್ತದೆ.
- ನಮ್ಮ ಬದುಕು ಸಂಪೂರ್ಣವಾಗಿ ನಮ್ಮ ನಿಯಂತ್ರಣದಲ್ಲಿಲ್ಲ. ನಮ್ಮ ಕೈಲಿರುವುದನ್ನು ಚೆನ್ನಾಗಿ ನಿರ್ವಹಿಸಿ, ಕೈಮೀರಿದ್ದನ್ನು ಒಪ್ಪಿಕೊಳ್ಳುವುದರಿಂದ ನೆಮ್ಮದಿ ತಾನಾಗೇ ಉಂಟಾಗುತ್ತದೆ.
- ಎಲ್ಲರ ಬದುಕು ಬೇರೆ ಬೇರೆ. ಎಲ್ಲರ ಹಾದಿಯೂ ವಿಭಿನ್ನ. ಹಾಗಾಗಿ ನಮ್ಮನ್ನು ಬೇರೆಯವರೊಂದಿಗೆ ಹೋಲಿಸಿಕೊಳ್ಳದಿರುವುದೇ ಒಳ್ಳೆಯದು. ತುಂಬಾ ಆದರ್ಶದ ಬದುಕು ನಡೆಸಬೇಕೆನ್ನುವುದೂ ಅಶಾಂತಿಗೆ ಕಾರಣವಾಗುತ್ತದೆ. ಅಪೂರ್ಣತೆಯನ್ನು, ಮಾಡಿದ ತಪ್ಪುಗಳನ್ನು, ನಮ್ಮಲ್ಲಿರುವ ದೋಷಗಳನ್ನು ಸಹಜವಾಗಿ ಸ್ವೀಕರಿಸುವುದೊಳಿತು.
- 'ನಾನೇನೂ ಅಲ್ಲ' ಎಂಬ ಕೀಳರಿಮೆ, 'ನಾನೇ ಎಲ್ಲ' ಎಂಬ ಅಹಂಭಾವದ ನಡುವಿನ ಸಮತೋಲನವೇ ಮುಖದ ಮೇಲಿನ ಮಾಸದ ನಗುವಿಗೆ ಕಾರಣ.
- ನಮ್ಮ ಮನಸ್ಸಿನ ಎಲ್ಲ ಕಿಟಕಿ–ಬಾಗಿಲುಗಳನ್ನು ತೆರೆದು, ನಮ್ಮ ಅಂತರ್ಯದ ಮಾತುಗಳನ್ನೆಲ್ಲಾ ಆಡಲು ಸಾಧ್ಯವಾಗುವಂತಹ ಒಬ್ಬ ವ್ಯಕ್ತಿಯಾದರೂ ನಮ್ಮ ಜೀವನದಲ್ಲಿರಲೇಬೇಕು.
- ಯಾವಾಗಲೂ ಸಂತೋಷವಾಗಿಯೇ ಇರಬೇಕೆನ್ನುವ ಆಗ್ರಹವನ್ನು ತೊರೆದು ಒಮ್ಮೊಮ್ಮೆ ದುಃಖದಲ್ಲಿ, ಅಶಾಂತಿಯಲ್ಲಿ ಇರುವುದಕ್ಕೂ ನಮಗೆ ನಾವೇ ಅನುಮತಿ ಕೊಟ್ಟುಕೊಳ್ಳಬೇಕು.
- ನಾವು ಮಾಡುವ ಕೆಲಸ ನಮ್ಮ ಸ್ವ-ಅಭಿವ್ಯಕ್ತಿಯೂ ಆಗಿದ್ದಾಗ 'ಸಮಾಜಕ್ಕೂ ನಾವೇನೋ ಕೊಡುತ್ತಿದ್ದೇವೆ' ಎನ್ನುವ ತೃಪ್ತಿ ಇರುತ್ತದೆ. ಅದು ಸುತ್ತಲಿನ ಪ್ರಪಂಚದೊಡನೆ ನಮ್ಮನ್ನು ಬೆಸೆಯುತ್ತದೆ. ಅರ್ಥಪೂರ್ಣವೂ ಮೌಲ್ಯಯುತವೂ ಆದ ಕೆಲಸದಿಂದ ಸಿಗುವ ಆನಂದ ಎಲ್ಲ ಸಂತೋಷಕ್ಕೂ ಮಿಗಿಲಾದದ್ದು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಪ್ರತಿಭೆಯನ್ನು ದೇವರು ಕೊಟ್ಟಿರುತ್ತಾನೆ, ವಿನಯವಂತರಾಗಿರಿ. ಖ್ಯಾತಿಯನ್ನು ತಂದುಕೊಡುವವನು ಮನುಷ್ಯ, ಕೃತಜ್ಞರಾಗಿರಿ. ಅಹಂಕಾರವು ಸ್ವಯಂದತ್ತವಾದುದಾಗಿರುತ್ತದೆ, ಜಾಗರೂಕರಾಗಿರಿ.

–ಜಾನ್ ವುಡನ್

ಪಾಕಿಸ್ತಾನದ ರಾಜಕೀಯ ಬಿಕ್ಕಟ್ಟು ಪ್ರಜಾಸತ್ತೆಯ ಉಳಿವು ತುರ್ತು ಅಗತ್ಯ

ಪಾಕಿಸ್ತಾನದಲ್ಲಿ ಸೃಷ್ಟಿಯಾಗಿರುವ ರಾಜಕೀಯ ಬಿಕ್ಕಟ್ಟು ಭಾರತಕ್ಕೆ ಮತ್ತು ಇಡೀ ಜಗತ್ತಿಗೆ ಕಳವಳಕಾರಿ ವಿದ್ಯಮಾನ. 2018ರಲ್ಲಿ ಪ್ರಜಾಸತ್ತಾತ್ಮಕವಾಗಿ ಅಧಿಕಾರಕ್ಕೆ ಏರಿದ ಇಮ್ರಾನ್ ಖಾನ್ ನೇತೃತ್ವದ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳು ಮಂಡಿಸಿದ ಅವಿಶ್ವಾಸ ನಿರ್ಣಯವು ರಾಜಕೀಯ ಕ್ಷೋಭೆಗೆ ಕಾರಣವಾಗಿದೆ. ಆ ದೇಶದ ಸಂಸತ್ತು ನ್ಯಾಷನಲ್ ಅಸೆಂಬ್ಲಿಯಲ್ಲಿ, ಅವಿಶ್ವಾಸ ನಿರ್ಣಯದ ಮೇಲೆ ಭಾನುವಾರ ಚರ್ಚೆ ನಡೆಯಬೇಕಿತ್ತು. ಆದರೆ, ಇಮ್ರಾನ್ ಅವರ ನಿಷ್ಠರಾಗಿರುವ ಉಪ ಸ್ಪೀಕರ್ ಖಾಸಿಂ ಸೂರಿ ಅವರು ಅವಿಶ್ವಾಸ ನಿರ್ಣಯವೇ ಅಸಾಂವಿಧಾನಿಕ ಎಂದು ಅದನ್ನು ಸ್ವೀಕರಿಸುವುದಕ್ಕೆ ಒಪ್ಪಲಿಲ್ಲ. ಇಮ್ರಾನ್ ನೇತೃತ್ವದ ಸರ್ಕಾರಕ್ಕೆ ಸಂಸತ್ತಿನಲ್ಲಿ ಬಹುಮತ ಇಲ್ಲ ಎಂಬುದು ಅದಕ್ಕೂ ಮೊದಲೇ ನಿಚ್ಚಳವಾಗಿತ್ತು. 342 ಸದಸ್ಯ ಬಲದ ಸಂಸತ್ತಿನಲ್ಲಿ ಸರಳ ಬಹುಮತಕ್ಕೆ 172 ಸದಸ್ಯರ ಬೆಂಬಲ ಬೇಕು. ಇಮ್ರಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್ ಪಕ್ಷದ ಮಿತ್ರ ಪಕ್ಷವಾಗಿದ್ದ ಮುತ್ತಹಿದಾ ಖ್ವಾಮಿ ಮೂವ್‌ಮೆಂಟ್–ಪಾಕಿಸ್ತಾನ ಪಕ್ಷವು ವಿರೋಧ ಪಕ್ಷಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ಸೂಚಿಸಿತ್ತು. ಆದದ್ದರಿಂದಲೇ ಇಮ್ರಾನ್ ನೇತೃತ್ವದ ಸರ್ಕಾರವು ಸಂಸತ್ತಿನಲ್ಲಿ ಬಹುಮತ ಕಳೆದುಕೊಂಡಿತ್ತು.

ಪಾಕಿಸ್ತಾನವು ಮತ್ತೆ ನಿರಂಕುಶ ಆಳ್ವಿಕೆಗೆ ಒಳಗಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆಯನ್ನು ಅಲ್ಲಿನ ರಾಜಕೀಯ ಪಕ್ಷಗಳು ಮತ್ತು ಸುಪ್ರೀಂ ಕೋರ್ಟ್ ಪ್ರದರ್ಶಿಸಬೇಕು

ವಿರೋಧ ಪಕ್ಷಗಳ ಸದಸ್ಯ ಬಲವು 177ಕ್ಕೆ ಏರಿದರೆ, ಸರ್ಕಾರದ ಬಲವು 164ಕ್ಕೆ ಕುಸಿದಿದೆ. ಹಾಗಾಗಿಯೇ ಅವಿಶ್ವಾಸ ನಿರ್ಣಯವನ್ನು ಎದುರಿಸುವ ಬದಲಿಗೆ ಒಳದಾರಿಗಳನ್ನು ಕಂಡುಕೊಳ್ಳಲು ಇಮ್ರಾನ್ ಯತ್ನಿಸಿದ್ದಾರೆ. ಸಂಸತ್ತನ್ನು ವಿಸರ್ಜಿಸುವಂತೆ ಇಮ್ರಾನ್ ಮಾಡಿದ ಶಿಫಾರಸನ್ನು ಅಧ್ಯಕ್ಷ ಆರಿಫ್ ಅಲ್ವಿ ಅವರು ಅನುಮೋದಿಸಿದ್ದಾರೆ. ಇದೆಲ್ಲವೂ ಪ್ರಜಾಪ್ರಭುತ್ವವನ್ನು ಹಳಿ ತಪ್ಪಿಸುವ ಚಟುವಟಿಕೆಗಳು ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತದೆ. ಸ್ವಾತಂತ್ರ್ಯಾನಂತರದ ಮೂರು ದಶಕಕ್ಕೂ ಹೆಚ್ಚು ಕಾಲ ಸೇನಾಡಳಿತದಲ್ಲಿ ಕಳೆದ ದೇಶವೊಂದರ ಪ್ರಜಾಸತ್ತಾತ್ಮಕ ಸರ್ಕಾರವು ಈ ರೀತಿಯಲ್ಲಿ ನಡೆದುಕೊಂಡಿರುವುದು ವಿಷಾದನೀಯ. ಆ ದೇಶದ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತವಾಗಿ ವಿಷಯವನ್ನು ಕೈಗೆತ್ತಿಕೊಂಡು ವಿಚಾರಣೆ ನಡೆಸುತ್ತಿದೆ. ಕೋರ್ಟ್‌ನ ಮುಂದಿನ ತೀರ್ಪು ಪ್ರಜಾಸತ್ತೆಯನ್ನು ಉಳಿಸುವ ದಿಶೆಯಲ್ಲಿ ನೆರವಾಗಲಿ.

ಪಾಕಿಸ್ತಾನದಂತಹ ದೇಶದ ರಾಜಕೀಯ ಅಸ್ಥಿರತೆಯು ಭಾರತದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಅಪಾಯ ಹೆಚ್ಚು. ಪಾಕಿಸ್ತಾನವು ನಾಲ್ಕು ಬಾರಿ ಸೇನೆಯ ನಿರಂಕುಶ ಆಳ್ವಿಕೆಗೆ ಒಳಪಟ್ಟಿತ್ತು. ಚುನಾಯಿತ ಸರ್ಕಾರವನ್ನು ಪದಚ್ಯುತಗೊಳಿಸಿ, ಅಧಿಕಾರ ಪಡೆದುಕೊಳ್ಳಲು ಸೇನೆಯು ಹಲವು ಬಾರಿ ಯತ್ನಿಸಿತ್ತು. ಅಲ್ಲಿನ ಚುನಾಯಿತ ಸರ್ಕಾರವು ಸೇನೆಯ ಅಂಕುಶದಲ್ಲಿಯೇ ಇರುತ್ತದೆ ಎಂಬುದಕ್ಕೆ ಹಲವು ಉದಾಹರಣೆಗಳಿವೆ. ಸೇನೆಯ ಮುಖ್ಯಸ್ಥ ಮತ್ತು ಇಮ್ರಾನ್ ನಡುವಣ ಸಂಬಂಧ ಸೌಹಾರ್ದಯುತವಾಗಿಲ್ಲ ಎಂಬ ವದಂತಿಗಳು ನಾಲ್ಕೈದು ತಿಂಗಳ ಹಿಂದೆಯೇ ಪ್ರಕಟವಾಗಿದ್ದವು. ಪಾಕಿಸ್ತಾನದ ಪ್ರಭಾವಿ ಗುಪ್ತಚರ ಸಂಸ್ಥೆ ಐಎಸ್‌ಐ ಮುಖ್ಯಸ್ಥರ ನೇಮಕದ ವಿಚಾರದಲ್ಲಿ ಪ್ರಧಾನಿ ಮತ್ತು ಸೇನೆಯ ಮುಖ್ಯಸ್ಥರ ನಡುವೆ ಮುಸುಕಿನ ಗುದ್ದಾಟ ನಡೆದಿತ್ತು. ತಮ್ಮ ನಿಷ್ಠಾವಂತ ಫೈಜ್ ಹಮೀದ್ ಅವರನ್ನು ಆ ಹುದ್ದೆಗೆ ನೇಮಿಸಲು ಇಮ್ರಾನ್ ಬಯಸಿದ್ದರು. ಆದರೆ, ಸೇನಾ ಮುಖ್ಯಸ್ಥ ಜನರಲ್ ಖಮರ್ ಜಾವೇದ್ ಬಾಜ್ವಾ ಅವರು ಲೆ.ಜ. ನದೀಮ್ ಅಂಜುಂ ಅವರನ್ನು ನೇಮಿಸಿದರು. ಇಮ್ರಾನ್ ವಿರುದ್ಧದ ಅವಿಶ್ವಾಸ ನಿರ್ಣಯದ ಹಿಂದೆಯೂ ಸೇನೆಯ ಕೈವಾಡ ಇದೆ ಎಂದು ಹೇಳಲಾಗುತ್ತಿದೆ.

ಪಾಕಿಸ್ತಾನದ ಬಳಿ 150ಕ್ಕೂ ಹೆಚ್ಚು ಅಣ್ವಸ್ತ್ರಗಳಿವೆ. ಲಷ್ಕರ್–ಎ–ತಯಬಾ, ಅಲ್ ಕೈದಾ, ಜೈಷ್ ಎ ಮೊಹಮ್ಮದ್ ಮುಂತಾದ ಭಾರತ ವಿರೋಧಿ ಭಯೋತ್ಪಾದಕ ಸಂಘಟನೆಗಳು ಪಾಕಿಸ್ತಾನದಲ್ಲಿ ನೆಲೆಯೂರಿವೆ. ಸ್ಥಿರ ಸರ್ಕಾರ ಅಸ್ತಿತ್ವದಲ್ಲಿ ಇದ್ದಾಗಲೇ ಯಾವುದೇ ಅಂಕೆ ಇಲ್ಲದ ಈ ಉಗ್ರಗಾಮಿ ಸಂಘಟನೆಗಳು ಭಾರತದ ವಿರುದ್ಧ ಚಟುವಟಿಕೆಗಳನ್ನು ನಡೆಸುವುದನ್ನು ಕಾಣಬಹುದು. ಸೇನೆಯು ಅಧಿಕಾರ ಹಿಡಿದರೆ ಅಥವಾ ಅಸ್ಥಿರ ಸರ್ಕಾರ ಇದ್ದಾಗ ಈ ಸಂಘಟನೆಗಳ ಉಪಟಳ ಇನ್ನಷ್ಟು ಹೆಚ್ಚುವ ಅಪಾಯ ಇದೆ. ಭಾರತದಲ್ಲಿ ವಿಧ್ವಂಸಕ ಕೃತ್ಯ ಎಸಗಲು ಸೇನೆ ಮತ್ತು ಐಎಸ್‌ಐನ ಕುಮ್ಮಕ್ಕೂ ಇರುತ್ತದೆ ಎಂಬುದು ರಹಸ್ಯವೇನಲ್ಲ. ವಿವೇಕಹೀನರ ಕೈಗೆ ಅಣ್ವಸ್ತ್ರದ ನಿಯಂತ್ರಣ ಸಿಗುವುದು, ಉಗ್ರರಿಗೆ ಮುಕ್ತ ಅವಕಾಶ ದೊರೆಯುವುದು ಇಡೀ ಜಗತ್ತಿಗೆ ಅಪಾಯಕಾರಿ. ಪಾಕಿಸ್ತಾನವು ಮತ್ತೆ ನಿರಂಕುಶ ಆಳ್ವಿಕೆಗೆ ಒಳಗಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆಯನ್ನು ಇಮ್ರಾನ್ ಖಾನ್, ಅವರ ಪಕ್ಷ, ವಿರೋಧ ಪಕ್ಷ, ದೇಶದ ಅಧ್ಯಕ್ಷ, ಸುಪ್ರೀಂ ಕೋರ್ಟ್ ಪ್ರದರ್ಶಿಸಬೇಕು. ಜನತಂತ್ರವನ್ನು ತುಳಿದಾದರೂ ಸರಿ ಅಧಿಕಾರದಲ್ಲಿ ಉಳಿಯಬೇಕು ಎಂಬ ದುರಾಸೆಯನ್ನು ಇಮ್ರಾನ್ ಖಾನ್ ಬಿಡಬೇಕು.

ಏಕರೂಪ ನಾಗರಿಕ ಸಂಹಿತೆ– ಮುಂದಡಿ ಇರಿಸಿದ ಉತ್ತರಾಖಂಡ ರಾಜ್ಯ

ಯುಸಿಸಿ: ಹೊಸ ಆರಂಭಕ್ಕೆ ಸಕಾಲ

ಸೂರ್ಯ– ನಮಸ್ಕಾರ

ಎ.ಸೂರ್ಯಪ್ರಕಾಶ್

ಹಲವು ರಾಜ್ಯಗಳಲ್ಲಿ ಬಿಜೆಪಿಯು ಅಧಿಕಾರದ ಗದ್ದುಗೆಗೆ ಏರಿರುವ ಪ್ರಸಕ್ತ ಸಂದರ್ಭದಲ್ಲಿ, ರಾಜ್ಯಗಳ ಮಟ್ಟದಲ್ಲಿ ಪಕ್ಷದ ಹಲವು ನಾಯಕರು ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗಾಗಿ ಪ್ರಚಾರ ಅಭಿಯಾನ ಆರಂಭಿಸಿದ್ದಾರೆ. ಈ ಕೂಗಿಗೆ ಇತ್ತೀಚೆಗೆ ದನಿ ಸೇರಿಸಿರುವವರು, ಉತ್ತರಾಖಂಡದಲ್ಲಿ ಮುಖ್ಯಮಂತ್ರಿಯಾಗಿ ಎರಡನೇ ಬಾರಿ ಅಧಿಕಾರ ಸೂತ್ರ ಹಿಡಿದಿರುವ ಪುಷ್ಕರ್ ಸಿಂಗ್ ಧಾಮಿ. ಈ ವಿಚಾರವನ್ನು ಪರಿಶೀಲಿಸಿ ಕರಡು ಸಂಹಿತೆ ರೂಪಿಸುವುದಕ್ಕಾಗಿ ತಜ್ಞರ ಸಮಿತಿಯೊಂದನ್ನು ರಚಿಸಲು ಧಾಮಿ ಕಳೆದ ವಾರ ನಡೆದ ತಮ್ಮ ಸಂಪುಟದ ಮೊದಲ ಸಭೆಯಲ್ಲಿ ನಿರ್ಧರಿಸಿದ್ದಾರೆ. ಇತ್ತೀಚೆಗೆ ನಡೆದ ರಾಜ್ಯ ವಿಧಾನಸಭಾ ಚುನಾವಣಾ ಪ್ರಚಾರ ಸಭೆಗಳಲ್ಲಿ ಈ ಕುರಿತಾದ ಭರವಸೆಯನ್ನು ಅವರು ನೀಡಿದ್ದರು. ಈಗ, ಕಾನೂನು ರಚನೆಯ ಯತ್ನಗಳನ್ನು ಆರಂಭಿಸಿರುವ ಉತ್ತರಾಖಂಡ, ಬೇರೆ ರಾಜ್ಯಗಳಿಗೂ ಈ ನೆಲೆಯಲ್ಲಿ ಪ್ರೇರಣೆ ನೀಡಿದೆ.

ಸಂವಿಧಾನದ 44ನೇ ವಿಧಿಯು ಏಕರೂಪ ನಾಗರಿಕ ಸಂಹಿತೆಯನ್ನು ಪ್ರಸ್ತಾಪಿಸಿ, 'ಭಾರತದಾದ್ಯಂತ ನಾಗರಿಕರಿಗೆ ಏಕರೂಪ ನಾಗರಿಕ ಸಂಹಿತೆಯನ್ನು ದೊರಕಿಸಿಕೊಡಲು ಪ್ರಭುತ್ವವು ಯತ್ನಿಸುತ್ತದೆ' ಎಂದು ಹೇಳುತ್ತದೆ. ರಾಜ್ಯ ನಿರ್ದೇಶಕ ತತ್ವಗಳನ್ನು ನಿರ್ವಹಿಸುವ ಅಧ್ಯಾಯದಲ್ಲಿ ಇದು ಇದೆ. ಹೀಗಾಗಿ, ಇದನ್ನು ಸಲಹೆಯ ರೂಪದಲ್ಲಿ ಭಾವಿಸಲಾಗುತ್ತದೆ. ಆದರೆ ಏಕರೂಪ ನಾಗರಿಕ ಸಂಹಿತೆಗೆ ಸಂಬಂಧಿಸಿದ ಹಲವು ವಿಷಯಗಳು ಕೇಂದ್ರ ಹಾಗೂ ರಾಜ್ಯಗಳ ನಡುವೆ ಅಧಿಕಾರ ಹಂಚಿಕೆ ಗಡಿಗಳನ್ನು ವಿವರಿಸುವ ಸಂವಿಧಾನದ ಏಳನೇ ಅನುಸೂಚಿಯ ಸಮವರ್ತಿ ಪಟ್ಟಿಯಲ್ಲಿರುವ 5ನೇ ವಿಷಯದಲ್ಲಿವೆ. ಈ ಪಟ್ಟಿಯಲ್ಲಿರುವ ವಿಚಾರಗಳ ಬಗ್ಗೆ ಕೇಂದ್ರ ಹಾಗೂ ರಾಜ್ಯಗಳೆರಡೂ ಕಾನೂನುಗಳನ್ನು ರೂಪಿಸಬಹುದು.

1937ರ ಮುಸ್ಲಿಂ ವೈಯಕ್ತಿಕ ಕಾನೂನು (ಶರಿಯತ್) ಅಳವಡಿಕೆಯ ಕಾಯ್ದೆಯ ಅಡಿ ವಿವಾಹ, ಜೀವನಾಂಶ, ವರದಕ್ಷಿಣೆ, ವಿಚ್ಛೇದನ ಹಾಗೂ ಉತ್ತರಾಧಿಕಾರದಂತಹ ವಿಚಾರಗಳು ಬರುತ್ತವೆ. ಇಂತಹ ಹಲವು ಅಂಶಗಳು ಸಮವರ್ತಿ ಪಟ್ಟಿಯ 5ನೇ ವಿಷಯದಡಿ ಬರುತ್ತವೆ. ಹಾಗೆಯೇ, ಇಂತಹ ಕಾನೂನನ್ನು ರಚಿಸಲೇಬೇಕೆಂದರೆ ಉತ್ತರಾಖಂಡವು ಅದನ್ನು ರೂಪಿಸಿದ ಮೊದಲ ರಾಜ್ಯವೇನೂ ಆಗದು. ವಾಸ್ತವವಾಗಿ, ಪೋರ್ಚುಗೀಸ್ ಆಡಳಿತ ಕಾಲದಿಂದಲೂ ರಾಷ್ಟ್ರದಲ್ಲಿ ಏಕರೂಪ ನಾಗರಿಕ ಸಂಹಿತೆ ಇರುವ ಏಕೈಕ ರಾಜ್ಯವೆಂದರೆ ಸದ್ಯಕ್ಕೆ ಗೋವಾ.

ಆದರೆ, ಏಕರೂಪ ನಾಗರಿಕ ಸಂಹಿತೆ ಪರಿಕಲ್ಪನೆಯು ಮುಸ್ಲಿಂ ಸಮುದಾಯದಿಂದ ಸತತವಾಗಿ ಪ್ರತಿರೋಧವನ್ನು ಎದುರಿಸಿದೆ. ಈ ಪರಿಕಲ್ಪನೆಗೆ ವಿರುದ್ಧವಾಗಿ ಇರುವುದಾಗಿ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಕಳೆದ ನವೆಂಬರ್‌ನಲ್ಲಿ ಘೋಷಿಸಿತ್ತು. ಅಲ್ಲದೆ, ಭಾರತದಂತಹ ವಿಸ್ತಾರವಾದ, ಬಹು ಧರ್ಮಗಳ ರಾಷ್ಟ್ರಕ್ಕೆ 'ಇದು ಸೂಕ್ತವಲ್ಲ ಅಥವಾ ಉಪಯುಕ್ತವೂ ಅಲ್ಲ' ಎಂದೂ ಅದು ಹೇಳಿತ್ತು.

ಇತ್ತೀಚಿನ ವರ್ಷಗಳಲ್ಲಿ ಏಕರೂಪ ನಾಗರಿಕ ಸಂಹಿತೆಗೆ ವಿರುದ್ಧವಾಗಿ ಮುಸ್ಲಿಂ ಸಂಘಟನೆಗಳು ವ್ಯಕ್ತಪಡಿಸಿದ ಅಭಿಪ್ರಾಯಗಳು, ಸಂವಿಧಾನ ರಚನಾ ಸಭೆಯಲ್ಲಿ 1948ರ ನವೆಂಬರ್ 23ರಂದು 44ನೇ ವಿಧಿ ಚರ್ಚೆಗೆ ಬಂದಾಗ ಮುಸ್ಲಿಂ ಸದಸ್ಯರು ವ್ಯಕ್ತಪಡಿಸಿದ್ದಂತಹ ಅಭಿಪ್ರಾಯಗಳನ್ನೇ ಹೋಲುವಂತಿವೆ. ಈ ವಿಧಿಯು ಕೇವಲ ಸಲಹಾ ರೂಪದಲ್ಲಿದ್ದರೂ ಅವರೆಲ್ಲರೂ ಈ ವಿಧಿಗೆ ವಿರೋಧ ತೋರಿದ್ದರು. ಭಾರತ ಸ್ವಾತಂತ್ರ್ಯ ಗಳಿಸಿಕೊಂಡು 75 ವರ್ಷಗಳಾಗಿ ಏನೆಲ್ಲಾ ಆಗಿದ್ದರೂ ಈ ವಿಚಾರದಲ್ಲಿ ಕೆಲವು ಮುಸ್ಲಿಂ ಮುಖಂಡರ ದೃಷ್ಟಿಕೋನ ಬದಲಾಗದೇ ಉಳಿದಿದೆ ಎಂಬುದು ಆ ಚರ್ಚೆಗಳನ್ನು ನೋಡಿದಾಗ ಗೊತ್ತಾಗುತ್ತದೆ.

ಸಂವಿಧಾನ ರಚನಾ ಸಭೆಯಲ್ಲಿ ಆಕ್ಷೇಪ ವ್ಯಕ್ತಪಡಿಸಿದವರಲ್ಲಿ ಮೊಹಮ್ಮದ್ ಇಸ್ಮಾಯಿಲ್ ಸಾಹಿಬ್, ನಾಝಿರುದ್ದೀನ್ ಅಹ್ಮದ್, ಮಹಬೂಬ್ ಅಲಿ ಬೇಗ್ ಸಾಹಿಬ್ ಬಹಾದ್ದೂರ್, ಪೋಕರ್ ಸಾಹಿಬ್ ಬಹಾದ್ದೂರ್ ಹಾಗೂ ಹುಸೇನ್ ಇಮಾಮ್ ಸೇರಿದ್ದಾರೆ.

ಜನರ ನಾಗರಿಕ ಕಾನೂನುಗಳನ್ನು ಸೈನಿಕ ಶಿಸ್ತಿಗೆ ಒಳಪಡಿಸುವ ಅಗತ್ಯ ಇಲ್ಲ ಎಂದು ಇಸ್ಮಾಯಿಲ್ ಸಾಹಿಬ್ ವಾದಿಸಿದ್ದರು. ಇಂತಹದ್ದೇ ವಾದ ಮಂಡಿಸುವ ರೀತಿಯಲ್ಲಿ ವಿವಾಹ ಹಾಗೂ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಕಾನೂನುಗಳು ಧಾರ್ಮಿಕ ಕಟ್ಟಳೆಯ ಭಾಗ ಎಂದು ಹೇಳಿ ನಾಝಿರುದ್ದೀನ್ ಅಹ್ಮದ್ ಅವರು ತಿದ್ದುಪಡಿ ಮಂಡಿಸಿದ್ದರು. 1,350 ವರ್ಷಗಳಿಂದಲೂ ಮುಸ್ಲಿಮರು ವೈಯಕ್ತಿಕ ಕಾನೂನು ಅನುಸರಿಸಿಕೊಂಡು ಬಂದಿದ್ದು ಎಲ್ಲ ಅಧಿಕಾರ ವರ್ಗಗಳೂ ಮಾನ್ಯತೆ ನೀಡಿದ್ದವು ಎಂದು ಮಹಬೂಬ್ ಅಲಿ ಬೇಗ್ ಸಾಹಿಬ್ ಬಹಾದ್ದೂರ್ ಪ್ರತಿಪಾದಿಸಿದ್ದರು.

ಮುಸ್ಲಿಂ ಸದಸ್ಯರ ವಾದಗಳಿಗೆ ಕೆ.ಎಂ.ಮುನ್ಷಿ, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಹಾಗೂ ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರು ಪ್ರತಿವಾದಗಳನ್ನು ಮಂಡಿಸಿದ್ದರು. ಹಲವು ರಾಷ್ಟ್ರಗಳು ಸಮಾನ ನಾಗರಿಕ ಸಂಹಿತೆಗಳನ್ನು ಹೊಂದಿವೆ ಎಂದು ಹೇಳಿ, ಈ ವಿಧಿಯ ವಿರುದ್ಧ ಮಂಡಿಸಲಾದ ವಾದಗಳಿಗೆ ಕೆ.ಎಂ.ಮುನ್ಷಿ ಅಸಮ್ಮತಿ ಸೂಚಿಸಿದ್ದರು. ಅಭಿವೃದ್ಧಿ ಹೊಂದಿದ ಯಾವುದೇ ಮುಸ್ಲಿಂ ರಾಷ್ಟ್ರಗಳಲ್ಲಿಯೂ ಅಲ್ಪಸಂಖ್ಯಾತರ ವೈಯಕ್ತಿಕ ಕಾನೂನುಗಳಿಗೆ ಮಾನ್ಯತೆ ದೊರೆತಿಲ್ಲ ಎಂದು ಅವರು ಹೇಳಿದ್ದರು. ಟರ್ಕಿ ಹಾಗೂ ಈಜಿಪ್ಟ್ ಉದಾಹರಣೆಗಳನ್ನು ನೀಡಿದ್ದ ಅವರು, ಈ ರಾಷ್ಟ್ರಗಳಲ್ಲಿನ ಯಾವುದೇ ಅಲ್ಪಸಂಖ್ಯಾತರಿಗೂ ತಮ್ಮದೇ ವೈಯಕ್ತಿಕ ಕಾನೂನು ಹೊಂದಲು ಅವಕಾಶವಿಲ್ಲ ಎಂದಿದ್ದರು.

ಅಲ್ಲದೆ, ಶರಿಯತ್ ಕಾನೂನು 1937ರಲ್ಲಿ ಶಾಸನಸಭೆಯಲ್ಲಿ ಅನುಮೋದನೆಗೊಂಡಾಗ, ಖೋಜಾ ಹಾಗೂ ಕುಚ್ಚಿ ಮೆಮನ್ ಅವರು ಅದಕ್ಕೆ ಒಳಪಡಲು ಇಷ್ಟಪಡದಿದ್ದರೂ ಇದು ಎಲ್ಲಾ ಮುಸ್ಲಿಮರಿಗೂ ಅನ್ವಯಿಸುತ್ತದೆ ಎಂದು ಬಲವಂತದಿಂದ ಹೇರುವ ರೀತಿಯಲ್ಲಿ ಮುಸ್ಲಿಂ ಸದಸ್ಯರು ಹೇಳಿದ್ದರು. ಆಗ ಅಲ್ಪಸಂಖ್ಯಾತರ ಹಕ್ಕುಗಳು ಎಲ್ಲಿದ್ದವು?

ಇಡೀ ಭಾರತವನ್ನು ಒಟ್ಟಾಗಿ ಏಕರಾಷ್ಟ್ರವಾಗಿ ಒಂದುಗೂಡಿಸಲು ಭಾರತದ ನಾಯಕರು ಬಯಸಿದ್ದರು ಎಂದು ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಹೇಳಿದ್ದರು. ಈ ಪ್ರಕ್ರಿಯೆಗೆ ನಾವು ಸಹಾಯ ಮಾಡುತ್ತಿದ್ದೇವೆಯೇ ಅಥವಾ ಈ ದೇಶವು ಸದಾ ಪ್ರತಿಸ್ಪರ್ಧಿಗಳಾಗಿರುವ ಸಮುದಾಯಗಳ ಸರಣಿಯಾಗಿಯೇ ಉಳಿಯುತ್ತದೆಯೇ? ನಮ್ಮ ಮುಂದಿರುವ ಪ್ರಶ್ನೆ ಇದು.

ಮುಸ್ಲಿಂ ಸದಸ್ಯರು ಮಂಡಿಸಿದ ವಾದಗಳ ಬಗ್ಗೆ ತಮಗೆ 'ತುಂಬಾ ಅಚ್ಚರಿ' ಆಗಿರುವುದಾಗಿ ಡಾ. ಬಿ.ಆರ್. ಅಂಬೇಡ್ಕರ್ ಹೇಳಿದ್ದರು. ಏಕೆಂದರೆ, ಇಡೀ ರಾಷ್ಟ್ರಕ್ಕೆ ಅನ್ವಯಿಸುವಂತಹ ನಾಗರಿಕ ಸಂಹಿತೆ ವಾಸ್ತವಿಕವಾಗಿ ಇದೆ ಎಂಬುದನ್ನು ಸೂಚಿಸುವ ರೀತಿಯಲ್ಲಿ ಅಷ್ಟರಲ್ಲಾಗಲೇ ಏಕರೂಪದ ಸಮಗ್ರ ಅಪರಾಧ ಸಂಹಿತೆ ಇತ್ತು. ಆಸ್ತಿ ವರ್ಗಾವಣೆ ಕಾಯ್ದೆ, ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯ್ದೆ ಮತ್ತಿತರ ಕಾನೂನುಗಳೂ ಇದ್ದವು.

ಮುಸ್ಲಿಂ ವೈಯಕ್ತಿಕ ಕಾನೂನು ಬದಲಿಸಲಾಗದಂತಹದ್ದು, ಭಾರತದಾದ್ಯಂತ ಏಕರೂಪವಾಗಿದೆ ಹಾಗೂ ಪುರಾತನ ಕಾಲದಿಂದಲೂ ಎಲ್ಲ ಮುಸ್ಲಿಮರೂ ಅನುಸರಿಸುತ್ತಿರುವಂತಹ ಕಾನೂನು ಇದು ಎಂಬಂತಹ ಮುಸ್ಲಿಂ ಸದಸ್ಯರ ವಾದಕ್ಕೆ ಡಾ. ಅಂಬೇಡ್ಕರ್ ಸವಾಲೊಡ್ಡಿದ್ದರು. ಅಲ್ಲದೆ, 1935ರವರೆಗೂ ಉತ್ತರಾಧಿಕಾರದ ವಿಚಾರದಲ್ಲಿ ವಾಯವ್ಯ ಗಡಿಯ ಪ್ರಾಂತ್ಯ ಹಾಗೂ ಇತರ ಪ್ರಾಂತ್ಯಗಳು ಹಿಂದೂ ಕಾನೂನು ಅನುಸರಿಸುತ್ತಿದ್ದವು ಎಂದೂ ಹೇಳಿದ್ದರು. ಉತ್ತರ ಮಲಬಾರ್‌ನಲ್ಲಿ, ಮಾತೃ ಪ್ರಧಾನ ವ್ಯವಸ್ಥೆಯಾದ ಮಾರುಮಕ್ಕಾತಾಯಮ್ ಕಾನೂನು, ಮುಸ್ಲಿಮರು ಸೇರಿದಂತೆ ಎಲ್ಲರಿಗೂ ಅನ್ವಯವಾಗುತ್ತಿತ್ತು. ಸಮಾನ ನಾಗರಿಕ ಸಂಹಿತೆಯನ್ನು ರೂಪಿಸುವುದಕ್ಕಾಗಿ ಹಿಂದೂ ಕಾನೂನಿನ ಕೆಲವು ಭಾಗಗಳನ್ನು ಅಳವಡಿಸಿಕೊಳ್ಳುವುದರಲ್ಲಿ ತಪ್ಪಿಲ್ಲ ಎಂಬಂಥ ಮಾತುಗಳ ಮೂಲಕ ತಮ್ಮ ವಾದವನ್ನು ಡಾ. ಅಂಬೇಡ್ಕರ್ ಮುಗಿಸಿದ್ದರು.

ಆದರೆ, ನಾಝಿರುದ್ದೀನ್ ಅಹ್ಮದ್ ಹಾಗೂ ಹುಸೇನ್ ಇಮಾಮ್ ಎಂಬ ಇಬ್ಬರು ಮುಸ್ಲಿಂ ಸದಸ್ಯರು, 'ನಂತರ ಕ್ರಮೇಣ' ಸಮಾನ ನಾಗರಿಕ ಸಂಹಿತೆಯನ್ನು ಭಾರತ ಒಪ್ಪಿಕೊಳ್ಳಬಹುದೇನೋ ಎಂದು ಭಾವಿಸಿದ್ದರು.

ಆದರೆ ಈಗ 75 ವರ್ಷಗಳೆಂಬುದು ದೀರ್ಘಾವಧಿಯಲ್ಲವೇ ಎಂಬುದು ಪ್ರಶ್ನೆ. ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ಎಚ್ಚರಿಕೆ ನೀಡಿದಂತೆ, ವಿಭಿನ್ನತೆಗಳನ್ನೇ ನಿರಂತರವಾಗಿ ಜಪಿಸುತ್ತಿದ್ದರೆ ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿದಂತೆ ಸಮಾನತೆ ಹಾಗೂ ಭ್ರಾತೃತ್ವದಂತಹ ಪರಿಕಲ್ಪನೆಗಳು ರಾಷ್ಟ್ರದೊಳಗೆ ಏಕರೂಪವಾಗಿ ಬೆಳೆಯುವ ಬಗ್ಗೆ ಭರವಸೆ ಇಟ್ಟುಕೊಳ್ಳಬಹುದೇ?

ಚುರುಮುರಿ



ಜಟ್-ಖಾ ಪೆ-ಟ್ರೋಲ್

• ಲಿಂಗರಾಜು ಡಿ.ಎಸ್.

'ಪೆಟ್ರೋಲ್ ಕಂಪನಿಗಳು ದಿನದ ಲೆಕ್ಕದಲ್ಲಿ ರೇಟು ಏರಿಸ್ತಾವಲ್ಲಾ ಸಾ? 'ಈ ತಿಂಗಳು ಕಚ್ಚಾ ತೈಲಕ್ಕೆ ಇಷ್ಟು ಜಾಸ್ತಿ ದುಡ್ಡು ಕೊಟ್ಟು ಲಾಸಾಗ್ಯದೆ' ಅಂತ ಹೇಳಿಕೆ ಬ್ಯಾರೆ ಕೊಡ್ತಿರತವೆ. ವರ್ಷದ ಬ್ಯಾಲೆನ್ಸ್ ಶೀಟ್ ಆಡಿಟ್ ಮಾಡುವಾಗ ಲಾಸೇ ಕಾಣಕ್ಕುಲ್ಲ, ಲಾಭದಲ್ಲೇ ಇರತವೆ! ಇದ್ಯಂಗೆ?' ಅಂತಂದೆ.

'ಬ್ಯಾಲೆನ್ಸ್ ಶೀಟಲ್ಲಿ ಅಡವಾನ್ಸು, ಜಬಾದಾರಿ, ತೆರಿಗೆ, ಸಾಲ ಈತರಕೀತರ ಏನೇನೋ ಕಣ್ಕಟ್ಟು ಇರತವೆ ಕನುಡಾ! ಅಸೆಟ್ಟು ಮ್ಯಾಕ್ಕೆ-ಕೆಳಿಕ್ಕೆ ತಾರಾಡಿಕ್ಯಂಡು ಮೂಗಂಡುಗ ತೊಂದರೆ ಕೊಡ್ತದೆ. ಸಂಬಳ-ಸಾರಿಗೆ ಕೊಡಬಕು, ಪೆಟ್ರೋಲ್-ಡೀಜೆಲ್ಲು ಒಣಗೋಯ್ತದೆ, ಗ್ಯಾಸು ಆವಿಯಾಯ್ತದೆ, ಕಚ್ಚಾ ಎಣ್ಣೆ ಖರೀದಿ ರೇಟು ಉಚಾಯಿಸಿಕ್ಯಂದು ಮ್ಯಾಕ್ಕೆ ಹೋಯ್ತಿರತದೆ ಕಯ್ಯಾ! ಅದುಕ್ಕೆ ಬ್ಯಾಲೆನ್ಸ್ ಶೀಟಿಗೂ ಲಾಭ-ನಷ್ಟಕ್ಕೂ ಹೊಂದಕುಲ್ಲ!' ಅಂದ್ರು ತುರೇಮಣೆ.

'ಆ ಕಚ್ಚೋ ತೈಲದ ದೊರೆಗಳು ನಮ್ಮ ಕಾಸಲ್ಲಿ ದುಂಡಗಾದ್ರು ಆಟೇಯ!' ಯಂಟಪ್ಪಣ್ಣ ಉಸೂರಂತು.

'ತುರೇಮಣೆ ಸಾ, ಈಗ ಜಟ್-ಖಾ, ಹ-ಲಾಲ್, ಪೆ-ಟ್ರೋಲ್, ಡೀ-ಸೇಲ್ ಅಂತ ನೆರೆ ಹೊಂಟದೆ! ನಾವು ಗೆಟನ್ ಆಗದು ಯಂಗೆ?' ಅಂದ ಚಂದ್ರು.

'ಹಗಲು ಸತ್ತರೆ ಅಕ್ಕಿಗೆ ಗತಿ ಇಲ್ಲ, ಇಳ್ಳು ಸತ್ತರೆ ಎಣ್ಣೆಗೆ ಗತಿ ಇಲ್ಲ ಅನ್ನಂಗದೆ ನಮ್ಮ ಬದುಕು! ಹಲಾಲು, ಜಟ್ಕಾ ಅಂದೋರು ಗ್ವಾಮಾಳೆ ಹಿಡಕತ್ತರೆ, ಕತ್ತು ಕುಯ್ಯಿಸಿಕ್ಯಂಡೋರು ಉಸುರುಬುಡ್ತರೆ!' ಅಂದೆ.

'ಲೋ ಕಕವಾ, ಮಟನ್ನೋ, ಎಣ್ಣೇನೋ ಎಲ್ಲಾ ಯವಾರದಲ್ಲೂ ಏನೋ ದರ್ದು ಇದ್ದೇ ಇರತದೆ. ಈಗ ಎಲೆಕ್ಸನ್ನು, 150 ಮಿಸನ್ನು ಅಂತ ಎಲ್ಲಾ ಪಕ್ಸಗಳೂ ನಮ್ಮಂತಾ ಕುರಿಗಳ ಕತ್ತು ಕೂದು ಲಾಲ್ ತರಕಾರಿ ಮಾಡಕ್ಕೆ ರೆಡಿಯಾಗಿಲ್ಲವಾ? ನಮ್ಮ ಯೇಗ್ತೇನೆ ಅಷ್ಟು! ಈಗ ಗುಡ್ಡೆ ಬಾಡಲ್ಲಿ ನಲ್ಲಿ ಮೂಳೆ ಇದ್ರೆ ಜಟ್ ಅಂತ ತಿನ್ನನ ನಡಿ' ಅಂದು ಹಲ್ಲು ಕಿಸಿದರು.

ದಿನದ ಟ್ವೀಟ್

ನಮಗಿರುವ ಏಕೈಕ ಮಾರ್ಗ

ಬೆಂಗಳೂರಿಗೆ ಸ್ಥಳೀಯ ಪಕ್ಷ ಮತ್ತು ಕರ್ನಾಟಕಕ್ಕೆ ಪ್ರಾದೇಶಿಕ ಪಕ್ಷ ಇರಬೇಕು ಎಂಬುದಕ್ಕೆ ನಾನು ಯಾವಾಗಲೂ ಆದ್ಯತೆ ನೀಡುತ್ತೇನೆ. ನಮ್ಮ ಸಂಸ್ಕೃತಿ ಮತ್ತು ಭಾಷೆಯನ್ನು ಸಂರಕ್ಷಿಸಲು, ಕಾರ್ಯಕ್ಷಮತೆಯನ್ನು ಪ್ರಶ್ನಿಸಲು, ದೇಶದಲ್ಲಿ ಒಕ್ಕೂಟ ವ್ಯವಸ್ಥೆ ಹಾಗೂ ಪ್ರಜಾಪ್ರಭುತ್ವವನ್ನು ಕಾಪಾಡಿಕೊಳ್ಳಲು ಇರುವ ಏಕೈಕ ಮಾರ್ಗ ಇದು.

ಆನಂದ ಗುಂಡೂರಾವ್, ಬಿ.ಪ್ಯಾಕ್ ಸದಸ್ಯ

ಕಿಡಿನುಡಿ

ವಿರೋಧ ಪಕ್ಷಗಳು ಏನು ಮಾಡುತ್ತಿವೆ? ಬಿಜೆಪಿಯು ವಿರೋಧ ಪಕ್ಷವಾಗಿದ್ದಾಗ ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿತ್ತು. ಈಗಿನ ವಿರೋಧ ಪಕ್ಷಗಳು ಮಾಡುತ್ತಿರುವುದೇನು? ಟ್ವೀಟ್ ಮಾಡುವುದನ್ನು ಬಿಟ್ಟರೆ ಬೇರೇನೂ ಮಾಡುತ್ತಿಲ್ಲ.

ಶಿಖರ್ ಶುಕ್ಲಾ, ನಾಗರಿಕ

25 ವರ್ಷಗಳ ಹಿಂದೆ

ಶನಿವಾರ, 5-4-1997

• **ಯುಗಾದಿ ದಿನ ರಾಜ್ಯದಲ್ಲಿ 9 ಹೊಸ ಜಿಲ್ಲೆಗಳ ಉದಯ**

ಬೆಂಗಳೂರು, ಏ. 4– ರಾಜ್ಯದ ಜನತೆಗೆ ಯುಗಾದಿಯ ಕೊಡುಗೆಯಾಗಿ ರಾಜ್ಯದಲ್ಲಿ ಹೊಸ ಒಂಬತ್ತು ಜಿಲ್ಲೆಗಳನ್ನು ರಚಿಸುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿರುವ ರಾಜ್ಯ ಸಚಿವ ಸಂಪುಟ ಸಭೆ, ಹೊಸ ಜಿಲ್ಲೆಗಳು ಯಾವುವು ಎಂಬುದನ್ನು ಪ್ರಕಟಿಸುವ ಅಧಿಕಾರವನ್ನು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರಿಗೆ ಇಂದು ಇಲ್ಲಿ ನೀಡಿದೆ.

ಮುಖ್ಯಮಂತ್ರಿ ಅವರು ಯುಗಾದಿ ದಿನ ಪ್ರಕಟಿಸುವ ಪಟ್ಟಿಯಲ್ಲಿ ಚಾಮರಾಜನಗರ, ಉಡುಪಿ, ಗದಗ, ಹಾವೇರಿ, ದಾವಣಗೆರೆ, ಕೊಪ್ಪಳ, ಬಾಗಲಕೋಟೆ, ಚಿಕ್ಕೋಡಿ ಅಥವಾ ಗೋಕಾಕ ಮತ್ತು ಕಲ್ಬುರ್ಗಿ ಜಿಲ್ಲೆಯಲ್ಲಿ ಯಾದಗಿರಿ ಅಥವಾ ಭೀಮರಾಯನಗುಡಿ ಅಥವಾ ಸುರಪುರ (ಈ ಮೂರರ ಪೈಕಿ ಒಂದು ಜಿಲ್ಲೆಯಾಗಿ ರಚನೆಯಾಗಲಿದೆ) ಇವೆ ಎಂದು ಉನ್ನತ ಮೂಲಗಳು ತಿಳಿಸಿವೆ.

• **ಮುಂದುವರಿದ ಅನಿಶ್ಚಿತ ಸ್ಥಿತಿ: ಕಾಂಗ್ರೆ– ರಂಗ ಬಿಗಿ ನಿಲುವು**

ನವದೆಹಲಿ, ಏ. 4– ಸಂಯುಕ್ತ ರಂಗ ಸರ್ಕಾರಕ್ಕೆ ಬೆಂಬಲ ಹಿಂತೆಗೆದುಕೊಂಡ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷವು ತನ್ನ ನಿಲುವನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ಮನವಿ ಮಾಡಿರುವ ಬಗೆಗೆ, ಉಭಯ ಪಕ್ಷಗಳ ನಾಯಕರ ನಡುವಣ ಮಾತುಕತೆಯು ಅಧಿಕೃತವಾಗಿ ಆರಂಭವಾಗಿಲ್ಲ. ಈ ಕಾರಣ, ಪ್ರಧಾನಿ ಎಚ್.ಡಿ.ದೇವೇಗೌಡ ನೇತೃತ್ವದ ಸರ್ಕಾರದ ಉಳಿವಿಗೆ ಬಂದಿರುವ ಗಂಡಾಂತರ ಇನ್ನೂ ಅನಿಶ್ಚಿತ ವಾತಾವರಣದಲ್ಲಿಯೇ ಮುಳುಗಿದೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸು ಅವರು ಸಂಯುಕ್ತ ರಂಗ ಸರ್ಕಾರದ ಉಳಿವಿಗೆ ಸತತ ಪ್ರಯತ್ನ ನಡೆಸಿರುವುದು ಇಂದಿನ ವಿಶೇಷ ಬೆಳವಣಿಗೆ.

50 ವರ್ಷಗಳ ಹಿಂದೆ

ಬುಧವಾರ, 5-4-1972

• **ಪಾಕ್ ಜೊತೆ ಭಾರತದ ನೇರ ಸಂಪರ್ಕ**

ನವದೆಹಲಿ, ಏ. 4– ಭಾರತ ಮತ್ತು ಪಾಕಿಸ್ತಾನ ನಡುವಣ ಬಾಂಧವ್ಯವನ್ನು ಎಂದಿನಂತೆ ಸುಮುಖಗೊಳಿಸುವ ವಿಚಾರದಲ್ಲಿ ಭಾರತವು ಪಾಕ್ ಜತೆ ನೇರ ಸಂಪರ್ಕ ಪಡೆದಿದೆ ಎಂದು ಪ್ರಧಾನಿ ಇಂದಿರಾ ಗಾಂಧಿ ಇಂದು ಬಹಿರಂಗಪಡಿಸಿದರು.

ಲೋಕಸಭೆಯಲ್ಲಿ ರಾಷ್ಟ್ರಪತಿಯವರು ಮಾಡಿದ ಭಾಷಣದ ಬಗ್ಗೆ ಚರ್ಚೆಗೆ ಉತ್ತರಿಸುತ್ತಿದ್ದ ಅವರು, ಈ ಸಂಪರ್ಕದ ಸ್ವರೂಪ ಏನೆಂಬುದನ್ನು ಸ್ಪಷ್ಟಪಡಿಸಲಿಲ್ಲ.

• **ಸರ್ಕಾರಿ ಉದ್ಯಮಗಳಲ್ಲಿ ದೊಡ್ಡ ಹುದ್ದೆಗಳಿಗೆ ನೇಮಕದಲ್ಲಿ ಹರಿಜನ–ಗಿರಿಜನರ ಬಗ್ಗೆ ಅಸಡ್ಡೆ**

ನವದೆಹಲಿ, ಏ. 4– ಸರ್ಕಾರಿ ಉದ್ಯಮಗಳ ಕ್ಷೇತ್ರದ ಉನ್ನತ ಹುದ್ದೆಗಳಲ್ಲಿ ಹರಿಜನ–ಗಿರಿಜನರಿಗೆ ನೀಡಿರುವ ಪ್ರಾತಿನಿಧ್ಯ ತೀರ ಅಲ್ಪ ಎಂದು ರಾಜ್ಯಸಭೆಯಲ್ಲಿ ಇಂದು ಕೇಂದ್ರ ಸರ್ಕಾರ ಒಪ್ಪಿಕೊಂಡು ಆ ಬಗ್ಗೆ ತನ್ನ ಆತಂಕ ವ್ಯಕ್ತಪಡಿಸಿತು.

ಎಸ್.ಕುಮಾರನ್ ಮತ್ತಿತರರಿಗೆ ಉತ್ತರ ನೀಡಿದ ಕಂದಾಯ ಮತ್ತು ವಿಮೆ ಸ್ಟೇಟ್ ಸಚಿವ ಕೆ.ಆರ್.ಗಣೇಶ್ ಅವರು, 1970ರಲ್ಲಿ ಪರಿಶಿಷ್ಟ ಜನಾಂಗಗಳಿಗೆ ಮೊದಲ ದರ್ಜೆ ಹುದ್ದೆಗಳಲ್ಲಿ ಕೇವಲ ಶೇ 0.56ರಷ್ಟು ಪ್ರಾತಿನಿಧ್ಯವಿತ್ತು, ಗಿರಿಜನರಿಗೆ ಶೇ 0.07ರಷ್ಟು ಪ್ರಾತಿನಿಧ್ಯವಿತ್ತು, 2ನೇ ದರ್ಜೆ ಹುದ್ದೆಗಳಲ್ಲಿ ಕ್ರಮವಾಗಿ ಶೇ 0.74 ಮತ್ತು ಶೇ 0.07ರಷ್ಟು ಪ್ರಾತಿನಿಧ್ಯವಿತ್ತು ಎಂದು ತಿಳಿಸಿದರು.

ಸಂಗತ

ಓದು ತೊರೆವ ನಾಡು ಬೆಳೆದೀತು ಹೇಗೆ?

ನಾವು ಓದುವ ವರ್ಗವನ್ನು ಸೃಷ್ಟಿಸದೇ ಹೋದರೆ, ಓದುವಿಕೆ ತೋರಿಸುವ ಹಲವು ಜಗತ್ತುಗಳ ರುಚಿ ಮಕ್ಕಳಿಗೆ ಗೊತ್ತಾಗುವುದೇ ಇಲ್ಲ

• ಸದಾಶಿವ್ ಸೊರಟೂರು

ಮೊನ್ನೆ ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನವೊಂದಕ್ಕೆ ಹೋಗಿದ್ದೆ. ವೇದಿಕೆ ಮೇಲಿನ ಭಾಷಣ ಕೇಳಿ ಕೇಳಿ ಆಕಳಿಕೆ ಬಂದಂತಾಗಿ, ಪುಸ್ತಕದ ಮಳಿಗೆಗಳ ಕಡೆ ಬಂದು ಒಂದಷ್ಟು ಪುಸ್ತಕ ಕೊಂಡೆ. 'ಹೇಗಿದೆ ವ್ಯಾಪಾರ?' ಪುಸ್ತಕದ ಮಳಿಗೆಯವನನ್ನು ಮಾತಿಗೆಳೆದೆ. 'ಸರ್, ಬೆಳಗ್ಗೆಯಿಂದ ನಾಲ್ಕೇ ಬುಕ್ ಹೋಗಿರೋದು. ಐನೂರು ರೂಪಾಯಿ ಆಗಿದೆ. ಈ ವ್ಯಾಪಾರ ಯಾರಿಗೆ ಬೇಕು? ಟೀ ಅಂಗಡಿ ಹಾಕಿದ್ರೂ ಒಳ್ಳೆ ಲಾಭ ಆಗಿರೋದು' ಅಂದ. ಅವನನ್ನು ಸಮಾಧಾನಪಡಿಸಲು ನನ್ನ ಬಳಿ ಮಾತುಗಳಿರಲಿಲ್ಲ.

ಮೂರು ವರ್ಷದ ಹಿಂದೆ ಕೋಲಾರದ ಸಮ್ಮೇಳನದಲ್ಲಿ ಪುಸ್ತಕ ವ್ಯಾಪಾರಿಯೊಬ್ಬ ತನ್ನ ಪುಸ್ತಕಗಳನ್ನು ರಸ್ತೆಗೆ ಎಸೆದುಬಿಟ್ಟ. ಎರಡು ದಿನಗಳಿಂದಲೂ ಒಂದೇ ಒಂದು ಪುಸ್ತಕ ವ್ಯಾಪಾರವಾಗಿರಲಿಲ್ಲ. ಅವನ ಸಹನೆಯ ಕಟ್ಟೆ ಒಡೆದಿತ್ತು. ಫ್ರೀಯಾಗಿ ತಗೊಂಡು ಹೋಗಿ ಎಂದು ಕೋಪದಿಂದ ಅರಚುತ್ತಿದ್ದ. ಕೆಲವರು ಪುಸ್ತಕಗಳನ್ನು ಆಯ್ದುಕೊಂಡರು. ಕೆಲವರು ಆಟದಂತೆ ನೋಡಿ ಹೊರಟುಹೋದರು.

ಧಾರವಾಡದಲ್ಲಿ ಎರಡು ವರ್ಷದ ಹಿಂದೆ ಉತ್ಸಾಹದಿಂದಲೇ ಪುಸ್ತಕದ ಅಂಗಡಿ ತೆರೆದಿದ್ದ ಗೆಳೆಯರೊಬ್ಬರು ಆರೇ ತಿಂಗಳಿಗೆ ಅದನ್ನು ಪೇಡೆ ಅಂಗಡಿಯಾಗಿ ಬದಲಾಯಿಸಿದರು. ಸ್ವತಃ ಬರಹಗಾರ ಕೂಡ ಹಣ ಹಾಕಿ ತನ್ನ ಪುಸ್ತಕ ಪ್ರಕಟಿಸಲು ಹಿಂದೇಟು ಹಾಕುತ್ತಿದ್ದಾನೆ. ಪ್ರಕಾಶಕರು ಗ್ರಂಥಾಲಯದ ಮೇಲೆ ಒಂದು ಆಸೆ ಇಟ್ಟುಕೊಂಡು ಖ್ಯಾತನಾಮರ ಪುಸ್ತಕಗಳನ್ನು ಮಾತ್ರ ಪ್ರಕಟಿಸುತ್ತಿದ್ದಾರೆ. ಅವರ ನಡೆ ಸರಿಯಿದೆ. ಕೊಳ್ಳುವವರ ಅಭಾವ ಇರುವಾಗ ಸಿಕ್ಕ ಸಿಕ್ಕವರ ಪುಸ್ತಕ ಪ್ರಕಟಿಸಿ ಅವರೇಕೆ ನಷ್ಟ ಮಾಡಿಕೊಂಡಾರು? ಪುಸ್ತಕದ ಮಾರಾಟ ಐಸಿಯುನಲ್ಲಿದೆ. ಇದರ ಮಧ್ಯೆ ಪುಸ್ತಕ ಕೊಂಡು ಓದುವ ಒಂದು ಸಣ್ಣ ವರ್ಗವಿದೆ. ಅವರೇ ಪುಸ್ತಕ ಮಾರಾಟದ ಪಾಲಿನ ಆಮ್ಲಜನಕ.

ದುಬಾರಿ ಬೆಲೆಯ ಬಟ್ಟೆ ಕೊಳ್ಳುತ್ತೇವೆ. ಮಕ್ಕಳಿಗೆ ಲಕ್ಷ ರೂಪಾಯಿಯ ಬೈಕ್ ಕೊಡಿಸುತ್ತೇವೆ. ನೂರು ರೂಪಾಯಿಯ ಪುಸ್ತಕ ಕೊಳ್ಳುವುದಿಲ್ಲ. ಓದುವುದು ಪರೀಕ್ಷೆಗೆ ಮಾತ್ರ; ಬದುಕಿಗಲ್ಲ ಎಂದು ಒಂದು ವರ್ಗ ಭಾವಿಸಿದಂತಿದೆ. ದುಡಿದರೆ ಮನೆಯ ಆರ್ಥಿಕತೆ ಬೆಳೆಯಬಹುದು, ನಾಡಿನ ಜಿಡಿಪಿ ಏರಬಹುದು. ಆದರೆ ವಿವೇಕದ ಜಿಡಿಪಿ ಏರುವುದೇ? ಪುಸ್ತಕ ತೊರೆದ ನಾಡು ಬೆಳೆದೀತು ಹೇಗೆ?

ಪುಸ್ತಕ ಓದುವವರು ಕಡಿಮೆಯಾದರೇ? ಮೊಬೈಲ್ ಬಂದು ಕೈಯಲ್ಲಿನ ಪುಸ್ತಕವನ್ನು ಕಸಿಯಿತೇ? ಜನರ ಅಭಿರುಚಿಗಳು ಬದಲಾಗಿವೆಯೇ? ಇವೆಲ್ಲಕ್ಕೂ ಉತ್ತರ 'ಹೌದು' ಎಂದು ಇರಬಹುದು. ಆದರೆ ಕನ್ನಡ ಸಾಹಿತ್ಯದಲ್ಲಿ ಪುಸ್ತಕ ಮಾರಾಟದ ಸುವರ್ಣ ಯುಗವೊಂದು ಇತ್ತೆಂದು ಎಲ್ಲೂ ದಾಖಲಾಗಿಲ್ಲ. ಕವಿ ಗಳಗನಾಥರು ತಲೆಯ ಮೇಲೆ ಪುಸ್ತಕ ಹೊತ್ತುಕೊಂಡು ಊರೂರು ಅಲೆದು ಮಾರುತ್ತಿದ್ದರು. ಕಾದಂಬರಿಕಾರರಾದ ಅನಕೃ ಕೂಡ ಹಳ್ಳಿ ಸುತ್ತಿ ಪುಸ್ತಕ ಮಾರಿದರು.

ನಾವು ಓದುವ ವರ್ಗವನ್ನು ಸೃಷ್ಟಿಸುತ್ತಿಲ್ಲ ಎಂಬುದು ಸ್ಪಷ್ಟವಿದೆ. ಹೋಂವರ್ಕ್ ಮಾಡಿದರೆ ಸಾಕು ಪೋಷಕರ ಮುಖ ಅರಳುತ್ತದೆ. ಅಂಕ ಬಂದರೆ ಸಾಕು ನೌಕರಿ ದಕ್ಕುತ್ತದೆ. ಮತ್ತ್ಯಾಕೆ ಓದು? ಓದುವಿಕೆ ತೋರಿಸುವ ಹಲವು ಜಗತ್ತುಗಳ ರುಚಿ ಮಕ್ಕಳಿಗೆ ಗೊತ್ತಾಗುವುದೇ ಇಲ್ಲ. ಭವಿಷ್ಯದಲ್ಲಿ ಅವರ್‍ಹೇಗೆ ಪುಸ್ತಕ ಹಿಡಿದಾರು?

ಶಿವಮೊಗ್ಗದಲ್ಲಿ ಒಮ್ಮೆ ನಾನು ಪುಸ್ತಕ ಕೊಳ್ಳುವಾಗ ಸುಮಾರು 12-13 ವರ್ಷ ವಯಸ್ಸಿನ ಹುಡುಗನೊಬ್ಬ ಇಂಗ್ಲಿಷ್ ಕಾದಂಬರಿ ಕೇಳಿದ. ಆ ವಯಸ್ಸಿನ ಮಗು ಇಂಗ್ಲಿಷ್ ಕಾದಂಬರಿ ಓದಲು ಹೇಗೆ ಸಾಧ್ಯ ಎಂಬ ಅನುಮಾನ ಬಂದು ವಿಚಾರಿಸಿದೆ. ಆತ ದುಬೈನಿಂದ ಬಂದಿದ್ದ ಹುಡುಗ. ಅಲ್ಲಿ 'ಅರಬ್ಬಿ ರೀಡಿಂಗ್ ಚಾಲೆಂಜ್' ಎಂಬುದು ಇದೆಯಂತೆ. ನನಗೆ ಅನುಮಾನ ಬಂದು ಗೂಗಲಿಸಿ ನೋಡಿ ದಂಗಾದೆ. ನಮ್ಮ ಮಕ್ಕಳನ್ನು ನೆನೆದು ಖೇದವೆನಿಸಿತು.

ಇಷ್ಟೆಲ್ಲಾ ಜಂಜಾಟಗಳ ನಡುವೆಯೂ ಓದಲು ಕಾದು ಕೂತ ವರ್ಗವಿದೆ. ಅವರಿಗೆ ಪುಸ್ತಕಗಳ ಬಗ್ಗೆ ಮಾಹಿತಿ ಸಿಗುತ್ತಿಲ್ಲ. ಪುಸ್ತಕಗಳ ಒಂದೇ ಒಂದು ಜಾಹೀರಾತನ್ನೂ ಈ ಕಣ್ಣು ನೋಡಲಿಲ್ಲ. ಕೈಗೆ ಎಟಕುವ ಸಮೀಪದಲ್ಲಿ ಪುಸ್ತಕಗಳಿಲ್ಲ. ಗ್ರಂಥಾಲಯಗಳು ಯಾಕೋ ಮೋಡಿ ಮಾಡುತ್ತಿಲ್ಲ. ಗಲ್ಲಿ ಗಲ್ಲಿಗಳಲ್ಲಿ ಸುಲಭವಾಗಿ ಪುಸ್ತಕಗಳು ಸಿಗುವಂತಾದರೆ ಪುಸ್ತಕ ಹಿಡಿದು ಕೂರುವವರಿದ್ದಾರೆ. ಆರು ಕೋಟಿ ಕನ್ನಡಿಗರು ಇರುವ ನಮ್ಮಲ್ಲಿ ಪುಸ್ತಕದ ಸಾವಿರ ಪ್ರತಿ ಖಾಲಿಯಾದರೆ ಅದೇ ಲೇಖಕನ ದೊಡ್ಡ ಯಶಸ್ಸು!

ಸಮಾಜದ ಆರೋಗ್ಯದ ಲಾಭಕ್ಕಾಗಿ ಪ್ರತೀ ತಾಲ್ಲೂಕಿನಲ್ಲಿ ಒಂದು ಸರ್ಕಾರಿ ಪುಸ್ತಕದ ಮಳಿಗೆ ತೆರೆಯುವ ಅವಶ್ಯಕತೆ ಇದೆ. ಉಚಿತವಲ್ಲದೆ ಇದ್ದರೂ ಅರ್ಧಬೆಲೆಯಲ್ಲಾದರೂ ಪುಸ್ತಕಗಳು ಜನರ ಬೇಡಿಕೆಗೆ ಅನುಗುಣವಾಗಿ ಅಲ್ಲಿ ಸಿಗುವಂತಾಗಬೇಕು. ಇದರಿಂದ ಬರಹಗಾರರು, ಪ್ರಕಾಶಕರು ಮತ್ತು ಓದುಗಾರರನ್ನು ಪ್ರೋತ್ಸಾಹಿಸಿದಂತೆ ಆಗುತ್ತದೆ.

'ನಾವು ಆರ್ಥಿಕವಾಗಿ ಸಬಲರಾಗಿದ್ದೇವೆ. ಆದರೆ ಜ್ಞಾನದ ಸಬಲತೆ, ತಿಳಿವಳಿಕೆಯ ಸಬಲತೆ, ವಿವೇಕದ ಸಬಲತೆ ನಮಗೆ ಬೇಕಿದೆ. ಅದಕ್ಕಾಗಿ ಮಕ್ಕಳನ್ನು ಪುಸ್ತಕದ ಒಡಲಿಗೆ ಹಾಕುತ್ತಿದ್ದೇವೆ' ಎಂದ ದುಬೈ ಅಧ್ಯಕ್ಷರ ಮಾತು, ನಿತ್ಯ ಪತ್ರಿಕೆಯಲ್ಲಿ ಅಪರಾಧದ ಸುದ್ದಿಗಳನ್ನು ಓದುವಾಗ ನೆನಪಾಗುತ್ತದೆ.

ವಾಚಕರ ವಾಣಿ

ಪ್ರಶ್ನಿಸಿದ ಮಾತ್ರಕ್ಕೆ ಜವಾಬ್ದಾರಿ ಮುಗಿಯದು

ಅಗತ್ಯ ವಸ್ತುಗಳ ಬೆಲೆ ಏರಿಕೆ ಮರೆಮಾಚಲು ಬಿಜೆಪಿಯು ಕೋಮುವಾದದ ವಿಷಬೀಜವನ್ನು ಬಿತ್ತುತ್ತಿದೆ ಎಂದಿದ್ದಾರೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ. ಹಾಗೆಯೇ ಸತತವಾಗಿ ಬೆಲೆ ಏರಿಕೆ ಆಗುತ್ತಿದ್ದರೂ ಬಿಜೆಪಿ ಮೌನ ವಹಿಸಿರುವುದೇಕೆ ಎಂದು ಪ್ರಶ್ನಿಸಿದ್ದಾರೆ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ (ಪ್ರ.ವಾ., ಏ. 4). ಹಿಂದೆ ಖಾಲಿ ಸಿಲಿಂಡರ್ ಹೊತ್ತು ಬೀದಿಯಲ್ಲಿ ಪ್ರತಿಭಟಿಸಿದ್ದ ಬಿಜೆಪಿ ಈಗಲೂ ಹಾಗೇ ಮಾಡಲಿ ಎಂದು ಅವರು ಸವಾಲು ಹಾಕಿದ್ದಾರೆ.

ಸರಿಯೇ. ಆದರೆ ಈ ರೀತಿ ಬರೀ ಪ್ರಶ್ನಿಸಿದರೆ ಅಥವಾ ಸವಾಲು ಹಾಕಿದರೆ ಅಲ್ಲಿಗೆ ಇವರ ಜವಾಬ್ದಾರಿ ಮುಗಿಯಿತೇ? ಇವರು ಕೂಡ ಬೀದಿಗಿಳಿದು ಬೆಲೆ ಏರಿಕೆ ವಿರುದ್ಧ ಜನಪರವಾಗಿ ಹೋರಾಡಬೇಕು ತಾನೆ? ಆ ಕೆಲಸ ಆಗುತ್ತಿಲ್ಲ. ಇದರಿಂದಾಗಿ ಜನಸಾಮಾನ್ಯರಿಗೆ ಇವರ ಮೇಲೆ ವಿಶ್ವಾಸವೇ ಇಲ್ಲದಂತಾಗಿದೆ. ಬಿಜೆಪಿ ಈಗಾಗಲೇ ಬೂತ್ ಮಟ್ಟದಲ್ಲಿ ಚುನಾವಣಾ ತಯಾರಿ ನಡೆಸಿರುವಾಗ ಕಾಂಗ್ರೆಸ್, ಜೆಡಿಎಸ್ ಪಕ್ಷಗಳು ಬರೀ ಹೇಳಿಕೆ ನೀಡುತ್ತಾ ಕಾಲಹರಣ ಮಾಡುತ್ತಿವೆ. ಹೀಗಾಗಿ, ಆಳುವ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಏರಿಸುತ್ತಲೇ ಇದೆ. ಬಡವರ ಗೋಳನ್ನು ಕೇಳುವವರೇ ಇಲ್ಲದಂತಾಗಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ದುರಿತ ಕಾಲದಲ್ಲಿ ಸ್ವಾಗತಾರ್ಹ ಸಂದೇಶ

ಪ್ರಸ್ತುತ ಭಿನ್ನ ರಾಜಕೀಯ ಸಿದ್ಧಾಂತದ ಕಾರ್ಯಕರ್ತರು ತಂತಮ್ಮ ಪಕ್ಷದ ಹಿತಾಸಕ್ತಿಯ ಕಾರಣಕ್ಕಾಗಿ ಬಸವ, ಕುವೆಂಪು ಆದಿಯಾಗಿ ಕಟ್ಟಿ ಬೆಳೆಸಿದ ಸರ್ವ ಜನಾಂಗದ ಶಾಂತಿಯ ತೋಟವಾದ ಕರ್ನಾಟಕದಲ್ಲಿ ಕೋಮು ದ್ವೇಷದ ಕಿಡಿ ಹಾರಿಸುವ ಯತ್ನದಲ್ಲಿದ್ದಾರೆ. ಇಂಥ ದುರಿತ ಕಾಲದಲ್ಲಿ ಆರ್ಯ ಮಹಾಮಂಡಳಿಯ ರಾಷ್ಟ್ರೀಯ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ಅವರು ಶುಭಕೃತು ಸಂವತ್ಸರದ ಅನ್ವರ್ಥ ಯುಗಾದಿ ಸಂದೇಶವಾಗಿ 'ಅನ್ಯಧರ್ಮದ ಮೇಲೆ ಕಟ್ಟುಪಾಡು ಹೇರಿಕೆ ಸಲ್ಲದು' ಎಂದೂ, 'ನಮ್ಮ ಸಂವಿಧಾನವೇ ನಮ್ಮ ದೇವರು' ಎಂದೂ ಮುತ್ತಿನಂಥ ಮಾತನಾಡಿರುವುದು (ಪ್ರ.ವಾ., ಏ. 4) ಸ್ವಾಗತಾರ್ಹ. ಬೇರೆ ಬೇರೆ ಜಾತಿ ಜನಾಂಗದ ಮಠಾಧೀಶರೂ ಇಂಥ ಕಿವಿಮಾತನ್ನು ತಂತಮ್ಮ ಸಮೂಹದ ಯುವಜನರಿಗೆ ಹೇಳುವುದಾದರೆ ಕೋಮು ಸೌಹಾರ್ದ ಗರಿಗಟ್ಟುವುದರಲ್ಲಿ ಸಂಶಯವಿಲ್ಲ.

ಪ್ರೊ. ಶಿವರಾಮಯ್ಯ, ಬೆಂಗಳೂರು

ಹಸಿವು ನೀಗಿಸಿ, ಶೀರ್ ಕುರ್ಮಾ ತಿನ್ನಿಸಿ

ಮುಸ್ಲಿಮರಿಗೆ ಬಹಳ ಪವಿತ್ರವಾದ ರಂಜಾನ್ ತಿಂಗಳು ಆರಂಭವಾಗಿದೆ. ಸಂಯಮ ಮತ್ತು ಸೌಹಾರ್ದವನ್ನು ಪುನರುಜ್ಜೀವಿಸುವ ಅಪೂರ್ವ ಅವಕಾಶ. ಬಡತನ, ಹಸಿವು, ನಿರುದ್ಯೋಗ ಇವುಗಳಿಗೆ ಜಾತಿ ಧರ್ಮಗಳಿಲ್ಲ. ಈ ತಿಂಗಳು ಜಾತಿಭೇದವಿಲ್ಲದೇ ಬಡವರಿಗೆ ಅನ್ನ ನೀಡಿ, ಹಸಿವನ್ನು ನೀಗಿಸಿ, ಶೀರ್ ಕುರ್ಮಾ ತಿನ್ನಿಸಿ, ಜೀವನೋಪಾಯವನ್ನು ಕಲ್ಪಿಸಿ. ಈ ತಿಂಗಳ ಎಲ್ಲ ವಿಶೇಷ ಆಚರಣೆಗಳಲ್ಲಿ, ಮಸೀದಿಗಳ ಒಳಭಾಗದ ದರ್ಶನಕ್ಕಾಗಿ ನೆರೆಹೊರೆಯ ದೇಶಬಾಂಧವರನ್ನು ಆಹ್ವಾನಿಸಿ. ಮಸೀದಿಯೂ ಈ ದೇಶದ ಸಂವಿಧಾನ ನೀಡಿದ ಹಕ್ಕುಗಳಲ್ಲಿ ಒಂದು ಎಂಬುದನ್ನು ಪ್ರತಿಪಾದಿಸಲು, ಮಸೀದಿಯಲ್ಲಿ ಸಂವಿಧಾನದ ಪ್ರಸ್ತಾವನೆಯ ಭಿತ್ತಿಚಿತ್ರವನ್ನು ಹಾಕಿ.

ಕಳೆದ ಕೆಲವು ದಿನಗಳಿಂದ ಸಮಾಜದ ಎಲ್ಲ ಸಮುದಾಯದವರ ಮನಸ್ಸುಗಳಲ್ಲಿ ಅಶಾಂತಿ, ಅಸಮಾಧಾನ, ಅಸಂಯಮ ಮನೆಮಾಡಿದೆ. ಅದನ್ನು ಹೋಗಲಾಡಿಸುವಂತೆ ನಿಮ್ಮ ಎಲ್ಲ ಪ್ರಾರ್ಥನೆಗಳಲ್ಲಿ ಅಲ್ಲಾಹುವಿನಲ್ಲಿ ಬೇಡಿಕೊಳ್ಳಿ.

ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ, ಬೆಂಗಳೂರು

ಜನರ ನಾಡಿಮಿಡಿತ ಬಲ್ಲವನಿಗೆ ಟಿಕೆಟ್ ಸಿಗಲಿ

ಚುನಾವಣಾ ವ್ಯವಸ್ಥೆ ಕುರಿತು ವಿಧಾನಸಭೆಯಲ್ಲಿ ಇತ್ತೀಚೆಗೆ ಗಂಭೀರ ಚರ್ಚೆ ನಡೆದಿದೆ. ಚರ್ಚೆಯಲ್ಲಿ ಭಾಗವಹಿಸಿದ್ದ ಎಲ್ಲರೂ ನಮ್ಮ ಚುನಾವಣಾ ವ್ಯವಸ್ಥೆ ತೀರಾ ಹದಗೆಟ್ಟಿದೆ, ದುರಸ್ತಿ ಅಗತ್ಯ ಎಂದು ಅಭಿಪ್ರಾಯಪಟ್ಟಿದ್ದಾರೆ. ಹಾಗಾದರೆ ಈ ದುರಸ್ತಿ ಕಾರ್ಯ ಎಲ್ಲಿಂದ ಪ್ರಾರಂಭವಾಗಬೇಕು? ಯಾರು ಮಾಡಬೇಕು ಎಂಬುದೇ ಚರ್ಚೆಯಾಗಲಿಲ್ಲ. ನಮ್ಮಲ್ಲಿ ಚುನಾವಣಾ ಕಾನೂನು ಮತ್ತು ನಿಯಮಗಳು ಸರಿಯಾಗಿಯೇ ಇವೆ. ಆದರೆ ಆ ಕಾನೂನುಗಳನ್ನು ಮಾಡಿದವರೇ ಪಾಲಿಸದಿರುವುದರಿಂದ ಚುನಾವಣಾ ವ್ಯವಸ್ಥೆಯೇ ಹದಗೆಟ್ಟಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಇಂದಿನ ಯಾವುದೇ ಪಕ್ಷದಿಂದ ಅಭ್ಯರ್ಥಿಯಾಗಬೇಕಾದ ಮಾನದಂಡಗಳನ್ನು ನೋಡಿದರೆ ಭಯ ಹುಟ್ಟಿಸುವಂತಿವೆ. ನೂರಾರು ಕೋಟಿ ರೂಪಾಯಿಯ ಒಡೆಯರು, ದಂಡು ದಾಳಿಗೆ ಸಿದ್ಧರಿರುವ ಪಡೆ ಹೊಂದಿರುವ ಅಭ್ಯರ್ಥಿಗಳೇ ಎಲ್ಲ ಪಕ್ಷಗಳಿಗೂ ಅಚ್ಚುಮೆಚ್ಚು. ಏಕೆಂದರೆ ಗೆಲ್ಲುವ ಕುದುರೆಗೇ ಹೆಚ್ಚಿನ ಬೆಲೆ.

ಚುನಾವಣಾ ವ್ಯವಸ್ಥೆಯಲ್ಲಿ ಎಲ್ಲ ಪಕ್ಷಗಳಿಗೂ ಬಹುಮತದ ಗೆರೆ ದಾಟುವುದೇ ಗುರಿಯಾಗಿರುತ್ತದೆ. ಹೀಗಾಗಿ ಅಭ್ಯರ್ಥಿಗಳ ಹಣಬಲ, ತೋಳ್ಬಲವನ್ನೇ ಮಾನದಂಡವನ್ನಾಗಿ ಪರಿಗಣಿಸಿ, ಅಭ್ಯರ್ಥಿಗಳನ್ನಾಗಿ ಮಾಡಲಾಗುತ್ತದೆ. ಮತದಾರರಿಗೂ ಇಲ್ಲಿ ಆಯ್ಕೆ ಇಲ್ಲವಾದ್ದರಿಂದ ಕುರುಡುಗಣ್ಣಿಗಿಂತ ಮೆಳ್ಳೆಗಣ್ಣು ವಾಸಿ ಎಂದು ಇದ್ದವರಲ್ಲೇ ಒಬ್ಬರನ್ನು ಆಯ್ಕೆ ಮಾಡುವ ಪರಿಸ್ಥಿತಿ ಇದೆ. ಖಂಡಿತವಾಗಿಯೂ ಇವರಲ್ಲಿ ಯಾರೊಬ್ಬರೂ ಜನರನ್ನು ಪ್ರತಿನಿಧಿಸುವುದಿಲ್ಲ. ಎಲ್ಲರೂ ತಮ್ಮ ತಮ್ಮ ಪಕ್ಷದ ನಾಯಕರ ಹಿತಾಸಕ್ತಿಗಾಗಿಯೇ ಕೆಲಸ ಮಾಡುವವರಾಗಿರುತ್ತಾರೆ. ಹಾಗಾದರೆ ಚುನಾವಣೆ ವ್ಯವಸ್ಥೆ ಸರಿ ಇಲ್ಲವೋ ಪಕ್ಷದಲ್ಲಿರುವ ನೀತಿ ನಿಯಮಗಳು ಸರಿ ಇಲ್ಲವೋ ಎಂಬ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಸದನದಲ್ಲಿ ಚುನಾವಣಾ ವ್ಯವಸ್ಥೆ ಕುರಿತು ಮಾತನಾಡಿದವರೆಲ್ಲರೂ ತಮ್ಮ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಗುರುತಿಸುವ ಹಂತದಲ್ಲಿರುವವರೇ. ಹೀಗಾಗಿ ಅವರೆಲ್ಲರೂ ಸದನದಲ್ಲಿ ಚರ್ಚಿಸಿ, ಸದನದ ಸಮಯ ವ್ಯರ್ಥ ಮಾಡುವುದಕ್ಕಿಂತ ತಮ್ಮ ಪಕ್ಷದಲ್ಲೇ ಸಾಮಾನ್ಯ ಕಾರ್ಯಕರ್ತನಿಗೆ, ಜನರ ನಾಡಿಮಿಡಿತ ಬಲ್ಲವನಿಗೆ ಟಿಕೆಟ್ ಕೊಡುವ ಪದ್ಧತಿ ಜಾರಿಗೆ ತರುವುದು ಒಳ್ಳೆಯದು. ಆಗ ಚುನಾವಣೆ ವ್ಯವಸ್ಥೆಯೂ ಸರಿ ಹೋಗುತ್ತದೆ, ಪ್ರಾಮಾಣಿಕ ರಾಜಕಾರಣಿಗಳೂ ಅಧಿಕಾರದ ಗದ್ದುಗೆ ಏರುತ್ತಾರೆ.

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿದ್ಯುದಾಘಾತ...

ಖರೀದಿಗಿಂತಲೂ ಹೆಚ್ಚಿನ ದರದಲ್ಲಿ ಪೂರೈಕೆ

* ಉಚಿತ, ಬಿಪಿಎಲ್ ಚೀಟಿದಾರರನ್ನು ಹೊರತುಪಡಿಸಿ ಗೃಹಬಳಕೆಯ ಸಾಮಾನ್ಯ ಗ್ರಾಹಕರಿಗೆ ವಿಧಿಸುತ್ತಿರುವ ಮೊದಲ ಸ್ಲ್ಯಾಬ್‌ನ ದರ



ಪ್ರಜಾವಾಣಿ ವಾರ್ತೆ

ಕರ್ನಾಟಕದಲ್ಲಿ ಗೃಹ ಬಳಕೆ ವಿದ್ಯುತ್‌ನ ದರದಲ್ಲಿ ಏರಿಕೆಯಾಗಿದೆ. ದೇಶದ ಹಲವು ರಾಜ್ಯಗಳಲ್ಲೂ ಏಪ್ರಿಲ್ 1ರಿಂದ ಅನ್ವಯವಾಗುವಂತೆ ವಿದ್ಯುತ್ ದರವನ್ನು ಏರಿಕೆ ಮಾಡಲಾಗಿದೆ. ಗ್ರಾಹಕ ಬಳಕೆಯ ಎಲ್ಲಾ ವಸ್ತುಗಳ ಬೆಲೆ ಏರಿಕೆಯಾಗುತ್ತಿರುವ ಈ ಸಂದರ್ಭದಲ್ಲಿ ವಿದ್ಯುತ್‌ನ ದರದಲ್ಲಿ ಆಗಿರುವ ಏರಿಕೆಯು ಸ್ವಲ್ಪ ಪ್ರಮಾಣದ್ದೇ ಆಗಿದ್ದರೂ, ಅದು ಗ್ರಾಹಕರ ಜೇಬಿಗೆ ಭಾರವೇ ಆಗಿದೆ.

ದೇಶದಲ್ಲಿನ ಎಲ್ಲಾ ರಾಜ್ಯಗಳಲ್ಲಿ ಗೃಹಬಳಕೆ ಗ್ರಾಹಕರು ಪ್ರತಿ ಯೂನಿಟ್ ವಿದ್ಯುತ್‌ಗೆ ಪಾವತಿಸಬೇಕಾದ ಶುಲ್ಕದಲ್ಲಿ ಏಕರೂಪತೆ ಇಲ್ಲ. ಪ್ರತಿ ರಾಜ್ಯವೂ ವಿದ್ಯುತ್ ಖರೀದಿಸಲು ಪಾವತಿಸಬೇಕಾದ ವೆಚ್ಚದಲ್ಲೂ ಏಕರೂಪತೆ ಇಲ್ಲ. ಕೆಲವು ರಾಜ್ಯಗಳು ಪ್ರತಿ ಯೂನಿಟ್ ವಿದ್ಯುತ್ ಖರೀದಿಸಲು ಭಾರಿ ಶುಲ್ಕವನ್ನು ಪಾವತಿಸುತ್ತಿವೆ. ಕೆಲವು ರಾಜ್ಯಗಳು ಅತ್ಯಂತ ಕಡಿಮೆ ಶುಲ್ಕದಲ್ಲಿ ವಿದ್ಯುತ್ ಖರೀದಿಸುತ್ತಿವೆ. ಹಲವು ರಾಜ್ಯಗಳು ತಾವು ಖರೀದಿಸಿದ ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಗ್ರಾಹಕರಿಗೆ ವಿದ್ಯುತ್ ಪೂರೈಸುತ್ತಿವೆ. ಕೆಲವು ರಾಜ್ಯಗಳು ತಾವು ಖರೀದಿಸಿದ್ದಕ್ಕಿಂತ ಹೆಚ್ಚಿನ ದರದಲ್ಲಿ ಗ್ರಾಹಕರಿಗೆ ವಿದ್ಯುತ್ ಪೂರೈಸುತ್ತಿವೆ.

ಎಲ್ಲಾ ರಾಜ್ಯಗಳು ತಮಗೆ ಅಗತ್ಯವಿರುವಷ್ಟು ವಿದ್ಯುತ್ ಅನ್ನು ಉತ್ಪಾದಿಸಲು ಸಾಧ್ಯವಿಲ್ಲದೇ ಇರುವುದರಿಂದ, ಬೇರೆ ರಾಜ್ಯಗಳಿಂದ ವಿದ್ಯುತ್ ಖರೀದಿಸುತ್ತವೆ. ಹೀಗಾಗಿಯೇ ಪ್ರತೀ ರಾಜ್ಯಗಳು ಖರೀದಿಸುವ ವಿದ್ಯುತ್‌ನ ದರದಲ್ಲಿ ಭಾರಿ ವ್ಯತ್ಯಾಸವಿದೆ. ಬೇರೆ ರಾಜ್ಯಗಳಿಂದ ಖರೀದಿಸುವ ವಿದ್ಯುತ್ ಶುಲ್ಕ ಮತ್ತು ಅದರ ಸಾಗಾಟದ ವೆಚ್ಚ, ಸಾಗಾಟದಲ್ಲಿನ ಸೋರಿಕೆಯ ನಷ್ಟವನ್ನು ಕೂಡಿ, ಖರೀದಿ ವೆಚ್ಚವನ್ನು ನಿರ್ಧರಿಸಲಾಗುತ್ತದೆ. ಪ್ರತೀ ರಾಜ್ಯದಲ್ಲಿ ಉತ್ಪಾದಿಸಲಾಗುವ ಮತ್ತು ಆ ರಾಜ್ಯವು ಖರೀದಿಸುವ ವಿದ್ಯುತ್‌ನ ಒಟ್ಟು ಮೊತ್ತವನ್ನು ಲೆಕ್ಕಹಾಕಿ, ಪ್ರತಿ ಯೂನಿಟ್‌ಗೆ ತಗಲುವ ವೆಚ್ಚವನ್ನು ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ನಿರ್ಧರಿಸುತ್ತದೆ. ಕೆಲವು ರಾಜ್ಯಗಳಲ್ಲಿ ಖರೀದಿ ವೆಚ್ಚ ಅತ್ಯಧಿಕವಾಗಿದ್ದರೂ, ರಾಜ್ಯ ಸರ್ಕಾರಗಳು ಸಹಾಯಧನದ ದರದಲ್ಲಿ ಗ್ರಾಹಕರಿಗೆ ವಿದ್ಯುತ್ ಪೂರೈಸುತ್ತವೆ. ಹಲವು ರಾಜ್ಯಗಳು ವಿದ್ಯುತ್ ಖರೀದಿ ವೆಚ್ಚದ ಮೇಲೆ ಲಾಭಗಳಿಸುವಷ್ಟು ದರದಲ್ಲಿ, ಗ್ರಾಹಕರಿಗೆ ವಿದ್ಯುತ್ ಪೂರೈಸುತ್ತಿವೆ.

- ಮಧ್ಯಪ್ರದೇಶವು ಗರಿಷ್ಠ ದರದಲ್ಲಿ ವಿದ್ಯುತ್ ಖರೀದಿಸುತ್ತಿರುವ ರಾಜ್ಯ. ಆದರೆ ಖರೀದಿಸಿದ ದರಕ್ಕಿಂತ ಹಲವುಪಟ್ಟು ಕಡಿಮೆ ದರದಲ್ಲಿ ಗೃಹ ಬಳಕೆ ಗ್ರಾಹಕರಿಗೆ ವಿದ್ಯುತ್ ಪೂರೈಸುತ್ತಿದೆ
- ಸಿಕ್ಕಿಂ ರಾಜ್ಯವು ಅತ್ಯಂತ ಕಡಿಮೆ ದರದಲ್ಲಿ ಗ್ರಾಹಕರಿಗೆ ವಿದ್ಯುತ್ ಪೂರೈಸುತ್ತಿರುವ ರಾಜ್ಯ. ರಾಜ್ಯವು ಪ್ರತಿ ಯೂನಿಟ್‌ಗೆ ₹4.06 ದರದಲ್ಲಿ ವಿದ್ಯುತ್ ಖರೀದಿಸುತ್ತಿದೆ. ಆದರೆ, ಗೃಹ ಬಳಕೆ ಗ್ರಾಹಕರಿಗೆ ಪ್ರತಿ ಯುನಿಟ್‌ಗೆ ₹1.10 ದರದಲ್ಲಿ ವಿದ್ಯುತ್ ಪೂರೈಸುತ್ತಿದೆ
- ಆಂಧ್ರ ಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಗುಜರಾತ್, ಪಂಜಾಬ್, ಹರಿಯಾಣ, ಉತ್ತರಾಖಂಡ, ಮಿಜೋರಾಂ, ಗೋವಾ, ತ್ರಿಪುರಾ, ಹಿಮಾಚಲ ಪ್ರದೇಶ ಸರ್ಕಾರಗಳು ಖರೀದಿ ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಗೃಹ ಬಳಕೆ ಗ್ರಾಹಕರಿಗೆ ವಿದ್ಯುತ್ ಪೂರೈಸುತ್ತಿವೆ

₹4.38 ಕರ್ನಾಟಕ ಸರ್ಕಾರಕ್ಕೆ ತಗಲುವ ವಿದ್ಯುತ್ ಖರೀದಿ ವೆಚ್ಚ

₹4.15 ಕರ್ನಾಟಕ ಸರ್ಕಾರ ಗ್ರಾಹಕರಿಗೆ ಪೂರೈಸುತ್ತಿರುವ ಮೊದಲ ಸ್ಲ್ಯಾಬ್‌ನ ದರ

(ಒಂದು ಯೂನಿಟ್‌ಗೆ)

ಏರಿಕೆ ಅನಿವಾರ್ಯವಿರಲಿಲ್ಲ



ಕೋವಿಡ್ ಕಾರಣದಿಂದ 2 ವರ್ಷ ಶೇ 40ಕ್ಕಿಂತಲೂ ಹೆಚ್ಚಿನ ಕೈಗಾರಿಕೆಗಳು ಸ್ಥಗಿತಗೊಂಡಿದ್ದವು. ವಿದ್ಯುತ್ಶಕ್ತಿ ಬಳಸದಿದ್ದರೂ ಕನಿಷ್ಠ ದರವನ್ನು ಕೈಗಾರಿಕೋದ್ಯಮಿಗಳು ಪಾವತಿಸಿದ್ದರು. ಆ ಮೂಲಕ ವಿದ್ಯುತ್ ಸರಬರಾಜು ಕಂಪನಿ ಉಚಿತವಾಗಿ ಹಣ ಪಡೆದಂತಾಗಿದೆ. ಜೂನ್ 2021ರಲ್ಲಿ 1 ಎಚ್‌ಪಿ ವಿದ್ಯುತ್‌ಗೆ ₹ 15, 1 ಯುನಿಟ್‌ಗೆ 15 ಪೈಸೆಯಂತೆ ಹೆಚ್ಚಿಸಲಾಗಿತ್ತು. ಆದರೆ, ಮತ್ತೆ ದರ ಹೆಚ್ಚಿರುವುದು ಕೈಗಾರಿಕೋದ್ಯಮಿಗಳನ್ನು ಹೈರಾಣಾಗಿಸಿದೆ. ಯಾವುದೇ ಕಾರಣಕ್ಕೂ ವಿದ್ಯುತ್ ದರ ಏರಿಕೆ ಬೇಡ ಎಂದು ನಾನು ಆಯೋಗಕ್ಕೆ ಮನವಿ ಮಾಡಿದ್ದೆ. ಆದರೆ ಅದನ್ನು ಆಯೋಗ ಪರಿಗಣಿಸಿಲ್ಲ. ಖಾದ್ಯತೈಲ, ಇಂಧನ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಈಗಾಗಲೇ ಬಸವಳಿದಿರುವ ಜನರ ಮೇಲೆ ಆಯೋಗ ಬರೆ ಎಳೆದಿದೆ. ಹೆಚ್ಚಿನ ಶುಲ್ಕಕ್ಕೆ ವಿದ್ಯುತ್ ಖರೀದಿಸಿ ಕಡಿಮೆ ಬೆಲೆಗೆ ಹೊರರಾಜ್ಯಕ್ಕೆ ಮಾರುತ್ತಿರುವುದರಿಂದ ಉಂಟಾಗುತ್ತಿರುವ ನಷ್ಟವನ್ನು ದರ ಏರಿಕೆಯ ಮೂಲಕ ಸರಿದೂಗಿಸಿಕೊಳ್ಳುತ್ತಿರುವುದು ಎಷ್ಟು ಸರಿ?

ವಿದ್ಯುತ್ ಪೂರೈಕೆಯಲ್ಲಿ ಅನಗತ್ಯ ವೆಚ್ಚಗಳ ಏರಿಕೆ, ವಿದ್ಯುತ್ ಖರೀದಿಯಲ್ಲಿ ರಾಜಕೀಯ ಹಸ್ತಕ್ಷೇಪ, ಸರ್ಕಾರದ ಸಂಸ್ಥೆಗಳಿಂದ ಬರಬೇಕಾದ ₹511.23 ಕೋಟಿ ವಿದ್ಯುತ್ ಶುಲ್ಕ ವಸೂಲಿ ಮಾಡುವಲ್ಲಿ ವಿಫಲವಾಗಿರುವುದು, ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಇಲ್ಲದೆ ವಿದ್ಯುತ್ ಪೂರೈಕೆ, ವಿದ್ಯುತ್ ಸಾಗಾಣಿಕೆ ಮತ್ತು ವಿತರಣೆಯ ನಷ್ಟ – ಈ ಎಲ್ಲವನ್ನೂ ವೈಜ್ಞಾನಿಕ ಕ್ರಮಗಳ ಮೂಲಕ ಸರಿಪಡಿಸಬೇಕಾಗಿತ್ತು. ಅದನ್ನು ಬಿಟ್ಟು ದರ ಹೆಚ್ಚಿಸಿ ನಷ್ಟವನ್ನು ತುಂಬಿಕೊಳ್ಳುತ್ತಿರುವುದು ಜನಸಾಮಾನ್ಯರ ಬದುಕನ್ನು ಹಿಂಡಿದಂತಾಗಿದೆ. 2020 - 21ರಲ್ಲಿ ಗ್ರಾಹಕರ ಅರಿವು ಕಾರ್ಯಕ್ರಮಕ್ಕಾಗಿ ₹23 ಲಕ್ಷ ವೆಚ್ಚವಾಗಿದೆ ಎಂದು ಸೆಸ್ಕ್ ಹೇಳಿದೆ. ಲಾಕ್‌ಡೌನ್‌ನಲ್ಲಿ ಅಷ್ಟೊಂದು ಹಣ ಹೇಗೆ ಖರ್ಚಾಯಿತು? ಕೈಗಾರಿಕೆಗಳು ಹಾಗೂ ಗ್ರಾಹಕರೊಂದಿಗೆ ಸಭೆ ನಡೆಸಿಲ್ಲ. ಆ ಕುರಿತ ಮಾಹಿತಿಯೂ ಇಲ್ಲ. ಇಂಥ ಅನಗತ್ಯ ಖರ್ಚುಗಳಿಗೆ ಕಡಿವಾಣ ಹಾಕಿದ್ದರೆ ದರ ಏರಿಕೆಯ ಅನಿವಾರ್ಯತೆಯೇ ಉಂಟಾಗುತ್ತಿರಲಿಲ್ಲ.

ವಾಸು, ಮೈಸೂರು ಕೈಗಾರಿಕೆಗಳ ಸಂಘದ ಅಧ್ಯಕ್ಷ

ನಮಗೆ ದುಬಾರಿ, ಹೊರರಾಜ್ಯಕ್ಕೆ ಅಗ್ಗ!

ರಾಜ್ಯದಲ್ಲಿನ ಕೈಗಾರಿಕೆಗಳು ಹಾಗೂ ಇತರೆ ಗ್ರಾಹಕರಿಗೆ ವಿಧಿಸುವ ವಿದ್ಯುತ್ ಶುಲ್ಕಕ್ಕಿಂತ ತೀರಾ ಅಗ್ಗದ ದರಕ್ಕೆ ಹೊರರಾಜ್ಯದವರಿಗೆ ಮಾರಾಟ ಮಾಡಲಾಗುತ್ತಿದೆ. ಹೊರರಾಜ್ಯಕ್ಕೆ ಪ್ರತಿ ಯೂನಿಟ್‌ಗೆ ಕೇವಲ ₹2.38 ದರ ನಿಗದಿಪಡಿಸಲಾಗಿದೆ. ಈ ತಾರತಮ್ಯ ಸರಿಪಡಿಸಬೇಕು.

ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳಿಂದ ವಿದ್ಯುತ್ ಖರೀದಿಸದಿದ್ದರೂ ನಿರ್ದಿಷ್ಟ ಶುಲ್ಕವನ್ನು ರಾಜ್ಯಗಳು ಪಾವತಿಸಲೇಬೇಕು. ಅದು ಕೂಡ ನಷ್ಟಕ್ಕೆ ಕಾರಣ. ವಿದ್ಯುತ್ ಕ್ಷೇತ್ರದಲ್ಲಿ ತಾಂತ್ರಿಕ ನೈಪುಣ್ಯ ಹೊಂದಿರದ ಐಎಎಸ್, ಕೆಎಎಸ್ ದರ್ಜೆಯ ಅಧಿಕಾರಿಗಳನ್ನೇ ಎಸ್ಕಾಂಗಳಿಗೆ ನೇಮಕ ಮಾಡುವುದರಿಂದ ಹೆಚ್ಚಿನ ಸುಧಾರಣೆ ನಿರೀಕ್ಷಿಸಲು ಸಾಧ್ಯವಿಲ್ಲ.

ಲಕ್ಷ್ಮಿಕಾಂತ್
ಕೆಪಿಟಿಸಿಎಲ್‌ನ ನಿವೃತ್ತ ಮುಖ್ಯ ಎಂಜಿನಿಯರ್

ವಿದ್ಯುತ್ ಉತ್ಪಾದನೆ

ದೇಶದಲ್ಲಿ ಎಲ್ಲ ವಿದ್ಯುತ್ ಮೂಲಗಳಿಂದ ವರ್ಷದಲ್ಲಿ 3.95 ಲಕ್ಷ ಮೆಗಾವಾಟ್ ಉತ್ಪಾದನೆಯಾಗುತ್ತಿದೆ. ಇದರಲ್ಲಿ ಕಲ್ಲಿದ್ದಲು ಬಳಸಿ ವಿದ್ಯುತ್ ಉತ್ಪಾದಿಸುವ ಉಷ್ಣವಿದ್ಯುತ್ ಸ್ಥಾವರಗಳದ್ದು ಸಿಂಹಪಾಲು. ಶೇ 60ರಷ್ಟು ವಿದ್ಯುತ್ ಅನ್ನು ಈ ಸ್ಥಾವರಗಳು ಪೂರೈಸುತ್ತವೆ. ನಂತರದ ಸ್ಥಾನಗಳಲ್ಲಿ ಸೌರ ವಿದ್ಯುತ್, ಜಲವಿದ್ಯುತ್ ಹಾಗೂ ಪವನ ವಿದ್ಯುತ್ ಉತ್ಪಾದನಾ ಘಟಕಗಳಿವೆ.
ಆಮದು ಮಾಡಿಕೊಂಡ ಕಲ್ಲಿದ್ದಲು, ಡೀಸೆಲ್, ನೈಸರ್ಗಿಕ ಅನಿಲ ಬಳಸಿ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಆಮದು ವೆಚ್ಚ ಹೆಚ್ಚು ಇರುವ ಕಾರಣ, ವಿದ್ಯುತ್ ಉತ್ಪಾದನೆ ವೆಚ್ಚ ಹೆಚ್ಚಳವಾಗುತ್ತಿದೆ. ಭೂತಾನ್ ದೇಶದಿಂದ ವಿದ್ಯುತ್ ಖರೀದಿಗೆ ಸರ್ಕಾರ ಹೆಚ್ಚು ಹಣ ಪಾವತಿಸುತ್ತಿದ್ದು, ಶುಲ್ಕ ಏರಿಕೆಗೆ ಇವೆಲ್ಲವೂ ಕಾರಣಗಳಾಗಿವೆ.



ವಿದ್ಯುತ್ ಮೂಲ

ದೇಶದಲ್ಲಿ ಅತಿಹೆಚ್ಚು ವಿದ್ಯುತ್ ಅನ್ನು ಖಾಸಗಿ ವಲಯವೇ ಉತ್ಪಾದಿಸುತ್ತಿದೆ. ಒಟ್ಟು ಉತ್ಪಾದನೆಯ ಶೇ 48.50ರಷ್ಟು ಖಾಸಗಿ ವಿದ್ಯುತ್ ಗ್ರಿಡ್‌ಗಳಿಂದ ಪೂರೈಕೆಯಾಗುತ್ತದೆ. ವಿವಿಧ ರಾಜ್ಯಗಳ ಗ್ರಿಡ್‌ಗಳಿಂದ 1.04 ಲಕ್ಷ ಮೆಗಾವಾಟ್ ಹಾಗೂ ಕೇಂದ್ರದ ಗ್ರಿಡ್‌ನಿಂದ 99 ಸಾವಿರ ಮೆಗಾವಾಟ್ ವಿದ್ಯುತ್ ಪೂರೈಕೆ ಆಗುತ್ತಿದೆ.
ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಗಿಂತ ಖಾಸಗಿ ವಲಯದ ವಿದ್ಯುತ್ ಉತ್ಪಾದನೆ ಪ್ರಮಾಣ ಹೆಚ್ಚಿರುವುದೂ ಸಹ ಬೆಲೆ ಏರಿಕೆಗೆ ಕಾರಣವಾಗಿದೆ. ಹೆಚ್ಚಿನ ದರಕ್ಕೆ ಖಾಸಗಿ ಘಟಕಗಳಿಂದ ವಿವಿಧ ರಾಜ್ಯ ಸರ್ಕಾರಗಳು ವಿದ್ಯುತ್ ಖರೀದಿ ಮಾಡುತ್ತವೆ. ಖರೀದಿ ವೆಚ್ಚ ಹೆಚ್ಚಾದ ಕಾರಣ, ಅದು ಗ್ರಾಹಕರ ಮೇಲೆ ಹೊರೆಯಾಗುತ್ತಿದೆ.



ಆಧಾರ: ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಆಯಾ ರಾಜ್ಯಗಳ ವಿದ್ಯುತ್ ನಿಗಮಗಳ ದರಪಟ್ಟಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 86

ಯುದ್ಧದ ಮಧ್ಯೆ ಉದ್ಭವಲಿಂಗ

ಬ್ರಹ್ಮನಾದ ನನಗೆ ವಿಷ್ಣುವಿನ ಮಾತನ್ನು ಕೇಳಿ ಕೋಪ ಬಂದಿತು. ಶಿವಮಾಯೆಯಿಂದ ಮೋಹಿತನಾಗಿದ್ದ ನಾನು, ವಿಷ್ಣುವನ್ನು 'ಸುಮ್ಮನೆ ಏತಕ್ಕಾಗಿ ಅನರ್ಥದ ಮಾತುಗಳನ್ನು ಹರಟುತ್ತೀಯೆ? ನೀನೇನು ಈಶ್ವರನೇ? ಪರಬ್ರಹ್ಮನೇ? ನಿನ್ನನ್ನೂ ಸೃಷ್ಟಿಸಿದವನು ಮತ್ತೊಬ್ಬನಿರಬೇಕಲ್ಲವೇ?' ಎಂದು ಗದರಿಸಿ ಕೇಳಿದ್ದಲ್ಲದೆ, ಶ್ರೀಹರಿಯೊಡನೆ, ಬಹು ಭಯಂಕರವಾದ ಯುದ್ಧವನ್ನು ಮಾಡಿದೆ.

ಪ್ರಳಯಕಾಲದಲ್ಲಿ ತಾನೇ ತಾನಾಗಿ ವ್ಯಾಪಿಸಿದ್ದ ಆ ಮಹಾಸಾಗರದ ನಡುವೆ, ರಜೋಗಣಕ್ಕೆ ವಶರಾಗಿ, ಬಹುದ್ವೇಷದಿಂದ ಹೊಡೆದಾಡುತ್ತಿದ್ದ ನಮ್ಮೀರ್ವರಿಗೂ ಭಾರಿ ಯುದ್ಧವೇ ನಡೆಯಿತು. ಈ ಜಗಳವನ್ನು ಪರಿಹರಿಸಲೂ, ನಮ್ಮನ್ನು ಈ ಮಾಯೆಯಿಂದ ಎಚ್ಚರಿಸಲೂ, ನಮ್ಮೆದುರಿಗೆ ಲಿಂಗವೊಂದು ಆವಿರ್ಭವಿಸಿತು. ಆ ಲಿಂಗವು ಅಲೆಯಲೆಯಾಗಿ ಹೊರಡುತ್ತಿರುವಾಗ ಸಹಸ್ರಾರು ಜ್ವಾಲೆಗಳನ್ನು ಚೆಲ್ಲುತ್ತಿತ್ತು. ಪ್ರಳಯಕಾಲಾಗ್ನಿಗಳು ನೂರಾರು ಸೇರಿದಂತೆ ಭಯಂಕರವಾಗಿ ಪ್ರಜ್ವಲಿಸುತ್ತಿತ್ತು. ಆದಿ-ಮಧ್ಯಾಂತರ ಗಳಿಲ್ಲದೆ, ಯಾವುದೊಂದರೊಡನೆಯೂ, ಹೋಲಿಸಲು ಅಸಾಧ್ಯವಾದುದಾಗಿತ್ತು.

ಲಿಂಗದ ಸೀಮಾತೀತವಾದ ಪ್ರಭೆಯಿಂದ ಮೋಹಿತನಾದ ವಿಷ್ಣುವು ನನಗೆ ಹೀಗೆ ಹೇಳಿದ. 'ಇನ್ನೇತಕ್ಕೆ ನನ್ನೊಡನೆ ಸೆಣಸುವೆ? ಇಲ್ಲಿ ನೋಡು, ಮೂರನೆಯವನೊಬ್ಬ ಬಂದಿದ್ದಾನೆ. ನಮ್ಮಿಬ್ಬರಿಗೂ ಈ ಯುದ್ಧ ಸಾಕು. ನೀಳವಾದ ಜ್ವಾಲೆಗಳನ್ನು ಕಕ್ಕುತ್ತಿರುವ ಈ ಲಿಂಗವು ಇಲ್ಲಿ ಹೇಗೆ ಸಂಭವಿಸಿತು – ಎನ್ನುವುದನ್ನು ಪರೀಕ್ಷಿಸೋಣ. ಅಸದೃಶವಾದ ಈ ಅನಲಸ್ತಂಭದ ಕೆಳಗೆ ಪರೀಕ್ಷಿಸಲು ವಾಯುವೇಗದಿಂದ ಹೋಗುವೆ. ನೀನೂ ಹಾಗೆಯೇ ಪರೀಕ್ಷಿಸಲು ಮೇಲುಗಡೆ ಬೇಗನೆ ಹೋಗು' ಎಂದ.

ಆಗ ಹರಿಯು ಹಂದಿಯ ರೂಪವನ್ನು ತಾಳಿದ. ನಾನೂ ಹಂಸದ ಸ್ವರೂಪವನ್ನು ಧರಿಸಿದೆ. ಒಳ್ಳೆಯ ಶುಭ್ರವಾದ ಬಣ್ಣವನ್ನು ತಳೆದು, ಬೆಂಕಿಯಂತೆ ಬೆಳಗುತ್ತಾ, ದೊಡ್ಡ ರೆಕ್ಕೆಗಳೊಂದಿಗೆ ಹಾರುತ್ತಾ, ಮನೋವೇಗಕ್ಕಿಂತ ವೇಗವಾಗಿ ಮೇಲಕ್ಕೆ ಬಹುದೂರ ಹೋದೆ. ವರಾಹರೂಪಿ ಶ್ರೀಹರಿಯೂ ಬೆಳ್ಳಗೆ ಆಗಿ ಹೋದ. ಹರಿಯು ತಳೆದ ವರಾಹಕೃತಿಯ ಸ್ವರೂಪ ಎಷ್ಟು ದೊಡ್ಡದಿತ್ತು ಎಂದರೆ, ಅದರ ದೇಹದ ಅಗಲ ಹತ್ತು ಯೋಜನಗಳಷ್ಟು, ಉದ್ದ ನೂರು ಯೋಜನಗಳಷ್ಟು ಇತ್ತು. ಒಟ್ಟಾರೆ ದೇಹವು ಮೇರುಪರ್ವತವನ್ನು ಹೋಲುತ್ತಿತ್ತು. ಕೋರೆದಾಡೆಗಳು ಮೊನಚಾಗಿಯೂ ಭಯಂಕರವಾಗಿಯೂ ಇದ್ದುವು. ಮುಸುಡಿ ಉದ್ದವಾಗಿತ್ತು. 'ಘುರು ಘುರು' ಎಂದು ಬಹು ಗಟ್ಟಿಯಾಗಿ ಶಬ್ದ ಮಾಡುತ್ತಿತ್ತು. ಕಾಲುಗಳು ಗಿಡ್ಡಾಗಿದ್ದುವು, ಅವಯವಗಳೆಲ್ಲವೂ ವಿಚಿತ್ರವಾಗಿದ್ದವು. ವರಾಹವು ಮಹಾಬಲಶಾಲಿಯಾಗಿತ್ತು. ಅದರ ಕಾಂತಿಯು ಪ್ರಳಯ ಕಾಲದ ಸೂರ್ಯನನ್ನು ಹೋಲುತ್ತಿತ್ತು. ಇಂತಹ ವರಾಹಾಕೃತಿಯನ್ನು ತಳೆದು ಬೇಗನೇ, ಆ ಲಿಂಗದ ಬುಡವನ್ನು ಕಂಡುಹಿಡಿಯಲು ಹರಿಯು ಹೊರಟ.

ಈ ರೀತಿಯಾಗಿ ವಿಷ್ಣುವು ಒಂದು ಸಾವಿರ ವರ್ಷಗಳ ಕಾಲ ಸುತ್ತಾಡುತ್ತಾ ಲಿಂಗದ ಕೆಳಕ್ಕೆ ಹೋದ. ಅಂದಿನಿಂದ ಜಗತ್ತಿನಲ್ಲಿ ಆತನಿಗೆ ಶ್ವೇತ ವರಾಹನೆಂಬ ಹೆಸರುಂಟಾಯಿತು. 'ಶ್ವೇತವರಾಹಕಲ್ಪ'ವೆಂಬ ಕಾಲಮಾನವೂ ಉಂಟಾ ಯಿತು. ವರಾಹಮೂರ್ತಿಧಾರಿಯಾದ ವಿಷ್ಣುವಿಗೆ ಲಿಂಗದ ಬುಡವನ್ನು ಕಂಡುಹಿಡಿಯಲಾಗಲಿಲ್ಲ.

ಇತ್ತ ನಾನು ಸಹ ಬಹಳ ಹುಮ್ಮಸ್ಸಿನಿಂದ ಸಾವಿರ ವರ್ಷಗಳ ಕಾಲದವರೆಗೆ ಮೇಲೇರುತ್ತಿದ್ದೆ. ಆದರೆ ಲಿಂಗದ ತುದಿ ಕಾಣದಾದೆ. ಹೇಗಾದರೂ ಮಾಡಿ, ಸರ್ವಪ್ರಯತ್ನದಿಂದಲಾದರೂ, ಬೇಗನೆ ಲಿಂಗದ ತುದಿಯನ್ನು ಕಂಡುಹಿಡಿಯಬೇಕೆಂಬ ಆಸೆಯಿಂದ ಪ್ರಯತ್ನಿಸಿ ವಿಫಲನಾಗಿ ಕೆಳಗಿಳಿದು ಬಂದೆ. ಹಾಗೆಯೇ, ಪುಂಡರೀಕಾಕ್ಷನೂ ಕೆಳಗಡೆ ಕೊನೆಯನ್ನು ಕಂಡು ಹಿಡಿಯ ಲಾರದೆ ಬಳಲಿ ಮೇಲಕ್ಕೇರಿ ಬಂದ. ಆಗ ನಾನೂ ಮತ್ತು ಶ್ರೀಹರಿಯೂ ಮನಸ್ಸನ್ನು ಶುದ್ಧವಾಗಿಟ್ಟುಕೊಂಡು ಲಿಂಗಕ್ಕೆ ನಮಸ್ಕಾರಮಾಡಿ, 'ನಿನ್ನ ಸ್ವರೂಪವನ್ನು ನಮಗೆ ತೋರಿಸು ಎಂದು' ಪ್ರಾರ್ಥಿಸಿದೆವು.

ಹೀಗೆ ಅಹಂಕಾರದಿಂದ ಮತ್ತರಾಗಿದ್ದ ನಾವಿಬ್ಬರೂ ನಮಸ್ಕಾರಗಳನ್ನು ಮಾಡುತ್ತಿರಲು ನೂರು ವರ್ಷಗಳೇ ಕಳೆದುಹೋದವು – ಅಂತ ಬ್ರಹ್ಮ ತನ್ನ ಹುಟ್ಟು ಮತ್ತು ವಿಷ್ಣುವಿನೊಂದಿಗೆ ಕಾದಾಡುವಾಗ, ಧುತ್ತೆಂದು ಬಂದ ಲಿಂಗದ ತಳ-ತಲೆ ಹುಡುಕಾಡಿ ಸೋತ ಕಥೆಯನ್ನು ನಾರದನಿಗೆ ಹೇಳುತ್ತಾನೆ. ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಎರಡನೆಯ ಸಂಹಿತೆಯಾದ ರುದ್ರ ಸಂಹಿತೆಯಲ್ಲಿ ಮೊದಲನೆಯ ಖಂಡವಾದ ಸೃಷ್ಟಿಖಂಡದಲ್ಲಿ ಬರುವ ವಿಷ್ಣು-ಬ್ರಹ್ಮ ವಿವಾದ ವರ್ಣನ ಎಂಬ ಏಳನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರ ಹಳೆಯ ಚಿತ್ರವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಇತರ ಮೂವರೊಂದಿಗೆ ಮಾನ್ ಅವರು ನೆಲದ ಮೇಲೆ ಕುಳಿತಿದ್ದಾರೆ. ಇದು 12 ವರ್ಷಗಳ ಹಿಂದೆ ತೆಗೆಯಲಾದ ಚಿತ್ರ. ಬೈಕ್ ಕದ್ದಿದ್ದ ಅಪರಾಧಕ್ಕಾಗಿ ಭಗವಂತ್ ಮಾನ್ ಮತ್ತು ಅವರ ಮೂವರು ಸ್ನೇಹಿತರನ್ನು ಪೊಲೀಸರು ಬಂಧಿಸಿದ್ದರು ಎಂಬ ಮಾಹಿತಿ ಜೊತೆ ಈ ಚಿತ್ರವು ವೈರಲ್ ಆಗಿದೆ. 'ಈ ಚಿತ್ರದಲ್ಲಿರುವವರನ್ನು ಗುರುತಿಸಬಲ್ಲಿರಾ? ಪಂಜಾಬ್ ಪೊಲೀಸರು ಈ ನಾಲ್ವರನ್ನು ಬಂಧಿಸಿದ್ದಾಗ ತೆಗೆದ ಚಿತ್ರ ಇದು' ಎಂದು ಅಡಿಬರಹ ನೀಡಲಾಗಿದೆ.



ಚಿತ್ರದ ಜೊತೆ ಇರುವ ಮಾಹಿತಿ ಸುಳ್ಳು ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ವೇದಿಕೆ ವರದಿ ಮಾಡಿದೆ. ಇದು ಹೋಳಿ ಆಚರಣೆಯ ಸಂದರ್ಭದಲ್ಲಿ ತೆಗೆದಿರುವ ಚಿತ್ರ ಎಂದು ವರದಿಯಲ್ಲಿ ಹೇಳಲಾಗಿದೆ. ಪಂಜಾಬಿ ಗಾಯಕ ಮತ್ತು ನಟ ಕರಮ್‌ಜಿತ್ ಅನ್ಮೋಲ್ ಅವರು ಮಾರ್ಚ್ 18ರಂದು ಈ ಚಿತ್ರವನ್ನು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. 'ಭಗವಂತ ಮಾನ್ ಮತ್ತು ಮಂಜಿತ್ ಸಿಧು ಅವರ ಜೊತೆ ಹೋಳಿ ನೆನಪುಗಳು' ಎಂದು ಅಡಿಬರಹ ನೀಡಿದ್ದಾರೆ. ಮಂಜಿತ್ ಸಿಧು ಕೂಡಾ ಆಮ್ ಆದ್ಮಿ ಪಕ್ಷದ ಕಾರ್ಯಕರ್ತ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ದೃಢಚಿತ್ತ

ತಿರುಗಿಸಲಿ ವಿಧಿರಾಯನಿಚ್ಛೆಯಿಂ ಯಂತ್ರವನು |
ಚರಿಕೆ ತಾರಾಗ್ರಹಗಳಿಷ್ಟವೋದಂತೆ ||
ಪರಿಹಾಸದಿಂ ಕರ್ಮ ದೈವ ಕೇಕೆಗಳಿಡಲಿ |
ಸ್ಥಿರಚಿತ್ತ ನಿನಗಿರಲಿ - ಮಂಕುತಿಮ್ಮ || 599 ||

ಪದ-ಅರ್ಥ: ವಿಧಿರಾಯನಿಚ್ಛೆಯಿಂ = ವಿಧಿರಾಯನು + ಇಚ್ಛೆಯಿಂ (ಇಚ್ಛೆಯಿಂದ), ಚರಿಕೆ = ಚಲಿಸಲಿ, ತಾರಾಗ್ರಹಗಳಿಷ್ಟವೋದಂತೆ = ತಾರೆ + ಗ್ರಹಗಳು + ಇಷ್ಟವೋದಂತೆ (ಇಷ್ಟಬಂದಂತೆ), ಪರಿಹಾಸ = ಕುಹಕ, ಕೇಕೆ = ಅಟ್ಟಹಾಸ, ಸ್ಥಿರಚಿತ್ತ = ಧೃಡವಾದ ಮನಸ್ಸು.

ವಾಚ್ಯಾರ್ಥ: ವಿಧಿರಾಯ ತನ್ನ ಇಚ್ಛೆಯಂತೆ ಯಂತ್ರವನ್ನು ತಿರುಗಿಸಲಿ, ತಾರೆ, ಗ್ರಹಗಳು, ತಮ್ಮ ಇಷ್ಟಬಂದಂತೆ ಚಲಿಸಲಿ. ಕರ್ಮ, ದೈವಗಳು ಅಟ್ಟಹಾಸ ಮಾಡಲಿ. ಆದರೆ ನಿನಗೆ ಧೃಡವಾದ ಮನಸ್ಸಿರಲಿ.

ವಿವರಣೆ: ಭೃತ್ಯಹರಿಯ ನೀಲಿಶತಕದಲ್ಲಿಯ ಒಂದು ನೀತಿಯ ಮಾತು ಹೀಗಿದೆ.

ಪ್ರಾರಭ್ಯತೇ ನ ಖಲು ವಿಘ್ನಭಯೇನ ನೀಚೈ:
ಪಾರಭ್ಯ ವಿಘ್ನವಿಹತಾ ವಿರಮನ್ತಿ ಮಧ್ಯಾ: |
ವಿಘ್ನೈ: ಪುನ: ಪುನರಪಿ ಪ್ರತಿಹನ್ಯಮಾನಾ:
ಪ್ರಾರಬ್ಧಮುತ್ತಮಗುಣೌ ನ ಪರಿತ್ಯಜನ್ತಿ ||

'ವಿಘ್ನಗಳು ಬರುತ್ತವೇನೋ ಎಂಬ ಭಯದಿಂದ ಅಧಮರು ಕೆಲಸಗಳನ್ನು ಪ್ರಾರಂಭಿಸುವುದೇ ಇಲ್ಲ. ಮಧ್ಯಮರು ಸ್ವಲ್ಪ ತೊಂದರೆಗಳು ಬಂದರೂ ಮಾಡುತ್ತಿರುವ ಕೆಲಸವನ್ನು ನಿಲ್ಲಿಸಿ ಬಿಡುತ್ತಾರೆ. ಆದರೆ ಉತ್ತಮರು ಎಂಥ ಆತಂಕಗಳು ಬಂದರೂ ಧೃತಿಗೆಡದೆ ಅವುಗಳನ್ನು ದಾಟುತ್ತ ಧೃಡಚಿತ್ತದಿಂದ ಮುಂದುವರೆಯುತ್ತಾರೆಯೇ ಹೊರತು ಪ್ರಯತ್ನಗಳನ್ನು ಬಿಡುವುದಿಲ್ಲ', ಯಾವುದೇ ಕಾರ್ಯಮಾಡುವಾಗ ತೊಂದರೆಗಳು ಬರುವುದು ಸಹಜ. ವಿಧಿ ಪರೀಕ್ಷೆ ಮಾಡುತ್ತದೆ. ಅದನ್ನು ಕಗ್ಗ ರೋಚಕವಾಗಿ ಹೇಳುತ್ತದೆ. ವಿಧಿ ತನ್ನಿಚ್ಛೆಯಂತೆ ಬದುಕಿನ ಯಂತ್ರವನ್ನು ತಿರುಗಿಸಲಿ.

ತಾರೆಗಳು, ಗ್ರಹಗಳು ತಮ್ಮ ಇಷ್ಟಬಂದಂತೆ ಸರಿದುಹೋಗಲಿ. ಇದರರ್ಥವೆಂದರೆ ಯಾವುದೇ ಪ್ರಸಂಗ ಬರಲಿ ಯಾಕೆಂದರೆ ನಮ್ಮಲ್ಲಿ ಬಹಳಷ್ಟು ಮಂದಿ ನಕ್ಷತ್ರಗಳು, ಗ್ರಹಗಳು, ಇವುಗಳ ಸ್ಥಾನ, ಅವು ನಮ್ಮ ಮೇಲೆ ಮಾಡುವ ಪ್ರಭಾವಗಳು ಇವನ್ನೆಲ್ಲ ನಂಬುತ್ತಾರೆ. ಈ ಗ್ರಹಗಳು ಎಲ್ಲಿಯಾದರೂ ಹೋಗಲಿ. ದೈವ ಮತ್ತು ಕರ್ಮಗಳು ನಮ್ಮನ್ನು ನೋಡಿ ಅಟ್ಟಹಾಸದಿಂದ ನಗಲಿ. ಇವೆಲ್ಲವುಗಳನ್ನು ಎದುರಿಸುವ ಏಕಮಾತ್ರ ಉಪಾಯವೆಂದರೆ.

ಧೃಡಚಿತ್ತ. ಧೃಡಮನಸ್ಸಿನಿಂದ ಸಾಧ್ಯವಾಗದ್ದು ಯಾವುದೂ ಇಲ್ಲ. ಅದು ಎಂಥ ಪ್ರಸಂಗದಲ್ಲೂ ಅಲುಗಾಡದೆ ಇದ್ದು, ಕಾರ್ಯಸಾಧನೆ ಮಾಡುತ್ತದೆ. ಸಗರ ಚಕ್ರವರ್ತಿಯ ಅಶ್ವಮೇಧ ಯಾಗದ ಕುದುರೆಯನ್ನು ಕಪಿಲಮುನಿಯ ಆಶ್ರಮದಲ್ಲಿ ಇಂದ್ರ ಬಚ್ಚಿಟ್ಟ. ಅದನ್ನು ಹುಡುಕುತ್ತ ಬಂದ ಅವನ ಅರವತ್ತು ಸಾವಿರ ಪುತ್ರರು ಋಷಿಯ ಶಾಪಕ್ಕೆ ಗುರಿಯಾಗಿ ಭಸ್ಮವಾದರು. ಅವರ ಮನೆತನದವನೇ ಆದ ಭಗೀರಥ ಭೂಮಿಗೆ ಗಂಗೆಯನ್ನು ತರ ಬಯಸಿ ಕಠೋರವಾದ ತಪಸ್ಸು ಮಾಡಿದ. ನೀರು, ಗಾಳಿ ಸೇವನೆಯನ್ನು ನಿಲ್ಲಿಸಿ ಹಟದಿಂದ ಗಂಗೆಯನ್ನು ಒಲಿಸಿದ. ನಂತರ ಶಿವನನ್ನು ಒಲಿಸಿ ಅವನ ಜಟೆಯ ಮೂಲಕ ಗಂಗೆ ಭೂಮಿಗೆ ಬಂದು ತನ್ನ ಪೂರ್ವಜರಿಗೆ ಮುಕ್ತಿ ಕೊಡುವಂತೆ ಮಾಡಿದ. ಇದು ಕಥೆ. ಎಂತೆಂತಹ ಕಷ್ಟಗಳು ಬಂದರೂ, ಪುನಃ ಪುನಃ ಪ್ರಯತ್ನಿಸಿ ತನ್ನ ಕಾರ್ಯಸಾಧನೆಯನ್ನು ಮಾಡಿಯೇ ತೀರಿದ ಭಗೀರಥ ಧೃಡಮನಸ್ಸಿಗೆ, ಛಲ ಬಿಡದ ಪ್ರಯತ್ನಕ್ಕೆ ಅನ್ವರ್ಥವಾಗಿದ್ದಾನೆ. ಅದೊಂದು ಸ್ಫೂರ್ತಿಯ ಸೆಲೆಯಾಗಿದೆ. ಈ ಧೃಡಚಿತ್ತವೊಂದೇ ಎಲ್ಲ ಸಮಸ್ಯೆಗಳಿಗೆ ರಕ್ಷಾ ಕವಚ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಏಪ್ರಿಲ್ 5, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು - ಮೀನ ಮಾಸದ 22 ನೇ ದಿನ ತಿಥಿ: (ಚೈತ್ರ ಶುದ್ಧ) ಚತುರ್ಥಿ ಗಂ. 15-46 ನಕ್ಷತ್ರ: ಕೃತ್ತಿಕಾ ಗಂ. 16-52 ಯೋಗ: ಪ್ರೀತಿ ಗಂ. 07-59, ಕರಣ: ವಿಷ್ಟಿ ಗಂ. 15-46. ರಾಹುಕಾಲ: ಮಧ್ಯಾಹ್ನ 03:00 – 04:30 ಸೂರ್ಯೋದಯ: 06-28 ಸೂರ್ಯಾಸ್ತ: 06-39 ಮುಸ್ಲಿಂ ದಿನಾಂಕ: 03 ರಂಜಾನ್ ದಿನ ವಿಶೇಷ: ಸ್ವಾಮಿ ಲೀಲಾ ಷಾಹ್ ಜನ್ಮದಿನಾಚರಣೆ (ಸಿಂಧಿ) ಅದೃಷ್ಟ ಸಂಖ್ಯೆ: 4, 7

ಮೇಷ: ಬಂಧುಗಳಲ್ಲಿ ಮಾಡಿದ ಸಾಲ ಮರುಪಾವತಿ ಮಾಡುವ ಚೈತನ್ಯವನ್ನು ಹೊಂದುವಿರಿ. ಹೊಸ ಮನೆ ನಿರ್ಮಾಣಕ್ಕಾಗಿ ಹೆಚ್ಚಿನ ತಯಾರಿ. ಅಧಿಕಾರಿಗಳ ಸಂಪರ್ಕದಿಂದ ನಿಮ್ಮ ಕೆಲಸಗಳಿಗೆ ಹೆಚ್ಚಿನ ಪುಷ್ಟಿ ದೊರೆಯಲಿದೆ.

ವೃಷಭ: ಆತ್ಮಸ್ಥೈರ್ಯದಿಂದ ಯಾವುದೇ ಕೆಲಸವನ್ನು ಪ್ರಾರಂಭಿಸಿದರೂ ಜಯ ಕಾಣುವಿರಿ. ಇಂದಿನ ನಿಮ್ಮ ಕಾರ್ಯಶೈಲಿಯು ಆಫೀಸಿನಲ್ಲಿ ಮೆಚ್ಚುವ ಮಾತಾಗುವುದು. ಹೊಸ ಅನುಭವ ಎದುರು ನೋಡುವಂತಾಗುವುದು.

ಮಿಥುನ: ಗುರಿ ತಲುಪುವಲ್ಲಿ ನಿಮ್ಮ ಶ್ರಮ ಸಾರ್ಥಕವೆನಿಸುವುದು. ನಿಮ್ಮಲ್ಲಿನ ಏಕಾಗ್ರತೆಯಿಂದಾಗಿ ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಯಾವುದೇ ಕೆಲಸವನ್ನು ಒಪ್ಪಿಕೊಳ್ಳಬಹುದು. ಹೊಸ ಉತ್ಸಾಹ ಮೂಡಲಿದೆ.

ಕರ್ಕಾಟಕ: ಆಸ್ತಿ ಕೊಳ್ಳುವುದರಲ್ಲಾಗಲೀ, ಮನೆ ಕಟ್ಟುವ ವಿಚಾರದಲ್ಲಾಗಲೀ ಅದೃಷ್ಟವು ನಿಮ್ಮ ಪಾಲಿಗೇ ಇರುತ್ತದೆ. ಸ್ವಂತ ಉದ್ಯಮದಲ್ಲಿರುವವರು ತಮ್ಮ ಕಾರ್ಯಕ್ಷೇತ್ರ ಅಭಿವೃದ್ಧಿ ಪಡಿಸಿಕೊಳ್ಳುವುದರಲ್ಲಿ ಸಫಲತೆ ಹೊಂದುವರು.

ಸಿಂಹ: ಒಪ್ಪಂದ ಹಾಗೂ ಸಹಕಾರಗಳು ಸುಲಭವಾಗುವುದು. ಧವಸ ಧಾನ್ಯಗಳ ಸಗಟು ವ್ಯಾಪಾರಿಗಳು ಹಾಗು ದಲ್ಲಾಳಿಗಳಿಗೆ ಅನುಕೂಲ. ನಿಮ್ಮ ಹೂಡಿಕೆಯ ಬಗ್ಗೆ ಎಚ್ಚರಿಕೆಯಿಂದ ತೀರ್ಮಾನವನ್ನು ಕೈಗೊಳ್ಳುವುದು ಉತ್ತಮ.

ಕನ್ಯಾ: ರಾಜಕಾರಣಿಗಳಿಗೆ ನಾಯಕತ್ವದಲ್ಲಿ ಬದಲಾವಣೆಯಾಗುವ ಸಂಭವ ಅಥವಾ ಸಂಘ ಸಂಸ್ಥೆಗಳಲ್ಲಿ ಅಧಿಕಾರ ಪಡೆಯುವಿರಿ. ವಾಹನ ವ್ಯವಹಾರಗಳಿಂದ ಲಾಭ. ಮನೆಗಾಗಿ ವಿಶೇಷ ವಾಹನ, ವಸ್ತು ಖರೀದಿಸುವ ಯೋಚನೆ.

ತುಲಾ: ಹಿರಿಯರಿಂದ ಪಡೆದ ಸಲಹೆಯು ನಿಮ್ಮ ಜೀವನಕ್ಕೆ ಹೊಸ ಬುನಾದಿಯಾಗಲಿದೆ. ತೆಂಗು ಹಾಗೂ ಮಾವಿನ ಬೆಳೆಗಾರರಿಗೆ ಅಧಿಕ ಲಾಭ. ಕೆಲವರಿಗೆ ನಿಮ್ಮ ಮೇಲಿದ್ದ ಸಂಶಯದ ಮನೋಭಾವ ನಿವಾರಣೆಯಾಗುವುದು.

ವೃಶ್ಚಿಕ: ಬೆಲೆಬಾಳುವ ವಸ್ತುವನ್ನು ಕಳೆದುಕೊಳ್ಳುವ ಯೋಗವಿರುವುದರಿಂದ ಜಾಗ್ರತೆ ಅತ್ಯಗತ್ಯ. ಯಾವುದೇ ರೀತಿಯಲ್ಲೂ ಆರೋಗ್ಯದಲ್ಲಿ ಉದಾಸೀನತೆ ತೋರದಿರಿ. ಬ್ಯಾಂಕ್ ನೌಕರರಿಗೆ ಅಧಿಕ ಮಟ್ಟದ ಕಾರ್ಯದೊತ್ತಡ ಇರಲಿದೆ.

ಧನು: ತಾಯಿಗೆ ನುರಿತ ವೈದ್ಯರಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಲು ವಿಶ್ವಾಸಿಗಳಿಂದ ವೈದ್ಯರ ಸಂಪರ್ಕ ಮತ್ತು ಸಹಾಯ ಹಸ್ತ ಸಿಗುವುದು. ಈ ದಿನ ನೀವು ಮಾಡುವ ಕೆಲಸ ಕಾರ್ಯಗಳಿಂದ ನಿಮ್ಮ ಗೌರವಕ್ಕೆ ಚ್ಯುತಿ ಬಾರದಂತೆ ಕಾಪಾಡಿಕೊಳ್ಳಿ.

ಮಕರ: ಹೊಂದಾಣಿಕೆ ಜಗದ ನಿಯಮ. ನೀವು ನಿಮ್ಮ ಮನೋಭಾವವನ್ನು ಬದಲಿಸಿಕೊಳ್ಳಬೇಕಾಗುತ್ತದೆ. ಉದ್ಯೋಗ ಬದಲಾವಣೆ ವಿಚಾರದಲ್ಲಿದ್ದ ಗೊಂದಲವನ್ನು ಮಾರ್ಗದರ್ಶಕರ ಸೂಚನೆಯಂತೆ ನಿವಾರಿಸಿಕೊಳ್ಳಿರಿ.

ಕುಂಭ: ಉಪಹಾರ ಗೃಹಗಳಿಂದ ಅಧಿಕವಾದ ಲಾಭ ಪಡೆಯುವಿರಿ. ವಾಣಿಜ್ಯ ರಂಗದಲ್ಲಿ ಹೊಸ ತಿರುವು ಮೂಡಲಿದೆ. ಕೋರ್ಟು ಕಚೇರಿಯ ಕೆಲಸ ಕೇವಲ ಅಲೆದಾಟವನ್ನು ಮಾಡಿಸುವುದು. ಸರ್ಕಾರಿ ನೌಕರರಿಗೆ ಉತ್ತಮ ದಿನ.

ಮೀನ: ಸಂಬಂಧದಲ್ಲಿ ಬಾಂಧವ್ಯ ಹೆಚ್ಚುವುದು. ಭೂ ವ್ಯವಹಾರದಲ್ಲಿ ಉತ್ತಮ ಲಾಭ. ಆಯಾಸ ಕಡಿಮೆಯಾಗಿ ಉಲ್ಲಾಸವಿರುವುದು. ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ವಿದ್ಯಾರ್ಜನೆ ಮಾಡುವುದರ ಬಗ್ಗೆ ಗಮನಹರಿಸಿ.

ಪದಬಂಧ 4918

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಂಗೈ ರೇಖೆಗಳನ್ನು ನೋಡಿ ಭವಿಷ್ಯ ಹೇಳುವುದು (6)
4.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
5.ಸಾಗಿಸುವಿಕೆಗೊಂದು ಪರ್ಯಾಯ ಪದ (3)
7.ಕತ್ತರಿಸುವ ಸಾಧನವಿದು (3)
10.ಸ್ಮರಣೆ ಹೀಗೆ ಬಂದಿದೆ (3)
11.ಈತ ತಿರುಪೆ ಬೇಡುವವನು (3)
13.ಅದೇ ತಾನೆ ಮೂಡುತ್ತಿರುವ ಸೂರ್ಯ (4)
15.ಪ್ರೇಮಿಗಳ ಹುಸಿ ಜಗಳ (6)

ಮೇಲಿಂದ ಕೆಳಕ್ಕೆ
1.ಹರನಲ್ಲಿ ಭಾರವಿಲ್ಲದ್ದು ಬಂದಿದೆಯಲ್ಲಾ! (3)
2.ಕೆರಳಿದವನ ಮೆಟ್ಟು! (2)
3.ಅಶಕ್ತವಾದುದು ಇದು (4)
6.ಪಕ್ಕದ ಮನೆಯಿದು (4)
7.ಕದಕ್ಕೆ ತಾಕಿಸಿದ ಕನ್ನೆ! (3)
8.ಕನ್ನಡಿಗನಿಗೆ ಸಿಕ್ಕ ರಿಬೇಟ್! (4)
9.ಅಡಳಿತವನ್ನು ಹೀಗೆ ಹೇಳಿ (4)
12.ಜಗಳಕ್ಕೊಂದು ಪರ್ಯಾಯ ಪದ (3)
14.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ! (2)



4917ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಿಟಕಲಾಡಿ 4.ಹಂಬಲ
5.ವನಿತ 6.ಕಲಭ
8.ಮಾನ 9.ಸುತ
10.ಗವಸು 14.ಭಿಕ್ಷುಕ
15.ಪರೋಕ್ಷ 16.ಏಕವಚನ

ಮೇಲಿಂದ ಕೆಳಕ್ಕೆ:
1.ಮಿಡಿತ 2.ಕರತಾಡನ
3.ಡಿವಕಾ 4.ಹಂತಕ
7.ಲಲಿತ 8.ಮಾರ್ದವ
9.ಸುರಿಕಗೀವ 11.ಸುಭಿಕ್ಷ
12.ತೆಕವ 13.ಸಂಧಾನ

ಸುಡೊಕು 5304

	7			6			5	3
2					5			
		1	2			4		9
		2					4	
4				9				5
	1		3		2		7	
	2			1		8		
1			8					4
	8			3	7		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5303 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

ಹಿಂದೂ ಪಂಚಾಯತ್ ಟ್ವೀಟ್: ಪತ್ರಕರ್ತನ ವಿರುದ್ಧ ಎಫ್‌ಐಆರ್

ನವದೆಹಲಿ (ಪಿಟಿಐ): ವಿವಾದಿತ ಹಿಂದೂ ಮಹಾಪಂಚಾಯತ್ ಕಾರ್ಯಕ್ರಮದಲ್ಲಿ ಪತ್ರಕರ್ತರ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಆರೋಪಿಸಿ ಟ್ವಿಟರ್‌ನಲ್ಲಿ ಪೋಸ್ಟ್ ಪ್ರಕಟಿಸಿದ ಆರೋಪದಲ್ಲಿ ನ್ಯೂಸ್ ಪೋರ್ಟಲ್, ಪತ್ರಕರ್ತರೊಬ್ಬರ ವಿರುದ್ಧ ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಕೋಮು ಸಾಮರಸ್ಯ ಕದಡುವ ಉದ್ದೇಶದಿಂದ ಟ್ವೀಟ್ ಮಾಡಿರುವ ಕಾರಣ ಪತ್ರಕರ್ತ ಮೀರ್ ಫೈಸಲ್, 'ಆರ್ಟಿಕಲ್ 14' ನ್ಯೂಸ್ ಪೋರ್ಟಲ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಮುಸ್ಲಿಂ ಎಂಬ ಕಾರಣಕ್ಕೆ ಮಹಾಪಂಚಾಯತ್ ಕಾರ್ಯಕ್ರಮದಲ್ಲಿ ನನ್ನ ಹಾಗೂ ಜೊತೆಗಿದ್ದ ವ್ಯಕ್ತಿಯ ಮೇಲೆ ಗುಂಪೊಂದು ಹಲ್ಲೆ ನಡೆಸಿದೆ' ಎಂದು ಮೀರ್ ಫೈಸಲ್ ಅವರು ಭಾನುವಾರ ಟ್ವೀಟ್ ಮಾಡಿದ್ದರು.

ಐವರು ಪತ್ರಕರ್ತರ ಮೇಲೆ ಕಾರ್ಯಕ್ರಮದಲ್ಲಿ ಹಲ್ಲೆ ನಡೆದಿದೆ ಮತ್ತು ಅವರು ಚಿತ್ರೀಕರಿಸಿದ್ದ ವಿಡಿಯೊಗಳನ್ನು ಗುಂಪೊಂದು ಅಳಿಸಿ ಹಾಕಿದೆ. ಐವರು ಪತ್ರಕರ್ತರಲ್ಲಿ ನಾಲ್ವರು ಮುಸ್ಲಿಂ ಸಮುದಾಯದವರು ಎಂದು 'ಆರ್ಟಿಕಲ್ 14' ನ್ಯೂಸ್ ಪೋರ್ಟಲ್‌ನ ಅಧಿಕೃತ ಟ್ವಿಟರ್ ಖಾತೆಯಿಂದಲೂ ಪೋಸ್ಟ್ ಮಾಡಲಾಗಿತ್ತು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಸವಾಲು

'ಬೆಲೆ ಏರಿಕೆ ವಿರುದ್ಧ ಹೋರಾಟಕ್ಕೆ ಬನ್ನಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಲೆ ಏರಿಕೆ ಬಗ್ಗೆ ಮಾತನಾಡದ ಹಿಂದೂ ಸಂಘಟನೆಗಳು ಹಿಜಾಬ್, ಹಲಾಲ್ ಬಗ್ಗೆ ಮಾತನಾಡುತ್ತಿವೆ. ಬೆಲೆ ಏರಿಕೆ ವಿರುದ್ಧ ಹೋರಾಟ ಮಾಡೋಣ ಬನ್ನಿ, ನಿಮ್ಮ ಜತೆ ನಾನೂ ಬರುತ್ತೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಸವಾಲು ಹಾಕಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಬೆಲೆ ಏರಿಕೆ ದಿನೇ ದಿನೇ ಹೆಚ್ಚುತ್ತಲೇ ಇದೆ. ತೈಲ ಬೆಲೆ ಪ್ರತಿದಿನವೂ ಹೆಚ್ಚುತ್ತಿದೆ. ಸಿಮೆಂಟ್, ಕಬ್ಬಿಣದ ಬೆಲೆ ಕೂಡ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದರ ಬಗ್ಗೆ ಮಾತನಾಡದ ಹಿಂದೂ ಸಂಘಟನೆಗಳು ಹಿಜಾಬ್, ಹಲಾಲ್ ಬಗ್ಗೆ ಮಾತನಾಡುತ್ತಿವೆ' ಎಂದು ಟೀಕಿಸಿದರು.

'ಬಿಜೆಪಿ ಹಾಗೂ ಅದರ ಅಂಗಸಂಸ್ಥೆಗಳಿಂತ ನಾವೇ ಧರ್ಮವನ್ನು ಹೆಚ್ಚು ನಂಬುತ್ತೇವೆ. ನಾವು ಕನ್ನಡಿಗರ ಸ್ವಾಭಿಮಾನ, ಕನ್ನಡ ಅಸ್ಮಿತೆ ಇಟ್ಟುಕೊಂಡು ಚುನಾವಣೆ ಎದುರಿಸುತ್ತೇವೆ. ಹನುಮ ಜಯಂತಿಯಂದು ಹೋರಾಟ ಆರಂಭಿಸುತ್ತೇವೆ' ಎಂದರು.

'ಒಂದು ತಿಂಗಳಿನಿಂದ ವಿವಾದಗಳು ಸೃಷ್ಟಿಯಾಗಿವೆ. ಹಿಜಾಬ್‌ನಿಂದ ಹಲಾಲ್‌ವರೆಗೆ ಬಂದಿದೆ. ಹೊಸದಾಗಿ ಆಜಾನ್ ವಿಷಯವೂ ಬಂದಿದೆ. ಕಾಂಗ್ರೆಸ್ ನಾಯಕರು ಇದರ ಬಗ್ಗೆಯೂ ಮಾತನಾಡಬೇಕಲ್ಲವೇ?' ಎಂದು ಪ್ರಶ್ನಿಸಿದರು.

'ಹಲಾಲ್, ಜಟ್ಕಾ ಹಿಡಿದುಕೊಂಡು ಬಿಜೆಪಿ ಕುಳಿತಿದೆ. ಅದಕ್ಕೆ ಅಂಜಿಕೊಂಡು ಕಾಂಗ್ರೆಸ್ ಸುಮ್ಮನಿದೆ. ಕಾಂಗ್ರೆಸ್ ನಾಯಕರಿಗೆ ಧ್ವನಿಯೇ ಇಲ್ಲ. ರಾಜ್ಯದಲ್ಲಿ ಇತ್ತೀಚೆಗೆ ನಡೆದಿರುವ ಅಹಿತಕರ ಬೆಳವಣಿಗೆಗಳಿಗೆ ಬಿಜೆಪಿಯಷ್ಟೇ ಕಾಂಗ್ರೆಸ್ ಕೂಡಾ ಕಾರಣ' ಎಂದರು.

'ಹಿಜಾಬ್, ಹಲಾಲ್ ವಿಷಯಕ್ಕೆ ಬೆಂಕಿ ಹಚ್ಚಿಕೊಟ್ಟವರು ಕಾಂಗ್ರೆಸ್‌ನವರು. ಮುಸ್ಲಿಮರು ಯಾಕೆ ಕಾಂಗ್ರೆಸ್ ಪಕ್ಷವನ್ನು ನಂಬಬೇಕು' ಎಂದು ಪ್ರಶ್ನಿಸಿದ ಅವರು, 'ನಾವು ಈ ವಿಚಾರವಾಗಿ ಬೀದಿಗಿಳಿದು ಹೋರಾಟ ಮಾಡುತ್ತಿದ್ದೇವೆ. ಕಾಂಗ್ರೆಸ್ ಅಲ್ಪಸಂಖ್ಯಾತರ ನಂಬಿಕೆ ಕಳೆದುಕೊಂಡಿದೆ' ಎಂದರು.

'ಒಬ್ಬ ಹೊರಟ್ಟಿ ಹೋದರೆ ಇನ್ನೊಬ್ಬ ಹೊರಟ್ಟಿ ಬರುತ್ತಾರೆ'

'ಹೊರಟ್ಟಿ, ಕೋನರಡ್ಡಿ ಇದ್ದಾಗ ಉತ್ತರ ಕರ್ನಾಟಕ ಭಾಗದಲ್ಲಿ ನಮ್ಮ ಪಕ್ಷ ಹೇಗಿತ್ತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಹೊರಟ್ಟಿ ಹೋದರೆ ಇನ್ನೊಬ್ಬರು ಹೊರಟ್ಟಿ ಬರುತ್ತಾರೆ' ಎಂದು ಕುಮಾರಸ್ವಾಮಿ ಹೇಳಿದರು.

ಬಸವರಾಜ ಹೊರಟ್ಟಿ ಬಿಜೆಪಿಯತ್ತ ಮುಖ ಮಾಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಚುನಾವಣೆಯಲ್ಲಿ ಬಿಜೆಪಿ ಹಣದ ಹೊಳೆ ಹರಿಸಲಿದೆ. ಅದನ್ನು ಎದುರಿಸುವುದು ಕಷ್ಟವಾಗಲಿದೆ, ಏನು ಮಾಡಲಿ ಎಂದು ಹೊರಟ್ಟಿ ಕೇಳಿದ್ದರು. ನಿಮ್ಮ ರಾಜಕೀಯ ಭವಿಷ್ಯ ರೂಪಿಸಿಕೊಳ್ಳಿ ಎಂದು ನಾನು ಸಲಹೆ ನೀಡಿದ್ದೆ' ಎಂದರು.

'ಹೊರಟ್ಟಿ ಅವರನ್ನು ಸಭಾಪತಿ ಮಾಡಿದ್ದು ಬಿಜೆಪಿಗೆ ಹೋಗುವುದಕ್ಕಾ? ಬಿಜೆಪಿಗೆ ಸೇರಲು ಅವರೇ ತೀರ್ಮಾನ ಮಾಡಿರುವಾಗ ನಾನೇನು ಮಾಡಲಿ? ಯಾರೂ ಇಲ್ಲದಿದ್ದರೂ ನಮ್ಮ ಪಕ್ಷ ಉಳಿದಿದೆ' ಎಂದರು.

ಕದಡಿದ ಸಾಮರಸ್ಯ: ಸ್ವಾಮೀಜಿ ಕಿಡಿ

ಕೊರಟಗೆರೆ: 'ನಮ್ಮ ಜನರು ಯಾವ ಆಹಾರ ಸೇವಿಸಬೇಕು, ಯಾವುದನ್ನು ಸೇವಿಸಬಾರದು ಎಂದು ಕೆಲವು ಸಂಘಟನೆಗಳು ಒತ್ತಡ ಹಾಕುತ್ತಿವೆ' ಎಂದು ಹೊಸದುರ್ಗದ ರೇವಣ್ಣ ಸಿದ್ದೇಶ್ವರ ಶಾಖಾ ಗುರುಪೀಠದ ಈಶ್ವರಾನಂದಪುರಿ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ತಾಲ್ಲೂಕಿನ ಸಿದ್ದರಬೆಟ್ಟದ ರೇವಣ್ಣ ಸಿದ್ದೇಶ್ವರ ಕನಕ ಗುರುಪೀಠದ ಶಾಖಾ ಮಠದಲ್ಲಿ ಸೋಮವಾರ ರಸ್ತೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಜನರು ಯಾವುದನ್ನು ಊಟ ಮಾಡಬೇಕು, ಯಾವುದನ್ನು ಮಾಡಬಾರದು ಎಂಬುದನ್ನು ಕೆಲವು ಸಂಘಟನೆಗಳು ನಿರ್ಧರಿಸಿ ನಮ್ಮ ಮೇಲೆ ಒತ್ತಡ ಹೇರುತ್ತಿರುವುದು ದುರ್ದೈವದ ಸಂಗತಿ. ಪ್ರಸ್ತುತ ಜನರ ಭಾವನೆಗಳನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳಲು ಹೊರಟಿರುವುದು ಶೋಚನೀಯ' ಎಂದು ಆಕ್ರೋಶ ಹೊರ ಹಾಕಿದರು.

ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಎಲ್ಲರಿಗೂ ಸಮಾನತೆ ನೀಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅದು ಬೇರೆ ರೀತಿಯ ಆಯಾಮವನ್ನು ಪಡೆದುಕೊಳ್ಳುತ್ತಿದೆ ಎಂದು ವಿಷಾದಿಸಿದರು.

ಕೆಲ ದಿನಗಳಿಂದ ಧರ್ಮ, ಧರ್ಮದ ನಡುವೆ ಜಗಳ ತರುವಂತಹ ಕೆಲಸ ಮಾಡುತ್ತಿರುವುದು ಸರಿಯಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರ ಮಧ್ಯಪ್ರವೇಶ ಮಾಡಬೇಕು. ಇದೇ ಪರಿಸ್ಥಿತಿ ಮುಂದುವರಿದರೆ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರಲಿದೆ ಎಂದರು.

ಪರಿಶಿಷ್ಟರಿಗೂ ಅವಕಾಶ: ರಾಜ್ಯದಲ್ಲಿ ಎಲ್ಲಾ ಜನಾಂಗದವರು ಮುಖ್ಯಮಂತ್ರಿ ಆಗಿದ್ದಾರೆ. ಮುಂದಿನ ದಿನಗಳಲ್ಲಿ ಪರಿಶಿಷ್ಟ ಜಾತಿಯ ಡಾ.ಜಿ. ಪರಮೇಶ್ವರ ಸಹ ಮುಖ್ಯಮಂತ್ರಿಯಾಗಲಿ. ಎಲ್ಲರಿಗೂ ಅವಕಾಶ ಸಿಕ್ಕಂತೆ ಅವರಿಗೂ ಅವಕಾಶ ಕೊಟ್ಟರೆ ಒಬ್ಬ ಉತ್ತಮ ವ್ಯಕ್ತಿಗೆ ಅವಕಾಶ ನೀಡಿದಂತಾಗುತ್ತದೆ ಎಂದರು.

ಸುದ್ದಿ 2 ನಿಮಿಷ

'ಕೇಜ್ರಿವಾಲ್ ಮಾದರಿ ಆಡಳಿತ ದೇಶದಾದ್ಯಂತ ಬೇಕು'

ನವದೆಹಲಿ: ನಿವೃತ್ತ ಪೊಲೀಸ್ ಅಧಿಕಾರಿ ಬಿ.ಭಾಸ್ಕರ್ ರಾವ್ ಸೋಮವಾರ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ನಿವಾಸದಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಸೇರಿದರು.

1990ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದ ಭಾಸ್ಕರ್ ರಾವ್ ಕಳೆದ ಸೆಪ್ಟೆಂಬರ್‌ನಲ್ಲಿ ಸ್ವಯಂ ನಿವೃತ್ತಿಗೆ ಅರ್ಜಿ ಸಲ್ಲಿಸಿದ್ದರು. ಇತ್ತೀಚೆಗಷ್ಟೇ ರಾಜ್ಯ ಸರ್ಕಾರ ಅವರ ರಾಜೀನಾಮೆ ಅಂಗೀಕರಿಸಿತ್ತು.

'ದೇಶದಾದ್ಯಂತ ಅರವಿಂದ ಕೇಜ್ರಿವಾಲ್ ಅವರ ಮಾದರಿಯ ಆಡಳಿತದ ಅಗತ್ಯವಿದೆ. ಎಎಪಿ ಮಾದರಿ ಆಡಳಿತ ಮೆಚ್ಚಿಯೇ ನಾನು ನೌಕರಿಗೆ ರಾಜೀನಾಮೆ ನೀಡಿ ಪಕ್ಷ ಸೇರಿದ್ದೇನೆ' ಎಂದು ಭಾಸ್ಕರ್ ರಾವ್ ಅವರು ಪಕ್ಷ ಸೇರಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಪೊಲೀಸ್ ಇಲಾಖೆಯಲ್ಲಿ ಸತತ 32 ವರ್ಷ ಸೇವೆ ಸಲ್ಲಿಸಿದ್ದೂ ದೆಹಲಿ ಆಡಳಿತವನ್ನು ಹತ್ತಿರದಿಂದ ನೋಡಿರಲಿಲ್ಲ. ಕೆಲವು ದಿನಗಳ ಹಿಂದೆ ಇಲ್ಲಿನ ಸರ್ಕಾರಿ ಶಾಲೆಗಳ ಗುಣಮಟ್ಟ ಹಾಗೂ ಜನಸಾಮಾನ್ಯರಿಗೆ ದೊರೆತಿರುವ ಜೀವನ ಭದ್ರತೆ ನೋಡಿ ಪಕ್ಷ ಸೇರಿದ್ದೇನೆ' ಎಂದು ಅವರು ತಿಳಿಸಿದರು.

'ಜನಸಾಮಾನ್ಯರ ಜೀವನದಲ್ಲಿ ಆಮೂಲಾಗ್ರ ಬದಲಾವಣೆ ತಂದಿರುವ ಕೇಜ್ರಿವಾಲ್ ಅವರ ಕಾರ್ಯವೈಖರಿ ನೋಡಿದರೆ, ದೇಶದಲ್ಲೆಡೆ ಈ ವ್ಯವಸ್ಥೆ ಇರಬೇಕು ಎಂಬುದು ನನ್ನ ಆಶಯ' ಎಂದರು.

ಕರ್ನಾಟಕ ಪ್ರಗತಿಶೀಲ ರಾಜ್ಯ. ಆದರೂ ಅಲ್ಲಿ ಉತ್ತಮ ಆಡಳಿತ ವ್ಯವಸ್ಥೆ ಇಲ್ಲ. ಆಡಳಿತದಲ್ಲಿ ಬದಲಾವಣೆ ಬಂದಲ್ಲಿ ಜನತೆಗೆ ಒಳ್ಳೆಯದು. ಎಂದು ಅವರು ಹೇಳಿದರು.

ಹರ್ಷ ಹತ್ಯೆ: ಕೋಮು ಗಲಭೆಯ ಹುನ್ನಾರ

ಶಿವಮೊಗ್ಗ: ಬಜರಂಗದಳದ ಕಾರ್ಯಕರ್ತ ಹರ್ಷ ಹತ್ಯೆ ಪ್ರಕರಣದ ತನಿಖೆಯ ಹೊಣೆ ವಹಿಸಿಕೊಂಡ ನಂತರ ರಾಷ್ಟ್ರೀಯ ತನಿಖಾ ಸಂಸ್ಥೆಯ ಅಧಿಕಾರಿಗಳು ನಗರಕ್ಕೆ ಭೇಟಿ ನೀಡಿದ್ದು, ತನಿಖೆ ಆರಂಭಿಸಿದ್ದಾರೆ.

ತೀರ್ಥಹಳ್ಳಿ ರಸ್ತೆಯ ಭಾರತಿ ಕಾಲೊನಿ ಬಳಿ ಫೆ.20ರ ರಾತ್ರಿ ಹರ್ಷ ಕೊಲೆಯಾದ ನಂತರ ಅವರ ತಾಯಿ ನೀಡಿದ ದೂರಿನ ಮೇಲೆ ಹಳೇ ದ್ವೇಷದ ಕಾರಣ ಕೊಲೆ ಮಾಡಲಾಗಿದೆ ಎಂದು ದೊಡ್ಡಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಕೊಲೆಯ ಮೂಲಕ ಸಮಾಜದ ಸ್ವಾಸ್ಥ್ಯ ಕದಡುವ, ಧರ್ಮಗಳ ಮಧ್ಯೆ ಕೋಮು ಗಲಭೆ ಹುಟ್ಟುಹಾಕುವ, ಸಮಾಜದ ಶಾಂತಿ ಕದಡುವ ಉದ್ದೇಶವಿಟ್ಟುಕೊಂಡು ಕೊಲೆಗೆ ಸಂಚು ರೂಪಿಸಲಾಗಿತ್ತು ಎಂಬ ಅಂಶಗಳನ್ನು ಒಳಗೊಂಡ ಹೊಸ ಎಫ್‌ಐಆರ್ ಅನ್ನು ಎನ್‌ಐಎ ತಂಡ ದಾಖಲಿಸಿಕೊಂಡಿದೆ.

ಇನ್‌ಸ್ಪೆಕ್ಟರ್ ಷಣ್ಮುಗಂ ನೇತೃತ್ವದ ತಂಡ ಕೋರ್ಟ್ ಸಮ್ಮತಿಯ ಮೇರೆಗೆ ಸ್ಥಳೀಯ ಪೊಲೀಸರ ಬಳಿ ಹರ್ಷ ಹತ್ಯೆ ಪ್ರಕರಣದ ಎಲ್ಲ ದಾಖಲೆಗಳನ್ನು ಪಡೆದುಕೊಂಡಿದೆ. ಶಿವಮೊಗ್ಗಕ್ಕೆ ಬರುವ ಮುನ್ನವೇ ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಭೇಟಿ ನೀಡಿ, ಹರ್ಷ ಹತ್ಯೆ ಪ್ರಕರಣದಲ್ಲಿ ಬಂಧಿತರಾಗಿರುವ ಎಲ್ಲ ಹತ್ತು ಆರೋಪಿಗಳಿಂದ ಹೇಳಿಕೆಯನ್ನು ಪಡೆದುಕೊಂಡಿದೆ.

ಅಡ್ಡಪಲ್ಲಕ್ಕಿ ಉತ್ಸವ

ಹುಬ್ಬಳ್ಳಿಯ ಹಿರೇಪೇಟೆಯಲ್ಲಿ ಸೋಮವಾರ ಬಾಳೆಹೊನ್ನೂರಿನ ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವ ಅದ್ಧೂರಿಯಾಗಿ ನಡೆಯಿತು – ಪ್ರಜಾವಾಣಿ ಚಿತ್ರ: ಗುರು ಹಬೀಬ

ಸಚಿವ ಸಂಪುಟ ವಿಸ್ತರಣೆ ಕುರಿತು ಚರ್ಚೆ ಸಾಧ್ಯತೆ

ಮುಖ್ಯಮಂತ್ರಿ ಬೊಮ್ಮಾಯಿ ಇಂದು ದೆಹಲಿಗೆ

ಬೆಂಗಳೂರು: ಸಚಿವ ಸಂಪುಟ ವಿಸ್ತರಣೆ ಚರ್ಚೆಯ ಬೆನ್ನಲ್ಲೇ ಮುಖ್ಯಮಂತ್ರಿ ಬೊಮ್ಮಾಯಿ ಅವರು ಮಂಗಳವಾರ ಮಧ್ಯಾಹ್ನ ನವದೆಹಲಿಗೆ ತೆರಳಲಿದ್ದಾರೆ.

ಕೇಂದ್ರ ಜಲ ಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರ ಭೇಟಿಗೆ ಮಂಗಳವಾರ ಸಂಜೆ ಸಮಯ ನಿಗದಿಯಾಗಿದ್ದು, ಮೇಕೆದಾಟು ಯೋಜನೆಯೂ ಸೇರಿ ರಾಜ್ಯದ ವಿವಿಧ ನೀರಾವರಿ ಯೋಜನೆಗಳ ವಿಷಯದ ಕುರಿತು ಅವರು ಮಾತುಕತೆ ನಡೆಸಲಿದ್ದಾರೆ. ಬುಧವಾರವೂ ಕೇಂದ್ರದ ಹಲವು ಸಚಿವರನ್ನು ಭೇಟಿಯಾಗಲು ಉದ್ದೇಶಿಸಿದ್ದು, ಅವರ ಸಮಯ ಇನ್ನಷ್ಟೇ ನಿಗದಿಯಾಗಬೇಕಾಗಿದೆ ಎಂದು ಮೂಲಗಳು ಹೇಳಿವೆ.

ಬುಧವಾರ ರಾತ್ರಿ ಅಥವಾ ಗುರುವಾರ ಬೆಳಿಗ್ಗೆ ಬೊಮ್ಮಾಯಿ ಪಕ್ಷದ ವರಿಷ್ಠರನ್ನು ಭೇಟಿಯಾಗಿ ಸಚಿವ ಸಂಪುಟ ವಿಸ್ತರಣೆ ಅಥವಾ ಪುನಾರಚನೆ ಬಗ್ಗೆ ಮಾತುಕತೆ ನಡೆಸಲಿದ್ದಾರೆ. ಅಮಿತ್ ಶಾ ಅವರು ಶುಕ್ರವಾರ ಬೆಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಬೊಮ್ಮಾಯಿ ಅವರ ಜತೆ ಪ್ರತ್ಯೇಕವಾಗಿ ಪ್ರಮುಖ ವಿಚಾರಗಳನ್ನು ಮಾತನಾಡಿದ್ದು, ಈ ಸಂದರ್ಭದಲ್ಲಿ ಬೊಮ್ಮಾಯಿ ಸಚಿವ ಸಂಪುಟ ವಿಸ್ತರಣೆಯ ವಿಚಾರವನ್ನೂ ಪ್ರಸ್ತಾಪಿಸಿರುವ ಸಾಧ್ಯತೆ ಇದೆ.

ವಿಧಾನಸಭೆ ಚುನಾವಣೆಗೆ ಒಂದು ವರ್ಷ ಬಾಕಿ ಇರುವಾಗಲೇ ಕೆಲವು ಬದಲಾವಣೆಗಳನ್ನು ಮಾಡಲು ವರಿಷ್ಠರು ಬಯಸಿದ್ದಾರೆ. ಸದ್ಯಕ್ಕೆ ನಾಲ್ಕು ಸಚಿವ ಸ್ಥಾನಗಳು ಖಾಲಿ ಇವೆ. ಕೇವಲ ನಾಲ್ಕು ಸ್ಥಾನಗಳನ್ನು ಭರ್ತಿ ಮಾಡಲು ಅನುಮತಿ ಕೊಡುತ್ತಾರೋ ಅಥವಾ ಕೆಲವು ಹಿರಿಯ ಸಚಿವರಿಂದ ರಾಜೀನಾಮೆ ಪಡೆದು ದೊಡ್ಡ ಪ್ರಮಾಣದಲ್ಲಿ ಪುನಾರಚನೆ ಮಾಡುತ್ತಾರೋ ಎಂಬುದನ್ನು ಕಾದು ನೋಡಬೇಕು. ಹಸಿರು ನಿಶಾನೆ ಸಿಕ್ಕಿದರೆ 10–15 ದಿನಗಳಲ್ಲಿ ಈ ಪ್ರಕ್ರಿಯೆ ನಡೆಯಬಹುದು ಎನ್ನಲಾಗಿದೆ.

ಇತ್ತೀಚೆಗೆ ನಡೆದ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಪೈಕಿ 4 ರಾಜ್ಯಗಳಲ್ಲಿ ಜಯಭೇರಿ ಬಾರಿಸಿ ಉತ್ಸಾಹದಲ್ಲಿರುವ ಬಿಜೆಪಿಯ ವರಿಷ್ಠರು ರಾಜ್ಯದಲ್ಲೂ ಕೆಲವು ಬದಲಾವಣೆಗಳೊಂದಿಗೆ ಮತ್ತೆ ಅಧಿಕಾರ ಹಿಡಿಯಲು ನಿರ್ಧರಿಸಿದೆ. ಕೆಲವು ಹಿರಿಯ ಸಚಿವರನ್ನು ಸಂಪುಟದಿಂದ ಕೈಬಿಟ್ಟು ಅವರನ್ನು ಪಕ್ಷದ ಕೆಲಸಕ್ಕೆ ತೊಡಗಿಸಿಕೊಳ್ಳುವ ಸಾಧ್ಯತೆ ಇದೆ.

ಪರೀಕ್ಷೆಗಳಲ್ಲಿ ಹಿಜಾಬ್ ಧರಿಸುತ್ತಿಲ್ಲ: ನಾಗೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆ ಬರೆದಿರುವುದು ಮಾತ್ರವಲ್ಲ, ಸರ್ಕಾರದ ಆದೇಶಕ್ಕೆ ಬೆಲೆ ಕೊಟ್ಟು ಪರೀಕ್ಷಾ ಕೇಂದ್ರಗಳಲ್ಲಿ ಹಿಜಾಬ್ ಧರಿಸುತ್ತಿಲ್ಲ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಪರೀಕ್ಷಾ ಕೇಂದ್ರದೊಳಗೆ ಯಾರೂ ಹಿಜಾಬ್ ಧರಿಸಿ ಪರೀಕ್ಷೆ ಬರೆಯುತ್ತಿಲ್ಲ. ಎಲ್ಲರೂ ಸರ್ಕಾರದ ಆದೇಶವನ್ನು ಪಾಲಿಸುತ್ತಿರುವುದು ಸಂತೋಷದ ವಿಷಯ ಎಂದು ಹೇಳಿದರು.

ಪರೀಕ್ಷೆಗೆ ಇತರೆ ಧರ್ಮೀಯ ವಿದ್ಯಾರ್ಥಿಗಳು ಶೇ 97.8 ರಷ್ಟು ಹಾಜರಾಗಿದ್ದರೆ, ಮುಸ್ಲಿಂ ವಿದ್ಯಾರ್ಥಿಗಳು ಶೇ 98.2 ರಷ್ಟು ಹಾಜರಾಗಿದ್ದಾರೆ. ಇತರ ಧರ್ಮದವರಿಗಿಂತ ಮುಸ್ಲಿಂ ಧರ್ಮದ ಅಕ್ಕ– ತಂಗಿಯರೇ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆ ಬರೆದಿದ್ದಾರೆ. ಈ ವಿಚಾರದಲ್ಲಿ ಯಾವುದೇ ಊಹಾಪೋಹಗಳಿಗೆ ಅವಕಾಶ ಇಲ್ಲ ಎಂದೂ ನಾಗೇಶ್ ಹೇಳಿದರು.

ಸಕಾಲ ಸೇವೆಯ ವ್ಯಾಪ್ತಿಯೊಳಗೆ ತತ್ಕಾಲ್ ಸೇವೆಯನ್ನು ಸೇರ್ಪಡೆಗೊಳಿಸಲು ಚಿಂತನೆ ನಡೆಸಿರುವುದಾಗಿ ಅವರು ವಿಧಾನಸೌಧದಲ್ಲಿ ಸೋಮವಾರ ನಡೆದ ಸಕಾಲ ಯೋಜನೆಯ ದಶಮಾನೋತ್ಸವ ಕಾರ್ಯಕ್ರಮದಲ್ಲಿ ತಿಳಿಸಿದರು. ಇದೇ ಸಂದರ್ಭದಲ್ಲಿ ಅವರು ಸಕಾಲ ನವೀಕೃತ ಜಾಲತಾಣವನ್ನು ಉದ್ಘಾಟಿಸಿದರು.

ಬೈಕ್ ಅಪಘಾತ: ವಿದ್ಯಾರ್ಥಿ ಸಾವು

ತುಮಕೂರು: ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲು ಬರುತ್ತಿದ್ದ ಸಮಯದಲ್ಲಿ ಬೈಕ್ ನಿಯಂತ್ರಣ ತಪ್ಪಿ ಗೋಡೆಗೆ ಡಿಕ್ಕಿ ಹೊಡೆದು ವಿದ್ಯಾರ್ಥಿ ಸ್ಥಳದಲ್ಲಿ ಮೃತಪಟ್ಟು, ಇಬ್ಬರು ಗಾಯಗೊಂಡಿರುವ ಘಟನೆ ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹಾಲಗೆರೆ ಬಳಿ ಸೋಮವಾರ ನಡೆದಿದೆ.

ನವೀನ್ (15) ಮೃತ ವಿದ್ಯಾರ್ಥಿ. ಶರತ್ ಹಾಗೂ ದರ್ಶನ್ ಗಾಯಗೊಂಡಿದ್ದಾರೆ. ಎಲ್ಲರೂ ಸೆಣಬಘಟ್ಟ ಗ್ರಾಮದ ಬಾಬು ರಾಜೇಂದ್ರಪ್ರಸಾದ್ ಪ್ರೌಢಶಾಲೆಯ ವಿದ್ಯಾರ್ಥಿಗಳು.

ಅಮೃತೂರಿನ ಪರೀಕ್ಷಾ ಕೇಂದ್ರಕ್ಕೆ ಪರೀಕ್ಷೆ ಬರೆಯಲು ಬೈಕ್‌ನಲ್ಲಿ ಮೂವರು ಒಟ್ಟಿಗೆ ಬರುತ್ತಿದ್ದರು. ಗಾಯಗೊಂಡ ವಿದ್ಯಾರ್ಥಿಗಳನ್ನು ಬೆಳ್ಳೂರು ಕ್ರಾಸ್‌ನ ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪರೀಕ್ಷಾ ಕೇಂದ್ರದಲ್ಲಿ ಹೆಜ್ಜೇನು ದಾಳಿ

ಹೆಜ್ಜೇನುಗಳ ದಾಳಿಯಿಂದ ರಕ್ಷಿಸಿಕೊಳ್ಳಲು ಪೊಲೀಸರು ಬಟ್ಟೆ ಹೊದ್ದುಕೊಂಡಿದ್ದರು

ಹುಬ್ಬಳ್ಳಿ: ನಗರದ ಕೇಶ್ವಾಪುರದ ಸರ್ವೋದಯ ವೃತ್ತದ ಬಳಿಯ ಸೇಂಟ್ ಮೈಕಲ್ಸ್ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರದ ಬಳಿ ಸೋಮವಾರ ಬೆಳಿಗ್ಗೆ 9.45ರ ಸುಮಾರಿಗೆ ಹೆಜ್ಜೇನು ದಾಳಿ ನಡೆಸಿದ್ದು, ವಿದ್ಯಾರ್ಥಿ ಸೇರಿದಂತೆ ಐವರು ಗಾಯಗೊಂಡಿದ್ದಾರೆ.

ವಿದ್ಯಾರ್ಥಿ ಇಮಾಮ್ ಜಾಫರ್ ಸಾಧಿಕ್, ಶಾಲೆ ಬಳಿ ಕರ್ತವ್ಯಕ್ಕೆ ನಿಯೋಜನೆಯಾಗಿದ್ದ ಮಹಿಳಾ ಕಾನ್‌ಸ್ಟೆಬಲ್ ವಾಣಿ ಅಜಯ್ ದ್ಯಾವನೂರ, ವಿದ್ಯಾರ್ಥಿನಿ ತಾಯಿ ಭುವನೇಶ್ವರಿ ಕೆ, ಶಾಲೆ ಸಿಬ್ಬಂದಿ ಪ್ರಕಾಶ ಬಲರಾಮ ಮತ್ತು ಸುನೀತಾ ಜೋಸೆಫ್ ಗಾಯಗೊಂಡವರು.

ಈ ಪೈಕಿ, ಹೆಚ್ಚಿನ ದಾಳಿಗೊಳಗಾದ ಭುವನೇಶ್ವರಿ ಮತ್ತು ವಾಣಿ ಅವರು ಕಿಮ್ಸ್‌ಗೆ ದಾಖಲಾಗಿದ್ದಾರೆ. ಇವರಲ್ಲಿ ಭುವನೇಶ್ವರಿ ಸ್ಥಿತಿ ಗಂಭೀರವಾಗಿದೆ.

ಉಳಿದವರು ಪ್ರಥಮ ಚಿಕಿತ್ಸೆ ಪಡೆದು ವಾಪಸ್ಸಾಗಿದ್ದಾರೆ. ವಿದ್ಯಾರ್ಥಿ ಇಮಾಮ್ ಪರೀಕ್ಷೆಗೆ ಹಾಜರಾಗಿದ್ದಾನೆ. 'ನಾಲ್ಕು ಅಂತಸ್ತಿನ ಶಾಲಾ ಕಟ್ಟಡದಲ್ಲಿ ಕಟ್ಟಿದ್ದ ಹೆಜ್ಜೇನುಗಳಿಂದ ದಾಳಿ ನಡೆದಿದೆ. ದಾಳಿಗೆ ಮುಂಚೆಯೇ ವಿದ್ಯಾರ್ಥಿಗಳು ಕೊಠಡಿಗಳಿಗೆ ತೆರಳಿದ್ದರಿಂದ ಅನಾಹುತ ತಪ್ಪಿದೆ. ಪರೀಕ್ಷೆಗೆ ತಡವಾಗಿ ಬಂದ ವಿದ್ಯಾರ್ಥಿಗೆ ಒಂದೆರಡು ಹೆಜ್ಜೇನುಗಳು ಕಚ್ಚಿವೆ' ಎಂದು ಹುಬ್ಬಳ್ಳಿ ನಗರ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಶೈಲ ಕರಿಕಟ್ಟಿ ಹೇಳಿದರು.

ಆರ್ಥಿಕ ಸಮಸ್ಯೆ: ಸರ್ವಪಕ್ಷ ಸಭೆ ಕರೆಯಲು ಒತ್ತಾಯ

ಕೋಲ್ಕತ್ತ (ಪಿಟಿಐ): ಇಂಧನ ದರಗಳ ಏರಿಕೆಯನ್ನು ಖಂಡಿಸಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ಪ್ರಸ್ತುತ ಉದ್ಭವಿಸಿರುವ ಆರ್ಥಿಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸರ್ವಪಕ್ಷ ಸಭೆ ಕರೆಯುವಂತೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವನ್ನು ಸೋಮವಾರ ಒತ್ತಾಯಿಸಿದ್ದಾರೆ.

ಬಿಜೆಪಿಯೇತರ ರಾಜ್ಯಗಳಲ್ಲಿ ಕೇಸರಿ ಪಕ್ಷವು ನಡೆಸುತ್ತಿರುವ ದೌರ್ಜನ್ಯದಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಕೇಂದ್ರವು ಪೆಟ್ರೋಲ್ ಮತ್ತು ಡೀಸೆಲ್‌ನ ಬೆಲೆ ಏರಿಕೆಗೆ ಅನುಮತಿ ನೀಡಿದೆ ಎಂದು ಬ್ಯಾನರ್ಜಿ ಆರೋಪಿಸಿದ್ದಾರೆ.

'ಇಂಧನ ಬೆಲೆ ಏರಿಕೆಯನ್ನು ನಿಯಂತ್ರಿಸಲು ಕೇಂದ್ರವು ಯಾವುದೇ ಯೋಜನೆ ಹೊಂದಿಲ್ಲ. ಈ ಬಿಕ್ಕಟ್ಟಿಗೆ ಬಿಜೆಪಿಯೇ ನೇರ ಹೊಣೆ. ಉತ್ತರ ಪ್ರದೇಶ ಚುನಾವಣೆಯಲ್ಲಿ ಗೆದ್ದ ನಂತರ ಬಿಜೆಪಿ ದೇಶಕ್ಕೆ ನೀಡಿರುವ ಕೊಡುಗೆಯಾಗಿದೆ' ಎಂದು ತಿಳಿಸಿದರು.

'ವಿರೋಧ ಪಕ್ಷಗಳ ವಿರುದ್ಧ ಸಿಬಿಐ ಮತ್ತು ಇ.ಡಿ ಅಂತಹ ಏಜೆನ್ಸಿಗಳನ್ನು ಬಳಸುವ ಬದಲು, ಈಗ ಉದ್ಭವಿಸಿರುವ ಆರ್ಥಿಕ ಸಮಸ್ಯೆಯನ್ನು ಪರಿಹರಿಸಲು ಕೇಂದ್ರವು ಸರ್ವಪಕ್ಷ ಸಭೆ ಕರೆಯಬೇಕು' ಎಂದು ಹೇಳಿದರು.

'ಪ್ರಧಾನ ಮಂತ್ರಿ ಜನ್ ಧನ್ ಲೂಟಿ ಯೋಜನೆ'

ನವದೆಹಲಿ (ಪಿಟಿಐ): ಇಂಧನ ಬೆಲೆ ಏರಿಕೆಗೆ ಸಂಬಂಧಿಸಿದಂತೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಇದನ್ನು 'ಪ್ರಧಾನ ಮಂತ್ರಿ ಜನ್ ಧನ್ ಲೂಟಿ ಯೋಜನೆ' ಎಂದು ವ್ಯಂಗ್ಯವಾಡಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ರಾಹುಲ್ ಗಾಂಧಿ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯ ಅಂಕಿ ಅಂಶವನ್ನು ಉಲ್ಲೇಖಿಸಿ ಗ್ರಾಫಿಕ್ಸ್ ಬಿಡುಗಡೆ ಮಾಡಿದ್ದಾರೆ.

ಯುಪಿಎ ಸರ್ಕಾರದ ಹಾಗೂ ಈಗಿನ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಇಂಧನ ಬೆಲೆ ಹೋಲಿಕೆಯನ್ನು ಅವರು ಮಾಡಿದ್ದಾರೆ.

2014ರಲ್ಲಿ ಹಾಗೂ ಇಂದಿನ ಸ್ಕೂಟರ್, ಬೈಕ್, ಕಾರು, ಟ್ರ್ಯಾಕ್ಟರ್ ಹಾಗೂ ಟ್ರಕ್‌ಗಳ 'ಫುಲ್ ಟ್ಯಾಂಕ್' ಇಂಧನ ಬೆಲೆ ತುಲನೆ ಮಾಡಲಾಗಿದೆ. ಜೊತೆಗೆ ಅಂದು ಹಾಗೂ ಇಂದಿನ ಕಚ್ಚಾ ತೈಲ ಬೆಲೆಯನ್ನು ಟ್ವೀಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಮೋದಿ ಸರ್ಕಾರವು ನಿತ್ಯ ಬೆಳಿಗ್ಗೆ ಉತ್ಸಾಹದ ಬದಲಿಗೆ ಹಣದುಬ್ಬರದ ದುಃಖವನ್ನು ತರುತ್ತದೆ ಎಂದು ಕಾಂಗ್ರೆಸ್ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ಟ್ವೀಟ್‌ನಲ್ಲಿ ವ್ಯಂಗ್ಯವಾಡಿದ್ದಾರೆ. ಬಿಜೆಪಿಗೆ ಮತ ಹಾಕಿ ಎಂದರೆ, 'ಅದು ಹಣದುಬ್ಬರಕ್ಕೆ ಜನಾದೇಶ?' ಎಂದಾಗುತ್ತದೆ ಎಂದು ಟೀಕಿಸಿದ್ದಾರೆ.

'ಫುಲ್ ಟ್ಯಾಂಕ್' ಇಂಧನದ ವೆಚ್ಚ: ಅಂದು– ಇಂದು
(ಮೇ 2014 ಮತ್ತು ಈಗಿನ ಬೆಲೆ, ₹ಗಳಲ್ಲಿ)

ವಾಹನ	2014ರ ಮೇ	ಈಗಿನ ಬೆಲೆ	ಅಂತರ
ಸ್ಕೂಟರ್/ಬೈಕ್	714	1,038	324
ಕಾರು	2,856	4,152	1,296
ಟ್ರ್ಯಾಕ್ಟರ್	2,749	4,563	1,814
ಟ್ರಕ್	11,456	19,014	7,558
ಕಚ್ಚಾ ತೈಲ ಬೆಲೆ* (ಪ್ರತಿ ಬ್ಯಾರೆಲ್‌ಗೆ)	108.05	99.42	8.63

(* ಅಮೆರಿಕನ್ ಡಾಲರ್‌ನಲ್ಲಿ)

ರಾಜ್ಯಸಭೆ: ಇಂಧನ ದರ ಏರಿಕೆ ಚರ್ಚೆಗೆ ಆಗ್ರಹಿಸಿ ಪ್ರತಿಭಟನೆ– ಕಲಾಪ ಮುಂದಕ್ಕೆ

ನವದೆಹಲಿ (ಪಿಟಿಐ): ಇಂಧನ ದರ ಏರಿಕೆಗೆ ಸಂಬಂಧಿಸಿದಂತೆ ಚರ್ಚೆಗೆ ಅವಕಾಶ ನೀಡುವಂತೆ ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಸದಸ್ಯರು ಆಗ್ರಹಿಸಿ ಪ್ರತಿಭಟಿಸಿದ್ದರಿಂದ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಲಾಯಿತು.

ಬೆಲೆ ಏರಿಕೆ ಕುರಿತು ಚರ್ಚಿಸಲು ವಿರೋಧ ಪಕ್ಷಗಳ ಹಲವು ಸದಸ್ಯರು ನೋಟಿಸ್ ನೀಡಿದ್ದರು. ಆದರೆ ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರು ಚರ್ಚೆಗೆ ಅವಕಾಶ ನೀಡಲಿಲ್ಲ.

ಸೋಮವಾರ ಎರಡು ಬಾರಿ ಕಲಾಪವನ್ನು ಮುಂದೂಡಿದ ಬಳಿಕ ಮಧ್ಯಾಹ್ನ 2 ಗಂಟೆಗೆ ಕಲಾಪ ಮತ್ತೆ ಆರಂಭವಾಯಿತು. ಆದರೆ ಪ್ರತಿ ಪಕ್ಷಗಳ ಸದಸ್ಯರು ಪೆಟ್ರೋಲ್, ಡೀಸೆಲ್, ಎಲ್‌ಪಿಜಿ (ಅಡುಗೆ ಅನಿಲ) ಬೆಲೆ ಏರಿಕೆ ವಿಷಯದ ಬಗ್ಗೆ ಚರ್ಚೆ ನಡೆಸುವಂತೆ ಒತ್ತಾಯಿಸಿದರು.

ಲೋಕಸಭೆಯಲ್ಲಿ ಸಭಾತ್ಯಾಗ: ಲೋಕಸಭೆಯಲ್ಲಿ ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪವಾಗಿದ್ದು, ದರ ಏರಿಕೆಯನ್ನು ಪ್ರತಿಭಟಿಸಿ ವಿರೋಧಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು.

ಐವರು ಸಾಧಕರಿಗೆ ಡಾ. ಬಾಬು ಜಗಜೀವನ್ ರಾಂ ಪ್ರಶಸ್ತಿ

ಬೆಂಗಳೂರು: ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಏಳಿಗೆಗಾಗಿ ವಿವಿಧ ಕ್ಷೇತ್ರಗಳಲ್ಲಿ ಸ್ವಯಂ ಪ್ರೇರಿತವಾಗಿ ತೊಡಗಿಸಿಕೊಂಡು ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ 'ಡಾ. ಬಾಬು ಜಗಜೀವನ್ ರಾಂ' ಹೆಸರಿನಲ್ಲಿ ನೀಡಲಾಗುವ ಪ್ರಶಸ್ತಿಗೆ ಐವರನ್ನು (2018–19ರಿಂದ 2022–23ರವರೆಗೆ ಪ್ರತಿವರ್ಷ ಒಬ್ಬರಂತೆ) ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಗೆ ಆಯ್ಕೆಯಾದವರು ದಾನಪ್ಪ ಸಿ. ನಿಲೋಗಲ್ (ಸಾಹಿತಿ, ಚಿಂತಕ, ಹೋರಾಟಗಾರ), ಮುನಿಸ್ವಾಮಿ (ಕಿನ್ನರಿ ನುಡಿಸುವವರು), ಆರ್.ಎಂ. ಕಾಂತ ರಾಜು (ಪರಿಶಿಷ್ಟ ಜಾತಿಯವರ ಅಭಿವೃದ್ಧಿ, ಸಮಾಜ ಸೇವೆ), ವೀರಪ್ಪ ಬಿ. ಸವಣೂರು (ತಳ ಸಮುದಾಯ ಒಗ್ಗೂಡಿಸಿ,ಜಾತ್ಯತೀತಮನೋಭಾವಮೂಡಿಸಲು ಶ್ರಮ), ಎನ್.ಡಿ. ವೆಂಕಮ್ಮ (ಲೇಖಕಿ, ಕವಯತ್ರಿ, ಕಥೆಗಾರ್ತಿ, ಪರಿಶಿಷ್ಟ ಮಹಿಳೆಯರ ಏಳಿಗೆಗಾಗಿ ಸೇವೆ)

ಪ್ರಶಸ್ತಿಯು ₹ 5 ಲಕ್ಷ ನಗದು, 20 ಗ್ರಾಂನ ಚಿನ್ನದ ಪದಕ, ಶಾಲು, ಫಲಕವನ್ನು ಹೊಂದಿದೆ. ಇದೇ 5ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯಲಿರುವ ಡಾ. ಬಾಬು ಜಗಜೀವನ್ ರಾಂ ಅವರ 115ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.

ವೀರಪ್ಪ ಬಿ. ಸವಣೂರು

ಎನ್.ಡಿ. ವೆಂಕಮ್ಮ



ಆರ್.ಎಂ. ಕಾಂತರಾಜು



ದಾನಪ್ಪ ಸಿ. ನಿಲೋಗಲ್

ಮುನಿಸ್ವಾಮಿ

'ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಏಳಿಗೆಗಾಗಿ, ಅಸ್ಪೃಶ್ಯ ನಿವಾರಣೆ, ದೌರ್ಜನ್ಯ ತಡೆ ಚಟುವಟಿಕೆಯಲ್ಲಿ ಸ್ವಯಂ ಪ್ರೇರಣೆಯಿಂದ ನಿರಂತರವಾಗಿ ತೊಡಗಿಸಿಕೊಂಡು ಶ್ರಮಿಸುವ ವ್ಯಕ್ತಿಗಳನ್ನು ಗುರುತಿಸಿ, ಪ್ರತಿವರ್ಷ ಡಾ. ಬಾಬು ಜಗಜೀವನ್ ರಾಂ ಸ್ಮರಣಾರ್ಥ ಪ್ರಶಸ್ತಿ ನೀಡಲಾಗುತ್ತಿದೆ. ಆದರೆ, ವಿಧಾನಸಭೆ, ಲೋಕಸಭೆ ಚುನಾವಣೆ, ಕೋವಿಡ್ ಮತ್ತಿತರ ಕಾರಣಗಳಿಗೆ 2018ರಿಂದ ಪ್ರಸಕ್ತ ಸಾಲಿನವರೆಗೆ ಡಾ. ಬಾಬು ಜಗಜೀವನ್ ರಾಂ ಜನ್ಮದಿನಾಚರಣೆಯನ್ನು ಸಾರ್ವಜನಿಕವಾಗಿ ಆಚರಿಸಲು ಮತ್ತು ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಲು ಸಾಧ್ಯವಾಗಿಲ್ಲ. ಇದೀಗ, ಆಯ್ಕೆ ಸಮಿತಿಯು ಅರ್ಜಿಗಳನ್ನು ಸ್ವೀಕರಿಸಿ, ಶಿಫಾರಸು ಮಾಡಿದವರಿಗೆ ಪ್ರಶಸ್ತಿ ಘೋಷಿಸಲಾಗಿದೆ' ಎಂದು ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ತಿಳಿಸಿದ್ದಾರೆ.

ಪೊಲೀಸರಿಗೆ ಹೆಚ್ಚಿನ ಅಧಿಕಾರ: ಲೋಕಸಭೆಯಲ್ಲಿ ಅಂಗೀಕಾರ

'ಬಂಧಿತರ ಜೈವಿಕ ಮಾದರಿ ಸಂಗ್ರಹಕ್ಕೆ ಮಸೂದೆ'

ನವದೆಹಲಿ (ಪಿಟಿಐ): ಅಪರಾಧ ಕೃತ್ಯಗಳಲ್ಲಿ ಬಂಧಿತರು, ಅಪರಾಧಿಗಳ ದೈಹಿಕ, ಜೈವಿಕ ಮಾದರಿ ಸಂಗ್ರಹಿಸಲು ಪೊಲೀಸರಿಗೆ ಶಾಸನಬದ್ಧ ಅಧಿಕಾರ ನೀಡುವ, 'ಅಪರಾಧ ಪ್ರಕ್ರಿಯೆ (ಗುರುತಿಸುವಿಕೆ) ಮಸೂದೆ'ಯನ್ನು ಸರ್ಕಾರ ಸಮರ್ಥಿಸಿಕೊಂಡಿದೆ.

ಮಸೂದೆಯನ್ನು ಲೋಕಸಭೆಯು ಸೋಮವಾರ ಧ್ವನಿಮತದಿಂದ ಅಂಗೀಕರಿಸಿತು.ಮಸೂದೆ ಮೇಲೆ ಚರ್ಚೆ ಆರಂಭಿಸಿದ ಗೃಹ ಸಚಿವ ಅಮಿತ್ ಶಾ, 'ಈ ಮಸೂದೆಯಲ್ಲದೇ ಸರ್ಕಾರ 'ಕಾರಾಗೃಹಗಳ ಮಾದರಿ ಕೈಪಿಡಿ'ಯನ್ನೂ ಸಿದ್ಧಪಡಿಸುತ್ತಿದೆ' ಎಂದರು.

'ಸದನದಲ್ಲಿ ಈಗ ಮಂಡಿಸಿರುವ ಮಸೂದೆಯನ್ನು ಪ್ರತಿಪಕ್ಷಗಳು ಸೀಮಿತ ಚೌಕಟ್ಟಿನಿಂದ ನೋಡಬಾರದು. ಬಳಿಕ ಒದಗಿಸಲಿರುವ 'ಕಾರಾಗೃಹ ಮಾದರಿ ಕೈಪಿಡಿ'ಯನ್ನೂ ಗಮನದಲ್ಲಿಟ್ಟುಕೊಂಡು ಗಮನಿಸಬೇಕು' ಎಂದರು.

'ಮಸೂದೆಯ ಕರಡು ಸಿದ್ಧಪಡಿಸುವಾಗ ಮಾನವ ಮತ್ತು ವೈಯಕ್ತಿಕ ಹಕ್ಕುಗಳ ರಕ್ಷಣೆಗೆ ಅಗತ್ಯ ಕಾಳಜಿ ವಹಿಸಲಾಗಿದೆ. ದೇಶದಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಆಂತರಿಕ ಭದ್ರತೆಯನ್ನು ಬಲಪಡಿಸುವುದೇ ಇದರ ಗುರಿ' ಎಂದು ಪ್ರತಿಪಾದಿಸಿದರು.

'ಮಸೂದೆಗೆ ಸಂಬಂಧಿಸಿದ ಹಲವು ಪ್ರಶ್ನೆಗಳಿಗೆ ಈ ಕೈಪಿಡಿ ಉತ್ತರ ನೀಡಲಿದೆ. ಕೈದಿಗಳ ಪುನರುಜ್ಜೀವನ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು, ಜೈಲು ಅಧಿಕಾರಿಗಳ ಅಧಿಕಾರ ಸೀಮಿತಗೊಳಿಸುವುದು, ಶಿಸ್ತು ನಿರ್ವಹಣೆ, ಕಾರಾಗೃಹಗಳಲ್ಲಿ ಭದ್ರತೆ, ಮಹಿಳಾ ಕೈದಿಗಳಿಗೆ ಪ್ರತ್ಯೇಕ ಕಾರಾಗೃಹ ಮತ್ತು ಬಯಲು ಕಾರಾಗೃಹ –ಹೀಗೆ ವಿವಿಧ ಅಂಶಗಳಿವೆ' ಎಂದು ತಿಳಿಸಿದರು.

'ಪ್ರಸ್ತುತ ಸಂದರ್ಭ, ವಿಜ್ಞಾನ, ನ್ಯಾಯಾಲಯಗಳಲ್ಲಿ ಅಪರಾಧ ಸಾಬೀತುಪಡಿಸುವಿಕೆ, ಕಾನೂನು ಜಾರಿ ಸಂಸ್ಥೆಗಳನ್ನು ಬಲಪಡಿಸುವುದು ಸೇರಿದಂತೆ ವಿವಿಧ ಆಯಾಮಗಳಿಂದ ಗಮನಿಸಿದಾಗ ಹಾಲಿ ಇರುವ 'ಕೈದಿಗಳ ಗುರುತುಪತ್ತೆ ಕಾಯ್ದೆ 1920' ಅಪ್ರಸ್ತುತವಾಗಿದೆ. ಈಗಿನ ಸವಾಲುಗಳನ್ನು ಸೂಕ್ತವಾಗಿ ಎದುರಿಸುವ ಜೊತೆಗೆ ವ್ಯವಸ್ಥೆ ಬಲಪಡಿಸಲು ಈ ಮಸೂದೆ ಪೂರಕವಾಗಿದೆ. 1980ರಲ್ಲಿಯೇ ಆಗಿನ ಕಾನೂನು ಆಯೋಗವು ಕಾಯ್ದೆಯ ಪುನರ್ ರಚಿಸುವ ಅಗತ್ಯವಿದೆ ಎಂದು ಹೇಳಿತ್ತು' ಎಂದರು.

ನಾವು ಈಗ ಕಾಯ್ದೆಯಲ್ಲಿ ಅಗತ್ಯ ಬದಲಾವಣೆ ತರದಿದ್ದಲ್ಲಿ, ಅಪರಾಧ ಸಾಬೀತುಪಡಿಸಲು ನ್ಯಾಯಾಲಯಗಳಿಗೆ ಪೂರಕ ಸಾಕ್ಷ್ಯ ಒದಗಿಸುವಲ್ಲಿಯೂ ಹಿಂದುಳಿಯುತ್ತೇವೆ. ತಪ್ಪಿತಸ್ಥರನ್ನು ಶಿಕ್ಷೆಗೊಳಪಡಿಸುವ ಪ್ರಮಾಣವು ಹೆಚ್ಚುವುದಿಲ್ಲ ಎಂದು ಹೇಳಿದರು.

ಕೇಂದ್ರ ಸರ್ಕಾರ ಕಳೆದ ಸೋಮವಾರವೇ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿತ್ತು. ಆಗ, ವಿರೋಧಪಕ್ಷಗಳಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಇದು, 'ಕಾನೂನು ಬಾಹಿರ' ಮತ್ತು 'ಅಸಾಂವಿಧಾನಿಕ ಕ್ರಮ' ಎಂದು ಪ್ರತಿಪಕ್ಷಗಳು ಟೀಕಿಸಿದ್ದವು.

ಮಸೂದೆಯ ಉದ್ದೇಶ, ಪ್ರತಿಪಕ್ಷಗಳ ಆತಂಕ

- 102 ವರ್ಷ ಹಳೆಯ ಕಾಯ್ದೆ ವ್ಯಾಪ್ತಿ ವಿಸ್ತರಿಸುವ ಉದ್ದೇಶ. ಅಪರಾಧ ಪ್ರಕರಣಗಳಲ್ಲಿನ ಆರೋಪಿಗಳು, ಕೈದಿಗಳಿಗೆ ಸಂಬಂಧಿಸಿ ಜೈವಿಕ, ದೈಹಿಕ ಮಾದರಿ ಪಡೆಯಲು ಪೊಲೀಸರಿಗೆ ಕಾನೂನು ಅಧಿಕಾರ ನೀಡುವ ಉದ್ದೇಶ.
- ಇದುವರೆಗೂ ಭಾವಚಿತ್ರ, ಬೆರಳಚ್ಚು, ಪಾದದಚ್ಚು ಪಡೆಯಲಷ್ಟೇ ಅವಕಾಶವಿತ್ತು. ಈಗಿನ ಮಸೂದೆ ಪ್ರಕಾರ ಹಸ್ತರೇಖೆ, ಕಣ್ಣು, ಅಕ್ಷಿಪಟಲ, ದೈಹಿಕ, ಜೈವಿಕ ಮಾದರಿ ಸಂಗ್ರಹ, ಅವುಗಳ ವಿಶ್ಲೇಷಣೆ, ಸಹಿ, ಕೈಬರಹ ಸೇರಿ ಅವರ ವರ್ತನೆಯನ್ನು ಸಾಬೀತು ಪಡಿಸುವ ವಿವಿಧ ಅಂಶಗಳನ್ನು ಸಂಗ್ರಹಿಸಲು ಅವಕಾಶವಿದೆ.
- ತೃಣಮೂಲ ಕಾಂಗ್ರೆಸ್ ಪಕ್ಷದ ಸೌಗತಾ ರಾಯ್, ಬಿಜೆಡಿಯ ಭರ್ತೃಹರಿ ಮಹ್ತಾಬ್, ಆರ್‌ಎಸ್‌ಪಿಯ ಎನ್‌.ಕೆ.ಪ್ರೇಮಚಂದ್ರನ್ ಅವರು ಮಸೂದೆಗೆ ಒಟ್ಟು 24 ಬದಲಾವಣೆಗಳನ್ನು ಸೂಚಿಸಿದ್ದಾರೆ.
- ಜೈವಿಕ ಮತ್ತು ದೈಹಿಕ ಮಾದರಿ ಪಡೆಯಲು ಮುಖ್ಯವಾಗಿ ಆಕ್ಷೇಪ ವ್ಯಕ್ತವಾಗಿದೆ. ಖಾಸಗೀತನ ರಕ್ಷಣೆ ಕಾಯ್ದೆಯ ಅನುಪಸ್ಥಿತಿಯಲ್ಲಿ ಈ ಬಗ್ಗೆ ಸ್ಪಷ್ಟತೆ ಇಲ್ಲ. ಹೀಗಾಗಿ, ಈ ಅಂಶವನ್ನು ಕೈಬಿಡಬೇಕು ಎಂದು ಕೋರಲಾಗಿದೆ.
- ಮಾದರಿ ಸಂಗ್ರಹಿಸುವ ಅಧಿಕಾರವನ್ನು ಹೆಡ್ ಕಾನ್‌ಸ್ಟೆಬಲ್, ಹೆಡ್ ವಾರ್ಡನ್‌ಗೆ ನೀಡಿರುವುದಕ್ಕೂ ಆಕ್ಷೇಪ ವ್ಯಕ್ತವಾಗಿದೆ. ಡಿವೈಎಸ್‌ಪಿ ಅಥವಾ ಜೈಲು ಸೂಪರಿಂಟೆಂಡೆಂಟ್‌ಗೆ ಈ ಅಧಿಕಾರ ಇರಬೇಕು ಎಂದು ಪ್ರತಿಪಕ್ಷಗಳು ಒತ್ತಾಯಿಸಿವೆ.
- ಹೊಸ ಮಸೂದೆ ಪ್ರಕಾರ, ಅಪರಾಧಿಗಳು ಮತ್ತು ಆರೋಪಿಗಳ ಮಾದರಿ ಸಂಗ್ರಹಿಸುವುದನ್ನು ಗಂಭೀರ ಸ್ವರೂಪದ ಅಪರಾಧಗಳಿಗಷ್ಟೇ ಅನ್ವಯಿಸಬೇಕು ಎಂಬುದು ಪ್ರೇಮಚಂದ್ರನ್ ಅವರ ಸಲಹೆ.

ಸಂಗ್ರಹಿಸಿದ ಮಾಹಿತಿಯನ್ನು ರಾಷ್ಟ್ರೀಯ ಅಪರಾಧ ದಾಖಲೆ ಮಂಡಳಿ (ಎನ್‌ಸಿಆರ್‌ಬಿ) 75 ವರ್ಷ ಮೀರಿ ಸಂರಕ್ಷಿಸಬಾರದು ಮತ್ತು ಇತರೆ ಸಂಸ್ಥೆಗಳ ಜೊತೆಗೆ ಹಂಚಿಕೊಳ್ಳಬಾರದು ಎಂದು ವಿರೋಧಪಕ್ಷಗಳು ಸಲಹೆ ಮಾಡಿವೆ.

ಕೆ.ಎಸ್‌.ಭಗವಾನ್, ಎಂ. ಕಲ್ಯೆ ಸೆಲ್ವಿ ಅರ್ಜಿ

ಆಕ್ಷೇಪಣೆ ಸಲ್ಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಮಾಯಣ, ಮಹಾಭಾರತ ಮತ್ತು ಹಿಂದೂ ಧರ್ಮ ದೇವತೆಗಳನ್ನು ಅವಹೇಳನ ಮಾಡಿ ಹಿಂದೂಗಳ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ಹಾಗೂ ಪೆರಿಯಾರ್ ಚಿಂತಕಿ ಎಂ. ಕಲ್ಯೆ ಸೆಲ್ವಿ ಅವರ ಜಾಮೀನು ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ನಗರದ 8ನೇ ಎಸಿಎಂಎಂ ನ್ಯಾಯಾಲಯ ಪ್ರಾಸಿಕ್ಯೂಷನ್ ಪರ ವಕೀಲರಿಗೆ ಸೂಚಿಸಿದೆ.

'2015ರ ಸೆಪ್ಟೆಂಬರ್‌ನಲ್ಲಿ ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದಿದ್ದ ಪೆರಿಯಾರ್ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ, ಕೆ.ಎಸ್. ಭಗವಾನ್, ಚಂದ್ರಶೇಖರ ಪಾಟೀಲ (ಚಂಪಾ) ಮತ್ತು ಎಂ.ಕಲ್ಯೆ ಸೆಲ್ವಿ ಹಿಂದೂಗಳ ಭಾವನೆ ಕೆರಳಿಸುವಂತಹ ಪ್ರಚೋದನಕಾರಿ ಭಾಷಣ ಮಾಡಿದ್ದರು' ಎಂದು ಆರೋಪಿಸಿ ಶ್ಯಾಮ ಸುದರ್ಶನ್ ಭಟ್ ಎಂಬುವರು ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು.

ಐಪಿಸಿ ಕಲಂ 295(ಎ) ಮತ್ತು 153(ಬಿ) ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದ ಪೊಲೀಸರು, ಕಾರ್ಯಕ್ರಮ ನಡೆದ ಸ್ಥಳ ಬೆಂಗಳೂರು ಎಂಬ ಕಾರಣಕ್ಕೆ ಪ್ರಕರಣವನ್ನು ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಗೆ ವರ್ಗಾಯಿಸಿದ್ದರು. ತನಿಖೆ ನಡೆಸಿದ್ದ ಹೈಗ್ರೌಂಡ್ಸ್ ಠಾಣೆ ಪೊಲೀಸರು 8ನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣವನ್ನು ನ್ಯಾಯಾಧೀಶ ವೀರನಗೌಡ ಎಸ್.ಪಾಟೀಲ ಸೋಮವಾರ ವಿಚಾರಣೆ ನಡೆಸಿದರು. ವಿಚಾರಣೆ ವೇಳೆ ಭಗವಾನ್ ಪರ ವಕೀಲ ಕೆ.ಎಸ್.ಚಿಕ್ಕಚನ್ನೇಗೌಡ, 'ಪ್ರಕರಣದ ಮೊದಲ ಆರೋಪಿಯಾಗಿರುವ ಕೆ.ಎಸ್. ಭಗವಾನ್ 76 ವರ್ಷ ಮೀರಿದ್ದಾರೆ. ಪ್ರತಿ ವಿಚಾರಣೆಗೆ ಮೈಸೂರಿನಿಂದ ಇಲ್ಲಿಗೆ ಬರಬೇಕಿದ್ದು, ಅವರಿಗೆ ಜಾಮೀನು ನೀಡಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, ಚಂಪಾ ಅವರ ನಿಧನದ ಬಗ್ಗೆ ಪೊಲೀಸರು ವರದಿ ಸಲ್ಲಿಸುವಂತೆ ಸೂಚಿಸಿ, ಉಳಿದ ಆರೋಪಿಗಳ ಜಾಮೀನು ಅರ್ಜಿಗಳಿಗೆ ಆಕ್ಷೇಪಣೆ ಸಲ್ಲಿಸುವಂತೆ ಪ್ರಾಸಿಕ್ಯೂಷನ್ ಪರ ವಕೀಲರಿಗೆ ನಿರ್ದೇಶಿಸಿ ವಿಚಾರಣೆಯನ್ನು ಜೂನ್ 6ಕ್ಕೆ ಮುಂದೂಡಿದರು.

'ತಮಿಳ್ ಸೆಲ್ವಿ ಅಲ್ಲ ಎಂ. ಕಲ್ಯೆ ಸೆಲ್ವಿ'

ಈ ಪ್ರಕರಣಕ್ಕೆ ಸಂಬಂಧಿಸಿದಂತೆ 'ಪ್ರಜಾವಾಣಿ'ಯ 2022ರ ಜನವರಿ 1ರ ಸಂಚಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಈ ವರದಿಯಲ್ಲಿ ಮೂರನೇ ಆರೋಪಿಯಾದ ಪೆರಿಯಾರ್ ಚಿಂತಕಿ ಎಂ.ಕಲ್ಯೆ ಸೆಲ್ವಿ ಅವರ ಹೆಸರು ಪ್ರಮಾದವಶಾತ್ 'ತಮಿಳ್ ಸೆಲ್ವಿ' ಎಂದು ಪ್ರಕಟವಾಗಿತ್ತು.

ಬುಕಾ ನರಮೇಧ ಖಂಡಿಸಿದ ವಿಶ್ವ ಸಮುದಾಯ • ರಷ್ಯಾ ಎಸಗಿರುವ ಯುದ್ಧಾಪರಾಧ ತನಿಖೆಗೆ ಆಗ್ರಹ

ಉಕ್ರೇನ್ ಸೇನಾನೆಲೆಗಳ ಮೇಲೆ ವಾಯುದಾಳಿ

ಕೀವ್, ಬ್ರಸೆಲ್ಸ್, ಮಾಸ್ಕೊ (ಎಪಿ/ಎಎಫ್‌ಪಿ): ಉಕ್ರೇನಿನ ರಾಜಧಾನಿ ಕೀವ್, ಚೆರ್ನಿವ್‌ನಿಂದ ರಷ್ಯಾ ಪಡೆಗಳು ಹಿಂದೆ ಸರಿದರೂ ದಕ್ಷಿಣ ಭಾಗದ ಪ್ರಮುಖ ಉಪ ನಗರಗಳಲ್ಲಿ ಸೇನಾ ನೆಲೆಗಳು ಮತ್ತು ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಸೋಮವಾರ ಕೂಡ ವೈಮಾನಿಕ ಮತ್ತು ಶೆಲ್ ದಾಳಿಯನ್ನು ನಡೆಸಿವೆ.

ಹಾರ್ಕಿವ್ ನಗರ ಜನವಸತಿ ಕಟ್ಟಡಗಳ ಮೇಲೆ ಭಾನುವಾರ ಸಂಜೆ ರಷ್ಯಾ ನಡೆಸಿದ ಶೆಲ್ ದಾಳಿಗೆ 7 ಮಂದಿ ಮತ್ತು ಮೈಕೊಲೈವ್‌ನಲ್ಲಿ ಒಬ್ಬರು ಸೇರಿ 8 ನಾಗರಿಕರು ಹತರಾಗಿದ್ದಾರೆ. ಈ ಎರಡೂ ನಗರಗಳಲ್ಲಿ ಒಂದು ಮಗು ಸೇರಿ 34 ನಾಗರಿಕರು ಗಾಯಗೊಂಡಿದ್ದಾರೆ. 10ಕ್ಕೂ ಹೆಚ್ಚು ಕಟ್ಟಡಗಳು ಛಿದ್ರಗೊಂಡಿವೆ ಎಂದು ಮೈಕೊಲೈವ್ ಪ್ರಾದೇಶಿಕ ಗವರ್ನರ್ ವಿಟಾಲಿ ಕಿಮ್ ತಿಳಿಸಿದ್ದಾರೆ.

ಚೆರ್ನಿವ್ ನಗರದ ಮೇಲೂ ರಷ್ಯಾ ಸೈನಿಕರು ಭಾನುವಾರ ನಿರಂತರವಾಗಿ ನಡೆಸಿದ ಶೆಲ್ ದಾಳಿಗೆ ಶೇ 70ರಷ್ಟು ನಾಶವಾಗಿದೆ ಎಂದು ನಗರದ ಮೇಯರ್ ತಿಳಿಸಿದರು.

ಒಂದು ತಿಂಗಳಿಗೂ ಹೆಚ್ಚು ಕಾಲ ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದ ಸುಮಿ ನಗರವನ್ನು ರಷ್ಯಾ ಪಡೆಗಳು ಭಾನುವಾರ ತೊರೆದಿವೆ. ಇದನ್ನು ಸ್ಥಳೀಯ ಆಡಳಿತಾಧಿಕಾರಿ ಡಿಮಿಟ್ರ ಝಿವಿಟ್‌ಸ್ಕಿ ಕೂಡ ಖಚಿತಪಡಿಸಿದ್ದಾರೆ.

ಲುಗಾನ್‌ಸ್ಕ್ ಸಮೀಪ ನಿಕೊಲೈವ್ ಬಳಿ ಉಕ್ರೇನ್ ಸೇನೆಯ ಶಸ್ತ್ರಾಸ್ತ್ರ ಸಂಗ್ರಹಾಗಾರ, ಮೂರು ಹೆಲಿಕಾಪ್ಟರ್‌ಗಳು, ಆರು ಮಾನವ ರಹಿತ ಡ್ರೋನ್‌ಗಳು, ಸೈನಿಕರು ಬೀಡುಬಿಟ್ಟಿದ್ದ ಶಿಬಿರಗಳನ್ನು ಭಾನುವಾರ ತಡ ರಾತ್ರಿ ವಾಯು ದಾಳಿಯಿಂದ ಧ್ವಂಸ ಮಾಡಲಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯದ ವಕ್ತಾರ, ಮೇಜರ್ ಜನರಲ್ ಐಗೋರ್ ಕೊನಶೆಂಕವ್ ಸೋಮವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಉಕ್ರೇನಿನ ರಾಜಧಾನಿ ಕೀವ್‌ನ ಹೊರವಲಯದ ಉಪನಗರ ಬುಕಾದಲ್ಲಿ ನರಮೇಧ ನಡೆದಿರುವ ಸ್ಥಳಗಳಿಗೆ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಭದ್ರತಾ ಸಿಬ್ಬಂದಿ ಜತೆಗೆ ಸೋಮವಾರ ಭೇಟಿ ನೀಡಿದರು (ಎಎಫ್‌ಪಿ ಚಿತ್ರ)

ಬುಕಾ ಘಟನೆ: ವಿಶ್ವಸಂಸ್ಥೆಯಲ್ಲಿ ಚರ್ಚಿಸಲು ರಷ್ಯಾ ಒತ್ತಾಯ

ಬುಕಾ ನರಮೇಧ ಕೃತ್ಯದ ಆರೋಪ ಅಲ್ಲಗಳೆದಿರುವ ರಷ್ಯಾ, ನಕಲಿ ದೃಶ್ಯಗಳನ್ನು ಸೃಷ್ಟಿಸಿ ಪ್ರಚೋದಿಸುವ ಪ್ರಯತ್ನ ಉಕ್ರೇನ್ ಸೇನೆಯಿಂದ ನಡೆದಿದೆ. ಕೀವ್ ಮತ್ತು ಅದರ ಉಪನಗರಗಳಿಂದ ಸೇನೆಯನ್ನು ಮಾರ್ಚ್ 30ರಂದೇ ಹಿಂತೆಗೆದುಕೊಳ್ಳಲಾಗಿದೆ. ರಷ್ಯಾ ಪಡೆಗಳ ಹಿಡಿತದಲ್ಲಿದ್ದಾಗ ಆ ಪ್ರದೇಶಗಳಲ್ಲಿ ಒಬ್ಬ ನಾಗರಿಕರಿಗೂ ತೊಂದರೆಯಾಗಿರಲಿಲ್ಲ ಎಂದು ಹೇಳಿದೆ.

ರಷ್ಯಾ ಸೇನಾ ಪಡೆಗಳು ಆ ಸ್ಥಳಗಳನ್ನು ತೊರೆದ ನಂತರ ಉಕ್ರೇನ್‌ನಿಂದಲೇ ಕೃತ್ಯ ನಡೆದಿದ್ದು, ಇದು ಪ್ರಚೋದನೆಯ ತಂತ್ರ ಎಂದು ರಷ್ಯಾ ಆರೋಪಿಸಿದೆ.

'ಬುಕಾದಲ್ಲಿ ನಾಗರಿಕರ ಹತ್ಯೆಯ ಯಾವುದೇ ಆರೋಪಗಳನ್ನು ಮಾಸ್ಕೊ ಸ್ಪಷ್ಟವಾಗಿ ನಿರಾಕರಿಸುತ್ತದೆ. ಈ ವಿಷಯವನ್ನು ಸಾಧ್ಯವಾದಷ್ಟು ಉನ್ನತ ಮಟ್ಟದಲ್ಲಿ ಚರ್ಚಿಸುವ ಅಗತ್ಯವಿದೆ' ಎಂದು ರಷ್ಯಾ ಅಧ್ಯಕ್ಷ ಪುಟಿನ್ ಅವರ ವಕ್ತಾರ ಡಿಮಿಟ್ರಿ ಪೆಸ್ಕೊವ್ ಹೇಳಿದರು.

'ಬುಕಾದಲ್ಲಿನ ಪರಿಸ್ಥಿತಿಯ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧಿವೇಶನದಲ್ಲಿ ತುರ್ತು ಚರ್ಚೆಯಾಗಬೇಕು. ಏಕೆಂದರೆ ಇಂತಹ ಪ್ರಚೋದನೆಯ ಕೃತ್ಯಗಳು ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ನೇರ ಬೆದರಿಕೆಯಾಗಿವೆ. ಪ್ರಸ್ತುತ ಭದ್ರತಾ ಮಂಡಳಿಯ ಅಧ್ಯಕ್ಷ ಸ್ಥಾನದಲ್ಲಿರುವ ಬ್ರಿಟನ್ ತನ್ನ ಕರ್ತವ್ಯ ನಿಭಾಯಿಸಬೇಕು' ಎಂದು ರಷ್ಯಾ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್ ಸೋಮವಾರ ಒತ್ತಾಯಿಸಿದ್ದಾರೆ.

ನರಮೇಧದ ತನಿಖೆಗೆ ಒತ್ತಾಯ: ರಷ್ಯಾ ಪಡೆಗಳು ಉಕ್ರೇನ್‌ನಲ್ಲಿ ನಡೆಸಿರುವ ಯುದ್ಧಾಪರಾಧಗಳ ತನಿಖೆಯಾಗಬೇಕು ಎಂದು ಉಕ್ರೇನ್ ಸರ್ಕಾರ, ಅಂತರರಾಷ್ಟ್ರೀಯ ನ್ಯಾಯಾಲಯವನ್ನು (ಐಸಿಸಿ) ಒತ್ತಾಯಿಸಿದೆ.

ರಷ್ಯಾ ತನ್ನ ಪಡೆಗಳನ್ನು ಹಿಂತೆಗೆದುಕೊಂಡ ನಂತರ ನಡೆದಿರುವ ರಷ್ಯಾದ ಯುದ್ಧಾಪರಾಧಗಳ ತನಿಖೆ ಮತ್ತು ಪುರಾವೆಗಳ ಸಂಗ್ರಹಕ್ಕೆ ಕೀವ್‌ನ ವಾಯವ್ಯದ ಉಪನಗರ ಬುಕಾದಲ್ಲಿನ ಸಾಮೂಹಿಕ ಸಮಾಧಿ ಸ್ಥಳಗಳಿಗೆ ಭೇಟಿ ನೀಡುವಂತೆ ಐಸಿಸಿಗೆ ಮನವಿ ಮಾಡಲಾಗಿದೆ ಎಂದು ಉಕ್ರೇನ್ ಅಧಿಕಾರಿಗಳು ತಿಳಿಸಿದ್ದಾರೆ.

ರಷ್ಯಾ ವಿರುದ್ಧ ಮತ್ತಷ್ಟು ಕಠಿಣ ನಿರ್ಬಂಧ: ರಷ್ಯಾದ ಯುದ್ಧಾಪರಾಧದ ತನಿಖೆಗೆ ಉಕ್ರೇನ್ ಒತ್ತಾಯಿಸಿರುವ ಬೆನ್ನಲ್ಲೇ ಐರೋಪ್ಯ ಒಕ್ಕೂಟ ಮತ್ತು ವಿಶ್ವದ ಹಲವು ರಾಷ್ಟ್ರಗಳ ನಾಯಕರು ರಷ್ಯಾದ ವಿರುದ್ಧ ಕಠಿಣ ನಿರ್ಬಂಧಗಳನ್ನು ವಿಧಿಸುವಂತೆ ಕರೆ ನೀಡಿದ್ದಾರೆ.

ಜರ್ಮನಿ, ಪೋಲೆಂಡ್ ಮತ್ತು ಬ್ರಿಟನ್ ಕೂಡ ಇದೇ ರೀತಿಯ ನಿಲುವು ತಳೆದಿವೆ. ರಷ್ಯಾ ಗುರಿಯಾಗಿಸಿ ಹೊಸ ನಿರ್ಬಂಧಗಳನ್ನು ವಿಧಿಸುವ ಅಗತ್ಯವಿದೆ ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಹೇಳಿದ್ದಾರೆ.

'ಉಕ್ರೇನ್ ಮೇಲಿನ ಆಕ್ರಮಣ ವಿರೋಧಿಸಿ, ರಷ್ಯಾ ವಿರುದ್ಧ ಅಮೆರಿಕ, ಬ್ರಿಟನ್ ಹಾಗೂ ನಮ್ಮ ಪಾಲುದಾರ ದೇಶಗಳ ಜತೆಗೂಡಿ ಹಲವು ನಿರ್ಬಂಧ ಹೇರಲಾಗಿದೆ. ಬುಕಾ ನರಮೇಧ ಖಂಡಿಸಿ ಯುರೋಪಿನ 27 ರಾಷ್ಟ್ರಗಳು ಮತ್ತಷ್ಟು ಕಠಿಣ ನಿರ್ಬಂಧಗಳನ್ನು ರಷ್ಯಾ ವಿರುದ್ಧ ತುರ್ತು ಜಾರಿಗೊಳಿಸಲಿವೆ' ಎಂದು ಐರೋಪ್ಯ ಒಕ್ಕೂಟದ ವಿದೇಶಾಂಗ ನೀತಿ ಮುಖ್ಯಸ್ಥ ಜೋಸೆಪ್ ಬೊರೆಲ್ ತಿಳಿಸಿದರು.

'ರಷ್ಯಾ ಪಡೆಗಳು ಬಿಗಿ ನಿಯಂತ್ರಣ ಹೊಂದಿದ್ದ ಪ್ರದೇಶಗಳಲ್ಲಿ ನಡೆದಿರುವ ಈ ದೌರ್ಜನ್ಯಗಳಿಗೆ ರಷ್ಯಾವೇ ನೇರ ಹೊಣೆ. ಇದು ಅಂತರರಾಷ್ಟ್ರೀಯ ಕಾನೂನು ಉಲ್ಲಂಘನೆಯ ಸ್ಪಷ್ಟ ನಿದರ್ಶನ. ನೂರಾರು ನಾಗರಿಕರ ಸಾವು–ನೋವು, ನಾಗರಿಕ ಮೂಲಸೌಕರ್ಯಗಳನ್ನು ನಾಶಗೊಳಿಸಿರುವ ದೃಶ್ಯಗಳು ಹೃದಯ ಘಾಸಿಗೊಳಿಸುತ್ತವೆ. ರಷ್ಯಾದ ಆಕ್ರಮಣಕಾರಿ ಯುದ್ಧದ ನೈಜಮುಖವನ್ನು ಇದು ಅನಾವರಣಗೊಳಿಸಿದೆ' ಎಂದು ಬೊರೆಲ್ ಟೀಕಿಸಿದ್ದಾರೆ.

ಹೋಳಾದ ರಷ್ಯಾದ ಹೆಲಿಕಾಪ್ಟರ್

ಉಕ್ರೇನ್, ಲಂಡನ್ (ಎಪಿ/ರಾಯಿಟರ್ಸ್):ಉಕ್ರೇನ್ ಪಡೆಗಳು ಹಾರಿಸಿದ ಸುಧಾರಿತ 'ಸ್ಟಾರ್‌ಸ್ಟ್ರೀಕ್' ಕ್ಷಿಪಣಿಗೆ ರಷ್ಯಾದ ಹೆಲಿಕಾಪ್ಟರ್ ಎರಡು ಹೋಳಾಗಿ ಧರೆಗುರುಳಿದ ಘಟನೆ ಲುಹಾನ್‌ಸ್ಕ್ ಪ್ರದೇಶದಲ್ಲಿ ಸೋಮವಾರ ನಡೆದಿದೆ.

ಲೇಸರ್ ಗೈಡೆಡ್ ಕ್ಷಿಪಣಿ 'ಸ್ಟಾರ್‌ಸ್ಟ್ರೀಕ್' ಶಬ್ದದ ವೇಗಕ್ಕಿಂತ ಮೂರು ಪಟ್ಟು ಹೆಚ್ಚು ವೇಗದಲ್ಲಿ ಗುರಿ ಭೇದಿಸುತ್ತದೆ. ಕಡಿಮೆ ಎತ್ತರದಲ್ಲಿ ಹಾರುವ ಶತ್ರುಗಳ ಜೆಟ್‌ಗಳು ಮತ್ತು ಹೆಲಿಕಾಪ್ಟರ್‌ಗಳನ್ನು ನಿಖರವಾಗಿ ಹೊಡೆದುರುಳಿಸುತ್ತದೆ. ಇಂತಹ ಸಾವಿರಾರು ಕ್ಷಿಪಣಿಗಳನ್ನು ಬ್ರಿಟನ್, ಉಕ್ರೇನ್‌ಗೆ ಪೂರೈಸಿದೆ.

ಉಕ್ರೇನ್ ವಾಯುಪಡೆಯು ಎರಡು ಹೆಲಿಕಾಪ್ಟರ್‌ಗಳಲ್ಲಿ ಇವೇ ಕ್ಷಿಪಣಿಗಳಿಂದ ರಷ್ಯಾದ ಬೆಲ್‌ಗೊರೊಡ್‌ನಲ್ಲಿನ ತೈಲ ಸಂಗ್ರಹಾಗಾರದ ಮೇಲೆ ಇತ್ತೀಚೆಗೆ ದಾಳಿ ನಡೆಸಿತ್ತು. ರಷ್ಯಾ ನೆಲದ ಮೇಲೆ ಉಕ್ರೇನ್ ನಡೆಸಿದ ಮೊದಲ ಪ್ರತಿ ದಾಳಿ ಇದು.

'ಸ್ಟಾರ್‌ಸ್ಟ್ರೀಕ್' ಬ್ರಿಟನ್‌ನ ಅತ್ಯಂತ ಸುಧಾರಿತ, ಕೈಯಿಂದಲೂ ಹಾರಿಸಬಹುದಾದ ಕ್ಷಿಪಣಿ ಎನಿಸಿದೆ. ಟ್ಯಾಂಕ್ ನಿಗ್ರಹ ಕ್ಷಿಪಣಿಗಳನ್ನೂ ಉಕ್ರೇನ್‌ಗೆ ಬ್ರಿಟನ್ ಒದಗಿಸಿದೆ. ಇಂತಹ ಕ್ಷಿಪಣಿಗಳಿಂದಲೇ ರಷ್ಯಾ ಪಡೆಗಳನ್ನು ಕೀವ್ ನಗರದಿಂದ ಹಿಮ್ಮೆಟ್ಟಿಸಲು ಸಾಧ್ಯವಾಗಿದೆ. ಉಕ್ರೇನ್‌ಗೆ ಮತ್ತಷ್ಟು ಹೊಸ ಸೇನಾ ನೆರವನ್ನು ನೀಡುವುದಾಗಿ ಬ್ರಿಟನ್ ಸೋಮವಾರ ಭರವಸೆ ನೀಡಿದೆ.

40ನೇ ದಿನದ ಬೆಳವಣಿಗೆಗಳು

- ಉಕ್ರೇನಿನ ಬುಕಾದಲ್ಲಿನ ನರಮೇಧ ಮತ್ತು ಯುದ್ಧ ಅಪರಾಧಗಳ ಕುರಿತು ವಿಚಾರಣೆ ನಡೆಯಬೇಕು. ರಷ್ಯಾದ ಮೇಲೆ ಇನ್ನಷ್ಟು ಹೆಚ್ಚಿನ ನಿರ್ಬಂಧ ಹೇರಬೇಕು– ಅಮೆರಿಕ ಅಧ್ಯಕ್ಷ ಜೋ ಬೈಡನ್ ಒತ್ತಾಯ
- 'ಬುಕಾ ಬೀದಿಗಳಲ್ಲಿ ನಾಗರಿಕರು ಸತ್ತು ಬಿದ್ದಿರುವುದು ಮತ್ತು ನಾಗರಿಕರ ಸಾಮೂಹಿಕ ಸಮಾಧಿಗಳ ಚಿತ್ರಗಳನ್ನು ನೋಡಿ ಗಾಬರಿಯಾಗಿದೆ. ಅಲ್ಲಿ ನಿಜಕ್ಕೂ ಏನು ನಡೆದಿದೆ ಎನ್ನುವುದರ ಕುರಿತು ಸ್ವತಂತ್ರ ತನಿಖೆಯಾಗಬೇಕು' – ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಹೈಕಮಿಷನರ್ ಮಿಚೆಲ್ ಬ್ಯಾಚೆಲೆಟ್ ಒತ್ತಾಯ
- ರಷ್ಯಾ ಈಗ ಪೂರ್ವ ಉಕ್ರೇನ್ ಕಡೆಗೆ ಗಮನಹರಿಸಿದೆ. ಡಾನ್‌ಬಾಸ್ ಆಕ್ರಮಣಕ್ಕೆ ಸುಮಾರು 60 ಸಾವಿರ ಯೋಧರನ್ನು ಮರು ಸಂಯೋಜಿಸಿ, ಸೇನೆ ಬಲಪಡಿಸಿಕೊಳ್ಳುತ್ತಿದೆ. ಜತೆಗೆ ಪುಟಿನ್ ಅವರ ಖಾಸಗಿ ಮಿಲಿಟರಿ ಪಡೆ 'ವ್ಯಾಗ್ನರ್' ಕೂಡ ಉಕ್ರೇನ್‌ನ ಪೂರ್ವ ಭಾಗಗಳತ್ತ ಚಲಿಸುತ್ತಿದೆ– ಬ್ರಿಟನ್ ಸೇನೆಯ ಗುಪ್ತದಳದ ಮಾಹಿತಿ
- ಸುಮಿ, ಹಾರ್ಕಿವ್ ಹಾಗೂ ಮರಿಯುಪೋಲ್‌ನಲ್ಲಿ ನಾಗರಿಕರ ಸ್ಥಳಾಂತರದ ಮಾನವೀಯ ಪರಿಹಾರಕ್ಕಾಗಿ ರೆಡ್‌ಕ್ರಾಸ್ ಸಂಸ್ಥೆ ಮತ್ತು ವಿಶ್ವಸಂಸ್ಥೆಗೆ ಸಹಕಾರ ನೀಡುತ್ತೇವೆ– ರಷ್ಯಾ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್
- ರಷ್ಯಾ ಪಡೆಗಳು ಬಿಟ್ಟು ಹೋಗಿರುವ ಬಕ್ ಕ್ಷಿಪಣಿ ವ್ಯವಸ್ಥೆಗಳನ್ನು ಉಕ್ರೇನಿನ ವಿಶೇಷ ಕಾರ್ಯಾಚರಣೆ ಪಡೆ ಪತ್ತೆ ಹಚ್ಚಿದೆ. ಅಲ್ಲದೇ ರಹಸ್ಯವಾಗಿ ಉದುಗಿರಿಸಿದ್ದ ಮದ್ದುಗುಂಡು, ಶಸ್ತ್ರಾಸ್ತ್ರ ಹಾಗೂ ಯುದ್ಧೋಪಕರಣಗಳನ್ನೂ ಸಹ ಪತ್ತೆ ಮಾಡಲಾಗಿದೆ
- ಬುಕಾದಲ್ಲಿ 45 ಅಡಿ ಉದ್ದದ ಸಾಮೂಹಿಕ ಸಮಾಧಿಯ ಚಿತ್ರವನ್ನು ಮಾರ್ಚ್ 31ರಂದು ಮಕ್ಸರ್ ಟೆಕ್ನಾಲಜಿಯ ಉಪಗ್ರಹ ಸೆರೆ ಹಿಡಿದಿದೆ. ಸೇಂಟ್ ಆಂಡ್ರ್ಯೂವ್ಸ್ ಚರ್ಚ್ ಬಳಿಯ ಈ ಸಾಮೂಹಿಕ ಸಮಾಧಿಯಲ್ಲಿನ ಶವಗಳೆಲ್ಲವೂ ಪಾದ್ರಿಗಳವು ಎಂದು ಉಕ್ರೇನ್ ಹೇಳಿದೆ
- ಒಡೆಸಾ, ಮೈಕೊಲೈವ್ ನಗರಗಳ ಮೇಲೆ ಸೋಮವಾರ ರಷ್ಯಾದಿಂದ ಕ್ಷಿಪಣಿ ದಾಳಿ ನಡೆದಿದೆ – ಮೇಯರ್ ಒಲೆಕ್ಸಾಂಡರ್ ಸೆಂಕೆವಿಕ್
- ಚೆರ್ನಿವ್‌ನ ಶಾಲೆಯೊಂದರ ನೆಲಮಹಡಿಯಲ್ಲಿ ಮಕ್ಕಳು ಸೇರಿ 150 ನಾಗರಿಕರನ್ನು ಆಕ್ರಮಣಕಾರರು ಒತ್ತೆ ಇರಿಸಿಕೊಂಡಿದ್ದಾರೆ. ಅಲ್ಲಿ ನಾಗರಿಕರು ಸಾಯುತ್ತಿದ್ದಾರೆ– ಸ್ಥಳೀಯಾಡಳಿತದ ಹೇಳಿಕೆ
- ಮೊಟಿಜಿನ್ ನಗರದ ಮೇಯರ್ ಮತ್ತು ಅವರ ಪತಿ ಹಾಗೂ ಅವರ ಪುತ್ರನನ್ನು ರಷ್ಯಾ ಪಡೆಗಳು ಹತ್ಯೆ ಮಾಡಿ, ಶವಗಳನ್ನು ಪೈನ್ ಅರಣ್ಯದ ನದಿಗೆ ಎಸೆದಿದ್ದಾರೆ– ಉಕ್ರೇನ್ ಉಪ ಪ್ರಧಾನಿ ಇರಿನಾ ವೆರೆಶ್‌ಚುಕ್

ರಷ್ಯಾ ತಕ್ಷಣ ಮಾತುಕತೆಗೆ ಬರಲಿ: ಝೆಲೆನ್‌ಸ್ಕಿ ಒತ್ತಾಯ

ಕೀವ್ (ಎಪಿ):ಯುದ್ಧ ಕೊನೆಗೊಳಿಸುವ ಒಪ್ಪಂದಕ್ಕೆ ಬರಲು ತಕ್ಷಣ ಮಾತುಕತೆಗೆ ರಷ್ಯಾ ಮುಂದಾಗಬೇಕು ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಸೋಮವಾರ ಒತ್ತಾಯಿಸಿದ್ದಾರೆ.

ಬುಕಾದಲ್ಲಿ ನಾಗರಿಕರ ನೂರಾರು ಶವಗಳು ಮತ್ತು ಸಾಮೂಹಿಕ ಸಮಾಧಿಗಳು ಪತ್ತೆಯಾದ ಸ್ಥಳಗಳಿಗೆ ಭೇಟಿ ನೀಡಿ ಅವರು ಮಾತನಾಡಿದರು.

ಇಲ್ಲಿ ಆಗಿರುವುದನ್ನು ನೋಡಿದರೆ ರಷ್ಯಾ ಜತೆಗೆ ಮಾತುಕತೆ ನಡೆಸುವುದು ತುಂಬಾ ಕಷ್ಟ. ಬುಕಾ ಮತ್ತು ಇನ್ನಿತರ ಸ್ಥಳಗಳಲ್ಲಿ ನಾಗರಿಕರ ಶವಗಳು ಬ್ಯಾರೆಲ್‌ಗಳು, ನೆಲಮಹಡಿಗಳಲ್ಲಿ ಕಂಡು ಬಂದಿವೆ. ಆಕ್ರಮಣಕಾರರು ನಾಗರಿಕರನ್ನು ಕತ್ತು ಹಿಸುಕಿ, ಹಿಂಸಿಸಿ ಹತ್ಯೆ ಮಾಡಿರುವುದು ಕಾಣಿಸುತ್ತಿದೆ ಎಂದರು.

ಇಮ್ರಾನ್ ವಿರುದ್ಧದ ಅವಿಶ್ವಾಸ ನಿರ್ಣಯ ತಿರಸ್ಕಾರ ಹಾಗೂ ಸಂಸತ್ ವಿಸರ್ಜನೆ ಪ್ರಕರಣ ವಿಚಾರಣೆ

ಪಾಕ್: 'ಸುಪ್ರೀಂ'ನಲ್ಲಿ ವಿಚಾರಣೆ ಶುರು

ಇಸ್ಲಾಮಾಬಾದ್ (ಪಿಟಿಐ): ಪ್ರಧಾನಿ ವಿರುದ್ಧ ಪ್ರತಿಪಕ್ಷಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯ ಸ್ವೀಕೃತಿಗೆ ನಕಾರ ಹಾಗೂ ಪಾಕಿಸ್ತಾನದ ಸಂಸತ್ ವಿಸರ್ಜನೆ ಕುರಿತಂತೆ ವಿಚಾರಣೆ ಕೈಗೆತ್ತಿಕೊಂಡಿರುವ ಪಾಕಿಸ್ತಾನದ ಸುಪ್ರೀಂ ಕೋರ್ಟ್ ವಿಚಾರಣೆಯನ್ನು ದಿನದ ಮಟ್ಟಿಗೆ ಮುಂದೂಡಿದೆ.

ಮುಖ್ಯನ್ಯಾಯಮೂರ್ತಿ ಉಮರ್ ಅತಾ ಬಂದಿಯಾಲ್ ನೇತೃತ್ವದ ವಿಸ್ತೃತ ಪೀಠವು ವಿಚಾರಣೆ ನಡೆಸುತ್ತಿದೆ. ಉಪ ಸ್ಪೀಕರ್ ಖಾಸಿಂ ಸೂರಿ ಅವರು ಇಮ್ರಾನ್ ವಿರುದ್ಧದ ಅವಿಶ್ವಾಸ ನಿರ್ಣಯವನ್ನು ತಿರಸ್ಕರಿಸಿದ ಬಳಿಕ ಪ್ರಕರಣವು ಸುಪ್ರೀಂ ಕೋರ್ಟ್ ಅಂಗಳಕ್ಕೆ ಬಂದಿದೆ.

ಅಧ್ಯಕ್ಷ ಆರಿಫ್ ಅಲ್ವಿ, ಸುಪ್ರೀಂ ಕೋರ್ಟ್ ವಕೀಲರ ಸಂಘ ಹಾಗೂ ಎಲ್ಲ ರಾಜಕೀಯ ಪಕ್ಷಗಳು ಈ ಪ್ರಕರಣದಲ್ಲಿ ಪ್ರತಿವಾದಿಗಳು. ಉಪ ಸ್ಪೀಕರ್ ಹೊರಡಿಸಿರುವ ಆದೇಶ ಕುರಿತಂತೆ ಸರ್ಕಾರ ಹಾಗೂ ಪ್ರತಿಪಕ್ಷಗಳ ಪರ ವಕೀಲರು ಕೋರ್ಟ್‌ನಲ್ಲಿ ತಮ್ಮ ವಾದ ಮಂಡಿಸಿದರು.

ಪೂರ್ಣಪೀಠ ರಚಿಸುವಂತೆ ಪ್ರತಿಪಕ್ಷಗಳು ಇರಿಸಿದ ಬೇಡಿಕೆಯನ್ನು ಮುಖ್ಯನ್ಯಾಯಮೂರ್ತಿ ತಿರಸ್ಕರಿಸಿದರು. ವಿಚಾರಣೆಯನ್ನು ಮುಕ್ತಾಯಗೊಳಿಸುವ ಮುನ್ನ ಎಲ್ಲ ರಾಜಕೀಯ ಪಕ್ಷಗಳ ವಾದ ಆಲಿಸುವುದಾಗಿ ತಿಳಿಸಿದ ಮುಖ್ಯ ನ್ಯಾಯಮೂರ್ತಿ, ವಿಚಾರಣೆಯನ್ನು ಮಂಗಳವಾರಕ್ಕೆ ಮುಂದೂಡಿದರು.

ಅವಿಶ್ವಾಸ ನಿರ್ಣಯ ಮಂಡನೆ ಪ್ರಕ್ರಿಯೆಯಲ್ಲಿ ಕೆಲವು ಉಲ್ಲಂಘನೆಗಳಾಗಿವೆ ಎಂದು ಅವರು ವಿಚಾರಣೆ ವೇಳೆ ಹೇಳಿದರು ಎಂದು 'ಡಾನ್' ಸುದ್ದಿಮಾಧ್ಯಮ ವರದಿ ಮಾಡಿದೆ.

ಪ್ರತಿಪಕ್ಷಗಳ ನಾಯಕರಾದ ಶಹಬಾಝ್ ಶರೀಫ್ (ಬಲ) ಹಾಗೂ ಬಿಲಾವಲ್ ಭುಟ್ಟೋ ಅವರು ಇಸ್ಲಾಮಾಬಾದ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದರು—ಎಎಫ್‌ಪಿ ಚಿತ್ರ

ಪಾಕ್: ಉಸ್ತುವಾರಿ ಪ್ರಧಾನಿ ನೇಮಕಕ್ಕೆ ಚಾಲನೆ

ಒಂದನೇ ಪುಟದಿಂದ

ಪ್ರಧಾನಿ ಹಾಗೂ ಪ್ರತಿಪಕ್ಷದ ಮುಖ್ಯಸ್ಥರ ಜತೆ ಸಮಾಲೋಚನೆ ನಡೆಸಿ ಉಸ್ತುವಾರಿ ಪ್ರಧಾನಿಯನ್ನು ನೇಮಕ ಮಾಡುವ ಅಧಿಕಾರವನ್ನು ಪಾಕಿಸ್ತಾನದ ಸಂವಿಧಾನವು ಅಲ್ಲಿನ ಅಧ್ಯಕ್ಷರಿಗೆ ಒದಗಿಸಿದೆ. ಸಂವಿಧಾನದ 224ಎ(1)ರ ಪ್ರಕಾರ, ಉಸ್ತುವಾರಿ ಸರ್ಕಾರವು ಚುನಾವಣೆಯನ್ನು ಆಯೋಜಿಸುತ್ತದೆ.

ಉಸ್ತುವಾರಿ ಪ್ರಧಾನಿ ನೇಮಕ ಆಗುವವರೆಗೂ ಇಮ್ರಾನ್ ಖಾನ್ ಅವರು ಪ್ರಧಾನಿಯಾಗಿ ಮುಂದುವರಿಯಲಿದ್ದಾರೆ ಎಂದು ಅಧ್ಯಕ್ಷ ಅಲ್ವಿ ಪ್ರಕಟಿಸಿದ್ದಾರೆ.

ಗೊತ್ತುವಳಿಯನ್ನು ಮತಕ್ಕೆ ಹಾಕುವ ಮುನ್ನ ಚರ್ಚೆ ನಡೆಯಬೇಕು ಎಂದು ಕಾನೂನು ಹೇಳುತ್ತದೆ. ಆದರೆ ಈ ನಿಯಮ ಪಾಲನೆಯಾಗಿಲ್ಲ ಎಂದು ಮುಖ್ಯನ್ಯಾಯಮೂರ್ತಿ ಹೇಳಿದರು.

ಆದೇಶ ನೀಡುವ ಉಪ ಸ್ಪೀಕರ್ ಅವರ ಸಾಂವಿಧಾನಿಕ ಅಧಿಕಾರದ ಬಗ್ಗೆ ನ್ಯಾಯಮೂರ್ತಿ ಅಖ್ತರ್ ಅವರು ಸಂದೇಹ ವ್ಯಕ್ತಪಡಿಸಿದರು. 'ನನ್ನ ಪ್ರಕಾರ, ಸ್ಪೀಕರ್‌ಗೆ ಮಾತ್ರ ಇಂತಹ ಆದೇಶ ನೀಡುವ ಅಧಿಕಾರವಿದೆ. ಸ್ಪೀಕರ್ ಅವರ ಅನುಪಸ್ಥಿತಿಯಲ್ಲಿ ಉಪ ಸ್ಪೀಕರ್‌ಗೆ ಸದನವನ್ನು ನಡೆಸುವ ಅಧಿಕಾರವಷ್ಟೇ ಇರುತ್ತದೆ' ಎಂದು ಅವರು ಅಭಿಪ್ರಾಯಪಟ್ಟರು.

ಪ್ರತಿಪಕ್ಷಗಳ ಪರ ಹಾಜರಿದ್ದ ವಕೀಲ ಫಾರೂಕ್ ಎಚ್. ನಯೆಕ್ ಅವರು ಸೋಮವಾರವೇ ತೀರ್ಪು ಪ್ರಕಟಿಸುವಂತೆ ಮನವಿ ಮಾಡಿದರು. ಆದರೆ ಆತುರವಾಗಿ ತೀರ್ಪು ಪ್ರಕಟಿಸಲು ಆಗುವುದಿಲ್ಲ ಎಂದು ಕೋರ್ಟ್ ಸ್ಪಷ್ಟಪಡಿಸಿತು.

ಪ್ರತಿಪಕ್ಷಗಳಿಂದ 'ಪ್ರತ್ಯೇಕ' ಅಧಿವೇಶನ!

ಪ್ರತ್ಯೇಕ ಅಧಿವೇಶನ ನಡೆಸಿದ ಪಾಕಿಸ್ತಾನದ ವಿರೋಧ ಪಕ್ಷಗಳು, ಪ್ರಧಾನಿ ಇಮ್ರಾನ್ ಖಾನ್ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ಗೆಲುವಾಗಿದೆ ಎಂದು ಘೋಷಿಸಿದ ನಾಟಕೀಯ ಬೆಳವಣಿಗೆ ಸೋಮವಾರ ನಡೆಯಿತು.

ಪಾಕಿಸ್ತಾನದ ಸಂಸತ್ತನ್ನು ಅಧ್ಯಕ್ಷ ಅಲ್ವಿ ಅವರು ವಿಸರ್ಜಿಸಿದ ಬೆನ್ನಲ್ಲೇ ಅಧಿವೇಶನ ನಡೆಸಿದ ಪ್ರತಿಪಕ್ಷಗಳು, 197 ಮತಗಳ ಅಂತರದಿಂದ ಇಮ್ರಾನ್ ಅವರು ಸೋಲುಂಡಿದ್ದಾರೆ ಎಂದು ಪ್ರಕಟಿಸಿವೆ.

ಸಚಿವಾಲಯದ ಸಿಬ್ಬಂದಿ ಅನುಪಸ್ಥಿತಿ ಇದ್ದರೂ, ತಾವು ನಡೆಸಿದ ಕಲಾಪ 'ಕಾನೂನುಬದ್ಧ' ಎಂದು ಪ್ರತಿಪಕ್ಷಗಳು ಘೋಷಿಸಿದವು.

ಈ ಅಧಿವೇಶನದಲ್ಲಿ ಪ್ರತಿಪಕ್ಷ ನಾಯಕ ಹಾಗೂ ಪಿಎಂಎಲ್–ಎನ್ ಅಧ್ಯಕ್ಷ ಶಹಬಾಝ್ ಶರೀಫ್ ಅವರು ಮಂಡಿಸಿದ ಅವಿಶ್ವಾಸ ನಿರ್ಣಯ ಪರವಾಗಿ ಆಡಳಿತಾರೂಢ ಪಾಕಿಸ್ತಾನ್ ತೆಹ್ರಿಕ್–ಇ–ಇನ್ಸಾಫ್ ಪಕ್ಷದ 22 ಭಿನ್ನಮತೀಯರು ಮತ ಹಾಕಿದರು. ಪಿಎಂಎಲ್–ಎನ್ ಸರ್ಕಾರದಲ್ಲಿ ಸ್ಪೀಕರ್ ಆಗಿದ್ದ ಮುರ್ತಜಾ ಜಾಯೇದ್ ಅಬ್ಬಾಸಿ ಅವರು ಅಧಿಕಾರಿಗಳ ಅನುಪಸ್ಥಿತಿಯಲ್ಲಿ, ನಿರ್ಣಯದ ಪರ ಮತ ಹಾಕಿದವರ ಹೆಸರನ್ನು ನಮೂದಿಸಿಕೊಂಡರು.

ದೇವಸ್ಥಾನ ಮರು ನಿರ್ಮಾಣಕ್ಕೆ ಆದೇಶಿಸಿದ್ದ ಗುಲ್ಜಾರ್

ಇಮ್ರಾನ್ ಖಾನ್ ಅವರು ಉಸ್ತುವಾರಿ ಪ್ರಧಾನಮಂತ್ರಿ ಹುದ್ದೆಗೆ ಸೂಚಿಸಿರುವ ಮಾಜಿ ಮುಖ್ಯ ನ್ಯಾಯಮೂರ್ತಿ ಗುಲ್ಜಾರ್ ಅಹಮದ್ ಅವರು 2019ರ ಡಿಸೆಂಬರ್‌ನಿಂದ 2022ರ ಫೆಬ್ರುವರಿವರೆಗೆ ಮುಖ್ಯ ನ್ಯಾಯಮೂರ್ತಿ ಹುದ್ದೆಯಲ್ಲಿದ್ದರು. ಪನಾಮಾ ದಾಖಲೆ ಪ್ರಕರಣದಲ್ಲಿ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರನ್ನು ಅನರ್ಹಗೊಳಿಸಿದ ಐವರು ನ್ಯಾಯಮೂರ್ತಿಗಳ ಪೀಠದಲ್ಲಿ ಇವರು ಇದ್ದರು. ಪ್ರಮುಖ ತೀರ್ಪುಗಳು ಹಾಗೂ ಸರ್ಕಾರ, ಅಧಿಕಾರಿಗಳ ವಿರುದ್ಧ ನಿಷ್ಠುರ ಹೇಳಿಕೆಗಳಿಂದ ಗುಲ್ಜಾರ್ ಅವರು ಹಲವು ಬಾರಿ ಸುದ್ದಿಯಲ್ಲಿದ್ದರು.

ವಾಯವ್ಯ ಪಾಕಿಸ್ತಾನದಲ್ಲಿ ದುಷ್ಕರ್ಮಿಗಳು ಧ್ವಂಸಗೊಳಿಸಿದ್ದ ದೇವಸ್ಥಾನವನ್ನು ಮರು ನಿರ್ಮಾಣ ಮಾಡುವಂತೆ ಗುಲ್ಜಾರ್ ಅವರು ಆದೇಶಿಸಿದ್ದರು. ದೇವಸ್ಥಾನ ಮರು ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಪಾಕಿಸ್ತಾನಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮುಜುಗರ ಉಂಟು ಮಾಡಿದ ಈ ಘಟನೆಗೆ ಕಾರಣರಾದವರಿಂದ ವಸೂಲಿ ಮಾಡುವಂತೆಯೂ ಅವರು ಸೂಚಿಸಿದ್ದರು.

ಹಂಗೆರಿ: ಪ್ರಧಾನಿ ವಿಕ್ಟರ್ ಓರ್ಬನ್ ಪಕ್ಷಕ್ಕೆ ಭಾರಿ ಗೆಲುವು

ಬುಡಾಪೆಸ್ಟ್ (ಎ.ಪಿ): ಹಂಗೆರಿಯ ರಾಷ್ಟ್ರೀಯ ಚುನಾವಣೆಯಲ್ಲಿ ಪ್ರಧಾನಿ ವಿಕ್ಟರ್ ಓರ್ಬನ್ ಭಾರಿ ಜಯ ಸಾಧಿಸಿದ್ದು, ನಾಲ್ಕನೇ ಅವಧಿಗೆ ಆಯ್ಕೆಯಾಗಿದ್ದಾರೆ. ಮತ ಎಣಿಕೆ ಪ್ರಗತಿಯಲ್ಲಿದ್ದು, ಅವರ ನೇತೃತ್ವದ ಪಕ್ಷ ಭಾರಿ ಅಂತರದಿಂದ ಗೆಲ್ಲುವುದು ಸ್ಪಷ್ಟವಾಗಿದೆ.

ಮತ ಎಣಿಕೆ ಮಾಹಿತಿ ಆಧರಿಸಿ, ಓರ್ಬನ್ ಅವರ ಫಿಡೆಸ್ ನೇತೃತ್ವದ ಮೈತ್ರಿಕೂಟ ಶೇ 54.5 ಮತ್ತು ಯೂರೋಪ್ ಪರ ಪ್ರತಿಪಕ್ಷಗಳ ಮೈತ್ರಿಕೂಟ ಯುನೈಟೆಡ್ ಫಾರ್ ಹಂಗೆರಿ ಶೇ 34ರಷ್ಟು ಮತ ಗಳಿಸಿದೆ ಎಂದು ಚುನಾವಣಾ ಅಧಿಕಾರಿಗಳು ತಿಳಿಸಿದ್ದಾರೆ.

ಫಲಿತಾಂಶದ ಮುನ್ಸೂಚನೆ ದೊರೆಯುತ್ತಿದ್ದಂತೆಯೇ ಫಿಡೆಸ್ ಪಕ್ಷದ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ ಓರ್ಬನ್, 'ಇದು ಪಕ್ಷಕ್ಕೆ ದೊರೆತ ಭಾರಿ ಗೆಲುವು. ಇದು, ಚಂದ್ರನಿಂದಲೂ ನೋಡಬಹುದಾದಷ್ಟು ದೊಡ್ಡ ಗೆಲುವು' ಎಂದು ಬಣ್ಣಿಸಿದರು.

ವಿಕ್ಟರ್ ಓರ್ಬನ್

ಭ್ರಷ್ಟಾಚಾರ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಕಡೆಗಣನೆಗಾಗಿ ಯೂರೋಪ್ ಒಕ್ಕೂಟದಿಂದ ತೀವ್ರ ಟೀಕೆಗೆ ಒಳಗಾಗಿದ್ದರು. ಕ್ರೈಸ್ತ ಪ್ರಜಾಸತ್ತಾತ್ಮಕ ರಾಜಕಾರಣ, ದೇಶಭಕ್ತ ರಾಜಕಾರಣ ಗೆದ್ದಿದೆ ಎಂಬುದನ್ನು ಇಡೀ ಜಗತ್ತು ಗಮನಿಸುತ್ತಿದೆ. ಇದು, ಇತಿಹಾಸವಲ್ಲ, ಭವಿಷ್ಯ ಎಂದು ನಾವು ಯೂರೋಪ್‌ಗೆ ತಿಳಿಸಲು ಬಯಸುತ್ತೇವೆ ಎಂದು ಓರ್ಬನ್ ಹೇಳಿದರು.

ಹಕ್ಕಿಜ್ವರದಿಂದ ಕುಕ್ಕುಟೋದ್ಯಮ ರಕ್ಷಣೆ: ಲಸಿಕೆಗೆ ಅಮೆರಿಕ ಮೊರೆ?

ಷಿಕಾಗೊ(ರಾಯಿಟರ್ಸ್): ಅಮೆರಿಕದಲ್ಲಿ ಈ ವರ್ಷದ ಫೆಬ್ರುವರಿಯಿಂದ ವ್ಯಾಪಿಸಿರುವ ಹಕ್ಕಿಜ್ವರದಿಂದಾಗಿ 2.2 ಕೋಟಿಯಷ್ಟು ಕೋಳಿಮರಿಗಳು ನಾಶವಾಗಿದ್ದು, ಕುಕ್ಕುಟೋದ್ಯಮವನ್ನು ರಕ್ಷಿಸುವ ನಿಟ್ಟಿನಲ್ಲಿ ಕೋಳಿಗಳು ಮತ್ತು ಕೋಳಿಮರಿಗಳಿಗೆ ಲಸಿಕೆ ನೀಡುವ ಬಗ್ಗೆ ಚಿಂತನೆ ನಡೆದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹಕ್ಕಿಜ್ವರದಿಂದಾಗಿ 2015ರಿಂದಲೂ ಅಮೆರಿಕದ ಕುಕ್ಕುಟೋದ್ಯಮ ಭಾರಿ ಸಮಸ್ಯೆಗೆ ಸಿಲುಕಿದೆ. ಹಕ್ಕಿಜ್ವರ ನಿಗ್ರಹಕ್ಕೆ ಲಸಿಕೆಯ ಮೊರೆ ಹೋಗುವ ಬಗ್ಗೆ ಅಮೆರಿಕ ಚಿಂತಿಸಿದೆ ಎನ್ನಲಾಗಿದೆ.

ಅಮೆರಿಕದ ಕೃಷಿ ಸಂಶೋಧನಾ ಸಂಸ್ಥೆ ಹಕ್ಕಿಜ್ವರ ನಿಯಂತ್ರಣದ ಲಸಿಕೆಗಾಗಿ ಸಂಶೋಧನೆ ನಡೆಸುತ್ತಿದೆ ಎಂದು ಪಶು ವೈದ್ಯಕೀಯದ ಮುಖ್ಯ ಅಧಿಕಾರಿ ರೋಸ್‌ಮೇರಿ ಸೀಫರ್ಡ್ ತಿಳಿಸಿದರು.

'ಇಂಥ ಲಸಿಕೆ ಅಭಿವೃದ್ಧಿಗೆ ಕನಿಷ್ಠ 9 ತಿಂಗಳು ಬೇಕಾಗಲಿದೆ ಎಂದು ಸಂಶೋಧಕರು ಅಂದಾಜಿಸಿದ್ದಾರೆ' ಎಂದು ತಿಳಿಸಿದರು.

ಜನರ ಹೋರಾಟಕ್ಕೆ ಕ್ರಿಕೆಟಿಗರ ಬೆಂಬಲ

ಕೊಲಂಬೊ (ಎಎಫ್‌ಪಿ): ತೀವ್ರ ಆರ್ಥಿಕ ಬಿಕ್ಕಟ್ಟಿನಿಂದ ಕಂಗೆಟ್ಟು, ಶ್ರೀಲಂಕಾ ಸರ್ಕಾರದ ವಿರುದ್ಧ ಪ್ರತಿಭಟನೆಗೆ ಇಳಿದಿರುವ ಜನರಿಗೆ ಶ್ರೀಲಂಕಾದ ಹಲವು ಕ್ರಿಕೆಟಿಗರು ಬೆಂಬಲ ಘೋಷಿಸಿದ್ದಾರೆ. ಸರ್ಕಾರದ ನಿಲುವನ್ನು ಕಟುವಾಗಿ ಟೀಕಿಸಿರುವ ಮಾಜಿ ಮತ್ತು ಹಾಲಿ ಕ್ರಿಕೆಟಿಗರು, ಎಲ್ಲಾ ಸಂಸದರ ರಾಜೀನಾಮೆಗೆ ಒತ್ತಾಯಿಸಿದ್ದಾರೆ.

ಶ್ರೀಲಂಕಾವು 1948ರಲ್ಲಿ ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದ ನಂತರ ಇದೇ ಮೊದಲ ಬಾರಿ ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಗುರಿಯಾಗಿದೆ. ಈ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ವಿಫಲವಾಗಿರುವ ಸರ್ಕಾರದ ವಿರುದ್ಧ ಜನರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ. ಪ್ರತಿಭಟನೆಯನ್ನು ಹತ್ತಿಕ್ಕಲು ಸರ್ಕಾರವು ಕರ್ಫ್ಯೂ ಹೇರಿದೆ ಮತ್ತು ಜನರನ್ನು ನಿಯಂತ್ರಿಸಲು ಸೇನೆಯನ್ನು ನಿಯೋಜಿಸಿದೆ. ಹೀಗಿದ್ದೂ ಜನರು ಸರ್ಕಾರದ ವಿರುದ್ಧ ಹೋರಾಟ ಮುಂದುವರಿಸಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದ ಕೋಚ್ ಆಗಿರುವ ಶ್ರೀಲಂಕಾದ ಮಾಜಿ ಕ್ರಿಕೆಟಿಗ ಮಹೇಲ ಜಯವರ್ಧನೆ ಅವರು, 'ನಿಜವಾದ ನಾಯಕರು ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುತ್ತಾರೆ.

ಕೊಲಂಬೊದಲ್ಲಿ ಜನರು ಸೋಮವಾರವೂ ಪ್ರತಿಭಟನೆ ನಡೆಸಿದರು– ಎಪಿ ಚಿತ್ರ

ಸಂಕಷ್ಟವನ್ನು ಅನುಭವಿಸುತ್ತಿರುವ ದೇಶದ ಜನರನ್ನು ರಕ್ಷಿಸುವ ತುರ್ತು ಇದೆ. ಸಂಸದರು ರಾಜೀನಾಮೆ ನೀಡಿ, ಹೊಸ ತಂಡಕ್ಕೆ ಅವಕಾಶ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

ಪಂಜಾಬ್ ಕಿಂಗ್ಸ್ ತಂಡದ ಬ್ಯಾಟ್ಸ್‌ಮನ್ ಆಗಿರುವ ಶ್ರೀಲಂಕಾದ ಭಾನುಕಾ ರಾಜಪಕ್ಸೆ ಅವರು, 'ನಮ್ಮ ನೆಲದಿಂದ ಸಾವಿರಾರು ಮೈಲಿ ದೂರದಲ್ಲಿದ್ದರೂ, ನಮ್ಮ ಜನರು ದಿನೇ ದಿನೇ ಅನುಭವಿಸುತ್ತಿರುವ ನೋವು ನಮಗೆ ಗೊತ್ತಾಗುತ್ತಿದೆ. ನಮ್ಮ ಜನರ ಆಕ್ರೋಶ ಗೊತ್ತಾಗುತ್ತಿದೆ' ಎಂದು ಹೇಳಿದ್ದಾರೆ.

ಮಾಜಿ ಕ್ರಿಕೆಟಿಗ ಕುಮಾರ ಸಂಗಕ್ಕಾರ ಅವರ ಪತ್ನಿ ಯಾಹೆಲಿ ಅವರು ಕೊಲಂಬೊದಲ್ಲಿನ ಇಂಡಿಪೆಂಡೆನ್ಸ್ ಸ್ಕ್ವೇರ್‌ನಲ್ಲಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಾರೆ. ಸರ್ಕಾರದ ವಿರುದ್ಧ ಘೋಷಣೆ ಕೂಗಿದ್ದಾರೆ. 'ದೇಶದ ಇಂದಿನ ಆರ್ಥಿಕ ಬಿಕ್ಕಟ್ಟಿಗೆ 225 ಸಂಸದರೇ ಕಾರಣ. ದೇಶದ ಯುವಜನರ ಭವಿಷ್ಯವನ್ನು ಈ ಸಂಸದರು ಧ್ವಂಸ ಮಾಡಿದ್ದಾರೆ. ಯುವಜನರ ಪರವಾಗಿ ಹೋರಾಟ ನಡೆಸಲು ಇಲ್ಲಿಗೆ ಬಂದಿದ್ದೇನೆ' ಎಂದು ಅವರು ಹೇಳಿದ್ದಾರೆ.

ಕುಮಾರ ಸಂಗಕ್ಕಾರ ಅವರೂ ಹೋರಾಟವನ್ನು ಬೆಂಬಲಿಸಿದ್ದಾರೆ. 'ಪ್ರತಿದಿನವೂ ಜನರು ಪಡುತ್ತಿರುವ ಕಷ್ಟವನ್ನು ನೋಡಿದರೆ, ಹೃದಯ ಒಡೆದುಹೋಗುತ್ತದೆ. ಆದರೆ ಜನರ ಆಕ್ರೋಶಕ್ಕೆ, ಕೆಲವರು ಸಿಟ್ಟಿನಿಂದ ಪ್ರತಿಕ್ರಿಯಿಸುತ್ತಿದ್ದಾರೆ. ಇನ್ನೂ ಕೆಲವರು ಪರಿಸ್ಥಿತಿಯ ಲಾಭ ಪಡೆಯಲು ಯತ್ನಿಸುತ್ತಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೇಂದ್ರೀಯ ಬ್ಯಾಂಕ್ ಗವರ್ನರ್ ರಾಜೀನಾಮೆ

ಶ್ರೀಲಂಕಾದ ಕೇಂದ್ರೀಯ ಬ್ಯಾಂಕ್‌ನ ಗವರ್ನರ್ ಅಜಿತ್ ನಿವಾರ್ಡ್ ಕಬ್ರಾಲ್ ಅವರು ಸೋಮವಾರ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. ಆರ್ಥಿಕ ಬಿಕ್ಕಟ್ಟಿನ ವಿರುದ್ಧ ದೇಶದಾದ್ಯಂತ ಪ್ರತಿಭಟನೆ ತೀವ್ರವಾದ ನಡುವೆಯೇ ಈ ಬೆಳವಣಿಗೆ ನಡೆದಿದೆ.

ಅಧ್ಯಕ್ಷ ಗೊಟಬಯ ರಾಜಪಕ್ಸ ಮತ್ತು ಪ್ರಧಾನಿ ಮಹಿಂದ ರಾಜಪಕ್ಸ ಹೊರತಾಗಿ ಶ್ರೀಲಂಕಾ ಸಂಪುಟದ ಎಲ್ಲಾ ಸದಸ್ಯರು ತಮ್ಮ ಸ್ಥಾನಗಳಿಗೆ ಭಾನುವಾರ ರಾಜೀನಾಮೆ ನೀಡಿದ ಬೆನ್ನಲ್ಲೇ ಅಜಿತ್ ಅವರೂ ರಾಜೀನಾಮೆ ನೀಡಿದ್ದಾರೆ.

ಟ್ವೀಟ್ ಮೂಲಕ ಕಾಬ್ರಾಲ್ ಅವರು ರಾಜೀನಾಮೆಯನ್ನು ಘೋಷಿಸಿದ್ದಾರೆ. 'ಸಂಪುಟದ ಎಲ್ಲಾ ಸಚಿವರು ರಾಜಿನಾಮೆ ನೀಡುತ್ತಿರುವ ಸಂದರ್ಭದಲ್ಲಿ, ಶ್ರೀಲಂಕಾದ ಕೇಂದ್ರೀಯ ಬ್ಯಾಂಕ್ ಗವರ್ನರ್ ಹುದ್ದೆಗೆ ರಾಜೀನಾಮೆಯನ್ನು ಅಧ್ಯಕ್ಷ ಗೊಟಬಯ ರಾಜಪಕ್ಸ ಅವರಿಗೆ ಸಲ್ಲಿಸಿದ್ದೇನೆ' ಎಂದು ಅವರು ಟ್ವೀಟ್ ಮಾಡಿದ್ದಾರೆ. ಏಳು ತಿಂಗಳ ಹಿಂದಷ್ಟೇ ಅವರು ಈ ಹುದ್ದೆಗೇರಿದ್ದರು.

ಮಾಜಿ ಹಣಕಾಸು ಸಚಿವರೂ ಆಗಿರುವ ಕಬ್ರಾಲ್ ಅವರು 2006ರಿಂದ 2015ರ ಅವಧಿಗೆ ಗವರ್ನರ್ ಆಗಿದ್ದರು. 2021ರಲ್ಲಿ ಎರಡನೇ ಬಾರಿಗೆ ಗವರ್ನರ್ ಹುದ್ದೆಗೇರಿದ್ದರು. ಈ ಅವಧಿಯಲ್ಲಿ ಅವರು, ವಿದೇಶಿ ಸಾಲದ ಮೇಲೆ ಶ್ರೀಲಂಕಾಕ್ಕೆ ಇರುವ ಅವಲಂಬನೆಯನ್ನು ಕಡಿಮೆ ಮಾಡಲು ಪ್ರಯತ್ನಿಸಿದ್ದರು ಮತ್ತು ಶ್ರೀಲಂಕಾದ ಆರ್ಥಿಕತೆ ಕುಸಿತದ ನಡುವೆಯೂ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ (ಐಎಂಎಫ್) ಆರ್ಥಿಕ ನೆರವು ಪಡೆಯಲು ನಿರಾಕರಿಸಿದ್ದರು.

ಶಾಂಘೈ: ನೆರವಿಗೆ ಸೇನೆ ನಿಯೋಜನೆ

ಬೀಜಿಂಗ್ (ಎಪಿ): ಲಾಕ್‌ಡೌನ್‌ನಿಂದ ಪರದಾಡುತ್ತಿರುವ ಶಾಂಘೈ ನಗರದ ಜನರಿಗೆ ಸಹಾಯ ಮಾಡಲು 10 ಸಾವಿರ ಆರೋಗ್ಯ ಕಾರ್ಯಕರ್ತರು ಮತ್ತು ಸೇನೆಯ ಎರಡು ಸಾವಿರ ವೈದ್ಯಕೀಯ ಸಿಬ್ಬಂದಿಯನ್ನು ಚೀನಾ ಸರ್ಕಾರ ನಿಯೋಜಿಸಿದೆ.

ಶಾಂಘೈನಲ್ಲಿ ಜಾರಿಗೊಳಿಸಿರುವ ಎರಡು ಹಂತದ ಲಾಕ್‌ಡೌನ್‌ನಿಂದ ಆಹಾರ, ಔಷಧಿ ಹಾಗೂ ವೈದ್ಯಕೀಯ ಉಪಕರಣಗಳು ಲಭ್ಯವಾಗದೇ ಜನರು ಪರದಾಡುತ್ತಿದ್ದಾರೆ ಎಂಬ ದೂರುಗಳು ಕೇಳಿ ಬಂದಿದ್ದವು. ಇದರ ಬೆನ್ನಲ್ಲೇ ಚೀನಾ ಇಲ್ಲಿನ ನಾಗರಿಕರಿಗೆ ಸಹಾಯ ಮಾಡಲು 15,000 ವೈದ್ಯಕೀಯ ಸಿಬ್ಬಂದಿ ಹಾಗೂ ಎರಡು ಸಾವಿರಕ್ಕೂ ಅಧಿಕ ಸೈನಿಕರನ್ನು ನಿಯೋಜಿಸಿದೆ. ಶಾಂಘೈನ ನಾಲ್ಕು ಪ್ರಾಂತ್ಯಗಳಿಗೆ ವೈದ್ಯರು ಮತ್ತು ನರ್ಸ್‌ಗಳನ್ನು ಕಳುಹಿಸಲಾಗಿದೆ ಎಂದು ಪತ್ರಿಕೆಗಳು ವರದಿ ಮಾಡಿವೆ.

ನಗರದಲ್ಲಿರುವ 2.5 ಕೋಟಿ ಜನರನ್ನು ಕೊರೊನಾ ಸೋಂಕು ಪತ್ತೆ ಪರೀಕ್ಷೆಗೆ ಒಳಪಡಿಸಲು ನಿರ್ಧರಿಸಲಾಗಿದೆ. ದೇಶದ ವಾಣಿಜ್ಯ ರಾಜಧಾನಿಯಾದ ಶಾಂಘೈನಲ್ಲಿ ಲಾಕ್‌ಡೌನ್‌ನಿಂದ ಉಂಟಾಗಲಿರುವ ಆರ್ಥಿಕ ಹೊರೆ ತಗ್ಗಿಸಲು ಹಲವು ಕಾರ್ಖಾನೆಗಳು ಮತ್ತು ಸಂಸ್ಥೆಗಳು ತಮ್ಮ ಸಿಬ್ಬಂದಿಯನ್ನು ಪ್ರತ್ಯೇಕವಾಗಿರಿಸಿ ಕೆಲಸ ಆರಂಭಿಸಲು ಸಿದ್ಧತೆ ನಡೆಸಿವೆ. ದೇಶದಲ್ಲಿ ಕಳೆದ 24 ಗಂಟೆಗಳ ಅವಧಿಯಲ್ಲಿ ಹೊಸದಾಗಿ 13,000 ಪ್ರಕರಣಗಳು ವರದಿಯಾಗಿವೆ. ಇದರಲ್ಲಿ 12,000 ಲಕ್ಷಣ ರಹಿತ ಪ್ರಕರಣಗಳಾಗಿವೆ. ಶಾಂಘೈನಲೇ 9,000 ಪ್ರಕರಣ ದಾಖಲಾಗಿವೆ

ಸ್ವೀಡನ್‌ನಲ್ಲಿ ನಾಲ್ಕನೇ ಡೋಸ್ (ಕೊಪನ್‌ಹೆಗನ್ ವರದಿ): 65 ವರ್ಷ ಮೇಲ್ಪಟ್ಟವರಿಗೆ ನಾಲ್ಕನೇ ಡೋಸ್ ಲಸಿಕೆ ನೀಡಲು ಶಿಫಾರಸು ಮಾಡಲಾಗಿದೆ.

ಅಲ್ಲದೆ ರೋಗ ನಿರೋಧಕ ಶಕ್ತಿ ಕಡಿಮೆ ಇರುವ 18–64 ವಯಸ್ಸಿನವರಿಗೂ ನಾಲ್ಕನೇ ಡೋಸ್ ನೀಡಬಹುದಾಗಿದೆ ಎಂದು ಶಿಫಾರಸಿನಲ್ಲಿ ತಿಳಿಸಲಾಗಿದೆ ಎಂದು ಸ್ವೀಡನ್ ಆರೋಗ್ಯ ಸಂಸ್ಥೆ ತಿಳಿಸಿದೆ.

715 ದಿನಗಳಲ್ಲಿ ಮೊದಲ ಬಾರಿಗೆ ಸಾವಿರಕ್ಕಿಂತ ಕಡಿಮೆ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ 715 ದಿನಗಳಲ್ಲಿ ಇದೇ ಮೊದಲ ಬಾರಿಗೆ ಕೋವಿಡ್ ದೃಢಪಟ್ಟ ಪ್ರಕರಣಗಳ ಸಂಖ್ಯೆ 1000ಕ್ಕಿಂತ ಕಡಿಮೆ ದಾಖಲಾಗಿದೆ. 24 ಗಂಟೆಗಳ ಅವಧಿಯಲ್ಲಿ 913 ಹೊಸ ಪ್ರಕರಣಗಳು ದೃಢಪಟ್ಟಿವೆ.

ಇದೇ ಅವಧಿಯಲ್ಲಿ 13 ಮಂದಿ ಮೃತಪಟ್ಟಿದ್ದು, 1,316 ಮಂದಿ ಗುಣಮುಖರಾಗಿದ್ದಾರೆ. ಪ್ರಸ್ತುತ 12,597 ಸಕ್ರಿಯ ಪ್ರಕರಣಗಳಿದ್ದು, ನಿತ್ಯದ ಕೋವಿಡ್ ಪಾಸಿಟಿವಿಟಿ ದರ ಶೇಕಡ 0.29ಕ್ಕೆ ಇಳಿಕೆಯಾಗಿದೆ.

ಬ್ರಿಟನ್ ಪ್ರಧಾನಿಗೆ ದಂಡ ವಿಧಿಸಿಲ್ಲ

ಲಂಡನ್(ರಾಯಿಟರ್ಸ್): ಕೋವಿಡ್ ನಿಯಮಗಳನ್ನು ಉಲ್ಲಂಘಿಸಿದ ಆರೋಪದ ಮೇಲೆ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರಿಗೆ ಪೊಲೀಸರು ದಂಡ ವಿಧಿಸಿಲ್ಲ ಎಂದು ಅವರ ವಕ್ತಾರರು ತಿಳಿಸಿದ್ದಾರೆ. ನಿರ್ಬಂಧಗಳನ್ನು ಉಲ್ಲಂಘಿಸಿ ಪ್ರಧಾನಿ ನಿವಾಸದಲ್ಲಿ ಔತಣಕೂಟ ನಡೆಸಿದ ಬಗ್ಗೆ ತನಿಖೆ ನಡೆಸಿದ್ದು, ಸಾಕ್ಷ್ಯಗಳನ್ನು ಪಡೆದ ಬಳಿಕ ನಿರ್ಬಂಧ ಉಲ್ಲಂಘಿಸಿದವರಿಗೆ ಪೊಲೀಸರು ದಂಡ ವಿಧಿಸುತ್ತಿದ್ದಾರೆ.

ಎನರ್ಜಿ ಡ್ರಿಂಕ್ 'ಬಿ-ಹಾಟ್' ಮಾರುಕಟ್ಟೆಗೆ

ಬೆಂಗಳೂರು: ತಂಪು ಪಾನೀಯ ತಯಾರಿಸುವ ಬಿಂದು ಜೀರಾ ಕಂಪನಿಯ ಮಾತೃಸಂಸ್ಥೆ ಮೇಘಾ ಫ್ರುಟ್ ಪ್ರೊಸೆಸಿಂಗ್ ಪ್ರೈವೇಟ್ ಲಿಮಿಟೆಡ್, 'ಬಿ-ಹಾಟ್' ಎನ್ನುವ ಎನರ್ಜಿ ಡ್ರಿಂಕ್ ಬಿಡುಗಡೆ ಮಾಡಿದೆ.

ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ 250 ಎಂಎಲ್ ಪೆಟ್ ಬಾಟಲ್‌ನಲ್ಲಿ ಈ ಪೇಯ ಲಭ್ಯವಿದೆ ಎಂದು ಕಂಪನಿಯು ಹೇಳಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,670
ಇಂದಿನ ಅಂತ್ಯ	18,053
▲	383
ದಿನದ ಗರಿಷ್ಠ	18,115

ವಿನಿಮಯ ದರ

$	ಡಾಲರ್	75.53
£	ಪೌಂಡ್	99.12
€	ಯೂರೊ	83.185
¥	ಯೆನ್ (100ಕ್ಕೆ)	61

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹400
12 ಮೊಟ್ಟೆಗೆ	₹54
ಮೈಸೂರು	
100 ಮೊಟ್ಟೆಗೆ	₹400

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (---)
ಸೋಯಾ (ರಿಫೈನ್ಡ್)	₹1480 (---)
ಸೂರ್ಯಕಾಂತಿ (ರಿಫೈನ್ಡ್)	₹1725 (---)
ಪಾಮೋಲಿನ್	₹1445 (---)

ಭಾವಪೂರ್ಣ ಶ್ರದ್ಧಾಂಜಲಿ

ಹಿರಿಯ ಸಹಕಾರಿ ಧುರೀಣ ದಿ. ಶ್ರೀ ಕೆ.ಎಚ್. ಪಾಟೀಲರ ಧರ್ಮಪತ್ನಿ ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ಧುರೀಣರಾದ ಮತ್ತು ಶಾಸಕರಾದ ಶ್ರೀ ಎಚ್.ಕೆ. ಪಾಟೀಲರ ಮಾತೋಶ್ರೀಯವರಾದ

ದಿ. ಶ್ರೀಮತಿ ಪದ್ಮಾವತಿ ಕೃಷ್ಣಗೌಡ ಪಾಟೀಲ (88)

ಇವರು ಸೋಮವಾರ, ದಿ. 4-4-2022ರಂದು ಸಂಜೆ 4.00 ಗಂಟೆಗೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ತನ್ನಿಮಿತ್ತ ಮಂಗಳವಾರ ದಿ. 5-4-2022ರಂದು ಮಧ್ಯಾಹ್ನ 2-00 ಗಂಟೆಗೆ ಹುಲಕೋಟಿಯಲ್ಲಿರುವ ಮುಕ್ತಿವನದಲ್ಲಿ ಅಂತ್ಯಕ್ರಿಯೆ ಜರುಗುವುದು.

ಶ್ರದ್ಧಾಂಜಲಿ ಸಲ್ಲಿಸುವವರು

ಆಡಳಿತ ಮಂಡಳಿ, ಸಿಬ್ಬಂದಿ ಹಾಗೂ ಕಾರ್ಮಿಕ ವರ್ಗ

ಗದಗ ಕೋ-ಆಪ್ ಟೆಕ್ಸ್‌ಟೈಲ್ಸ್ ಮಿಲ್, ಹುಲಕೋಟಿ

ದಿ ಫಾರ್ಮರ್ಸ್ ಕೋ-ಆಪ್ ಸ್ಪಿನ್ನಿಂಗ್ ಮಿಲ್ಸ್, ಹುಲಕೋಟಿ

ಚಿರಸ್ಮರಣೆ



ಶ್ರೀ ಜಿ. ರಾಮಕೃಷ್ಣಪ್ಪ ರೆಡ್ಡಿ

ನಿಧನ 5.4.1993

ನೀವು ನಮ್ಮನ್ನಗಲಿ ಇಂದಿಗೆ 29 ವರ್ಷಗಳಾದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನಿಮ್ಮ ದಿವ್ಯಾತ್ಮಕ್ಕೆ ಶಾಂತಿಯನ್ನು ಬಯಸುವ

ಸೊಸೆ: ಶ್ರೀಮತಿ ಕೆ.ಜಿ. ಯಶೋದ, ಎಸ್.ಆರ್. ನಾಗರಾಜ ರೆಡ್ಡಿ, ಮಕ್ಕಳು, ಅಳಿಯಂದಿರು, ಮತ್ತು ಮೊಮ್ಮಕ್ಕಳು

ವೈಕುಂಠ ಸಮಾರಾಧನೆ



ಜಿ. ವೆಂಕಟಾಚಲಯ್ಯನವರು

ಇವರು ದಿನಾಂಕ 23.3.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ವೈಕುಂಠ ಸಮಾರಾಧನೆಯನ್ನು ದಿನಾಂಕ 05.04.2022 ಮಂಗಳವಾರ ನಡೆಸಲಾಗುವುದು.

NAME CHANGE ANNOUNCEMENT

Log on to : dhclassifieds.com

ರ‍್ಯಾಮ್ಕೊ ಸಿಮೆಂಟ್‌ಗೆ ಸ್ವರ್ಣ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರ‍್ಯಾಮ್ಕೊ ಸಿಮೆಂಟ್ ಲಿಮಿಟೆಡ್ ಕಂಪನಿಯ ಅಲತಿಯೂರ್ ಘಟಕವು ಪರಿಸರ ಆರೋಗ್ಯ ಮತ್ತು ಸುರಕ್ಷತಾ ಕ್ರಮಗಳಿಗೆ ಸಿಐಐ ಎಸ್ಆರ್ 'ಇಎಚ್‌ಎಸ್ ಶ್ರೇಷ್ಠತಾ ಪ್ರಶಸ್ತಿಗಳ ಸಾಲಿನಲ್ಲಿ 2021ರ ಸಾಲಿನ ಸ್ವರ್ಣ ಪ್ರಶಸ್ತಿಗೆ ಪಾತ್ರವಾಗಿದೆ.

ಮಾರ್ಚ್ ಕೊನೆಯ ವಾರದಲ್ಲಿ ಚೆನ್ನೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗಿದೆ ಎಂದು ಕಂಪನಿಯು ಪ್ರಕಟಣೆ ತಿಳಿಸಿದೆ. ಪ್ರಶಸ್ತಿಗೆ ಒಟ್ಟು 194 ಕೈಗಾರಿಕೆಗಳ ನಡುವೆ ಸ್ಪರ್ಧೆ ಇತ್ತು. ಸಿಐಐ-ಎಸ್‌ಆರ್‌ನ ಮಾಜಿ ಅಧ್ಯಕ್ಷ ಟಿ.ಟಿ. ಅಶೋಕ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ನಿರಂತರ ಉತ್ತಮ ನಿರ್ವಹಣೆಗಾಗಿ ಘಟಕವು ಇಎಚ್‌ಎಸ್ ವಿಭಾಗದ ವಿಶೇಷ ಪ್ರಶಸ್ತಿಯನ್ನು ಕೂಡ ತನ್ನದಾಗಿಸಿಕೊಂಡಿದೆ.

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹800-1200
ಸಣ್ಣ	₹400-800

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹10000-15000

ದೇಶದ ಕಾರ್ಪೊರೇಟ್ ಇತಿಹಾಸದಲ್ಲಿನ ಅತಿದೊಡ್ಡ ವಿಲೀನ ಪ್ರಕ್ರಿಯೆ

ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಎಚ್‌ಡಿಎಫ್‌ಸಿ ವಿಲೀನ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ಗೃಹ ಹಣಕಾಸು ಕಂಪನಿ ಎಚ್‌ಡಿಎಫ್‌ಸಿ, ದೇಶದ ಅತಿದೊಡ್ಡ ಖಾಸಗಿ ಬ್ಯಾಂಕ್ ಆಗಿರುವ ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ವಿಲೀನ ಆಗಲಿದೆ. ಈ ವಿಲೀನವು ದೇಶದಲ್ಲಿ ದೈತ್ಯ ಬ್ಯಾಂಕಿಂಗ್ ಕಂಪನಿಯೊಂದನ್ನು ಹುಟ್ಟುಹಾಕಲಿದೆ. ಎಚ್‌ಡಿಎಫ್‌ಸಿ ಬ್ಯಾಂಕ್ ಹಾಗೂ ಎಚ್‌ಡಿಎಫ್‌ಸಿ ವಿಲೀನವು ದೇಶದ ಕಾರ್ಪೊರೇಟ್ ಇತಿಹಾಸದಲ್ಲಿನ ಅತಿದೊಡ್ಡ ವಿಲೀನ ಪ್ರಕ್ರಿಯೆ ಆಗಲಿದೆ.

ವಿಲೀನವು ಪೂರ್ಣಗೊಂಡ ನಂತರದಲ್ಲಿ ಎಚ್‌ಡಿಎಫ್‌ಸಿಯ ಷೇರು ಹೊಂದಿರುವವರಿಗೆ ಪ್ರತಿ 25 ಷೇರುಗಳಿಗೆ ಪ್ರತಿಯಾಗಿ, ಎಚ್‌ಡಿಎಫ್‌ಸಿ ಬ್ಯಾಂಕ್‌ನ 42 ಷೇರುಗಳು ದೊರೆಯಲಿವೆ. 'ಇದು ಎರಡು ಸಮಾನ ಸಂಸ್ಥೆಗಳ ವಿಲೀನ ಪ್ರಕ್ರಿಯೆ' ಎಂದು ಎಚ್‌ಡಿಎಫ್‌ಸಿ ಲಿಮಿಟೆಡ್‌ನ ಅಧ್ಯಕ್ಷ ದೀಪಕ್ ಪಾರೇಖ್ ಹೇಳಿದ್ದಾರೆ.

'ರೇರಾ ಕಾಯ್ದೆಯ ಅನುಷ್ಠಾನ, ಗೃಹ ನಿರ್ಮಾಣ ವಲಯಕ್ಕೆ ಮೂಲಸೌಕರ್ಯ ವಲಯ ಎಂಬ ಮಾನ್ಯತೆ ನೀಡಿರುವುದು ಮತ್ತು ಎಲ್ಲರಿಗೂ ಕೈಗೆಟುಕುವ ದರದಲ್ಲಿ ಮನೆ ಸಿಗುವಂತೆ ಆಗಬೇಕು ಎಂಬ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳ ಕಾರಣದಿಂದಾಗಿ ಗೃಹ ಸಾಲ ವಹಿವಾಟುಗಳು ಮುಂದಿನ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಏರಿಕೆ ಆಗಲಿವೆ ಎಂಬುದು ನಮ್ಮ ನಂಬಿಕೆ' ಎಂದರು ಪಾರೇಖ್ ಹೇಳಿದ್ದಾರೆ.

'ಈ ವಿಲೀನವು ಎಚ್‌ಡಿಎಫ್‌ಸಿ ಬ್ಯಾಂಕ್‌ಅನ್ನು ಅಂತರರಾಷ್ಟ್ರೀಯ ಮಾನದಂಡಗಳ ದೃಷ್ಟಿಯಿಂದಲೂ ದೊಡ್ಡ ಬ್ಯಾಂಕನ್ನಾಗಿ ಪರಿವರ್ತಿಸಲಿದೆ' ಎಂದು ಎಚ್‌ಡಿಎಫ್‌ಸಿ ಸಿಇಒ ಕೆಕಿ ಮಿಸ್ತ್ರಿ ಹೇಳಿದ್ದಾರೆ. ಎರಡು ಕಂಪನಿಗಳ ವಿಲೀನವು ಮುಂದಿನ ಹಣಕಾಸು ವರ್ಷದ ಎರಡನೆಯ ಅಥವಾ ಮೂರನೆಯ ತ್ರೈಮಾಸಿಕದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ವಿಲೀನದಿಂದಾಗಿ ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ತನ್ನ ಗೃಹ ಸಾಲ ವಹಿವಾಟುಗಳನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಲು, ಗ್ರಾಹಕರ ನೆಲೆಯನ್ನು ಇನ್ನಷ್ಟು ವಿಸ್ತರಿಸಿಕೊಳ್ಳಲು ಸಾಧ್ಯವಾಗಲಿದೆ ಎಂದು ಎಚ್‌ಡಿಎಫ್‌ಸಿ ಹೇಳಿದೆ. ವಿಲೀನಕ್ಕೆ ಆರ್‌ಬಿಐ ಅನುಮೋದನೆ ಸಿಗಬೇಕಿದೆ.

ಎಚ್‌ಡಿಎಫ್‌ಸಿ ಲಿಮಿಟೆಡ್ ಕಂಪನಿಯು ಕಡಿಮೆ ಮತ್ತು ಮಧ್ಯಮ ಪ್ರಮಾಣದ ಆದಾಯ ಇರುವವರಿಗೆ ಕೇಂದ್ರ ಸರ್ಕಾರದ ಯೋಜನೆಗಳ ಅಡಿಯಲ್ಲಿ ಗೃಹ ಸಾಲ ನೀಡುವಲ್ಲಿ ಗಣನೀಯ ಪಾತ್ರ ವಹಿಸಿದೆ. ಎಚ್‌ಡಿಎಫ್‌ಸಿ ಬ್ಯಾಂಕ್ ದೇಶದ ಮೂರು ಸಾವಿರಕ್ಕೂ ಹೆಚ್ಚಿನ ನಗರ, ಪಟ್ಟಣಗಳಲ್ಲಿ ಒಟ್ಟು 6,342 ಶಾಖೆಗಳನ್ನು ಹೊಂದಿದೆ.

ಅಂಕಿ-ಅಂಶಗಳು

₹6.23 ಲಕ್ಷ ಕೋಟಿ
ಎಚ್‌ಡಿಎಫ್‌ಸಿ ಆಸ್ತಿ ಮೌಲ್ಯ

₹19.38 ಲಕ್ಷ ಕೋಟಿ
ಎಚ್‌ಡಿಎಫ್‌ಸಿ ಬ್ಯಾಂಕ್ ಆಸ್ತಿ ಮೌಲ್ಯ

'ಐಸಿಐಸಿಐ ಬ್ಯಾಂಕ್‌ಗಿಂತ ಎರಡು ಪಟ್ಟು ದೊಡ್ಡದು'

ನವದೆಹಲಿ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಎಚ್‌ಡಿಎಫ್‌ಸಿ ವಿಲೀನದ ನಂತರದಲ್ಲಿ, ಐಸಿಐಸಿಐ ಬ್ಯಾಂಕ್‌ಗಿಂತ ಎರಡು ಪಟ್ಟು ದೊಡ್ಡದಾಗಿ ಇರಲಿದೆ ಎಂದು ರೇಟಿಂಗ್ ಕಂಪನಿ ಎಸ್‌ಆ್ಯಂಡ್‌ಪಿ ಗ್ಲೋಬಲ್ ಹೇಳಿದೆ.

ವಿಲೀನದ ನಂತರದಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಮಾರುಕಟ್ಟೆ ಪಾಲು ಗಣನೀಯವಾಗಿ ಹೆಚ್ಚಳ ಆಗಲಿದೆ. ಎಚ್‌ಡಿಎಫ್‌ಸಿ ಬ್ಯಾಂಕ್ ನೀಡಿದ ಸಾಲಗಳ ಒಟ್ಟು ಮೊತ್ತವು ₹18 ಲಕ್ಷ ಕೋಟಿಗೆ ಹೆಚ್ಚಳ ಆಗಲಿದ್ದು, ಬ್ಯಾಂಕ್‌ನ ಮಾರುಕಟ್ಟೆ ಪಾಲು ಶೇಕಡ 15ಕ್ಕೆ ಏರಿಕೆ ಆಗಲಿದೆ. ಈಗ ಬ್ಯಾಂಕ್‌ನ ಮಾರುಕಟ್ಟೆ ಪಾಲು ಶೇ 11ರಷ್ಟು ಇದೆ.

'ವಿಲೀನದ ನಂತರದಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಸಗಟು ಸಾಲ ವಿತರಣೆ ಸಾಮರ್ಥ್ಯ ಹೆಚ್ಚುವ ಸಾಧ್ಯತೆ ಇದೆ' ಎಂದೂ ಎಸ್‌ಆ್ಯಂಡ್‌ಪಿ ಹೇಳಿದೆ. ಸರ್ಕಾರಿ ಸ್ವಾಮ್ಯದ ಎಸ್‌ಬಿಐ ದೇಶದ ಅತಿದೊಡ್ಡ ಬ್ಯಾಂಕ್. ವಿಲೀನದ ನಂತರದಲ್ಲಿಯೂ ಎಚ್‌ಡಿಎಫ್‌ಸಿ ಬ್ಯಾಂಕ್ ದೇಶದ ಎರಡನೆಯ ಅತಿದೊಡ್ಡ ಬ್ಯಾಂಕ್ ಆಗಿರಲಿದೆ.

ಜೊಮ್ಯಾಟೊ, ಸ್ವಿಗ್ಗಿ ವಿರುದ್ಧ ತನಿಖೆಗೆ ಸಿಸಿಐ ಆದೇಶ

ನವದೆಹಲಿ (ಪಿಟಿಐ): ರೆಸ್ಟೋರೆಂಟ್‌ಗಳಿಂದ ಆಹಾರ ಪದಾರ್ಥಗಳನ್ನು ಮನೆ ಬಾಗಿಲಿಗೆ ತಲುಪಿಸುವ ಸ್ವಿಗ್ಗಿ ಮತ್ತು ಜೊಮ್ಯಾಟೊ ಕಂಪನಿಗಳ ವಿರುದ್ಧ ತನಿಖೆಗೆ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ಸೋಮವಾರ ಆದೇಶಿಸಿದೆ.

ರಾಷ್ಟ್ರೀಯ ರೆಸ್ಟೋರೆಂಟ್ ಸಂಘ (ಎನ್‌ಆರ್‌ಎಐ) ಸಲ್ಲಿಸಿದ ದೂರು ಆಧರಿಸಿ ಈ ಆದೇಶ ಹೊರಡಿಸಲಾಗಿದೆ. 'ಆಹಾರ ಪದಾರ್ಥಗಳನ್ನು ಮನೆ ಬಾಗಿಲಿಗೆ ತಲುಪಿಸುವ ಸೇವಾ ಕ್ಷೇತ್ರದಲ್ಲಿ ಜೊಮ್ಯಾಟೊ ಮತ್ತು ಸ್ವಿಗ್ಗಿ ಪ್ರಮುಖ ವೇದಿಕೆಗಳು. ಇದು ಈ ಕಂಪನಿಗಳ ಮಾರುಕಟ್ಟೆ ಶಕ್ತಿಯನ್ನು ತೋರಿಸುತ್ತದೆ. ಸಮಾನ ನೆಲೆಯಲ್ಲಿ ಆಗಬೇಕಿರುವ ಸ್ಪರ್ಧೆಯ ಮೇಲೆ ಪರಿಣಾಮ ಉಂಟುಮಾಡುವಷ್ಟು ಇವು ಶಕ್ತಿಶಾಲಿ ಆಗಿರುವುದನ್ನು ಇದು ತೋರಿಸುತ್ತಿದೆ' ಎಂದು ಸಿಸಿಐ ಹೇಳಿದೆ.

ಈ ವೇದಿಕೆಗಳು ಈಕ್ವಿಟಿ ಪಾಲು ಹೊಂದಿರುವ ರೆಸ್ಟೋರೆಂಟ್ ಪಾಲುದಾರರಿಗೆ ವಿಶೇಷ ಆದ್ಯತೆ ನೀಡುವುದು ಈಗಾಗಲೇ ಇರುವ ರೆಸ್ಟೋರೆಂಟ್ ಪಾಲುದಾರರ ಆಸ್ತಿಯಂತ ಪರಿಣಾಮಿಸಬಹುದು ಎಂದು ಸಿಸಿಐ ಹೇಳಿದೆ.

ಸ್ವಿಗ್ಗಿ ಮತ್ತು ಜೊಮ್ಯಾಟೊ ಜೊತೆಗಿನ ಒಪ್ಪಂದದ ನಿಯಮಗಳಲ್ಲಿ ಇರುವ ಕೆಲವು ಅಂಶಗಳು ರೆಸ್ಟೋರೆಂಟ್ ಪಾಲುದಾರರಿಗೆ ಕನಿಷ್ಠ ಬೆಲೆಯನ್ನು ಕಾಯ್ದುಕೊಳ್ಳಲು ಅವಕಾಶ ಕೊಡುತ್ತಿಲ್ಲ ಎಂಬ ಭಾವನೆ ಮೂಡಿಸುತ್ತಿವೆ ಎಂದು ಕೂಡ ಸಿಸಿಐ ಹೇಳಿದೆ.

ಜೊಮ್ಯಾಟೊ ಮತ್ತು ಸ್ವಿಗ್ಗಿ ಆಹಾರ ಪದಾರ್ಥಗಳ ಪೂರೈಕೆ ವಲಯದಲ್ಲಿ ದೊಡ್ಡ ಪಾಲು ಹೊಂದಿವೆ. ಇವು ಹೊಂದಿರುವ ಕೆಲವು ನಿಯಮಗಳು, ಹೊಸ ವೇದಿಕೆಗಳಿಗೆ ಈ ಕ್ಷೇತ್ರ ಪ್ರವೇಶಿಸಲು ಅಡ್ಡಿಯಾಗುತ್ತಿರುವ ಸಾಧ್ಯತೆ ಇದೆ ಎಂದು ಸಿಸಿಐ ತನ್ನ 32 ಪುಟಗಳ ಆದೇಶದಲ್ಲಿ ಹೇಳಿದೆ.

ಹೂಡಿಕೆದಾರರ ಸಂಪತ್ತು ₹4.5 ಲಕ್ಷ ಕೋಟಿ ವೃದ್ಧಿ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಎಚ್‌ಡಿಎಫ್‌ಸಿ ಲಿಮಿಟೆಡ್ ವಿಲೀನಗೊಳ್ಳುವ ನಿರ್ಧಾರವು ದೇಶದ ಷೇರುಪೇಟೆಗಳಲ್ಲಿ ಸೋಮವಾರ ಸೂಚ್ಯಂಕಗಳ ಓಟಕ್ಕೆ ಕಾರಣವಾಯಿತು.

ಬ್ಯಾಂಕಿಂಗ್ ಮತ್ತು ಹಣಕಾಸು, ಎಫ್‌ಎಂಸಿಜಿ, ಐ.ಟಿ. ಮತ್ತು ಲೋಹ ವಲಯದ ಷೇರುಗಳು ಸಹ ಉತ್ತಮ ಖರೀದಿ ವಹಿವಾಟಿಗೆ ಒಳಗಾಗಿ ಸಕಾರಾತ್ಮಕ ವಹಿವಾಟಿಗೆ ಉತ್ತೇಜನ ನೀಡಿದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,335 ಅಂಶ ಜಿಗಿತ ಕಂಡು 60,611 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ಇದರಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ಒಂದೇ ದಿನ ₹4.5 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ. ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹272.46 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಸೆನ್ಸೆಕ್ಸ್‌ನಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್ ಷೇರು ಮೌಲ್ಯ ಶೇ 9.97ರಷ್ಟು ಮತ್ತು ಎಚ್‌ಡಿಎಫ್‌ಸಿ ಲಿಮಿಟೆಡ್ ಷೇರು ಮೌಲ್ಯ ಶೇ 9.30ರಷ್ಟು ಹೆಚ್ಚಾಗಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 383 ಅಂಶ ಏರಿಕೆ ಕಂಡು 18,053 ಅಂಶಗಳಿಗೆ ತಲುಪಿತು.

ರೂಪಾಯಿ ಮೌಲ್ಯ ವೃದ್ಧಿ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 21 ಪೈಸೆ ಹೆಚ್ಚಾಗಿದ್ದು ಒಂದು ಡಾಲರ್‌ಗೆ ₹75.53ರಂತೆ ವಿನಿಮಯಗೊಂಡಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಶೇ 1.05ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 103.29 ಡಾಲರ್‌ಗಳಿಗೆ ತಲುಪಿದೆ.

ಉಕ್ರೇನ್‌ನಿಂದ ಸೂರ್ಯಕಾಂತಿ ಎಣ್ಣೆ ಆಮದಿಗೆ ಅಡ್ಡಿ

ತಾಳೆ ಎಣ್ಣೆ ಆಮದು ಹೆಚ್ಚಳ

ಮುಂಬೈ (ರಾಯಿಟರ್ಸ್): ತಾಳೆ ಎಣ್ಣೆ ಆಮದು ಪ್ರಮಾಣವು ಫೆಬ್ರುವರಿಗೆ ಹೋಲಿಸಿದರೆ ಮಾರ್ಚ್‌ನಲ್ಲಿ ಶೇಕಡ 21ರಷ್ಟು ಏರಿಕೆ ಆಗಿದೆ. ಉಕ್ರೇನ್‌ನಿಂದ ಸೂರ್ಯಕಾಂತಿ ಎಣ್ಣೆ ಖರೀದಿಸಲು ಸಾಧ್ಯವಾಗದೇ ಇರುವುದರಿಂದ ಪರ್ಯಾಯಗಳನ್ನು ಅದಕ್ಕೆ ಪರ್ಯಾಯವಾಗಿ ಬೇರೆ ಅಡುಗೆ ಎಣ್ಣೆ ಖರೀದಿಗೆ ಮುಂದಾಗಿದ್ದಾರೆ. ಹೀಗಾಗಿ ತಾಳೆ ಎಣ್ಣೆ ಆಮದು ಹೆಚ್ಚಾಗಿದೆ ಎಂದು ವಿತರಕರು ತಿಳಿಸಿದ್ದಾರೆ.

ಫೆಬ್ರುವರಿಯಲ್ಲಿ 4.54 ಲಕ್ಷ ಟನ್ ತಾಳೆ ಎಣ್ಣೆ ಆಮದಾಗಿತ್ತು. ಇದು ಮಾರ್ಚ್‌ನಲ್ಲಿ 5.50 ಲಕ್ಷ ಟನ್‌ಗೆ ಏರಿಕೆ ಆಗಿದೆ ಎಂದು ಜಾಗತಿಕ ವ್ಯಾಪಾರ ಕಂಪನಿಯಲ್ಲಿ ಇರುವ ಮುಂಬೈ ಮೂಲದ ವಿತರಕರೊಬ್ಬರು ತಿಳಿಸಿದ್ದಾರೆ.

ರಷ್ಯಾವು ಉಕ್ರೇನ್ ಮೇಲಿನ ದಾಳಿಯನ್ನು ಮುಂದುವರಿಸಿರುವುದರಿಂದ ಸೂರ್ಯಕಾಂತಿ ಎಣ್ಣೆ ಆಮದು ಕಡಿಮೆ ಆಗುವ ನಿರೀಕ್ಷೆ ಇದೆ. ಹೀಗಾಗಿ ಏಪ್ರಿಲ್‌ನಲ್ಲಿಯೂ ತಾಳೆ ಎಣ್ಣೆ ಆಮದು ಹೆಚ್ಚಿನ ಮಟ್ಟದಲ್ಲಿಯೇ ಇರಲಿದೆ ಎಂದು ಜಿ.ಜಿ. ಪಟೇಲ್ ಆ್ಯಂಡ್ ನಿಖಿಲ್ ರಿಸರ್ಚ್ ಕೊನ ವ್ಯವಸ್ಥಾಪಕ ನಿರ್ದೇಶಕ ಗೋವಿಂದಭಾಯ್ ಪಟೇಲ್ ಹೇಳಿದ್ದಾರೆ.

ಭಾರತವು ಫೆಬ್ರುವರಿಯಲ್ಲಿ 1.52 ಲಕ್ಷ ಟನ್ ಸೂರ್ಯಕಾಂತಿ ಎಣ್ಣೆ ಆಮದು ಮಾಡಿಕೊಂಡಿದೆ. ಮಾರ್ಚ್‌ನಲ್ಲಿ 2.10 ಲಕ್ಷ ಟನ್‌ಗಳಿಗೆ ಏರಿಕೆ ಆಗಿದೆ. ರಷ್ಯಾವು ಉಕ್ರೇನ್ ಮೇಲೆ ಸಮರ ಸಾರುವುದಕ್ಕೂ ಮೊದಲೇ ಕೆಲವು ಹಡಗುಗಳು ಉಕ್ರೇನ್‌ನಿಂದ ಹೊರಟಿದ್ದವು. ಹೀಗಾಗಿ ಈ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಲು ಸಾಧ್ಯವಾಗಿದೆ ಎಂದು ಪಟೇಲ್ ಮಾಹಿತಿ ನೀಡಿದ್ದಾರೆ.

ಭಾರತವು ಗರಿಷ್ಠ ಬೆಲೆಗೆ ರಷ್ಯಾದ 45 ಸಾವಿರ ಟನ್ ಸೂರ್ಯಕಾಂತಿ ಎಣ್ಣೆ ಖರೀದಿಗೆ ಗುತ್ತಿಗೆ ನೀಡಿದೆ. ಏಪ್ರಿಲ್‌ನಲ್ಲಿ ಪೂರೈಕೆ ಆಗಲಿದೆ.

ಮುಂಬೈ ಧಾರಣೆ

ಶೇಂಗಾ

4-4-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	10000-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (---)
ಎಂದು ಬಾರದ ಡೆಲಿವರಿ	1605 (---)
ಸೋಯಾ ಕಚ್ಚಾ	1435 (---)
ಪಾಮ್ ಪಾರದ ಡೆಲಿವರಿ	1443 (---)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ - ಬೆಳ್ಳಿ (ಜಿಎಸ್‌ಟಿ ಸೇರಿದ್ದು)

ಅಪರಂಜಿ ಚಿನ್ನ 10 ಗ್ರಾಂ 51,300 (---)

ಬೆಳ್ಳಿ ಕೆ.ಜಿ 66,550 (---)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ		ಕೋಕ	20699-30312	ಹೊಸತು	38000-45000
ಹಾವೇರಿ/ಸಕಲೇಶಪುರ		ಹಸಕು	36699-40599	ಹಳತು	47000-53000
ಕಳಿ	430-450	ಕಂಪ್ಲಿಂಗೋಟು	24869-31899	ಯಲ್ಲಾಪುರ	
ಸಡಗೋಟು	500-550	ರಾಶಿ	44099-47300	ಬಿಳೆಗೋಟು	26899-32431
ರಾಶಿ	600-650	ತಟ್ಟಿಬೆಟ್ಟೆ	33889-42099	ಚಾಲಿ	36109-40460
ರಾಶಿ ಉತ್ತಮ	650-700	ಶಿರಸಿ		ಕೋಕ	18899-30899
ಜರಿದಿ	750-800	ಬೆಟ್ಟೆ	38299-42818	ಕಂಪ್ಲಿಗೋಟು	32669-36969
ಹರಸಕಲ	1100-1150	ಬಿಳಿಗೋಟು	20199-32014	ರಾಶಿ	46800-51899
ಹಾರು ಸಾಧಾರಣ	600-700	ಚಾಲಿ	37518-40599	ತಟ್ಟಿಬೆಟ್ಟೆ	38899-44700
ಹಾರು ಉತ್ತಮ	900-950	ರಾಶಿ	44079-46599	ರಾಮನಗರ ರೇಷ್ಮೆಗೂಡು	
ಹಾರು ಅತಿ ಉತ್ತಮ	1200-1250	ಮಂಗಳೂರು		ಮಿಶ್ರತಳಿ	200-686
ಕಾಳು ಮೆಣಸು	510	ಕೋಕ	25000-34000	ದ್ವಿತಳಿ	306-798
ಬಂಟ್ವಾಳ					
ಕೋಕ	12500-25000				
ಹೊಸತು	27500-45000				
ಹಳತು	46000-53000				
ಪುತ್ತೂರು					
ಕೋಕ	11000-26000				
ಹೊಸತು	27500-45000				
ಸಿದ್ದಾಪುರ					
ಬಿಳೆಗೋಟು	23399-31859				
ಚಾಲಿ	46599-46599				

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ		ಹಾಸನ		
	ಮುದ್ದಮನೆ	ಬಾಳೆಹೊನ್ನೂರು	ಅಲ್ಲಾಪುರ	ಸುಲ್ತಾನ್‌ಪುರ
ಎಪಿ	15800	15600	15800	221.85 ಸೆಂಟ್ಸ್
ಎಸಿ	8260	7900	8400	
ಆರ್‌ಪಿ	9000	8900	9150	ಲಂಡನ್
ಆರ್‌ಸಿ	4230	3950	4100	2152 ಡಾಲರ್

ನವಿ ಮುಂಬೈ ವಿಮಾನ ನಿಲ್ದಾಣ: ಅದಾನಿಗೆ ಎಸ್‌ಬಿಐ ನೆರವು

ನವದೆಹಲಿ (ಪಿಟಿಐ): ಅದಾನಿ ಸಮೂಹಕ್ಕೆ ನವಿ ಮುಂಬೈ ವಿಮಾನ ನಿಲ್ದಾಣ ಯೋಜನೆಗೆ ಅಗತ್ಯವಿರುವ ₹12,770 ಕೋಟಿ ಮೊತ್ತದ ಸಾಲವನ್ನು ಹೊಂದಿಸಿಕೊಡುವ ಜವಾಬ್ದಾರಿಯನ್ನು (debt underwriting) ಎಸ್‌ಬಿಐ ಹೊತ್ತುಕೊಂಡಿದೆ ಎಂದು ಅದಾನಿ ಸಮೂಹದ ಪ್ರಕಟಣೆ ತಿಳಿಸಿದೆ.

ಅದಾನಿ ಸಮೂಹವು ಹಿಂದಿನ ವರ್ಷದ ಜುಲೈ ತಿಂಗಳಿನಲ್ಲಿ ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ನವಿ ಮುಂಬೈ ವಿಮಾನ ನಿಲ್ದಾಣ ಯೋಜನೆಯನ್ನು ಜಿವಿಕೆ ಸಮೂಹದಿಂದ ತನ್ನ ವಹಿಸಿಕೊಂಡಿದೆ.

ನವಿ ಮುಂಬೈ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್ (ಎನ್‌ಎಂಐಎಎಲ್) ಕಂಪನಿಯು ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಅಂಗಸಂಸ್ಥೆ.

'ಎಸ್‌ಬಿಐ ಕಡೆಯಿಂದ ಈ ಸೌಲಭ್ಯ ದೊರೆತಿರುವ ಕಾರಣ, ಮುಂಬೈ ಮಹಾನಗರಕ್ಕೆ ಇನ್ನೊಂದು ಮೈಲಿಗಲ್ಲು ಎನ್ನಬಹುದಾದ ಸೌಕರ್ಯವನ್ನು ಕಲ್ಪಿಸುವತ್ತ ನಾವು ಒಂದು ಹೆಜ್ಜೆ ಮುಂದಕ್ಕೆ ಸಾಗಿದ್ದೇವೆ' ಎಂದು ಎನ್‌ಎಂಐಎಎಲ್ ನಿರ್ದೇಶಕ ಜೀತ್ ಅದಾನಿ ಹೇಳಿದ್ದಾರೆ.

ತಯಾರಿಕಾ ಚಟುವಟಿಕೆ ಇಳಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಗಳು ಮಾರ್ಚ್‌ನಲ್ಲಿ ಅಲ್ಪ ಇಳಿಕೆ ಕಂಡಿವೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ಹಣದುಬ್ಬರದ ಆತಂಕವು ಹೊಸ ಯೋಜನೆಗಳನ್ನು ಮತ್ತು ತಯಾರಿಕೆಯ ಮೇಲೆ ಪರಿಣಾಮ ಉಂಟು ಮಾಡಿದೆ. ವಹಿವಾಟು ನಡೆಸುವ ವಿಶ್ವಾಸವನ್ನೂ ಎರಡು ವರ್ಷಗಳ ಕನಿಷ್ಠ ಮಟ್ಟಕ್ಕೆ ಕುಸಿಯಿತು ಎಂದು ಸಮೀಕ್ಷೆಯ ವರದಿ ಹೇಳಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ ಫೆಬ್ರುವರಿಯಲ್ಲಿ 54.9ರಷ್ಟು ಇದ್ದದ್ದು ಮಾರ್ಚ್‌ನಲ್ಲಿ 54ಕ್ಕೆ ಇಳಿಕೆ ಆಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Marketing & Sales

KRISHNA FOOD PRODUCTS
Experienced FMCG SALES OFFICER
Required in Bangalore
WALK IN INTERVIEW
Date: 6/4/2022 & Time : 10AM -1PM
VENUE
THE GRAND KRISHNA ROOMS
77, Hosur Road, Near Ayyapa Temple, Old Madiwala, 1st Stage, BTM Layout, Bangalore.
99402 25924

SKY SCOPE housing ltd Vp with min 2 yrs exp req Branch manager ,Sales manager Interested candidates share resume at - mrchandrasshp@gmail.com Contact-7411124596

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೆ ಅಂಚೆ ಬೆಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಬಂಡವಾಳದಲ್ಲಿ ಮನೆಯಿಂದಲೆ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ. (ಕೊರಿಯರ್ ಇದೆ).8884686861, 8884686860.

Cook

ಹೋಟೆಲ್‌ಗೆ ಸಸ್ಯಹಾರ, ಮಾಂಸಾಹಾರ ಅಡುಗೆ ಮಾಡುವವರು ಬೇಕಾಗಿದ್ದಾರೆ ಸಂಬಳ 20000/ to 25000K Contact: 9606701007/ 8892501007

General

ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ 10ನೇ,ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 18,000-56,000/- (ತಕ್ಷಣ ಬೇಕಾಗಿದ್ದಾರೆ) ವಸತಿಯುಟದೊಂದಿಗೆ 8197650569, 7204396011

Wanted

ಮನೆಕೆಲಸ (11,000-14,000)/ಹೋಂನರ್ಸ್(15,000-18,000), ಹೆಂಗಸರು / ಹುಡುಗಿಯರು ಬೇಕಾಗಿದ್ದಾರೆ (12,000-18,000) ಊಟ-ವಸತಿ ಉಚಿತ,ಉಡುಪಿ 9845276452

ರೆಂಟಲ್ ಪ್ರಾಪರ್ಟೀಸ್

Accommodation Available

Flats

3BHK 22K Hosapalya ITI layout HSR 7 semi west family 9441124742

ಭವಿಷ್ಯ

Astrology

ಕೆಲಸದ ನಂತರ ಶಾಂತಿ, ಸ್ತ್ರೀ ಪುರುಷ ವಶೀಕರಣ, ನಿಮ್ಮ ಯಾವುದೇ ಸಮಸ್ಯೆಗಳಿಗೆ ಇಷ್ಟಪಟ್ಟವರು ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಸ್ತ್ರೀ-ಪುರುಷ ವಶೀಕರಣ ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಯಾವುದೇ ಕಠಿಣ ಸಮಸ್ಯೆಗಳಿಗೆ ಕಡಿಮೆ ಖರ್ಚಿನಲ್ಲಿ ಒಂದು ದಿನದಲ್ಲಿ ಕೇರಳದಿಂದ ನೇರ ಪರಿಹಾರ.9148890039

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಧರ್ಮಸ್ಥಳ: 7022443071

no.1 ವಶೀಕರಣ ಸ್ಪೆಷಲಿಸ್ಟ್ ತಾಂತ್ರಿಕ್: ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿಮೋಸ, ಗಂಡಹೆಂಡತಿ ಕಲಹ, ನಾಗಗ್ರಹದೋಷಗಳ ವಶೀಕರಣ 3ದಿನಗಳಲ್ಲಿ ಪರಿಹಾರ 6360611244

ಪ್ರವಾಸ

Travel

7 ದಿನಗಳ ಪ್ರವಾಸಗಳು 11.05.2022 ಕಾಶಿ,ಗಯಾ,ಅಯೋಧ್ಯ 27.04.2022, 18.05.2022 26.05.2022 ದಿಮ್ಲಾ,ಮನಾಲಿ 19.05.2022 15.06.2022 ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ 19.05.2022 31.05.2022 ನೇಪಾಳ ಪ್ರವಾಸಗಳು. 21.04.2022 05.05.2022 19.05.2022 ರ್ಧುವರ್ಣ 19.05.2022 ರಾಮೇಶ್ವರ ಹೊರನಾಡು 4 ದಿನಗಳು. ಕುಂಭಕೋಣಂ 6 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು 9448402248 7022547922

★ಊಟ, ವಸತಿಯೊಂದಿಗೆ★ ವಿಮಾನದಲ್ಲಿ ಪ್ರವಾಸ 15.05.2022 12ದಿನಗಳು ಸಿಮ್ಲಾ,ಕುಲುಮನಾಲಿ, ಅಮೃತಸರ್,ವಾಘಗಡಿ, ವೈಷ್ಣೋದೇವಿ,ಶೀನಗರ. 09.06.2022 13/7 ದಿನಗಳು ಕಾಶಿ,ಗಯಾ,ಅಲಹಾಬಾದ್, ಅಯೋಧ್ಯೆ,ನೈಮಿಷಾರಣ್ಯ, ಹರಿದ್ವಾರ,ಋಷಿಕೇಶ ಪ್ರವಾಸ.ಆರ್. ಗಾಂಧಿ ಟೂರ್ಸ್.9902433500/ 9945445809

★13.5.2022 ರಿಂದ★ 16ದಿನಗಳ ಯಾತ್ರೆ ಭುವನೇಶ್ವರ, ಕಾಶಿ, ಗಯಾ, ಅಲಹಾಬಾದ್, ಅಯೋಧ್ಯೆ, ಅಮೃತಸರ, ವೈಷ್ಣೋದೇವಿ, ಶ್ರೀ ಕರ್ನಾಟಕ ಟೂರ್ಸ್: 9480588568

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿಸುವ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in
condition apply*

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕೆ.ಎಲ್. ರಾಹುಲ್ ಬಳಗಕ್ಕೆ ಮಣಿದ ಸನ್‌ರೈಸರ್ಸ್ ಹೈದರಾಬಾದ್ ತಂಡ

ಮಿಂಚಿದ ಆವೇಶ್ ಖಾನ್, ಹೋಲ್ಡರ್

ನವಿ ಮುಂಬೈ: ವೆಸ್ಟ್ ಇಂಡೀಸ್ ಆಲ್‌ರೌಂಡರ್ ಜೇಸನ್ ಹೋಲ್ಡರ್ ಕೊನೆಯ ಓವರ್‌ನಲ್ಲಿ ಮೂರು ವಿಕೆಟ್ ಗಳಿಸುವುದರೊಂದಿಗೆ ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ರೋಚಕ ಗೆಲುವಿನ ಕಾಣಿಕೆ ನೀಡಿದರು.

ಸೋಮವಾರ ಇಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಲಖನೌ ತಂಡವು ಸನ್‌ರೈಸರ್ಸ್ ಹೈದರಾಬಾದ್ ಎದುರು 12 ರನ್‌ಗಳಿಂದ ಜಯಿಸಿತು. ಮೊದಲು ಬ್ಯಾಟಿಂಗ್ ಮಾಡಿದ್ದ ಲಖನೌ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 169 ರನ್ ಗಳಿಸಿತು. ಈ ಗುರಿಯನ್ನು ಬೆನ್ನಟ್ಟಿದ ಸನ್‌ರೈಸರ್ಸ್ ತಂಡವು ಗೆಲುವಿನ ಹೊಸ್ತಿಲಲ್ಲಿ ಎಡವಿತು.

ಕೊನೆಯ ಓವರ್‌ನಲ್ಲಿ ಗೆಲುವಿಗೆ ಅಗತ್ಯವಿದ್ದ 16 ರನ್‌ಗಳನ್ನು ಗಳಿಸಲು ಸನ್‌ರೈಸರ್ಸ್ ಬ್ಯಾಟರ್‌ಗಳಿಗೆ ಹೋಲ್ಡರ್ ಅವಕಾಶ ನೀಡಲಿಲ್ಲ. ಹೋಲ್ಡರ್ ತಮ್ಮ ಮೊದಲ ಸ್ಪೆಲ್‌ನಲ್ಲಿ ಮೂರು ಓವರ್ ಹಾಕಿ 31 ರನ್‌ಗಳನ್ನು ಕೊಟ್ಟು ದುಬಾರಿಯಾಗಿದ್ದರು. ಆದರೆ, ನಿರ್ಣಾಯಕ ಓವರ್‌ನಲ್ಲಿ ಕೇವಲ ಮೂರು ರನ್ ಕೊಟ್ಟು ವಾಷಿಂಗ್ಟನ್ ಸುಂದರ್, ಭುವನೇಶ್ವರ್ ಕುಮಾರ್ ಮತ್ತು ರೊಮೆರಿಯೊ ಶೆಫರ್ಡ್ ವಿಕೆಟ್‌ಗಳನ್ನು ಜೇಬಿಗಿಳಿಸಿದರು.

ಇದರಿಂದಾಗಿ ಸನ್‌ರೈಸರ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 157 ರನ್ ಗಳಿಸಲಷ್ಟೇ ಶಕ್ತವಾಯಿತು.

ಅಲ್ಲದೇ ತಂಡದ ವೇಗಿ ಆವೇಶ್ ಖಾನ್ (24ಕ್ಕೆ4) ಅಮೋಘ ಬೌಲಿಂಗ್ ವ್ಯರ್ಥವಾಗಲಿಲ್ಲ. ಕೇನ್ ವಿಲಿಯಮ್ಸನ್, ಅಭಿಷೇಕ್ ಶರ್ಮಾ, ನಿಕೋಲಸ್ ಪೂರನ್ ಮತ್ತು ಅಬ್ದುಲ್ ಸಮದ್ ವಿಕೆಟ್‌ಗಳನ್ನು ಗಳಿಸಿ ಸನ್‌ರೈಸರ್ಸ್ ತಂಡಕ್ಕೆ ಬಲವಾದ ಪೆಟ್ಟು ನೀಡಿದರು. ಇದರೊಂದಿಗೆ ಕೇನ್ ಬಳಗವು ಸತತ ಎರಡನೇ ಸೋಲು ಅನುಭವಿಸಿತು.

ರಾಹುಲ್, ಹೂಡಾ ಅರ್ಧಶತಕ: ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಸನ್‌ರೈಸರ್ಸ್ ತಂಡದ ಸ್ಪಿನ್ನರ್ ವಾಷಿಂಗ್ಟನ್ ಸುಂದರ್ ಮತ್ತು ಎಡಗೈ ಮಧ್ಯಮವೇಗಿ ಟಿ. ನಟರಾಜನ್ ಲಖನೌ ತಂಡಕ್ಕೆ ಆರಂಭದಲ್ಲಿಯೇ ಪೆಟ್ಟುಕೊಟ್ಟರು.

ಇದರಿಂದಾಗಿ ತಂಡವು ಕೇವಲ 27 ರನ್‌ಗಳಿಗೆ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿತು. ಅದರಲ್ಲಿ ಕ್ವಿಂಟನ್ ಡಿ ಕಾಕ್, ಎವಿನ್ ಲೂಯಿಸ್ ಮತ್ತು ಮನೀಷ್ ಪಾಂಡೆ ಅವರು ಔಟಾದರು. ಇದರಿಂದಾಗಿ ತಂಡದಲ್ಲಿ ಆತಂಕ ನೆಲೆಮಾಡಿತು.

ಆದರೆ ಆರಂಭಿಕ ಬ್ಯಾಟರ್ ರಾಹುಲ್ (68; 50ಎ) ಮತ್ತು ದೀಪಕ್ ಹೂಡಾ (51; 33ಎ) ಜೊತೆಗೂಡಿ ತಂಡದ ಆತಂಕ ದೂರ ಮಾಡಿದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 87 ರನ್‌ಗಳನ್ನು ಸೇರಿಸಿದರು.

ರಾಹುಲ್ ಸ್ವಲ್ಪ ಎಚ್ಚರಿಕೆಯಿಂದ ಇನಿಂಗ್ಸ್ ಬೆಳೆಸಿದರು. ಆದರೆ ಹೂಡಾ ತಮ್ಮ ಎಂದಿನ ಆಕ್ರಮಣಶೀಲ ಶೈಲಿಯಲ್ಲಿಯೇ ರನ್‌ಗಳನ್ನು ಸೂರೆ ಮಾಡಿದರು. 10 ಮತ್ತು 15 ಓವರ್‌ನಲ್ಲಿ ಲಭಿಸಿದ ಜೀವದಾನಗಳನ್ನು ಹೂಡಾ ಸಮರ್ಥವಾಗಿ ಬಳಸಿಕೊಂಡರು. ಮೂರು ಸಿಕ್ಸರ್ ಮತ್ತು ಮೂರು ಬೌಂಡರಿಗಳನ್ನು ಬಾರಿಸಿದ ಅವರು ಮಿಂಚಿದರು.

16ನೇ ಓವರ್‌ನಲ್ಲಿ ಹೂಡಾ ವಿಕೆಟ್ ಗಳಿಸಿದ ರೊಮೆರಿಯೊ ಶೆಫರ್ಡ್ ಸಂಭ್ರಮಿಸಿದರು. ಇದರೊಂದಿಗೆ ಜೊತೆಯಾಟ ಮುರಿದುಬಿತ್ತು.

ಇನ್ನೊಂದೆಡೆ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದ ರಾಹುಲ್ ಇನಿಂಗ್ಸ್ ಮುಂದುವರಿಸಿದರು. ಯುವಪ್ರತಿಭೆ ಆಯುಷ್ ಬದೋನಿಯೊಂದಿಗೆ ಐದನೇ ವಿಕೆಟ್‌ಗೆ 30 ರನ್ ಸೇರಿಸಿದರು. 19ನೇ ಓವರ್‌ನಲ್ಲಿ ರಾಹುಲ್ ಮತ್ತು ಕೃಣಾಲ್ ಔಟಾದರು. ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ ರನ್‌ಔಟ್ ಆಗುವ ಮುನ್ನ ಬದೋನಿ 12 ಎಸೆತಗಳಲ್ಲಿ 19 ರನ್‌ಗಳನ್ನು ಗಳಿಸಿದರು.

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್ 7ಕ್ಕೆ 169 (20 ಓವರ್)

ರಾಹುಲ್ ಎಲ್‌ಬಿಡಬ್ಲ್ಯು ಬಿ ನಟರಾಜನ್ 68 (50ಎ, 4X6, 6X1), ಕ್ವಿಂಟನ್ ಸಿ ವಿಲಿಯಮ್ಸನ್ ಬಿ ವಾಷಿಂಗ್ಟನ್ 1 (4ಎ), ಲೂಯಿಸ್ ಎಲ್‌ಬಿಡಬ್ಲ್ಯು ಬಿ ವಾಷಿಂಗ್ಟನ್ 1 (5ಎ), ಪಾಂಡೆ ಸಿ ಭುವನೇಶ್ವರ್ ಬಿ ಶೆಫರ್ಡ್ 11 (10ಎ, 4X1, 6X1), ಹೂಡಾ ಸಿ ತ್ರಿಪಾಠಿ ಬಿ ಶೆಫರ್ಡ್ 51 (33ಎ, 4X3, 6X3), ಆಯುಷ್ ರನ್‌ಔಟ್ ಪೂರನ್/ಶೆಫರ್ಡ್ 19 (12ಎ. 4X3), ಕೃಣಾಲ್ ಬಿ ನಟರಾಜನ್ 6 (3ಎ, 4X1), ಹೋಲ್ಡರ್ ಔಟಾಗದೆ 8 (3ಎ, 6X1)

ಇತರೆ 4 (ಲೆಗ್‌ಬೈ 1, ವೈಡ್ 3)

ವಿಕೆಟ್ ಪತನ: 1-8 (ಕ್ವಿಂಟನ್ ಡಿಕಾಕ್; 1.4), 2-16 (ಎವಿನ್ ಲೂಯಿಸ್; 3.1), 3-27 (ಮನೀಷ್ ಪಾಂಡೆ; 4.5), 4-114 (ದೀಪಕ್ ಹೂಡಾ; 15.1), 5-144 (ರಾಹುಲ್; 18.1), 6-150 (ಕೃಣಾಲ್ ಪಾಂಡ್ಯ; 18.4), 7-169 (ಆಯುಷ್ 19.6)

ಬೌಲಿಂಗ್: ಭುವನೇಶ್ವರ್ ಕುಮಾರ್ 4-0-25-0, ವಾಷಿಂಗ್ಟನ್ ಸುಂದರ್ 4-0-28-2, ರೊಮೆರಿಯೊ ಶೆಫರ್ಡ್ 4-0-42-2, ಉಮ್ರನ್ ಮಲಿಕ್ 3-0-39-0, ಅಬ್ದುಲ್ ಸಮದ್ 1-0-8-0, ಟಿ ನಟರಾಜನ್ 4-0-26-2

ಸನ್‌ರೈಸರ್ಸ್ ಹೈದರಾಬಾದ್ 9ಕ್ಕೆ 157 (20 ಓವರ್)

ಅಭಿಷೇಕ್ ಸಿ ಮನೀಷ್ ಬಿ ಆವೇಶ್ 13 (11ಎ, 4X2), ವಿಲಿಯಮ್ಸನ್ ಸಿ ಟೈ ಬಿ ಆವೇಶ್ 16 (16ಎ, 4X1, 6X1), ರಾಹುಲ್ ತ್ರಿಪಾಠಿ ಸಿ ರವಿ ಬಿ ಕೃಣಾಲ್ 44 (30ಎ, 4X5, 6X1), ಮರ್ಕರಂ ಸಿ ರಾಹುಲ್ ಬಿ ಕೃಣಾಲ್ 12 (14ಎ), ಪೂರನ್ ಸಿ ಹೂಡಾ ಬಿ ಆವೇಶ್ 34 (24ಎ, 4X3, 6X2), ವಾಷಿಂಗ್ಟನ್ ಸಿ ರಾಹುಲ್ ಬಿ ಹೋಲ್ಡರ್ 18 (14ಎ, 4X1), ಸಮದ್ ಸಿ ಡಿಕಾಕ್ ಬಿ ಆವೇಶ್ 0 (1ಎ), ರೊಮೆರಿಯೊ ಸಿ ಆಯುಷ್ ಬಿ ಹೋಲ್ಡರ್ 8 (8ಎ, 6X1), ಭುವನೇಶ್ವರ್ ಸಿ ಡಿಕಾಕ್ ಬಿ ಹೋಲ್ಡರ್ 1 (2ಎ), ಉಮ್ರನ್ ಔಟಾಗದೆ 1 (1ಎ)

ಇತರೆ (ಲೆಗ್‌ಬೈ 4, ನೋಬಾಲ್ 1, ವೈಡ್ 5) 10

ವಿಕೆಟ್ ಪತನ: 1-25 (ಕೇನ್ ವಿಲಿಯಮ್ಸನ್, 3.3), 2-38 (ಅಭಿಷೇಕ್ ಶರ್ಮಾ, 5.1), 3-82 (ಏಡನ್ ಮರ್ಕರಂ, 10.1), 4-95 (ರಾಹುಲ್ ತ್ರಿಪಾಠಿ, 13.1), 5-143 (ನಿಕೊಲಸ್ ಪೂರನ್, 17.3), 6-143 (ಅಬ್ದುಲ್ ಸಮದ್, 17.4), 7-154 (ವಾಷಿಂಗ್ಟನ್ ಸುಂದರ್, 19.1), 8-156 (ಭುವನೇಶ್ವರ್ ಕುಮಾರ್, 19.4), 9-157 (ರೊಮೆರಿಯೊ ಶೆಫರ್ಡ್, 19.6)

ಬೌಲಿಂಗ್: ಜೇಸನ್ ಹೋಲ್ಡರ್ 4-0-34-3, ಕೃಣಾಲ್ ಪಾಂಡ್ಯ 4-0-27-2, ಆವೇಶ್ ಖಾನ್ 4-0-24-4, ಆ್ಯಂಡ್ರ್ಯು ಟೈ 4-0-39-0, ರವಿ ಬಿಷ್ಣೋಯಿ 4-0-29-0

ಫಲಿತಾಂಶ: ಲಖನೌ ಸೂಪರ್ ಜೈಂಟ್ಸ್‌ಗೆ 12 ರನ್‌ಗಳ ಜಯ

ವಿಕೆಟ್ ಗಳಿಸಿದ ಆವೇಶ್ ಖಾನ್‌ಗೆ ಸಹ ಆಟಗಾರನ ಅಭಿನಂದನೆ– ಪಿಟಿಐ ಚಿತ್ರ

ಬೆಂಗಳೂರಿಗೆ 'ರಾಯಲ್ಸ್' ಚಾಲೆಂಜ್

ದೇವದತ್ತ, ಯಜುವೇಂದ್ರ ಮೇಲೆ ಕಣ್ಣು: ಆತ್ಮವಿಶ್ವಾಸದಲ್ಲಿ ಸಂಜು ಬಳಗ

ಮುಂಬೈ (ಪಿಟಿಐ): ಹೋದ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಕೆಲವು ಪಂದ್ಯಗಳಲ್ಲಿ ಜಯಿಸಲು ಕಾರಣರಾಗಿದ್ದವರು ಕರ್ನಾಟಕದ ದೇವದತ್ತ ಪಡಿಕ್ಕಲ್ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್.

ಆದರೆ ಈ ಬಾರಿ ರಾಜಸ್ಥಾನ ರಾಯಲ್ಸ್ ತಂಡವನ್ನು ಪ್ರತಿನಿಧಿಸುತ್ತಿರುವ ಇವರಿಬ್ಬರೂ ಮಂಗಳವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಬೆಂಗಳೂರು ವಿರುದ್ಧ ಕಣಕ್ಕಿಳಿಯುವರು.

ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ತಂಡವು ಟೂರ್ನಿಯಲ್ಲಿ ಆಡಿರುವ ಎರಡೂ ಪಂದ್ಯಗಳನ್ನು ಗೆದ್ದಿದೆ. ತಂಡದ ಬ್ಯಾಟರ್ ಜಾಸ್ ಬಟ್ಲರ್ ಈ ಸಲ ಶತಕ ಬಾರಿಸಿದ ಮೊದಲಿಗರಾಗಿದ್ದಾರೆ. ಸಂಜು, ಶಿಮ್ರಾನ್ ಹೆಟ್ಮೆಯರ್ ಅವರು ಉತ್ತಮ ಲಯದಲ್ಲಿದ್ದಾರೆ. ನವದೀಪ್ ಸೈನಿ, ಚಾಹಲ್ ಮತ್ತು ಕನ್ನಡಿಗ ಪ್ರಸಿದ್ಧ ಕೃಷ್ಣ ಅವರು ಇರುವ ಬೌಲಿಂಗ್ ಪಡೆಯು ಎದುರಾಳಿಗಳಿಗೆ ಸವಾಲೊಡ್ಡಲು ಸಿದ್ಧವಾಗಿದೆ.

ಆರ್‌ಸಿಬಿಯು ಎರಡು ಪಂದ್ಯಗಳಲ್ಲಿ ಆಡಿದ್ದು ಒಂದು ಸೋತು ಮತ್ತೊಂದರಲ್ಲಿ ಗೆದ್ದಿದೆ. ಆದರೆ ಮೊದಲ ಪಂದ್ಯದಲ್ಲಿ ಬ್ಯಾಟಿಂಗ್‌ನಲ್ಲಿ ಅಬ್ಬರಿಸಿದ್ದ ಫಫ್, ವಿರಾಟ್ ಕೊಹ್ಲಿ, ಅನುಜ್ ರಾವತ್ ಎರಡನೇ ಪಂದ್ಯದಲ್ಲಿ ವೈಫಲ್ಯ ಅನುಭವಿಸಿದ್ದರು. ಆದರೆ ಅನುಭವಿ ದಿನೇಶ್ ಕಾರ್ತಿಕ್ 'ಫಿನಿಷರ್' ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದರು.

ಮೊದಲ ಪಂದ್ಯದಲ್ಲಿ ಇನ್ನೂರಕ್ಕೂ ಹೆಚ್ಚು ರನ್‌ಗಳ ಮೊತ್ತವನ್ನು ಪೇರಿಸಿಯೂ ಸೋತಿದ್ದ ತಂಡವು, ಎರಡನೇ ಪಂದ್ಯದಲ್ಲಿ 128 ರನ್‌ಗಳ ಗುರಿ ಸಾಧಿಸಲು ಕಷ್ಟಪಟ್ಟಿತ್ತು. 19.2 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು ಗೆದ್ದು ನಿಟ್ಟುಸಿರುಬಿಟ್ಟಿತ್ತು. ಆದರೆ ಆ ಪಂದ್ಯದಲ್ಲಿ ಆರ್‌ಸಿಬಿ ಬೌಲರ್‌ಗಳು ಲಯ ಕಂಡುಕೊಂಡಿದ್ದರು. ಶ್ರೀಲಂಕಾದ ವಣಿಂದು ಹಸರಂಗಾ, ಆಕಾಶ್ ದೀಪ್ ಮತ್ತು ಹರ್ಷಲ್ ಪಟೇಲ್ ಕೋಲ್ಕತ್ತ ಬ್ಯಾಟರ್‌ಗಳನ್ನು ಕಾಡಿದ್ದರು. ಇದೀಗ ಅವರ ಮುಂದೆ ರಾಜಸ್ಥಾನದ ಬಲಿಷ್ಠ ಬ್ಯಾಟಿಂಗ್ ಪಡೆಯ ಸವಾಲು ಇದೆ.

ಬಲಾಬಲ

ಪಂದ್ಯಗಳು 25

ಬೆಂಗಳೂರು ಜಯ	12
ರಾಜಸ್ಥಾನ ಜಯ	10
ಫಲಿತಾಂಶವಿಲ್ಲ	3

ಪಂದ್ಯ ಆರಂಭ ರಾತ್ರಿ 7.30 (ಭಾರತೀಯ ಕಾಲಮಾನ)

ಲೈವ್ ಸ್ಟಾರ್ ಸ್ಪೋರ್ಟ್ಸ್

ವಿರಾಟ್ ಕೊಹ್ಲಿ ಮತ್ತು ದಿನೇಶ್ ಕಾರ್ತಿಕ್

ದೇವದತ್ತ ಪಡಿಕ್ಕಲ್

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ರಾಜಸ್ಥಾನ	2	2	0	0	0	4
ಕೋಲ್ಕತ್ತ	3	2	1	0	0	4
ಗುಜರಾತ್	2	2	0	0	0	4
ಪಂಜಾಬ್	3	2	1	0	0	4
ಲಖನೌ	3	2	1	0	0	4
ಡೆಲ್ಲಿ	2	1	1	0	0	2
ಬೆಂಗಳೂರು	2	1	1	0	0	2
ಮುಂಬೈ	2	0	2	0	0	0
ಚೆನ್ನೈ	3	0	3	0	0	0
ಹೈದರಾಬಾದ್	2	0	2	0	0	0

*ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಇಶಾನ್ ಕಿಶನ್	ಮುಂಬೈ	135
ಜಾಸ್ ಬಟ್ಲರ್	ರಾಜಸ್ಥಾನ	135
ದೀಪಕ್	ಲಖನೌ	119

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಉಮೇಶ್	ಕೋಲ್ಕತ್ತ	8
ಆವೇಶ್ ಖಾನ್	ಲಖನೌ	7
ಚಾಹರ್	ಪಂಜಾಬ್	6

ಕ್ರಿಕೆಟ್‌ಗೆ ರಾಸ್ ಟೇಲರ್ ವಿದಾಯ

ಹ್ಯಾಮಿಲ್ಟನ್ (ಎಎಫ್‌ಪಿ): ನ್ಯೂಜಿಲೆಂಡ್ ಕ್ರಿಕೆಟ್ ತಂಡದ ಆಟಗಾರ ರಾಸ್ ಟೇಲರ್ 16 ವರ್ಷಗಳ ವೃತ್ತಿ ಜೀವನಕ್ಕೆ ವಿದಾಯ ಹೇಳಿದರು.

ಸೋಮವಾರ ನೆದರ್ಲೆಂಡ್ಸ್ ವಿರುದ್ಧ ನಡೆದ ಏಕದಿನ ಕ್ರಿಕೆಟ್ ಪಂದ್ಯದ ನಂತರ ಟೇಲರ್ ಅವರಿಗೆ ಬೀಳ್ಕೊಡುಗೆ ನೀಡಲಾಯಿತು. ನ್ಯೂಜಿಲೆಂಡ್ ಕ್ರಿಕೆಟ್ ಮುಖ್ಯಸ್ಥ ಮಾರ್ಟಿನ್ ಸ್ನೇಡನ್ ಅವರು ಟೇಲರ್ ಅವರನ್ನು ಸನ್ಮಾನಿಸಿದರು.

ಸೆಡಾನ್ ಪಾರ್ಕ್‌ನಲ್ಲಿ ನಡೆದ ಪಂದ್ಯದಲ್ಲಿ ಆತಿಥೇಯ ನ್ಯೂಜಿಲೆಂಡ್ ತಂಡವು 115 ರನ್‌ಗಳಿಂದ ಜಯಿಸಿತು. ತಮ್ಮ ವೃತ್ತಿಜೀವನದ ಕೊನೆಯ ಇನಿಂಗ್ಸ್‌ನಲ್ಲಿ 14 ರನ್ ಗಳಿಸಿ ಔಟಾದರು.

ಹೋದ ಜನವರಿಯಲ್ಲಿ ಬಾಂಗ್ಲಾದೇಶ ವಿರುದ್ಧದ ಸರಣಿಯ ನಂತರ ಟೆಸ್ಟ್ ಕ್ರಿಕೆಟ್‌ಗೆ ಟೇಲರ್ ವಿದಾಯ ಹೇಳಿದ್ದರು.

2006ರಿಂದ ನ್ಯೂಜಿಲೆಂಡ್ ತಂಡದ ಪ್ರಮುಖ ಬ್ಯಾಟರ್ ಆಗಿದ್ದರು ಟೇಲರ್. ಟೆಸ್ಟ್ ಮತ್ತ ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಹಲವು ದಾಖಲೆಗಳನ್ನು ಬರೆದಿದ್ದಾರೆ. 2015ರಲ್ಲಿ ಅವರು ಪರ್ತ್‌ನಲ್ಲಿ ಗಳಿಸಿದ್ದ 290 ರನ್‌ಗಳು ನ್ಯೂಜಿಲೆಂಡ್ ಪರವಾಗಿ ದಾಖಲಾಗಿರುವ ವೈಯಕ್ತಿಕ ಶ್ರೇಷ್ಠ ಸ್ಕೋರ್ ಆಗಿದೆ.

'ಹದಿನಾರು ವರ್ಷಗಳ ಈ ಪಯಣದಲ್ಲಿ ಹಲವಾರು ಮಧುರ ಕ್ಷಣಗಳನ್ನು ಅನುಭವಿಸಿದ್ದೇನೆ. ಸುಂದರ ನೆನಪುಗಳು ನನ್ನೊಂದಿಗೆ ಇವೆ. ಕ್ರಿಕೆಟ್ ಈಗ ಜಾಗತಿಕ ಕ್ರೀಡೆಯಾಗಿ ಬೆಳೆಯುತ್ತಿದೆ. ಇಂದಿನ ಎಲ್ಲ ಯುವ ಆಟಗಾರರಿಗೆ ಮತ್ತು ನೆದರ್ಲೆಂಡ್ಸ್‌ನಂತಹ ಹೊಸ ತಂಡಗಳಿಗೆ ಉತ್ತಮ ಭವಿಷ್ಯ ಇದೆ. ನಾನು ಕ್ರಿಕೆಟಿಗನಾಗಿ ಬೆಳೆಯಲು ಸಹಾಯ ಮಾಡಿದ ನ್ಯೂಜಿಲೆಂಡ್ ಸಂಸ್ಥೆ ಮತ್ತು ಅಭಿಮಾನಿಗಳಿಗೆ ಚಿರಋಣಿಯಾಗಿರುವೆ' ಎಂದು ಟೇಲರ್ ಈ ಸಂದರ್ಭದಲ್ಲಿ ಹೇಳಿದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 50 ಓವರ್‌ಗಳಲ್ಲಿ 8ಕ್ಕೆ 333 (ಮಾರ್ಟಿನ್ ಗಪ್ಟಿಲ್ 106, ವಿಲ್ ಯಂಗ್ 120, ಫ್ರೆಡ್ ಕ್ಲಾಸನ್ 62ಕ್ಕೆ2, ಲಾಗನ್ ವ್ಯಾನ್ ಬೀಕ್ 58ಕ್ಕೆ2, ಕ್ಲೇಟನ್ ಫ್ಲಾಯ್ಡ್ 41ಕ್ಕೆ2) ನೆದರ್ಲೆಂಡ್ಸ್: 42.3 ಓವರ್‌ಗಳಲ್ಲಿ 218 (ಸ್ಟೀಫನ್ ಮೈಬರ್ಗ್ 64, ವಿಕ್ರಂಜೀತ್ ಸಿಂಗ್ 25, ಲಾಗನ್ ವ್ಯಾನ್ ಬೀಕ್ 32, ಮ್ಯಾಟ್ ಹೆನ್ರಿ 36ಕ್ಕೆ4, ಡಫ್ ಬ್ರೇಸ್‌ವೆಲ್ 23ಕ್ಕೆ2) ಫಲಿತಾಂಶ: ನ್ಯೂಜಿಲೆಂಡ್‌ಗೆ 115 ರನ್‌ಗಳ ಜಯ. 3-0ಯಿಂದ ಸರಣಿ ಜಯ.

ಆಡಿದ ಪ್ರಮುಖ ತಂಡಗಳು: ನ್ಯೂಜಿಲೆಂಡ್, ರಾಯಲ್ ಚಾಲೆಂಜರ್ಸ್ ಬೆಂಗಳೂರು, ರಾಜಸ್ಥಾನ ರಾಯಲ್ಸ್, ಡೆಲ್ಲಿ ಕ್ಯಾಪಿಟಲ್ಸ್, ಪುಣೆ ವಾರಿಯರ್ಸ್, ಟ್ರಿಬಾಂಗೊ ನೈಟ್‌ರೈಡರ್ಸ್, ಸೇಂಟ್ ಲೂಸಿಯಾ ಕಿಂಗ್ಸ್, ವಿಶ್ವ ಇಲೆವನ್.

ನ್ಯೂಜಿಲೆಂಡ್ ಕ್ರಿಕೆಟ್ ತಂಡದ ಆಟಗಾರ ರಾಸ್ ಟೇಲರ್ ಅವರು ಬೀಳ್ಕೊಡುಗೆ ಸಮಾರಂಭದಲ್ಲಿ ತಮ್ಮ ಮಗಳು ಮೆಕೆಂಜಿ, ಮಗ ಜಾಂಟಿ ಮತ್ತು ಪತ್ನಿ ವಿಕ್ಟೋರಿಯಾ ಬ್ರೌನ್ ಅವರೊಂದಿಗೆ —ಎಎಫ್‌ಪಿ ಚಿತ್ರ

ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ಟೆಸ್ಟ್	112	7684	290	19	35
ಏಕದಿನ	236	8602	181	21	51
ಟಿ20	102	1909	63	-	7
ಐಪಿಎಲ್	55	1017	81	-	3

ಪದಾರ್ಪಣೆ

ಟೆಸ್ಟ್	2007	ದಕ್ಷಿಣ ಆಫ್ರಿಕಾ ಎದುರು	ವಾಂಡರರ್ಸ್
ಏಕದಿನ	2006	ವೆಸ್ಟ್ ಇಂಡೀಸ್ ವಿರುದ್ಧ	ಮೆಕ್ಲೀನ್ ಪಾರ್ಕ್
ಟಿ20	2006	ಶ್ರೀಲಂಕಾ ಎದುರು	ಸ್ಕೈಕ್ರೀಡಾಂಗಣ

ಕೊನೆ ಪಂದ್ಯ

ಟೆಸ್ಟ್	2022	ಬಾಂಗ್ಲಾದೇಶ ಎದುರು	ಹೆಗ್ಲಿ ಓವಲ್
ಏಕದಿನ	2022	ನೆದರ್ಲೆಂಡ್ಸ್ ಎದುರು	ಹ್ಯಾಮಿಲ್ಟನ್
ಟಿ20	2020	ವೆಸ್ಟ್ ಇಂಡೀಸ್ ಎದುರು	ಬೇ ಓವಲ್

'ಅಮೂಲ್ಯ ತಂಡ': ಭಾರತದವರಿಗೆ ಇಲ್ಲ ಸ್ಥಾನ

ದುಬೈ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಆಯ್ಕೆ ಮಾಡಿರುವ ಮಹಿಳೆಯರ 'ಅಮೂಲ್ಯ ತಂಡ'ದಲ್ಲಿ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾದ ನಾಲ್ವರು ಆಟಗಾರ್ತಿಯರು ಸ್ಥಾನ ಗಳಿಸಿದ್ದಾರೆ. ಆದರೆ ಭಾರತದ ಒಬ್ಬ ಆಟಗಾರ್ತಿಗೂ ಸ್ಥಾನ ಸಿಕ್ಕಿಲ್ಲ.

ಭಾನುವಾರ ನಡೆದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಆಸ್ಟ್ರೇಲಿಯಾ ತಂಡದ ಮೆಗ್‌ಲ್ಯಾನಿಂಗ್ ಐಸಿಸಿ ತಂಡಕ್ಕೂ ನಾಯಕಿಯಾಗಿ ನೇಮಕವಾಗಿದ್ದಾರೆ. ಟೂರ್ನಿಯ ಶ್ರೇಷ್ಠ ಆಟಗಾರ್ತಿ ಗೌರವ ಗಳಿಸಿದ ವಿಕೆಟ್‌ಕೀಪರ್-ಬ್ಯಾಟರ್ ಅಲೀಸಾ ಹೀಲಿ, ರಚೆಲ್ ಹೇಯ್ನ್ಸ್ ಮತ್ತು ಬೆತ್ ಮೂನಿ ಸ್ಥಾನ ಗಿಟ್ಟಿಸಿದ್ದಾರೆ. ಟೂರ್ನಿಯಲ್ಲಿ ಅಲಿಸಾ (509 ರನ್) ಮತ್ತು ರಚೆಲ್ (497 ರನ್) ಅತಿ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ಕ್ರಮವಾಗಿ ಮೊದಲ ಹಾಗೂ 2ನೇ ಸ್ಥಾನದಲ್ಲಿದ್ದಾರೆ.

ಈ ಟೂರ್ನಿಯ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಸೋತ ಇಂಗ್ಲೆಂಡ್ ತಂಡದ ಇಬ್ಬರು, ದಕ್ಷಿಣ ಆಫ್ರಿಕಾದ ಮೂವರು, ವೆಸ್ಟ್ ಇಂಡೀಸ್ ಮತ್ತು ಬಾಂಗ್ಲಾದೇಶ ತಂಡಗಳ ತಲಾ ಒಬ್ಬರು ಆಯ್ಕೆಯಾಗಿದ್ದಾರೆ.

ತಂಡ: ಮೆಗ್ ಲ್ಯಾನಿಂಗ್ (ನಾಯಕಿ), ಅಲೀಸಾ ಹೀಲಿ (ವಿಕೆಟ್‌ಕೀಪರ್), ರಚೆಲ್ ಹೇಯ್ನ್ಸ್, ಬೆತ್ ಮೂನಿ (ಎಲ್ಲರೂ ಆಸ್ಟ್ರೇಲಿಯಾ), ಲಾರಾ ವೊಲ್ವಾರ್ಡ್ತ್, ಮರಿಝೇನ್ ಕಾಪ್, ಶಬ್ನಿಮ್ ಇಸ್ಮಾಯಿಲ್ (ದಕ್ಷಿಣ ಆಫ್ರಿಕಾದವರು), ಸೋಫಿ ಎಕ್ಲೆಸ್ಟೋನ್, ನಥಾಲಿ ಶಿವರ್ (ಇಂಗ್ಲೆಂಡ್), ಹೇಯಲಿ ಮ್ಯಾಥ್ಯೂಸ್ (ವೆಸ್ಟ್ ಇಂಡೀಸ್‌ವರು), ಸಲ್ಮಾ ಖಾತೂನ್ (ಬಾಂಗ್ಲಾದೇಶ).

ಜನತೆಗೆ ದರ ಏರಿಕೆಯ ಬರೆ

ಒಂದನೇ ಪುಟದಿಂದ

'ಕೋವಿಡ್-19 ಸಾಂಕ್ರಾಮಿಕ ಕಾಯಿಲೆಯಿಂದಾಗಿ ಆರ್ಥಿಕ ವರ್ಷ 2021ರಲ್ಲಿ ವಿದ್ಯುತ್ ಮಾರಾಟವು 7228.65 ದಶಲಕ್ಷ ಯೂನಿಟ್‌ಗಳಷ್ಟು ಗಣನೀಯವಾಗಿ ಇಳಿಕೆಯಾಗಿತ್ತು. ಇದರ ಪರಿಣಾಮ ಅನುಮೋದಿಸಿದ ಮೊತ್ತಕ್ಕಿಂತ ₹6182.84 ಕೋಟಿಗಳಷ್ಟು ಆದಾಯದ ಕೊರತೆಯಾಗಿದೆ. ಆರ್ಥಿಕ ವರ್ಷ 2021ರಲ್ಲಿ ವಿದ್ಯುತ್ ಉಪಯೋಗಿಸದಿದ್ದರೂ, ಶಾಖೋತ್ಪನ್ನ ಕೇಂದ್ರಗಳಿಗೆ ನಿಗದಿತ ಶುಲ್ಕ ಪಾವತಿಯಿಂದಾಗಿ ಪ್ರತಿ ಯೂನಿಟ್ ವಿದ್ಯುತ್ ಖರೀದಿ ವೆಚ್ಚವು 31 ಪೈಸೆಗಳಷ್ಟು ಹೆಚ್ಚಾಗಿದೆ' ಎಂದು ವಿವರಿಸಿದರು.

'ಆರ್ಥಿಕ ವರ್ಷ 2021ರ ಆದಾಯ ಕೊರತೆಯಿಂದ ಪ್ರತಿ ಯೂನಿಟ್‌ಗೆ 27 ಪೈಸೆಯಷ್ಟು ದರ ಹೆಚ್ಚಿಸಲು ಕಾರಣವಾಗಿದೆ. ಪ್ರಸಕ್ತ ಸಾಲಿನಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ಖರೀದಿ ವೆಚ್ಚ, ಕಾರ್ಯನಿರ್ವಹಣೆ ವೆಚ್ಚ ಮತ್ತು ಸಾಲಗಳಿಂದಾಗಿ ದರ ಏರಿಸಲಾಗಿದೆ' ಎಂದು ವಿವರಿಸಿದರು.

'ವಿದ್ಯುತ್ ಹೆಚ್ಚು ಉತ್ಪಾದನೆಯಾಗುತ್ತಿದೆ ಎನ್ನುವುದು ಸುಳ್ಳು. ಅತಿ ಹೆಚ್ಚು ಉತ್ಪಾದನೆಯಾಗುವ ವಿದ್ಯುತ್ ಅನ್ನು ಸಂಗ್ರಹಿಸಲು ಇನ್ನೂ ಸಮರ್ಪಕ ವ್ಯವಸ್ಥೆ ಇಲ್ಲ. ಬೇಡಿಕೆಯ ಅವಧಿಯಲ್ಲಿ ಹೆಚ್ಚು ಉತ್ಪಾದನೆಯಾಗಿ ನಷ್ಟವಾಗುತ್ತದೆ. ಇದಕ್ಕೆ ಪರಿಹಾರ ಕಂಡುಕೊಳ್ಳಲು ಶರಾವತಿಯಲ್ಲಿ ಪಂಪ್ ಸ್ಟೋರೇಜ್ ಸ್ಥಾಪಿಸುವ ಉದ್ದೇಶವಿದೆ. ಈ ಯೋಜನೆಗೆ ಪರಿಸರ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅನುಮತಿ ನೀಡಬೇಕು. ಈ ರೀತಿಯ ಯೋಜನೆಗಳು ಅನುಷ್ಠಾನವಾದರೆ ಕಲ್ಲಿದ್ದಲು ಶಾಖೋತ್ಪನ್ನ ಕೇಂದ್ರಗಳನ್ನೇ ಮುಚ್ಚಿಸಬಹುದು' ಎಂದರು.

ಎಲೆಕ್ಟ್ರಿಕ್ ವಾಹನಗಳಿಗೆ ರಿಯಾಯಿತಿ

ಎಲೆಕ್ಟ್ರಿಕ್ ವಾಹನಗಳ ಬಳಕೆ ಉತ್ತೇಜಿಸಲು ಬ್ಯಾಟರಿ ಚಾರ್ಜಿಂಗ್ ದರಗಳನ್ನು ಹೆಚ್ಚಿಸಿಲ್ಲ. ಈಗಿರುವ ದರಗಳೇ ಮುಂದುವರಿಯಲಿವೆ.

ಅನಿಯಮಿತವಾಗಿ ವಿದ್ಯುತ್ ಕಡಿತಗೊಳಿಸಿದರೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ದಂಡ ವಿಧಿಸಲು ಉದ್ದೇಶಿಸಲಾಗಿದೆ. ಈ ಬಗ್ಗೆ ವಿವರ ನೀಡುವಂತೆ ಸೂಚಿಸಲಾಗಿದೆ ಎಂದು ಅಧ್ಯಕ್ಷ ಎಚ್.ಎನ್. ಮಂಜುನಾಥ್ ತಿಳಿಸಿದರು.

ಎಂಎಸ್‌ಎಂಇಗಳಿಗೆ ರಿಯಾಯಿತಿ

ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಒಂದು ವರ್ಷದವರೆಗೆ ಮಾಸಿಕ ಇಂಧನ ಬಳಕೆಯಲ್ಲಿ ರಿಯಾಯಿತಿ ನೀಡಲು ಆಯೋಗ ನಿರ್ಧರಿಸಿದೆ.

ಇಂಧನ ಬಳಕೆಯಲ್ಲಿ ಪ್ರತಿ ಯೂನಿಟ್‌ಗೆ 50 ಪೈಸೆ ರಿಯಾಯಿತಿ ದೊರೆಯಲಿದೆ. ಕೋವಿಡ್–19 ದುಷ್ಪರಿಣಾಮಗಳಿಂದ ಚೇತರಿಸಿಕೊಳ್ಳಲು ಈ ರಿಯಾಯಿತಿ ಪ್ರಕಟಿಸಲಾಗಿದೆ.

ಮಂಜುಗಡ್ಡೆ ಉತ್ಪಾದನಾ ಘಟಕಗಳು ಹಾಗೂ ಶೀತಲೀಕರಣ ಘಟಕಗಳಿಗೆ ವರ್ಷದಲ್ಲಿ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ ₹1ರಷ್ಟು ರಿಯಾಯಿತಿ ಘೋಷಿಸಲಾಗಿದೆ.

ಪಂಪ್‌ಸೆಟ್‌ಗಳಿಗೆ ಮೀಟರ್

ರಾಜ್ಯದಲ್ಲಿ ಒಟ್ಟು 33.15 ಲಕ್ಷ ಕೃಷಿ ಪಂಪ್‌ಸೆಟ್‌ಗಳಿದ್ದು, ಪ್ರಸಕ್ತ ಆರ್ಥಿಕ ವರ್ಷ ₹13,019 ಕೋಟಿ ಸಬ್ಸಿಡಿ ನೀಡಬೇಕಾಗುತ್ತದೆ ಎಂದು ಅಂದಾಜಿಸಲಾಗಿದೆ.

ಕೃಷಿ ಪಂಪ್‌ಸೆಟ್‌ಗಳಿಗೆ ತೆಲಂಗಾಣ ಮಾದರಿ ಮೀಟರ್ ಅಳವಡಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ. ಆಗ ಎಷ್ಟು ವಿದ್ಯುತ್ ಬಳಕೆಯಾಗುತ್ತದೆ ಎನ್ನುವ ವಿವರಗಳು ದೊರೆಯುತ್ತವೆ ಎಂದು ಎಚ್.ಎನ್. ಮಂಜುನಾಥ್ ವಿವರಿಸಿದರು.

'ಬಡವರ ಮೇಲೆ ಬಿಜೆಪಿ ಸರ್ಕಾರ ಬೆಲೆ ಏರಿಕೆ ಸಮರ ಸಾರಿದೆ. ಆತ್ಮಸಾಕ್ಷಿ ಇಲ್ಲದ ಈ ಸರ್ಕಾರಕ್ಕೆ ಹಣ ಮಾಡುವುದೇ ದಂಧೆ ಆಗಿಬಿಟ್ಟಿದೆ.

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ದರ ಪರಿಷ್ಕರಣೆ ಕೆಇಆರ್‌ಸಿಗೆ ಸಂಬಂಧಪಟ್ಟಿದ್ದು. ಇದರಲ್ಲಿ ಸರ್ಕಾರದ ಪಾತ್ರವಿಲ್ಲ. ಆದರೆ, ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ರಿಯಾಯಿತಿ ನೀಡುವಂತೆ ಮನವಿ ಮಾಡಿದ್ದೆ.

ವಿ.ಸುನೀಲ್ ಕುಮಾರ್ ಇಂಧನ ಸಚಿವ

ಅತಿಸಣ್ಣ, ಸಣ್ಣ ಉದ್ದಿಮೆಗಳಿಗೆ ಪ್ರತಿ ಯೂನಿಟ್‌ಗೆ 50 ಪೈಸೆ ರಿಯಾಯಿತಿಯನ್ನು ಒಂದು ವರ್ಷದವರೆಗೆ ಪ್ರಕಟಿಸಿರುವುದು ಸ್ವಾಗತಾರ್ಹ.

ಪಿ. ಶಶಿಧರ್, ಕಾಸಿಯಾ ಆಡಳಿತ ಅಧಿಕಾರಿ

ಇಂಧನ ಬೆಲೆಯನ್ನು ಎರಡರಿಂದ ಮೂರು ವರ್ಷ ಹೆಚ್ಚಿಸಬಾರದು ಎಂದು ಕೆಇಆರ್‌ಸಿಗೆ ಮನವಿ ಮಾಡಲಾಗಿತ್ತು. ಈಗ ಬೆಲೆ ನಿಗದಿಸಿರುವುದು ಸ್ಪರ್ಧಾತ್ಮಕವಾಗಿದೆ.

ಐ.ಎಸ್. ಪ್ರಸಾದ್, ಎಫ್‌ಕೆಸಿಸಿಐ ಅಧ್ಯಕ್ಷ

ವಿದ್ಯುತ್ ಖರೀದಿ, ಪೂರೈಕೆ ಖರ್ಚು ವಿವರ

₹6.43 ಪ್ರತಿ ಯೂನಿಟ್ ಖರೀದಿಯ ವೆಚ್ಚ

₹8.43 ಪ್ರತಿ ಯೂನಿಟ್ ಪೂರೈಕೆ ವೆಚ್ಚ

13% ವಿದ್ಯುತ್ ವಿತರಣೆ ಮತ್ತು ಸರಬರಾಜು ನಷ್ಟ

15 ಸಾವಿರ ಮೆಗಾವಾಟ್ ನವೀಕರಿಸಬಹುದಾದ ಇಂಧನ ಉತ್ಪಾದನೆ

ಪ್ರಶಸ್ತಿ ಮೇಲೆ ಸಿಂಧು, ಸೇನ್ ಕಣ್ಣು

ಕೊರಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ಕಣದಲ್ಲಿ ಸೈನಾ ನೆಹ್ವಾಲ್

ಸಂಚಿಯೊನ್, ಕೊರಿಯಾ (ಪಿಟಿಐ): ಲಕ್ಷ್ಯ ಸೇನ್ ಮತ್ತು ಪಿ.ವಿ.ಸಿಂಧು ಅವರು ಕೊರಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲು ಮುನ್ನಡೆಸಲಿದ್ದಾರೆ.

ಜರ್ಮನ್ ಓಪನ್ ಹಾಗೂ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ತಲುಪಿದ್ದ ಲಕ್ಷ್ಯ ಅವರು ಸದ್ಯ ವೃತ್ತಿಜೀವನದ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ. ಈ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಅವರಿಗೆ ಚೀನಾದ ಲು ಗುವಾಂಗ್ ಜು ಸವಾಲು ಎದುರಾಗಿದೆ.

ಆದಾಗ್ಯೂ, ಪುರುಷರ ಸಿಂಗಲ್ಸ್ ಡ್ರಾದಲ್ಲಿ ಕಠಿಣ ಸ್ಪರ್ಧಿಗಳಾದ ಇಂಡೊನೇಷ್ಯಾದ ಆಂಥೋನಿ ಗಿಂಟಿಂಗ್ (ಅಗ್ರ ಶ್ರೇಯಾಂಕ) ಮತ್ತು ಜೊನಾಥನ್ ಕ್ರಿಸ್ಟಿ (ಮೂರನೇ ಶ್ರೇಯಾಂಕ), ವಿಶ್ವ ಚಾಂಪಿಯನ್ ಮತ್ತು ನಾಲ್ಕನೇ ಶ್ರೇಯಾಂಕದ ಲೋಹ್ ಕೀನ್ ಯೂ ಇರುವುದರಿಂದ ಸೇನ್ ಪ್ರಶಸ್ತಿ ಹಾದಿ ಹಾದಿ ಅಷ್ಟು ಸುಲಭವಿಲ್ಲ. ಎರಡನೇ ಶ್ರೇಯಾಂಕದ, ಮಲೇಷ್ಯಾದ ಲೀ ಝಿ ಜಿಯಾ ಮತ್ತು ಎಂಟನೇ ಶ್ರೇಯಾಂಕದ ಥಾಯ್ ಕುನ್ಲಾವುತ್ ವಿಟಿದ್ಸನ್ ಕೂಡ ತೀವ್ರ ಸ್ಪರ್ಧೆಯೊಡ್ಡುವ ನಿರೀಕ್ಷೆಯಿದೆ.

ಪಿ.ವಿ.ಸಿಂಧು ಅವರು ಈ ವರ್ಷ ಸಯ್ಯದ್ ಮೋದಿ ಅಂತರರಾಷ್ಟ್ರೀಯ ಟೂರ್ನಿ ಮತ್ತು ಸ್ವಿಸ್ ಓಪನ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಇಲ್ಲಿಯೂ ಉತ್ತಮ ಲಯ ಮುಂದುವರಿಸುವ ಛಲದಲ್ಲಿದ್ದು, ಮಹಿಳಾ ಸಿಂಗಲ್ಸ್ ಮೊದಲ ಪಂದ್ಯದಲ್ಲಿ ಅಮೆರಿಕದ ಲಾರೆನ್ ಲ್ಯಾಮ್ ಎದುರು ಕಣಕ್ಕಿಳಿಯಲಿದ್ದಾರೆ.

ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ ನೆಹ್ವಾಲ್ ಕೂಡ ಟೂರ್ನಿಯಲ್ಲಿ ಆಡುತ್ತಿದ್ದು, ಅವರಿಗೆ ಜಪಾನ್‌ನ ಅಸುಕಾ ತಕಹಶಿ ಸವಾಲು ಎದುರಾಗಿದೆ.

ಪುರುಷರ ಸಿಂಗಲ್ಸ್‌ನಲ್ಲಿ ಎಚ್.ಎಸ್. ಪ್ರಣಯ್ ಮಲೇಷ್ಯಾದ ಚೀಮ್ ಜೂನ್ ವೇಯ್ ಎದುರು ಆಡಲಿದ್ದರೆ, ಕಿದಂಬಿ ಶ್ರೀಕಾಂತ್ ಕೂಡ ಅದೇ ದೇಶದ ಇನ್ನೋರ್ವ ಆಟಗಾರ ಲಿಯೆವ್ ಡರೆನ್ ಅವರನ್ನು ಮೊದಲ ಪಂದ್ಯದಲ್ಲಿ ಎದುರಿಸಲಿದ್ದಾರೆ. ಕಿರಣ್ ಜಾರ್ಜ್ ಕೊರಿಯಾದ ಲೀ ಡಾಂಗ್ ಅವರಿಗೆ ಮುಖಾಮುಖಿಯಾಗಲಿದ್ದಾರೆ.

ಪಿ.ವಿ.ಸಿಂಧು— ಪಿಟಿಐ ಚಿತ್ರ

ದೇವಾಲಯದ ಭದ್ರತಾ ಸಿಬ್ಬಂದಿ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ತವರು ಪಟ್ಟಣ ಗೋರಖ್‌ಪುರದ ಪ್ರಸಿದ್ಧ ಗೋರಖನಾಥ ದೇವಾಲಯದ ಪ್ರವೇಶ ದ್ವಾರದಲ್ಲಿ ಇಬ್ಬರು ಭದ್ರತಾ ಸಿಬ್ಬಂದಿ ಮೇಲೆ ಯುವಕನೊಬ್ಬ ಹರಿತವಾದ ಆಯುಧದಿಂದ ಭಾನುವಾರ ಸಂಜೆ ದಾಳಿ ಮಾಡಿದ್ದಾನೆ.

'ಘಟನೆಯ ಹಿಂದೆ ಭಯೋತ್ಪಾದಕರ ಪಿತೂರಿ ಇರಬಹುದು. ಯಾವುದನ್ನೂ ತಳ್ಳಿಹಾಕುವಂತಿಲ್ಲ' ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಸೋಮವಾರ ಹೇಳಿದ್ದಾರೆ.

'ಘಟನೆಯ ಸಮಗ್ರ ತನಿಖೆ ನಡೆಸಲಾಗುವುದು. ರಾಜ್ಯ ಪೊಲೀಸ್‌ನ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ತನಿಖೆ ನಡೆಸುತ್ತಿದೆ. ತನಿಖೆಗೆ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಸಹಾಯವನ್ನು ಪಡೆಯುವ ಸಾಧ್ಯತೆ ಇದೆ' ಎಂದು ಅವರು ಹೇಳಿದ್ದಾರೆ.

ಕೆಮಿಕಲ್ ಎಂಜಿನಿಯರ್ ಆಗಿರುವ ಗೋರಖ್‌ಪುರದ ನಿವಾಸಿ ಮುರ್ತಾಜಾ ಅಬ್ಬಾಸಿ ದಾಳಿ ನಡೆಸಿದ ಯುವಕ ಎಂದು ಗುರುತಿಸಲಾಗಿದೆ. ಅಬ್ಬಾಸಿಯನ್ನು ಬಂಧಿಸಲಾಗಿದೆ.

ಲಖಿಂಪುರ: ಮಿಶ್ರಾ ಜಾಮೀನು; ಆದೇಶ ಕಾಯ್ದಿರಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದಲ್ಲಿ ಕೇಂದ್ರ ಸಚಿವರ ಪುತ್ರ ಆಶೀಶ್ ಮಿಶ್ರಾ ಅವರಿಗೆ ನೀಡಿದ್ದ ಜಾಮೀನು ರದ್ದತಿ ಕೋರಿದ್ದ ಅರ್ಜಿಗೆ ಸಂಬಂಧಿಸಿದ ಆದೇಶವನ್ನು ಸುಪ್ರೀಂ ಕೋರ್ಟ್ ಕಾಯ್ದಿರಿಸಿದೆ.

ಪ್ರಕರಣವನ್ನು ಕುರಿತ ಅಲಹಾಬಾದ್ ಹೈಕೋರ್ಟ್ ಆದೇಶವನ್ನು ಉಲ್ಲೇಖಿಸಿರುವ ಸುಪ್ರೀಂ ಕೋರ್ಟ್ ನ್ಯಾಯಪೀಠವು, ಜಾಮೀನು ನೀಡುವ ಮೊದಲು ಮರಣೋತ್ತರ ಪರೀಕ್ಷೆ ವರದಿ ಸೇರಿದಂತೆ ಸಾಕ್ಷಿಗಳನ್ನು ವಿವರವಾಗಿ ಪರಿಶೀಲಿಸುವ ಅಗತ್ಯವನ್ನು ಪ್ರಶ್ನಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ಹಿಮಾಕೊಹ್ಲಿ ಅವರಿದ್ದ ನ್ಯಾಯಪೀಠವು ಅರ್ಜಿಯ ವಿಚಾರಣೆ ನಡೆಸುತ್ತಿದೆ.

ವಿನಯ್ ನೂತನ ವಿದೇಶಾಂಗ ಕಾರ್ಯದರ್ಶಿ

ನವದೆಹಲಿ (ಪಿಟಿಐ): ಭಾರತದ ನೂತನ ವಿದೇಶಾಂಗ ಕಾರ್ಯದರ್ಶಿಯಾಗಿ ವಿನಯ್ ಮೋಹನ್ ಕ್ವಾತ್ರಾ ನೇಮಕಗೊಂಡಿದ್ದಾರೆ. ಇದೇ 30ರಂದು ನಿವೃತ್ತರಾಗಲಿರುವ ಹರ್ಷವರ್ಧನ ಶೃಂಗ್ಲಾ ಅವರ ಸ್ಥಾನದಲ್ಲಿ ಕ್ವಾತ್ರಾ ಅಧಿಕಾರ ವಹಿಸಿಕೊಳ್ಳುವರು.

1988ನೇ ತಂಡದ ಐಎಫ್‌ಎಸ್ ಅಧಿಕಾರಿಯಾಗಿರುವ ಅವರು ಸದ್ಯ ನೇಪಾಳದಲ್ಲಿ ಭಾರತದ ರಾಯಭಾರಿಯಾಗಿದ್ದಾರೆ. ಈ ಹಿಂದೆ ಅವರು ಫ್ರಾನ್ಸ್‌ನಲ್ಲಿ ಭಾರತದ ರಾಯಭಾರಿಯಾಗಿ ಆಗಸ್ಟ್ 2017ರಿಂದ ಫೆಬ್ರುವರಿ 2020ರವರೆಗೂ ಕಾರ್ಯನಿರ್ವಹಿಸಿದ್ದರು.

2020–21ನೇ ಸಾಲಿನ ರಾಜ್ಯ ಕ್ರೀಡಾ ಪ್ರಶಸ್ತಿಗಳು ಪ್ರಕಟ: ಗೋಪಾಲ ನಾಯ್ಕಗೆ ಗೌರವ

ಕರುಣ್ ನಾಯರ್, ದಾನಮ್ಮಗೆ ಏಕಲವ್ಯ

ಪ್ರಜಾವಾಣಿ ವಾರ್ತೆ

ದಾನಮ್ಮ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಆಟಗಾರ ಕರುಣ್ ನಾಯರ್ ಹಾಗೂ ಸೈಕ್ಲಿಂಗ್ ಪಟು ದಾನಮ್ಮ ಚಿಚಕಂಡಿ ಸೇರಿದಂತೆ 15 ಮಂದಿ ಅಥ್ಲೀಟ್‌ಗಳಿಗೆ ಏಕಲವ್ಯ ಪ್ರಶಸ್ತಿ ಸಂದಿದೆ.

ಸೋಮವಾರ ವಿಕಾಸಸೌಧದಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಅವರು 2020–21ನೇ ಸಾಲಿನ ರಾಜ್ಯ ಕ್ರೀಡಾ ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಬಿಡುಗಡೆ ಮಾಡಿದರು.

ಅಥ್ಲೀಟ್ ಜೀವನ್ ಕೆ.ಎಸ್, ಈಜುಪಟು ಎಸ್.ಪಿ.ಲಿಖಿತ್, ಹಾಕಿ ಆಟಗಾರ ಪ್ರಧಾನ್ ಸೋಮಣ್ಣ ಏಕಲವ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅಥ್ಲೀಟ್ ಜಿ.ವಿ. ಗಾಂವಕರ್, ಕಯಾಕಿಂಗ್ ಮತ್ತು ಕೆನೊಯಿಂಗ್ ಪಟು ಕ್ಯಾಪ್ಟನ್ ದಿಲೀಪ್ ಕುಮಾರ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗಿದೆ.

ಅಟ್ಯಾಪಟ್ಯಾ ಆಟಗಾರ್ತಿ ಪೂಜಾ ಗಾಲಿ, ಬಾಲ್ ಬ್ಯಾಡ್ಮಿಂಟನ್ ಪಟು ಬಿ.ಎನ್. ಕಿರಣ್ ಕುಮಾರ್, ಕಂಬಳದ ಗೋಪಾಲ ನಾಯ್ಕ ಅವರಿಗೆ ಕರ್ನಾಟಕ ಕ್ರೀಡಾರತ್ನ ಗೌರವ ಒಲಿದಿದೆ.

ಕ್ರೀಡಾರತ್ನ ಪ್ರಶಸ್ತಿಗೆ 14, ಕ್ರೀಡಾಪೋಷಕ ಪ್ರಶಸ್ತಿಗೆ 10 ಸಂಸ್ಥೆಗಳು ಹಾಗೂ ಜೀವಮಾನ ಸಾಧನೆ ಪ್ರಶಸ್ತಿಗೆ ಇಬ್ಬರನ್ನು ಆಯ್ಕೆ ಮಾಡಲಾಗಿದೆ. ಮುಖ್ಯಮಂತ್ರಿ ಅವರ ಜೊತೆ ಚರ್ಚಿಸಿ ಶೀಘ್ರದಲ್ಲೇ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಚಿವ ನಾರಾಯಣಗೌಡ ಅವರು ತಿಳಿಸಿದ್ದಾರೆ.ಏಕಲವ್ಯ ಪ್ರಶಸ್ತಿಯು ಏಕಲವ್ಯನ ಕಂಚಿನ ಪ್ರತಿಮೆ ಮತ್ತು ₹ 2 ಲಕ್ಷ ಬಹುಮಾನ ಒಳಗೊಂಡಿದೆ.

ಜೀವಮಾನ ಸಾಧನೆ ಮತ್ತು ಕ್ರೀಡಾ ರತ್ನ ಪ್ರಶಸ್ತಿಗೆ ತಲಾ ₹ 1 ಲಕ್ಷ ನೀಡಲಾಗುತ್ತದೆ. ಕ್ರೀಡಾ ಪೋಷಕ ಪ್ರಶಸ್ತಿ ವಿಜೇತ ಸಂಸ್ಥೆಗಳಿಗೆ ತಲಾ ₹ 5 ಲಕ್ಷ ನೀಡಲಾಗುತ್ತದೆ.

ಪ್ರಶಸ್ತಿ ಪುರಸ್ಕೃತರು

ಅಥ್ಲೀಟ್	ಕ್ರೀಡೆ
ಏಕಲವ್ಯ	
ಜೀವನ್ ಕೆ.ಎಸ್.	ಅಥ್ಲೆಟಿಕ್ಸ್
ನಿತಿನ್	ನೆಟ್‌ಬಾಲ್
ಅಶ್ವಿನಿ ಭಟ್	ಬ್ಯಾಡ್ಮಿಂಟನ್
ಜಿ. ತರುಣ್ ಕೃಷ್ಣಪ್ರಸಾದ್	ರೋಯಿಂಗ್
ಲೋಪಮುದ್ರಾ ತಿಮ್ಮಯ್ಯ	ಬ್ಯಾಸ್ಕೆಟ್‌ಬಾಲ್
ಎಸ್.ಪಿ.ಲಿಖಿತ್	ಈಜು
ಕರುಣ್ ನಾಯರ್	ಕ್ರಿಕೆಟ್
ಅನರ್ಘ್ಯ ಮಂಜುನಾಥ್	ಟೇಬಲ್ ಟೆನಿಸ್
ದಾನಮ್ಮ ಚಿಚಖಂಡಿ	ಸೈಕ್ಲಿಂಗ್
ಅಶ್ವಲ್ ರೈ	ವಾಲಿಬಾಲ್
ವಸುಂಧರಾ.ಎಂ.ಎನ್.	ಜುಡೊ
ಪ್ರಧಾನ್ ಸೋಮಣ್ಣ	ಹಾಕಿ
ಪ್ರಶಾಂತ್ ಕುಮಾರ್ ರೈ	ಕಬಡ್ಡಿ
ರಾಧಾ ವಿ.	ಪ್ಯಾರಾ ಅಥ್ಲೆಟಿಕ್ಸ್
ಮುನೀರ್ ಬಾಷಾ	ಕೊಕ್ಕೊ
ಜೀವಮಾನ ಸಾಧನೆ	
ಜಿ.ವಿ. ಗಾಂವಕರ್	ಅಥ್ಲೆಟಿಕ್ಸ್
ಕ್ಯಾಪ್ಟನ್ ದಿಲೀಪ್ ಕುಮಾರ್	ಕಯಾಕಿಂಗ್ ಮತ್ತು ಕೆನೊಯಿಂಗ್
ಕರ್ನಾಟಕ ಕ್ರೀಡಾ ರತ್ನ	
ಪೂಜಾ ಗಾಲಿ	ಅಟ್ಯಾಪಟ್ಯಾ
ಬಿ.ಎನ್. ಕಿರಣ್ ಕುಮಾರ್	ಬಾಲ್ ಬ್ಯಾಡ್ಮಿಂಟನ್
ಗೋಪಾಲ ನಾಯ್ಕ	ಕಂಬಳ
ದೀಕ್ಷಾ ಕೆ.	ಕೊಕ್ಕೊ
ಶಿವಯೋಗಿ ಬಸಪ್ಪ ಬಾಗೇವಾಡಿ	ಗುಂಡುಕಲ್ಲು ಎತ್ತುವುದು
ಲಕ್ಷ್ಮೀ ಬಿ. ರೆಡೇಕರ್	ಕುಸ್ತಿ
ಪಿ.ಗೋಪಾಲಕೃಷ್ಣ	ಯೋಗ
ರಾಘವೇಂದ್ರ ಎಸ್. ಹೊಂಡದಕೇರಿ	ಪವರ್ ಲಿಫ್ಟಿಂಗ್
ಸಿದ್ಧಪ್ಪ ಪಾಂಡಪ್ಪ ಹೊಸಮನಿ	ಸಂಗ್ರಾಣಿಕಲ್ಲು ಎತ್ತುವುದು
ಸೂರಜ್ ಎಸ್. ಅಣ್ಣಿಗೇರಿ	ಕುಸ್ತಿ
ಶಶಾಂಕ್.ಬಿ.ಎಂ	ಪ್ಯಾರಾ ಈಜು
ಡಿ.ನಾಗರಾಜು	ಯೋಗ
ಶ್ರೀವರ್ಷಿಣಿ	ಜಿಮ್ನಾಸ್ಟಿಕ್ಸ್
ಅವಿನಾಶ್ ವಿ, ನಾಯ್ಕ	ಜುಡೊ

ಕರುಣ್ ನಾಯರ್, ಎಸ್.ಪಿ.ಲಿಖಿತ್, ಲೋಪಮುದ್ರಾ, ಅನರ್ಘ್ಯ, ಪ್ರಶಾಂತ್ ಕುಮಾರ್ ರೈ, ಅಶ್ವಲ್ ರೈ, ಮುನೀರ್ ಬಾಷಾ, ಗೋಪಾಲ ನಾಯ್ಕ, ನಿತಿನ್, ಪೂಜಾ ಗಾಲಿ, ಲಕ್ಷ್ಮಿ ರೆಡೇಕರ್, ಪ್ರಧಾನ್ ಸೋಮಣ್ಣ

ಕ್ರೀಡಾ ಪೋಷಕ ಸಂಸ್ಥೆಗಳು

- ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್, ಉಜಿರೆ- ದಕ್ಷಿಣಕನ್ನಡ
- ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ,ಬೆಂಗಳೂರು ನಗರ ಜಿಲ್ಲೆ
- ಆರ್. ವಿ. ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು ನಗರ ಜಿಲ್ಲೆ
- ಹೂಡಿ ಸ್ಪೋರ್ಟ್ಸ್ ಕ್ಲಬ್, ಬೆಂಗಳೂರು ನಗರ ಜಿಲ್ಲೆ
- ಶ್ರೀ ಬಾಲಮಾರುತಿ ಸಂಸ್ಥೆ, ಧಾರವಾಡ
- ಎಮಿನೆಂಟ್ ಶೂಟಿಂಗ್ ಹಬ್, ಬೆಂಗಳೂರು ನಗರ ಜಿಲ್ಲೆ
- ಬಾಲಾಂಜನೇಯ ಜಿಮ್ನಾಷಿಯಂ (ರಿ.), ಮಂಗಳೂರು
- ಬಸವನಗುಡಿ ಈಜು ಕೇಂದ್ರ, ಬೆಂಗಳೂರು ನಗರ ಜಿಲ್ಲೆ
- ದ್ರಾವಿಡ್ ಪಡುಕೋಣೆ ಅಕಾಡೆಮಿ, ಬೆಂಗಳೂರು ನಗರ ಜಿಲ್ಲೆ
- ಪೀಪಲ್ ಎಜುಕೇಷನ್ ಟ್ರಸ್ಟ್,ಮಂಡ್ಯ

ಅರವಿಂದ್ ಚುರುಕಿನ ಆಟ

ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್: ಕರ್ನಾಟಕ ಜಯಭೇರಿ

ಕರ್ನಾಟಕ ಮತ್ತು ಉತ್ತರಪ್ರದೇಶ ತಂಡಗಳ ಹಣಾಹಣಿ

ಚೆನ್ನೈ: ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ 71ನೇ ರಾಷ್ಟ್ರೀಯ ಸೀನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದಲ್ಲಿ ಬಿ ಗುಂಪಿನಲ್ಲಿ ಎರಡನೇ ಜಯ ದಾಖಲಿಸಿತು. ಆದರೆ, ಕರ್ನಾಟಕ ಮಹಿಳೆಯರ ತಂಡವು ಸೋತಿತು.

ಸೋಮವಾರ ನೆಹರು ಕ್ರೀಡಾಂಗಣದ ಒಳಾಂಗಣದಲ್ಲಿ ನಡೆದ ಪುರುಷರ ವಿಭಾಗದ ಪಂದ್ಯದಲ್ಲಿ ಕರ್ನಾಟಕ ತಂಡವು 86–56 ರಿಂದ ಉತ್ತರ ಪ್ರದೇಶದ ವಿರುದ್ಧ ಗೆದ್ದು ಎರಡನೇ ಸುತ್ತಿಗೆ ಸಾಗಿತು. ಕರ್ನಾಟಕ ತಂಡದ ಅರವಿಂದ್ (20), ಅನಿಲ್ ಕುಮಾರ್ (18), ಅಭಿಷೇಕ್ ಗೌಡ (14), ಪ್ರತ್ಯಾಂಶು ತೋಮರ್ (11) ಮಿಂಚಿದರು. ಉತ್ತರ ಪ್ರದೇಶ ತಂಡದ ಹರ್ಷ ಡಾಗರ್ 13 ಮತ್ತು ವಿಶಾಲ್ ಎಂ ಕುಮಾರ್ 10 ಅಂಕಗಳನ್ನು ಗಳಿಸಿದರು.

ಕರ್ನಾಟಕ ತಂಡವು ಮಂಗಳವಾರ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ರಾಜಸ್ಥಾನ ತಂಡವನ್ನು ಎದುರಿಸಲಿದೆ.

ಇನ್ನುಳಿದ ಪಂದ್ಯಗಳಲ್ಲಿ ಪಂಜಾಬ್ ತಂಡವು 90 –50ರಿಂದ ಕೇರಳ ವಿರುದ್ಧ; ತಮಿಳುನಾಡು 90–50ರಿಂದ ಮಿಜೋರಾಂ ವಿರುದ್ಧ; ಇಂಡಿಯನ್ ರೇಲ್ವೆಸ್ 81–70ರಿಂದ ಹರಿಯಾಣ ಎದುರು; ಸರ್ವಿಸಸ್ 100–73ರಿಂದ ರಾಜಸ್ಥಾನ ಎದುರು ಗೆಲುವು ಸಾಧಿಸಿದವು.ಮಹಿಳೆಯರ ವಿಭಾಗದಲ್ಲಿ ಕರ್ನಾಟಕ ಎರಡನೇ ಪಂದ್ಯದಲ್ಲಿ 72–79ರಿಂದ ಪಂಜಾಬ್ ವಿರುದ್ಧ ಸೋತಿತು. ಪಂಜಾಬ್ ತಂಡದ ಕಾವ್ಯಾ ಸಿಂಘಾಲ 21, ಕನಿಷ್ಕಾ ಧೀರ್ 25 ಅಂಕಗಳನ್ನು ಗಳಿಸಿದರು. ಕರ್ನಾಟಕದ ವರ್ಷಾ ನಂದಿನಿ 32 ಮತ್ತು ಲೋಪಮುದ್ರಾ 19 ಅಂಕಗಳನ್ನು ಗಳಿಸಿದರು.



ಕಾರ್ಲೋಸ್ ಅಲ್ಕರಾಜ್– ಎಎಫ್‌ಪಿ ಚಿತ್ರ

ಮಿಯಾಮಿ ಓಪನ್: ಅಲ್ಕರಾಜ್‌ಗೆ ಕಿರೀಟ

ಮಿಯಾಮಿ (ಎಎಫ್‌ಪಿ): ಸ್ಪೇನ್ ಆಟಗಾರ ಕಾರ್ಲೋಸ್ ಅಲ್ಕರೆಜ್ ಅವರು ಮಿಯಾಮಿ ಓಪನ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆದ ಅತಿ ಕಿರಿಯ ಆಟಗಾರ ಎನಿಸಿಕೊಂಡರು.

ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ 19 ವರ್ಷದ ಆಟಗಾರ 7–5, 6–4ರಿಂದ ನಾರ್ವೆಯ ಕ್ಯಾಸ್ಪರ್ ರೂಡ್ ಅವರನ್ನು ಪರಾಭವಗೊಳಿಸಿದರು.

ತಮ್ಮದೇ ದೇಶದ ರಫೆಲ್ ನಡಾಲ್ ಅಭಿಮಾನಿಯಾಗಿರುವ ಅಲ್ಕರೆಜ್ ಅವರಿಗೆ ಇದು ಮೊದಲ ಎಟಿಪಿ ಮಾಸ್ಟರ್ಸ್ ಪ್ರಶಸ್ತಿ.

ಮಹಾರಾಜ್ ಮೋಡಿ: ದಕ್ಷಿಣ ಆಫ್ರಿಕಾ ಜಯಭೇರಿ

ಕೇಶವ್ ಮಹಾರಾಜ್

ಡರ್ಬನ್ (ಎಎಫ್‌ಪಿ): ದಕ್ಷಿಣ ಆಫ್ರಿಕಾದ ಕೇಶವ್ ಮಹಾರಾಜ್ ಸ್ಪಿನ್ ಮೋಡಿಯ ಮುಂದೆ ಬಾಂಗ್ಲಾದೇಶ ಕ್ರಿಕೆಟ್ ತಂಡವು ತತ್ತರಿಸಿತು.

ಕಿಂಗ್ಸ್‌ಮೇಡ್ ಕ್ರೀಡಾಂಗಣದಲ್ಲಿ ಸೋಮವಾರ ಮುಕ್ತಾಯವಾದ ಮೊದಲ ಟೆಸ್ಟ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವು 220 ರನ್‌ಗಳ ಅಂತರದಿಂದ ಜಯಿಸಿತು. ಮಹಾರಾಜ್ ಏಳು ವಿಕೆಟ್‌ಗಳನ್ನು ಗಳಿಸಿದರು.

ಗೆಲುವಿಗಾಗಿ 273 ರನ್‌ಗಳ ಗುರಿ ಬೆನ್ನಟ್ಟಿದ್ದ ಬಾಂಗ್ಲಾದೇಶ ತಂಡವು 19 ಓವರ್‌ಗಳಲ್ಲಿ 53 ರನ್‌ಗಳಿಗೆ ಆಲೌಟ್ ಆಯಿತು. ಆತಿಥೇಯ ದಕ್ಷಿಣ ಆಫ್ರಿಕಾ ತಂಡವು ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 121 ಓವರ್‌ಗಳಲ್ಲಿ 367, ಬಾಂಗ್ಲಾದೇಶ 115.5 ಓವರ್‌ಗಳಲ್ಲಿ 298. ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ: 74 ಓವರ್‌ಗಳಲ್ಲಿ 204 (ಡೀನ್ ಎಲ್ಗರ್ 64, ಕೀಗನ್ ಪೀಟರ್ಸನ್ 36, ರಿಯಾನ್ ರಿಕೆಲ್ಟನ್ ಔಟಾಗದೆ 39, ಮೆಹದಿ ಹಸನ್ 85ಕ್ಕೆ3, ಇಬಾದತ್ ಹುಸೇನ್ 40ಕ್ಕೆ3, ತಸ್ಕಿನ್ ಅಹಮದ್ 24ಕ್ಕೆ2), ಬಾಂಗ್ಲಾದೇಶ: 19 ಓವರ್‌ಗಳಲ್ಲಿ 53 (ನಜ್ಮುಲ್ ಹುಸೇನ್ 26, ತಸ್ಕಿನ್ ಅಹಮದ್ 14, ಕೇಶವ್ ಮಹಾರಾಜ್ 32ಕ್ಕೆ7, ಸಿಮೊನ್ ಹಾರ್ಮರ್ 21ಕ್ಕೆ3) ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 220 ರನ್‌ಗಳ ಜಯ.

ಫೆಡರೇಷನ್ ಕಪ್ ಅಥ್ಲೆಟಿಕ್ಸ್: ಅನುರಾಣಿಗೆ ಚಿನ್ನ

ಕ್ಯಾಲಿಕಟ್: ಒಲಿಂಪಿಯನ್ ಅನುರಾಣಿ ಅವರು ಇಲ್ಲಿ ನಡೆಯುತ್ತಿರುವ ಫೆಡರೇಷನ್ ಕಪ್ ರಾಷ್ಟ್ರೀಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದರು.

ಮಹಿಳೆಯರ ಜಾವೆಲಿನ್ ಥ್ರೊನಲ್ಲಿ ಅವರು ಸೋಮವಾರ 61.5 ಮೀಟರ್ಸ್ ಸಾಧನೆ ಮಾಡಿದರು. ಶಿಲ್ಪಾ ರಾಣಿ ಬೆಳ್ಳಿ (55.72 ಮೀ.) ಮತ್ತು ಸಂಜನಾ ಚೌಧರಿ (54.19 ಮೀ.) ಕಂಚು ಗಳಿಸಿದರು.

ಕರ್ನಾಟಕದ ಕೃಷಿಕ್ ಎಂ. ಅವರಿಗೆ ಪುರುಷರ 110 ಮೀ. ಹರ್ಡಲ್ಸ್‌ನಲ್ಲಿ ((14.60 ಸೆಕೆಂಡು)) ಕಂಚು ಗೆದ್ದರೆ , ಪುರುಷರ ಹೈಜಂಪ್‌ನಲ್ಲಿ ಜೆಸ್ಸೆ ಸಂದೇಶ್ (2.15 ಮೀ., ಕಂಚು) ಮಿಂಚಿದರು.

ಬಾಕ್ಸಿಂಗ್: ನಾಲ್ಕರ ಘಟ್ಟಕ್ಕೆ ಮೋನಿಕಾ

ನವದೆಹಲಿ (ಪಿಟಿಐ): ಎರಡು ಬಾರಿಯ ವಿಶ್ವಚಾಂಪಿಯನ್‌ಷಿಪ್ ಪದಕ ವಿಜೇತ ಜಾಸಿ ಗ್ಯಾಬುಕೊ ಅವರಿಗೆ ಆಘಾತ ನೀಡಿದ ಭಾರತದ ಮೋನಿಕಾ ಅವರು ಥಾಯ್ಲೆಂಡ್ ಓಪನ್ ಬಾಕ್ಸಿಂಗ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಥಾಯ್ಲೆಂಡ್‌ನ ಫುಕೆಟ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಆಶಿಶ್ ಕುಮಾರ್ (81 ಕೆಜಿ ವಿಭಾಗ) ಹಾಗೂ ಮನೀಷಾ (ಮಹಿಳೆಯರ 57 ಕೆಜಿ ವಿಭಾಗ) ಕೂಡ ನಾಲ್ಕರ ಘಟ್ಟ ಪ್ರವೇಶಿಸಿದರು.

ಮಹಿಳೆಯರ 48 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ 26 ವರ್ಷದ ಮೋನಿಕಾ 4–1ರಿಂದ ಗ್ಯಾಬುಕಾ ಅವರನ್ನು ಮಣಿಸಿದರು. ಟೋಕಿಯೊ ಒಲಿಂಪಿಕ್ಸ್ ಬಳಿಕ ಮೊದಲ ಬಾರಿ ಕಣಕ್ಕಿದಿರುವ ಆಶಿಶ್ ಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ 5–0ಯಿಂದ ಥಾಯ್ಲೆಂಡ್ ಬಾಕ್ಸರ್ ಆ್ಯಫಿಸಿಟ್ ಖಂಖೊಕ್ರೆವಾ ಅವರನ್ನು ಪರಾಭವಗೊಳಿಸಿದರು. ಮನೀಷಾ ಅವರು ಎಂಟರಘಟ್ಟದಲ್ಲಿ 3–2ರಿಂದ ಥಾಯ್ಲೆಂಡ್‌ನ ಪಾರ್ನ್‌ಟಿಪ್ ಬುವಾಪ ಅವರನ್ನು ಸೋಲಿಸಿದರು.

54 ಕೆಜಿ ವಿಭಾಗದಲ್ಲಿ ರೇಣು ಮತ್ತು 63 ಕೆಜಿ ವಿಭಾಗದಲ್ಲಿ ಮೋನಿಕಾ ಅವರು ಮೊದಲ ಸುತ್ತುಗಳಲ್ಲೇ ನಿರಾಸೆ ಅನುಭವಿಸಿದರು.

‘ಕ್ರೀಡಾಪಟುಗಳ ತರಬೇತಿಗೆ ₹ 190 ಕೋಟಿ’

ನವದೆಹಲಿ (ಪಿಟಿಐ): ಮುಂಬರುವ ಕಾಮನ್‌ವೆಲ್ತ್ ಗೇಮ್ಸ್ ಮತ್ತು ಏಷ್ಯನ್ ಗೇಮ್ಸ್‌ಗಾಗಿ ಕ್ರೀಡಾಪಟುಗಳ ತರಬೇತಿ ಸೇರಿದಂತೆ ವಿವಿಧ ಸೌಲಭ್ಯಗಳಿಗಾಗಿ ₹ 190 ಕೋಟಿ ಖರ್ಚು ಮಾಡುವುದಾಗಿ ಕ್ರೀಡಾ ಸಚಿವಾಲಯ ಸೋಮವಾರ ಹೇಳಿದೆ.

ಸಚಿವಾಲಯವು ಈ ವರ್ಷ 38 ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳ (ಎನ್‌ಎಸ್‌ಎಫ್) ಮಾನ್ಯತೆಯನ್ನು ನವೀಕರಿಸಿದೆ. ಉಳಿದ ಎನ್‌ಎಸ್‌ಎಫ್‌ಗಳ ಮಾನ್ಯತೆಯ ನವೀಕರಣವು ಪರಿಗಣನೆಯಲ್ಲಿದೆ.

ಸಚಿವಾಲಯವು 33 ಕ್ರೀಡಾ ವಿಭಾಗಗಳಿಗೆ ತರಬೇತಿ ಮತ್ತು ಸ್ಪರ್ಧೆಗಳ ವಾರ್ಷಿಕ ಕ್ಯಾಲೆಂಡರ್‌ಅನ್ನು ಅಂತಿಮಗೊಳಿಸಿದೆ ಮತ್ತು 2022-23ರ ಹಣಕಾಸು ವರ್ಷಕ್ಕೆ ವಿವಿಧ ಎನ್‌ಎಸ್‌ಎಫ್‌ಗಳಿಗೆ ₹ 259 ಕೋಟಿ ಸಹಾಯಧನವನ್ನು ಮೀಸಲಿರಿಸಿದೆ. ಇದರಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಮತ್ತು ಏಷ್ಯನ್ ಗೇಮ್ಸ್ ತಯಾರಿಗಾಗಿ 190 ಕೋಟಿ ಖರ್ಚು ಮಾಡಲಾಗುವುದು.